


ವೃಷ ಸಂವತ್ಸರ] —೪೯— [ಸಂಕ್ರಾಂತಿಯ ಸಂಚಿಕೆ



ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೪೨

ಸಂಪುಟ ೨೩] [ಸಂಚಿಕೆ ೩

ವಿಷಯಸೂಚಿಕೆ



ಕರ್ಣಾಟಕ

ವೃಷ ಸಂವತ್ಸರ — ೮೯ — ಸಂಕ್ರಾಂತಿಯ ಸಂಚಿಕೆ

ಒಳತೋಟಿ

೧

ನಿಮಿಷ ನಿಮಿಷಕ್ಕೊಂದು ವ್ಯೂಹಾಂತರವ ತಂದು
ದಾಳಿಡುವ ಸಮವಿಷಮ ಭಾವಗಳಲಿ
ಹೋಳಾಗುತಿರೆ ಬಾಳು ಗೋಳಿಡುತಿರುವ ಮಧುರ
ಸೊಳತೋಟಿ ಹಾಡಾಗಿ ಹರಿವುದಿಲ್ಲಿ.—

ಹುಟ್ಟಿದನು ಪಡುಗಡಲ ತಡಿಯ ಕನ್ನಡನಾಡ
ಕಣ್ಣ ಮಣಿಯೆನಿಪ ಭೂನಂದನದಲಿ;
ತೆಂಗು ಕಂಗುಗಳ ಕೆರೆ ತೊರೆ ಕಾವಣಂಗಳ ವಿ
ಹಂಗ ಭೃಂಗಗಳಮಳ ಸಂಗಮದಲಿ.

ಒಂದೆ ಗಾವುದ ದೂರ ಮೊರೆದಪುದು ಪಡುಗಡಲು
ಬಂಧನದ ಬಾಳುವೆಗೆ ನೊಂದು ಬೆಂದು,
ಹೊಸ ಹಾದಿಯನು ಹಿಡಿದು ನಡೆವ ವಿಫಲಾಕಾಂಕ್ಷೆ
ಯುಗಯುಗಗಳಿಂದೆದೆಯ ಮಿದಿಯುತಿರಲು

ಕುದಿಕುದಿಯುವೊಲವು ಬಂದೆದೆಯ ಮಿದಿದೇಳಿಸಲು
ಸೊಂದು ಮೈಮರೆತು ಮಲಗಿದ ತಡಿಯನು
ಎಡೆಬಿಡದೆ ಹಲವು ತೆರೆದುಟಿಗಳಲಿ ಮುದ್ದಿಡುತ
ತಬ್ಬಿ ತಕ್ಕೈಸುವುದು, ದಿನ ರಾತ್ರಿಯು.

ಹಗಲಿರುಳೊಳವನಾಟನಿದ್ದೆಗಳೊಳಾ ಕಡಲ
ಕೂಗು ಕಿವಿಗವಿಗಳಲಿ ಮೊರೆಯುತಿರಲು
ಅದರ ಭಯಕರುಣರಸದಲಿ ನಾಂದ ಹೃದಯದಲಿ
ಬೆಳೆದಸೆನಿತೋ ಮೂಕಭಾವಗಳನು.

ತಡಿಯಲ್ಲಿ ಸಾಲುಸಾಲಾಗಿ ನಿಂತಿದೆ ತೆಂಗು
ಬುವಿಯ ಹಸುರಸು ಬಾನಿಗೊಸಗೆ ಹಿಡಿದು
ತಡಿಕಡಲುಗಳ ಪ್ರೇಮಜೀವನದ ಸಂಕೇತ
ಬುವಿಬಾನುಗಳ ಹೃದಯಗೀತವೆನಲು.

ಮನೆನೆರೆಯೊಳಿವೆ ತೋಹುಗಳು ವಿವಿಧವೃಕ್ಷಗಳ
ಸ್ಥಿರಜೀವನಕೆ ಹಸುರುಗುಡಿಯನೆತ್ತಿ;
ತಮ್ಮ ನಿಡುದೋಳುಗಳ ಚಾಚಿ ತಬ್ಬಿವೆ ಊರ
ದೇಗುಲವನವು ಶಾಂತಿಕೇಳಿಗಳಲಿ.

ಮೂಡುಗಡೆ ಸಾಲುಬೆಟ್ಟಗಳು ಕಂಗೊಳಿಸುತಿವೆ
ನಾಡಿದನು ಕಾವ ಬೆಸದದಟರಂತೆ,
ಕಾಡುಗಳ ಹಸುರುವಸನವ ತೊಟ್ಟು ಮುಗಿಲುಗಳ
ಮಣಿಕಿರೀಟವನಿಟ್ಟು ತಲೆಯಮೇಲೆ.

ಅಲ್ಲಲ್ಲಿ ತೊಳಲಿ ಬಳಲಿದ ಮುಗಿಲ ತುಣುಕುಗಳು
ಬೆಟ್ಟಗಳ ಸುವಿಶಾಲ ವಕ್ಷಗಳಲಿ
ಬಂದು ಮೊಗವಿಟ್ಟು ಮುದ್ದಿಟ್ಟು ಹರ್ಷಾಶ್ರುಗಳ
ಬಿಂದುಗಳನಲ್ಲಿ ಹೂಸಲಾಗಿಸುವುವು.

ಆ ಬೆಟ್ಟಗಳ ಮುಡಿಗೆ ದಿನಕೊಮ್ಮೆ ದಿವ್ಯಪ್ರ
ಭಾವಲಯಮಾಲೆ ಬಂದಪುದು ರವಿಯ.
ತಮ್ಮ ಮೆಚ್ಚಿನ ತೊಡವನದನಳುಪದೀಯುವುವು
ಭೂವನಿತೆಗವು ಬಾಸ-ಬೊಗಸೆಯಿಂದ.

ಆ ಬೆಟ್ಟಗಳ ಮೂಲದಿಂದ ವಾರಿಧಿವರೆಗೆ
ಸೋಪಾನರೂಪದಲಿ ಹೊರಳಿಬಂದು
ಋತುಋತುಗೆ ಕಾಲಕಾಲಕೆ ಬಣ್ಣಬಣ್ಣದಲಿ
ಕಂಗೊಳಿಸುತಿಹುದು ಕಳಕಳಿಸಿ ಹೊಲವು.

ವಿವಿಧವರ್ಣಗಳ ವಿಧವಿಧ ನಾದಭೇದಗಳ
ಸವಿಯ ಸೂದೆಯುಗುವ ತಿಳಿಬಗೆಗಳಿಂದ
ಹಳ್ಳಿಗರ ತೆರೆಬಗೆಗೆ ಹಾಡುಗಳನೂಡುವುವು
ಹೊಲಹೊಲಗಳಲಿ ತಳುವಿ ಪಕ್ಷಿವೃಂದ.

ಬಳಿಯೊಳೊಂದಿಹುದು ಕೆರೆ, ಹಳ್ಳಿಗರ ಬಾಳುವೆಗೆ
ಮೆಲುವು ತಣುವುಗಳನೊಸೆದೂಡುತಿಹುದು.
ಅಲ್ಲಿ ತಾವರೆ ಬೆಳಗುಹನಿಮಂಜುಗಳ ಕುಡಿದು
ನೇಸರಿನ ಕೈಗೆ ತುಟಿಹಚ್ಚುತಿಹುವು.

ತನ್ನ ತಿಳಿತನವನದು ಹಲವಾರು ಹಕ್ಕಿಗಳ
ಕೊರಲಿನಲಿ ಹಾಡಾಗಿ ಹರಿಸುತಿಹುದು.
ಹಲವು ತುರುಗಳ ತೇಲುದೋಣಿಗಳಿಗದು ದಡದ
ತೆಂಗುಗಳ ಹಾಯಿಗಳ ಬಿಡಿಸುತಿಹುದು.

ಈ ತೆರನ ಬಹುಭಂಗಿ ಕುಣಿತಮಣಿತಗಳಮರ
ರಮಣೀಯ ಶಾಂತಿಮಾತೆಯ ಮಡಿಲಲಿ
ಕೂಸಾಗಿ ಬೆಳೆದನಾ ಮಧುರ ಸವಿಲಾಲಿಗಳ
ಸವಿದು ಭೂರಮೆಯು ಕೈದೊಟ್ಟಿಲಿನಲಿ.

ಕೆಳಗೆ ಕಡಲವನೆದೆಯನಾಳುವುದು, ಬಾಂದಳವು
ತನ್ನ ಸೂರಾರು ಕಣ್ಣುಗಳ ತೆರೆದು,
ಮೇಲುನಾಡಿನ ಹಲವು ಮೂಕಾನುಭವಗಳನು
ಕಳುಹುತಿಹುದವನೆದೆಗೆ ಪ್ರತಿರಾತ್ರಿಯು.

ಇಂತಿರಲು ಬಾಳುವೆಯುಷಃಕಾಲದಾ ಮುಗ್ಧ
ಶಾಂತಿಯಳಿದೆಳಬಿಸಿಲ ಮೃದುಹಾಸದ
ಕಾಂತಿಯಲಿ ಬಂದುದು ಕಿಶೋರತೆಯು ಬಗೆಮುಗುಳು
ಸಂತಸದೊಳಿವೆಗಳನು ತೆರೆಯುತಿರಲು.

ಕವನ ಕಾಮಿನಿ ಅವನ ಕೊಳಲಾಗಿ ಮಾಡಿದಳು
ಸವಿಹಾಡುಗಳನೂದಿದಳು ದಿನದಿನ.
ಅವಳ ಸಪ್ತಸ್ವರಕೆ ಸುಪ್ತಚೇತಸವು ಹೆಡೆ
ಯೆತ್ತಿ ಕುಣಿದುದು ಮರೆತು ತನುವ ಮನವ.

ಇಂತಿರಲು ಬಂದಸಹಕಾರ ವಿಪ್ಲವದ ಧ್ವನಿ
ಅವನ ಬಗೆದೋಣಿಯನು ಬಡಿದು, ಬಡಿದು ;
ದೇಶಭಕ್ತಿಯ ಸುಧೆಯನದರೊಳಗೆ ತುಂಬಿದುದು
ಅವನ ಮುಗ್ಧಾತ್ಮವನು ಮಿಡಿದು, ಮಿಡಿದು.

ಸಾಹಿತ್ಯಸಂಸ್ಕೃತಿಯ ಕಂಪುತಂಪುಗಳ ರಸ
ಗೇಹವವನಾತ್ಮವನು ಪಲ್ಲವಿಸಿರೆ,
ಮನದ ಹೊಲದೊಳುದಾತ್ತಭಾವಗಳ ಬೀಜಗಳ
ಚೆಲ್ಲಿದನು ಮೊದಲಿಂದ ಕೊನೆಯವರೆಗೆ.

ಸತ್ಯದೆಡೆ ಕಣ್ಣುತಿರುಗಿಸಬೇಕು ; ಶಾಶ್ವತದ
ಸುಧೆಯನುಂಡೆದೆ ತಣಿವು ಪಡೆಯಬೇಕು.
ಮರ್ತ್ಯಜೀವದ ತರುವೊಳಮರತೆಯ ಫಲ ತನಗೆ
ಸಿಕ್ಕಬೇಕೆಂದವನು ಭಾವಿಸಿದನು.

ಬಳಿಕ ತಿಳಿವನು ಪೂರ ಹೀರಬೇಕೆಂದೆಳಸಿ,
ಹಲವು ತೊಡಕುಗಳ ಮಡುವುಗಳ ದಾಟಿ,
ನಗರವೊಂದನು ಸೇರಿದನು ; ವಿದ್ಯೆಯನು ಪಡೆದು
ಬಗೆಯ ಕಸುಕನು ಹಣ್ಣುಗೊಳಿಸಲೆಳಸಿ.

೨

ಕಳೆದುದಾತನ ವಿಮಲಭಾವೋರ್ಮಿಗಳ ಬಾಲ್ಯ
ಹರಿವನಕ ಸುಖದಮೃತವಾಗಿ ಹರಿದು ;
ಬಿರುಗಾಳಿಗಳ ಬಸಿರ, ತೋರುಸೊಗಗಳ ಕುಸುರ,
ನವಭಾವಗಳ ವಿಸರ ಬಂತು ಹರೆಯ.

ಮುಗಿಲುಮಳೆಗಳಿಗೆಲ್ಲಿ ಭೇದ ? ಮುಗಿಲೇ ಕರಗಿ
ಮಳೆಯಾಗುವುದು ; ಮಳೆಯು ಗಾಳಿಯೊಡನೆ

ಸ್ಪರ್ಧಾಳುವಾದರದೆ ಮುಗಿಲಾಗಿ ಹಾರುವುದು;
ಕನಸು ನನಸುಗಳಿಂತು ಬಾಲ್ಯದೊಳಗೆ!

ಒಂದೊಂದು ನಿಮಿಷಕೂ ಒಂದೊಂದು ರಸರೂಪ
ರಾಗದಿಂದೆಸೆವ ಸಂಧ್ಯಾಮೇಘದ
ಒಂಬಲೆನೆ ಹಲವು ಕನಸುಗಳು ಕುಣಿದಾಡಿದುವು
ಹಂಬಲಿನ ತುಂಬುಬೆಳೆಯೊಳು ಬಾಲ್ಯದ.

ಬಾಲಕನ ಹೃದಯರಾಜ್ಯದೊಳಸಾಧ್ಯತೆಗೊಂದು
ಕಾಲನಿಡಲೂ ಕೂಡ ಸಾಧ್ಯವಲ್ಲ.
ಕಡಲನೊಂದೇ ಬೊಗಸೆಯಲ್ಲಿ ಕುಡಿಯಲು ಬಹುದು;
ಮುಗಿಲ ಹೂವನು ತಂದು ಮುಡಿಯಬಹುದು.

ಪದ್ಮದಳಗಳ ದೋಣಿಗಳ ಮಾಡಿ ಸಪ್ತ ಸಾ
ಗರದಾಚೆ ಜೀಸಾಗಿ ಸಾಗಬಹುದು.
ಹದ್ದುಗಳ ಹೆಗಲೇರಿ ಬಾನ ಮನೆಯನು ಸಾರಿ
ತಾರೆಗಳ ಕೂಡೆ ಕೆಳೆಬೆಳಸಬಹುದು.

ಸೂರಾರು ರಾಜರಸು ಹೂಂಕಾರಮಾತ್ರದಲಿ
ಗದ್ದುಗೆಯಿನೆಳೆದು ಕೆಳಕೆಡಹಬಹುದು;
ದಾರಿದ್ರ್ಯಭೂತವಸಭೂತವೆನಿಸಲು ಬಹುದು;
ಧಾರಿಣಿಯನಂಬರಕ್ಕೆತ್ತಬಹುದು.

ಇಂಥ ಬಾಲ್ಯವು ಕಳೆದ ಬಳಿಕ ಬಂದಾ ಹರೆಯ
ದುಲ್ಕೆಯದು ಥಟ್ಟನೆ ಪಳಂಚಲೆದೆಗೆ
ಅಲೆಅಲೆಗಳೆದ್ದು ಬಗೆ ಕದಡಿಹೋದುದು ಶಾಂತ
ಸರದೊಳಾವುದೊ ಕಲ್ಲು ಬಿದ್ದ ಹಾಗೆ.

ಬಂದ ಹರೆಯದ ಕೂಡೆ ಕವಲಾಸೆಗಳು ಬಂದು
ಅವನ ಬಗೆರೆಕ್ಕೆಗಳ ಕಡಿದು, ಕಡಿದು,
ನೆಲದ ಹುಳುಗಳ ಕೂಡೆ ಹೊರಳಹಚ್ಚಿದುವಯ್ಯೊ,
ಕೊಳೆಬಗೆಗೆಗಳನು ಮನದಿ ತುಂಬಿ ಜಡಿದು,

ಆವುದೋ ಮಿಡುಕ ಮಿಡಿಮಿಡಿದು ಪಂಚೇಂದ್ರಿಯದ
ವೀಣೆಯೊಳು ಬಹುವಿಷಮ ನಾದಗಳನು

ಹುಚ್ಚು ಹರಿಸಿತು, ಹಲವು ಕಾಲತಾಲಗಳಲ್ಲಿ
ಒಂದಕೊಂದಕೆ ತಾಳಮೇಳವಿಲ್ಲ.
ಒಂದು ಮಂದರವೊಂದು ತಾರ ಮಧ್ಯಮದೊಳಿ
ನ್ನೊಂದು ನಾನಾಗೀತ ಕಲಕಲದಲಿ
ಕಲಕಿ ಹೋದುದು ಜೀವ; ಯಾವುದಕೆ ಶ್ರುತಿಗೊಡುವೆ
ನೆಂದು ಭ್ರಮಿಸಿತು ಭ್ರಮರರೂಪಿ ಚಿತ್ತ.

ಹಲವು ತಾನಗಳ ಸಂತಾನವಾದುದು ಮಧುರ
ನೊಳಬಾಳು; ಹರೆಯದೊಡ್ಡೋಲಗದಲಿ
ತನಗೆಲ್ಲಿ ನೆಲೆ? ಬಾಳ ಹಾಡಿಗೆಲ್ಲಿಹುದು ಬೆಲೆ?
ಎಂದು ಮುರುಟಿದನು ತನುಮನಗಳಲ್ಲಿ.
ಸಂಜೆ ಚಿತ್ರಿಸಿದ ಹೊಂಗೆರೆಗಳನು ನುಂಗುತಿರೆ
ತಿಮಿರ, ಮೇಘಾಳಿಗೆಲ್ಲಿಹುದು ಚೆಲುವು?
ಹಲವು ಹೊಂಗನಸುಗಳ ಬೊಕ್ಕಸವು ಬಾಲ್ಯವದು
ಕಳೆದ ಬಳಿಕೀ ಬಾಳು, ಹಾಳುಹಾಳು!

ಆದರ್ಶಸಾಧನೆಯು ಧ್ರುವತಾರೆಯೊಂದು ಬಾ
ನಂಗಳದಿ ನಿಂತು ಕೈಮಾಡುತಿಹುದು;
ವಿಷಯಸುಖದಾಶೆ ಕಾರ್ಮುಗಿಲಾಗಿ ಹಗೆಯಾಗಿ
ದೃಷ್ಟಿಯನು ನೆಲದೆಡೆಗೆ ದೂಡುತಿಹುದು.

ಹಲವು ಚೆಲುವೆಯರ ಮೈಸೊಬಗು ಸೆಳೆಮಿಂಚಿನೊಲು
ಅವನ ಬಗೆಮೋಡವನಲಂಕರಿಸಿತು.
ಬಳಿಸಾರಲೆಂದೆಳಸಿ ಸಾರುವನಿತರೊಳಳಿದು
ಬಾಳ ಕಾರಿರುಳನದು ಪಲ್ಲವಿಸಿತು.
ಅವಳಿವಳ ಮೂರ್ತಿಯನು ಮನದಿ ಮೂಡಿಸುತದರ
ಧ್ಯಾನಧಾರಣೆಯೊಳೇ ದಿನಗಳೆದನು,
ನಿಡುಸುಯ್ಗಳಿಂದ ನಿಟ್ಟುಸಿರಿಂದ ಬಾಳುವೆಯ
ಹಸುರೆಲ್ಲವೂ ಸುಟ್ಟು ಸಿಡಿಯುತಿರಲು.

ಅವನು ಗೆಳೆತನಕೆ ಕಾತರಿಸಿದನು; ಸರಿಹರೆಯ
ದೆಳೆಯರೊಳು ಸರಸಸಲ್ಲಾಪಕೆಳಸಿ.

ತಿಳಿನಗೆಯ ಹೊನಲನೇ ಹರಿಸಿ ತನ್ನೆದೆಯನದ
ರೊಳಗೆ ತೇಲಿಸಿ ಬಿಡುವೆನೆಂದು ಬಯಸಿ.

“ ಗೆಳೆತನವೆ! ಜೀವಜೀವದ ನಿತ್ಯನೂತನವೆ,
ಸಚರಾಚರದ ಮೂಲಚೇತನವೆ, ಬಾ!
ಭಾವಮಾರ್ದವದ ಸಂಜೀವನವೆ, ಜೀವನದ
ವಾಹಿನಿಯ ನಿತ್ಯಸಂಪೂರಣವೆ, ಬಾ!”

ಎಂಬ ಮೃದುಗೀತಕೆದೆಯನು ಸಮಶ್ರುತಿಗೊಳಿಸಿ
ನಿಂದು ನೋಡಿದನವನು ಕೆಲಕೆ ಬಲಕೆ—
ಒಂದಾಗಿ ಬಗೆಯೆರಡು ಮುಂದಾಗುವಾಸೆಯೊಳು
ಧಮನಿಧಮನಿಯು ತರಂಗಿತವಾಗಿರೆ.

ಕುಂದುಕೊರತೆಗಳುಂಟು ಜೀವಜೀವಗಳಲ್ಲಿ;
ಒಂದಕೂ ಪೂರ್ಣತೆಯ ಪುಣ್ಯವಿಲ್ಲ.
ಪೂರ್ಣತೆಯ ದುರ್ದಮ್ಯವಾಂಛೆ ಬಿಡದೋಡಿಪುದು
ಸ್ನೇಹಭಿಕ್ಷೆಗೆ ಬಾಳ ಬೀದಿಗಳಲಿ.
ತೆರೆದ ಮನ, ಮುಗಿದ ಕೈ, ಬೆಂದು ಕೂಗುವ ಹೃದಯ;
ಬರಿದಾದ ಬಾಳ ಪಾತ್ರೆಯನು ತೆರೆದು,
ಕೆಳೆಗಾಗಿ ಕಾತರಿಸಿ ತೊಳಲಿದನು ಹಲವುದಿನ;
ಕಲಹ—ಕಪಟವೆ ಬಂತು ಹಲ್ಲುಮಸೆದು.

ತನ್ನ ಜೀವನದೊಳಗುಗಾಯಗಳಿಗುಪ್ಪನಿಡು
ವನ್ನರಲ್ಲದೆ, ನಲ್ಮೆ ಸೂದೆಯನೆರೆದು,
ತಣ್ಪುಗೊಳಿಸುವ ಪ್ರೇಮನಿಧಿಗಳನು ಕಾಣದೆಯೆ
ಕೊರಗಿದನು ಮರುಗಿದನು ಹಗಲು-ಇರುಳು!

ಎನಿತೆನಿತೊ ಗ್ರಂಥಗಳನೋದಿ ರಸ ಹೀರಿದನು
ಹಲವು ಬೆಳಗುಗಳ ಬೆಳಕುಗಳ ಕುಡಿದ
ಮಲರಂತೆ, ಪ್ರೇಮಸತ್ಯದಯಾದಿ ಮೃದುಗುಣದ
ತಾಳುವೆಯ ಬಾಳನವಲಂಬಿಸಿದನು.

ತನ್ನ ಬಾಳಿನ ಮೂಲೆಮೂಲೆಯಿಂದಲು ಕುಂದು
ಕೊರತೆಗಳನೆಳೆದುತಂದನು ಬೆಳಕಿಗೆ.

ಅನ್ಯರೊಳು ಲೋಪದೋಷಗಳ ಬೆದಕಲು ಬೆದರಿ
ತನ್ನೆದೆಯನೇ ಗುಡಿಸಲನುವಾದನು.

ಮೃದುತೆ ಮಧುರತೆ ಬಂತು ಬಾಳುವೆಗೆ ಕುಸುಮ ಕೋ
ಮಲತೆ ಸಾರ್ದುದು ಮಧುರನಿಗೆ ಹೃದಯಕೆ.
ಆದರೇನಕಟಕಟ, ಸ್ಥಿರತೆ ಸಂಯಮಶಕ್ತಿ
ಬಾರದಾಯ್ತವನ ರಸಜೀವವದಕೆ.

ಕರ್ತೃತ್ವಶಕ್ತಿ ಲೋಪಿಸಿತು; ಮತಿಗೂ ಕೃತಿಗು
ನೂರು ಯೋಜನಗಳಂತರವು ಬಂತು.
ಒಡಲು ಸಡಿಲಿತು; ಮನವು ಮಸಣಿಸಿತು, ಜೀವನವು
ಸುಡುಗಾಡಿನೊಲು ಭೀಕರತೆಯನಾಂತು.

ದಾರ ತಪ್ಪಿದ ಗಾಳಿಪಟದಂತೆ, ಗಾಳಿಗಳ
ಹೊನಲಿಗೊಡ್ಡಿದ ಹಾರುತರಗಲಂತೆ,
ನೆಲಕೆ ಚೆಲ್ಲಿದ ಪಾದರಸದಂತೆ ಜೀವನವು
ವಿಚಲ ದುರ್ಬಲ ವಿಕಲವಾದುದವಗೆ.

ಅವನಾಣತಿಯನು ಕಡೆಗಾಣುತಿರೆ ಮನವು, ಮನ
ದಾಣತಿಗೆ ಕಿವುಡಾದುವಿಂದ್ರಿಯಗಳು.
ಇಂತರಾಜಕವಾಗಿ ಬಾಳುವೆಯು ನೂರಾರು
ವಿಪ್ಲವದ ಕಾಳ್ಕಿಚ್ಚಿಗೆಡೆಯಾದುದು.

ಹಲವಾಶೆಗಳ ಗೋರಿಗೋರಿಗಳ ಸಾಲಾಗಿ
ಹರೆಯುವಾತನ ಕಣ್ಣನುರಿಸುತಿರಲು,
ಇಂದುಮುಂದಿಗೆ ಹೇಸಿ ಹಿಂದಿನಿರವಿನ ಸೆನಹು
ನಾಡಿನೊಳು ಚಿರಪಥಿಕನಾದನವನು.

ಆಗಾಗ ಮೇಲ್ನಾಡಿನಾಶೆ ಮೃಗತೃಷ್ಣೆಯೊಲು
ಬಂದು ಬಂದಳಲನುಗ್ಗಡಿಸುತಿರಲು,
ಶಾಂತಿರಾಜ್ಯದ ಬಹಿಷ್ಕೃತ ನಾಗರಿಕನಂತೆ
ಚಿಂತೆಗಳ ಹಳುವದಲಿ ಹೊಲಬಳಿದನು.

ಇಂತು ಸಂಕ್ಷುಬ್ಧ ಸಾಗರದುಗ್ರ ಜೀವನದ
ಸಂತಾಪವನದೆಂತೊ ಧರಿಸಿ ಭರಿಸಿ,

ಕೊನೆಗೊಮ್ಮೆ ಹುಟ್ಟೂರ ನೋಡುವಾಸೆಯು ಕೆರಳಿ
ತೆರಳಿದನು ಪಡುಗಡಲ ತಡಿಯನರಸಿ !

೩

ಅದೆ ಕಡಲು ಮುಗಿಲವೇ ಕೆರೆತೊರೆಗಳದೆ ಬಾನು
ಹೂಬಳ್ಳಿಗಿಡಮರಗಳಂದಿನವೆ, ಹಾ !
ಅವುಗಳೇ ಹಕ್ಕಿಗಳು ಮನವನಿಂದೇಕೆ ಸಂ
ತವಿಸವೆಂದಳಲುವನು ಕೂಗಿ ಕರೆದು.

'ನಾವು ಪಡೆವುದು ನಾವು ಕೊಡುವನಿತನೇ, ನಮ್ಮ
ಜೀವನದೊಳೇ ಬಾಳುತಿಹುದು ಪ್ರಕೃತಿ.'
ಎಂದು ಕವಿ ಕೋಲರಿಜನುಸುರಿದಾ ಸವಿನುಡಿಯೆ
ಒಂದು ಮೊರೆಯುವುದವನ ಕರ್ಣಗಳಲಿ.

ಕೆರೆಯ ದಡದಲಿ ಹಸುರುಹುಲ್ಲುಗಳ ಹಾಸಿನಲಿ,
ಅರೆಯೊರಗಿ ಕಣ್ಮಲರು ಅರೆತೆರೆದಿರೆ,
ಮೊರೆವ ಮಧುಪಗಳ ಗುಂಜಾರವವ ಕೇಳಿ ಮಾ
ಮರದ ಮಂಜರಿಗಳೆಡೆ ನೋಡುತಿಹನು.

ದೂರದ ದಿಗಂತದೆಡೆ ಹರಿಸುವನು ದಿಟ್ಟಿಯನು
ದಾರಿ ನೋಡುವನದಾರನೊ ತಿಳಿಯನು.
ತರಗೆಲೆಯ ಮರ್ಮರಕೆ ಬೆಚ್ಚಿ ಬೆದರೇಳುವನು ;
ಆರ ದನಿಯನೊ ಕೇಳಿ ಕೆರಳಿದಂತೆ !

ಬಳಿಯ ಕೆರೆಯೊಳಗೆರಡೆ ಬೊಗಸೆ ನೀರುಳಿದಿಹುದು
ಆರದಾಸರ ಗ್ರೀಷ್ಮ ಕುಡಿದು ಕುಡಿದು.
ಅದರಂತೆ ತನ್ನೆದೆಯು ಹಿರಿಯಾಸೆಗಳ ಕಡಲು
ಒಂದೆರಡೆ ಹನಿಯಾದುದೆಂದರಿವನು.

ಸಂದ ಬಾಲ್ಯದ ಹಲವುಮ್ಮೊಗದ ವಿಮಲಾದರ್ಶ
ಬಂದ ಮಾವಿನ ಹಲವು ಹೂಗಳಂತೆ
ಇಂದು ಕಣ್ಮರೆಯಾದುದಯ್ಯೊ, ಹರೆಯದ ಗ್ರೀಷ್ಮ
ಕೊಂದುತಿಂದುದು ಬಾಳ ಹಸುರನೆಲ್ಲ.

ಮನ ಸಿಡಿದು ಹೋಳಾಗುತಿಹುದಿಂದು; ತನು ವಿಕಾ
ರಗಳ ಮಡುವಿನೊಳಿದೋ ಬೀಳುತಿಹುದು.
ಕಾರ್ಮುಗಿಲ ದಾಳಿಗೊಳಗಾದ ಬಾನೆದೆಯಂತೆ
ಬಗೆಯು ಬಿರುಗಾಳಿಗಳ ಬೀಡಾಯಿತು.

ತೊರೆಯ ತಿಳಿನೀರ ಕುಡಿದಲ್ಲಲ್ಲಿ ಗಿಡದಡಿಯ
ಹಸುರುಹಸಲೆಯ ಮೇದು ಮೋದಗೊಂಡ
ಚಿಗರೆಯೇಕಿಂದು ಮಿಡುಮಿಡುಕುತಿಹುದಯ್ಯ, ಮೃಗ-
ಯಾವಿಹಾರಕೆ ಒಂದ ಕಟುಕನಾರು?

ಸೂರಾರು ಚಿಂತೆಗಳ ಚಿತೆಯೊಳಿದೆಯುರಿಯುತಿದೆ;
ಕಂಡುಕೇಳದ ಜನರ ನೆನಹು ಬಂದು,
ಕದವು ಕಂಬನಿಗಳಿಗೆ ಹೊಸಲಾದುದಾತನಿಗೆ
ಹೇಳಲಾರದ ದುಃಖ ಮೀರಿಬಂದು.

ಬಳಿಯ ಹಕ್ಕಿಗಳ ಚಿಲಿಪಿಲಿಯಿಂದೆ ಕಣ್ದೆರೆದು
ಸುಳಿವ ಹಸುಗಳ ದನಿಗೆ ಮರವೆ ತಿಳಿದು
ಮೊಗವೆತ್ತಿ ನೋಡಿದನು,—ಪಡುಗಡೆಗೆ ಕೆನ್ನೀರ
ಹೊಳೆಯ ನಾವೆಗಳಂತೆ ಮುಗಿಲುಗಳನು.

ಮೊದಲ ಬೇಟಕೆ ಕದವು ಕೆಂಪೇರ್ದ ಕನ್ನಿಕೆಯ
ಸಿರಿಮೊಗದ ಕೆಂಬರಳ ಸತ್ತ್ರಿನಂತೆ
ಸೊಗಸಿದನು ರವಿ ಪಡುವಲಲಿ; ಕಡಲ ತೋಳ್ಗಳಲಿ
ಜಗದ ಜೀವದ ರತ್ನ ಕಳಚುವಂತೆ.

ಬಾನಗಲಕೂ ಯಾವ ಕಲೆಗಾರ ಕುಂಚದಲಿ
ನಾನಾವಿಧದ ವರ್ಣರೂಪಗಳಲಿ
ಅಮರಕಲ್ಪನೆಯ ಕುಡಿಗಳನಿಲ್ಲಿ ಮೊಳೆಸುವನು,
ಯಾವ ಬೆಸಕೆಂದವನು ನಿಡುಸುಯ್ದನು.

ಇಲ್ಲಿ ಜಗವಲ್ಲಿ ಮುಗಿಲಿವುಗಳಂತರದೊಳಗೆ
ಯಾವ ಶಾಂತಿಗೊ ಮಹಾಪೂರ ಬಂತು.
ಉಸಿರ ಬಿಗಿಹಿಡಿದು ಕದ್ದೈತರುತಲಿದೆ ಗಾಳಿ;
ಮಿಸುಕಾಡದಿಹುವು ತರುತೃಣಲತೆಗಳು.

ಮುಳುಗುವನು ರವಿ. ಬಳಿಕೆ ಮುಳುಗುವನೆ ? ದಿನದಿನದ
ತನ್ನ ಕರ್ತವ್ಯಕರ್ಮದ ನೋಂಪಿಗೆ
ಸಲಿಸಿದನು ಕುಂದು ಬರದಂತೆ ದಿನದಾಯುವನು ;
ಬಳಿಕಿಳಿದನವನಪರ ವಾರಿನಿಧಿಗೆ.

ಒಕ್ಕೊರಲಿನಲಿ ಹಲವು ಹಕ್ಕಿಗಳು ಬಿಕ್ಕುತಿವೆ
ರವಿಯ ಚರಮಶ್ಲೋಕ ಬಿತ್ತರಿಸಿದೆ ;
ಬಾನಗಲ ನೆಲದಗಲ ಮರಗಿಡವು ಹೂ ಬಳ್ಳಿ
ಮೌನದಿಂದದಕೆ ದನಿಗೂಡಿಸುತಿವೆ.

'ಎಲೆಲೆ ಮುಗಿಲುಗಳೆ ! ಹುಟ್ಟೆಲ್ಲಿ ? ಹೊರಟಿಹುದೆಲ್ಲಿ ?
ಎಲ್ಲಿಂದಲೆಲ್ಲಿಗೇರಿದಿರಿ, ನೀವು ?
ಬಣ್ಣಬಣ್ಣದ ಉಡಿಗೆ ತೊಡಿಗೆ ಸಿಂಗರವಾಯ್ತು ;
ಬಾನೆಲ್ಲವೂ ನೃತ್ಯರಂಗ ನಿಮಗೆ.

'ತಾರೆಗಳೆ ನಿಮ್ಮೊಲವಿನೊಡತಿಯರು ದಿಗ್ದಂತಿ
ದಂತಗಳೆ ಕಹಳೆ ಕೊಂಬುಗಳು ನಿಮಗೆ
ಯಾವ ಚಿರನೂತನದ ಓಲೆಕಾರರು ನೀವು ?
ಯಾವ ನನ್ನಿಯ ನೆಲೆಯ ಹರಿಕಾರರೋ !

'ಅದಲುಬದಲಿನ ತೆರಗಳಿಂದೆ ಕದಡಿದೆ ನಿಮ್ಮ
ಬಾಳುವೆಯ ಮೇಲುಮೈ.—ಆದೊಡೇನು ?
ಒಳಗಿಳಿದು ನೋಡಿದರೆ ಗಂಭೀರ, ಗಂಭೀರ ;
ಹಲವು ಮುತ್ತನು ತಳೆದ ತಳ ನಿಮ್ಮದು.

'ನೆಲದಣುಗರೊಡಲುರಿಯ ತಣಿಪೊಂದು ಹೆಗ್ಗುರಿಯು
ಅದೆ ನಿಮ್ಮ ಜೀವನದ ಮೊಳಕೆ—ಬೆಳಸು.
ಅದಕಾಗಿ ತೊಳಲುವಿರಿ ; ನೋಯುವಿರಿ ; ಮಳೆಯಾಗಿ
ಸುರಿಸುರಿದು ಕೃತಿಯಾಗಿ ಬಾಳುತಿಹಿರಿ !

'ನಿಮ್ಮಂತೆ, ತೋರಿಕೆಗೆ ಚಲವಿಚಲವೆನಿಸಿದರು,
ಒಳಬಾಳೊಳುತ್ತಮಾದರ್ಶವೊಂದು
ಅಚ್ಚಿರಿದು ವಜ್ರಲೇಪಿತವಾಗಿ ಬಾಳುವೆಯ
ಸೂತ್ರವನು ಹಿಡಿದು ಕುಣಿಕುಣಿಸಬೇಕು.

‘ದಿಟವು ದಿಟವಿದು ತಂದೆ! ಆದರಾನಾವೊಂದು
ದಾರಿಯನು ಹಿಡಿವೆನೆಂದರಿಯೆನಲ್ಲ.
ಹಿಡಿದ ದಾರಿಗೆ ಕವಲುಕವಲು ಪದಪದಗತಿಗೆ
ನಡೆವ ತ್ರಾಣವು ಜೀವಕಿಲ್ಲವಲ್ಲ!

‘ತನುಮನಗಳೆರಡು ತಟ್ಟೆಗಳ ತಕ್ಕಡಿ ಬಾಳು.
ಅದನು ಸಮಸೂತ್ರದಲಿ ನಿಲಿಸಲಾರೆ!
ತನುಭಾರ, ಭಾರ; ಮನ ಗಾಳಿಗೂ ಬಲುಹಗುರ;
ನಿತ್ಯಸಂಬಂಧವಿವಕೇತಕಕಟ!’

ಎಂದು ಮೇಲ್ನೋಡಿದನು ಲಕ್ಷೋಪಲಕ್ಷ ನ
ಕ್ಷತ್ರಗಳ ನಿರ್ನಿಮೇಷಾಕ್ಷಿಗಳಲಿ
ಸ್ಫುರಿಪ ಕಲ್ಪನೆಯೊಂದು ಅವನೆದೆಯ ಮುದ್ರಿಸಿತು
ಜಗಮುಗಿಲುಗಳ ವಿಮಲಸಾಕ್ಷಿಗಳಲಿ!

ಹಲವು ಯುಗಯುಗದಿಂದ ಮನುಜರೆದೆಬಸದಲ್ಲಿ
ಅರಳಿ ಬಾಡಿದ ಭಾವಕುಸುಮವೆನಿತೋ.
ನೆಲದ ಹಗೆ ತಾಳಲಾರದೆ ಮುಗಿಲನೇರಿಹುವು;
ಅಲ್ಲಿ ತಾರೆಗಳಾಗಿ ಮಿನುಗುತಿಹುವು.

ಮಿನುಮಿನುಗಿ ಕಾರಿರುಳೊಳಲೆವ ಅಕೃತಾರ್ಥರೆದೆ
ಯಾಳದಲಿ ಕಿರುಬೆಳಕ ಕುದುರಿಸುವುವು.
ತನುಮನದ ಈ ವಿಕಟನಾಟ್ಯದೊಳಗೂ ಬಾಳಿ
ನಾಸೆಯುಳಿ ಕಿಡಿಗಳನು ಕನಲಿಸುವುವು.

‘ತುಂಬು ತುಂಬದರಿಂದ ಬಾಳಿನಲಿ ಮೊದಲಿಂದ
ಕೊನೆಯುವರೆಗೂ ದಿವ್ಯಭಾವಗಳನು.
ಎಂದಾದರೊಂದುದಿನ ನಿನ್ನಮಲ ಭಾವಗಳೆ
ಬಾಂದಳದ ಹೂವಾಗಿ ಮಲರಲಿಹುವು!’*

ಎಂ. ಗೋಪಾಲಕೃಷ್ಣ ಅಡಿಗ.

---

* ಈ ವರ್ಷ ರಾಜಸೇವಾಸಕ್ತ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ರಜತೋತ್ಸವ ಸುವರ್ಣ ಪದಕವನ್ನು ಪಡೆದ ಕವಿತೆ.

ಮಹಾದೇವಿಯಕ್ಕನ ಕೆಲವು ವಚನಗಳು

"ಅಂದಂದಿನುಚಿತಕ್ಕೆ ಗೀತಮಂ ಪಾಡುತುಂ"

—ಹರಿಹರ: 'ಮಹಾದೇವಿಯಕ್ಕನ ರಗಳೆ,' vii. ೨೦೦

೧

ಕ್ರಿ.ಶ. ಹನ್ನೆರಡನೆಯ ಶತಮಾನದ ವೀರಶೈವತಾರಾಗಣದಲ್ಲಿ ಮಹಾದೇವಿಯಕ್ಕನ ಅಪೂರ್ವಕಾಂತಿ ಯಾರ ಕಣ್ಣನ್ನಾದರೂ ಸೆಳೆಯುತ್ತದೆ. ಬಸವಣ್ಣ ಅಲ್ಲಮಪ್ರಭುಗಳಂಥ ಪ್ರಥಮಶ್ರೇಣಿಯ ಜ್ಯೋತಿಗಳೊಡನೆ ಹೋಲಿಸಿದಾಗ ಕೂಡ ಆಕೆಯ ವರ್ಚಸ್ಸು ಕುಂದುವುದಿಲ್ಲ. ಎಳಹರೆಯದಲ್ಲೇ ಸಂಸಾರದ ತೊಡರನ್ನು ಹರಿದು, ಎಲ್ಲ ಬಗೆಯ ಅಭಿಮಾನವನ್ನೂ ತೊರೆದು, ಚೆನ್ನಮಲ್ಲಿಕಾರ್ಜುನದೇವನ ಹಂಬಲೊಂದನ್ನೇ ಹೃದಯದಲ್ಲಿ ತುಂಬಿಕೊಂಡು ಅವನನ್ನು ಅರಸುತ್ತಾ ಹೊರಟ ಈ ತೇಜಸ್ವಿನಿಯ ಏಕನಿಷ್ಠೆ ಹಿರಿಯ ಅನುಭಾವಿಗಳನ್ನೇ ಬೆರಗುಗೊಳಿಸಿತು. ಈ ಎಳೆಜವ್ವನದ ವಿರಕ್ತೆಯನ್ನು ಅವರು ಪರೀಕ್ಷಿಸಿ ಗೌರವಿಸಿದರು; ಹಿರಿಯ ತಿಳಿವನ್ನೂ ಅನುಭವವನ್ನೂ ಸೂಸುವ ಈ ಕಿರಿಯಳ ವಚನಗಳನ್ನು ಆಲಿಸಿ ಕೊಂಡಾಡಿದರು. ಅಂದು ವೀರಶೈವರ ಮನನಮಂತ್ರವಾಗಿ ಪರಿಣಮಿಸಿದ ಅವಳ ವಚನಗಳು ಇಂದು ಜಾತಿಮತಗಳ ಎಲ್ಲೆಯನ್ನು ದಾಟಿ ಎಲ್ಲ ಕನ್ನಡಿಗರ ಹೃದಯವನ್ನೂ ಸೂರೆಗೊಂಡಿವೆ. ಅವುಗಳ ಕಾವ್ಯಸಂಪತ್ತೂ ಅವುಗಳಲ್ಲಿ ವ್ಯಕ್ತವಾಗುವ ಮಹಾದೇವಿಯ ಮೂರ್ತಿಯೂ ಕನ್ನಡಸಾಹಿತ್ಯಕ್ಕೆ ಭೂಷಣವಾಗಿ ನಿಂತಿವೆ.

ವೀರಶೈವ ಶರಣರ ವಚನಗಳನ್ನು ಒಟ್ಟಿನ ಮೇಲೆ ಎರಡು ರಾಶಿಯಾಗಿ ವಿಂಗಡಿಸಬಹುದು. ತಾವು ಕಂಡ ಅಥವಾ ತಿಳಿದ ತತ್ವವನ್ನು ಉಪದೇಶಿಸುವುದನ್ನೇ ಮುಖ್ಯೋದ್ದೇಶವಾಗಿಟ್ಟುಕೊಂಡು ಅದಕ್ಕೆ ಯಾವ ಬಗೆಯ ಸವಿಯನ್ನೂ ಕೂಡಿಸದೆ ರಚಿಸಿದ ವಚನಗಳು ಒಂದು ಗುಂಪಾಗುತ್ತವೆ. ಇವುಗಳಲ್ಲಿ ವಚನಕಾರರ ಗಮನವೆಲ್ಲಾ ಧರ್ಮದ ಕಡೆಗೆ, ಆಚಾರದ ಕಡೆಗೆ. ಅದು ಶ್ರೋತೃಗಳಿಗೆ ಗೊತ್ತಾದರೆ ಅವರ ಉದ್ದೇಶ ತೀರಿತು. ಮಾತು ಶುಷ್ಕವಾದರೂ, ನಿರೂಪಣೆಯ ಕ್ರಮ ನೀರಸವಾದರೂ ಅವರಿಗೆ ಲಕ್ಷ್ಯವಿಲ್ಲ. ಇಂಥ ರಚನೆಗೆ 'ವಚನಶಾಸ್ತ್ರ' ಎಂಬ ಹೆಸರು ಸರಿಯಾಗಿ ಒಪ್ಪುತ್ತದೆ. ಧರ್ಮದ ದೃಷ್ಟಿಯಿಂದ ಈ ವಚನಗಳಿಗೆ ಪ್ರಾಮುಖ್ಯವಿರುವುದೇನೋ ನಿಜ; ಆದರೆ ರಸಾಪೇಕ್ಷಿಗಳ ಹೃದಯವನ್ನು ಇವು ಆಕರ್ಷಿಸಲಾರವು.

ಎರಡನೆಯ ಗುಂಪಿನ ವಚನಗಳು ಸಂಖ್ಯೆಯಲ್ಲಿ ಅಷ್ಟೊಂದಿಲ್ಲ. ಆದರೆ ಸಾಹಿತಿಯ ದೃಷ್ಟಿಯಲ್ಲಿ ಅವುಗಳ ಬೆಲೆ ಬಲುಹಿರಿದು. ವಚನವಾಙ್ಮಯಕ್ಕೆ ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠಸ್ಥಾನವನ್ನು ಗಳಿಸಿಕೊಟ್ಟಿರತಕ್ಕವು ಇವು. ಇವುಗಳಲ್ಲೂ ತತ್ವವಿದೆ, ನೀತಿಯಿದೆ, ವೀರಶೈವಧರ್ಮದ ಸಾರವಿದೆ. ಆದರೆ ಇವು ಬುದ್ಧಿವ್ಯವಸಾಯದಿಂದ ಹೊರಬಿದ್ದ ವಚನಗಳಲ್ಲ. ಇವು ಹೊಮ್ಮಿರುವುದು ಹೃದಯದ ಆಳದಿಂದ, ಅನುಭವದ ಅರಳಾಗಿ. ಒಂದೊಂದು ವಚನವೂ ಸಾಧಕನು ಅನುಭವಿಸಿದ ಯಾವುದೋ ಒಂದು ನೋವಿನಿಂದ, ನಲವಿನಿಂದ, ಹಂಬಲಿನಿಂದ, ಹಾರೈಕೆಯಿಂದ ಜೀವಗೊಂಡು ಮಿಡಿಯುತ್ತಿರುತ್ತದೆ. ಭಕ್ತಿ, ಜ್ಞಾನ, ವೈರಾಗ್ಯ: ಯಾವುದೇ ಅದರ ವಿಷಯವಾಗಿರಲಿ, ವಚನಕಾರನ ಹೃದಯರಸದಲ್ಲಿ ಅದ್ದಿ ತೆಗೆದಿರುವುದರಿಂದ, ನಿಜವಾಗಿ ಅದೊಂದು ಬಿಡಿಕವನ—'ಮುಕ್ತಕ.' ಶರಣನು ತನ್ನ ಜೀವನದ ಒಂದು ವಿಶಿಷ್ಟ ಘಟನೆಯಿಂದ, ವಿಶಿಷ್ಟ ಸನ್ನಿವೇಶದಿಂದ ಆವೇಶಗೊಂಡು ಹಾಡಿರತಕ್ಕ ವಚನಗಳೂ ಉಂಟು. ಇವುಗಳಲ್ಲೆಲ್ಲಾ ಅವನ ವ್ಯಕ್ತಿತ್ವದ ಮುದ್ರೆ ಒತ್ತಿಯೇ ಇರುತ್ತದೆ; ಅವನ ಜೀವನದ ಸಂಗತಿಗಳು ಅಲ್ಲಲ್ಲಿ ತಲೆಹಾಕಿರುವುದೂ ಅಸಂಭವವಲ್ಲ. ಸಾಹಿತಿ ಸವಿಯಲು ಬಯಸುವುದು ಇಂಥ ವಚನಾಮೃತವನ್ನು. ಬಸವಣ್ಣನ ವಚನಗಳ ಸ್ವಾರಸ್ಯವನ್ನು ಅರಿತವರಿಗೆ ಈ ವಿಷಯವನ್ನು ವಿಸ್ತಾರವಾಗಿ ಪ್ರತಿಪಾದಿಸಬೇಕಾಗಿಲ್ಲ.

ವಚನಕಾರರಲ್ಲಿ ಬಸವಣ್ಣನ ಗುಂಪಿಗೇ ಮಹಾದೇವಿಯಕ್ಕನು ಸೇರುತ್ತಾಳೆ. ತತ್ವೈಕಪ್ರಧಾನವಾದ ವಚನಗಳನ್ನು ಈಕೆ ರಚಿಸಿಲ್ಲವೆಂದಲ್ಲ; 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತವನ್ನೊಳಕೊಂಡು ದೊರೆಯುವ ವಚನಗಳಲ್ಲಿ ಈ ವರ್ಗಕ್ಕೆ ಸೇರತಕ್ಕವೂ ಉಂಟು. ಆದರೆ ಅವಳ ವಚನಗಳ ಬಹುಭಾಗ ನಿಜವಾಗಿಯೂ ರಸಾರ್ದ್ರವಾದದ್ದು; ಉಪಮಾನಗಳಿಂದ, ಚಿತ್ರಕಲ್ಪನೆಗಳಿಂದ ಮನೋಹರವಾಗಿರತಕ್ಕದ್ದು; ಅವಳದು ಕವಿಯ ಹೃದಯ, ಕವಿಯ ಕಣ್ಣು ಎಂಬುದನ್ನು ಸಾರತಕ್ಕದ್ದು. ಇದರ ಸೊಗಸನ್ನು ಕಂಡವರಿಗೆ ಇಂಥ ಇನ್ನಷ್ಟನ್ನು ಓದಬೇಕೆಂಬ ಆಶೆ ಅತಿಶಯವಾಗಿ ಹುಟ್ಟುತ್ತದೆ.

ಆದರೆ ಮಹಾದೇವಿಯಕ್ಕನ ವಚನಗಳನ್ನೆಲ್ಲಾ ಒಟ್ಟುಗೂಡಿಸಿದ ಪುರಾತನ ಸಂಕಲನ ಯಾವುದೂ ಇದುವರೆಗೆ ದೊರೆತಿಲ್ಲ. ರಾವ್‌ಬಹದ್ದೂರ್ ಶ್ರೀಮಾನ್ ಪಿ. ಜಿ. ಹಳಕಟ್ಟಿಯವರು "೧೨ ವಚನಸಂಗ್ರಹಗಳೊಳಗಿನ ವಚನಗಳನ್ನು ಬೇರೆ ತೆಗೆದು" ಒಂದು ಕ್ರಮದಲ್ಲಿ ಜೋಡಿಸಿ 'ಮಹಾದೇವಿಯಕ್ಕನ ವಚನಗಳು' ಎಂಬ ಹೆಸರಿನಿಂದ ಪ್ರಸಿದ್ಧಿಪಡಿಸಿದ್ದಾರೆ. ಮೊದಲನೆಯ ಆವೃತ್ತಿ ಅಚ್ಚಾದದ್ದು ೧೯೨೬ರಲ್ಲಿ. ಅಲ್ಲಿಂದೀಚೆಗೆ ಯಾವ ವ್ಯತ್ಯಾಸಗಳೂ ಇಲ್ಲದೆ ಅದೇ ಪುನರ್ಮುದ್ರಿತವಾಗುತ್ತದೆ.[1]

---

[1] ಈ ಲೇಖನಕ್ಕಾಗಿ ಉಪಯೋಗಿಸಿಕೊಂಡಿರುವ ಪ್ರತಿ ಮೂರನೆಯ ಆವೃತ್ತಿಯದು (೧೯೩೪).

ಶ್ರೀಮರ್ಾ ಹಳಕಟ್ಟಿಯವರು ಹೆಚ್ಚಿನ ವಚನಗಳೇನನ್ನೂ ಅದಕ್ಕೆ ಸೇರಿಸಿಲ್ಲ. ಹೀಗೆ ಅವರು ಒಂದು ಘಟ್ಟಕ್ಕೆ ತಂದು ನಿಲ್ಲಿಸಿರುವ ಕಾರ್ಯವನ್ನು ಇನ್ನೊಂದು ಹೆಜ್ಜೆ ಮುಂದುವರಿಸುವುದೇ ಈ ಲೇಖನದ ಮುಖ್ಯೋದ್ದೇಶ. ಇದು ಅವರ ಸಂಗ್ರಹಕ್ಕೆ ಒಂದು ಬಗೆಯ ಪರಿಶಿಷ್ಟದಂತೆ, ಪರಿಷ್ಕಾರದಂತೆ ಇದೆಯೆಂದು ಬೇಕಾದರೂ ಹೇಳಬಹುದು.

ಮೊದಲಲ್ಲೇ ಒಂದು ಅರಿಕೆ. ಶ್ರೀಮರ್ಾ ಹಳಕಟ್ಟಿಯವರ ಕಣ್ಣಿಗೆ ತಪ್ಪಿಸಿ ಕೊಂಡಿರುವ ಮಹಾದೇವಿಯಕ್ಕನ ಎಲ್ಲ ವಚನಗಳನ್ನೂ ಇಲ್ಲಿ ಸಂಗ್ರಹಿಸಿಕೊಡಲು ನಾವು ಹೊರಟಿಲ್ಲ. ಅಷ್ಟು ದೊಡ್ಡ ಕಾರ್ಯಕ್ಕೆ ಇಲ್ಲಿ ಸ್ಥಳ ಸಾಲದು, ನಮ್ಮ ಶೋಧನೆಯೂ ಸಾಲದು. ಇದರ ಮೇಲೆ ಅದು ನಮ್ಮ ಉದ್ದೇಶವೂ ಅಲ್ಲ. ತತ್ವ ಪ್ರಾಧಾನ್ಯದ ವಚನಗಳಿಗಿಂತ ಕಾವ್ಯಗುಣವುಳ್ಳ ವಚನಗಳ ಕಡೆಗೆ, ಅದರಲ್ಲೂ ಮಹಾ ದೇವಿಯಕ್ಕನ ವ್ಯಕ್ತಿಜೀವನದ ಮೇಲೆ ಬೆಳಕುಬೀರಬಹುದಾದ ವಚನಗಳ ಕಡೆಗೆ, ಇಲ್ಲಿ ನಮ್ಮ ಮುಖ್ಯಗಮನ. ಕೇವಲ ತತ್ವದ ವಚನಗಳನ್ನು ಮತಾಭಿಮಾನಿಗಳಾದ ಹಿಂದಿನ ಸಂಗ್ರಹಕಾರರು ಒಂದಲ್ಲ ಒಂದು ಕಡೆ ಉಳಿಸಿಕೊಟ್ಟೇ ಇದ್ದಾರೆ; ಒಂದಲ್ಲ ಒಂದು ದಿನ ಅವೆಲ್ಲವೂ ಪ್ರಕಟವಾಗಿಯೇ ಆಗುತ್ತವೆ. ಮತದೃಷ್ಟಿಯಿಂದ ಅಷ್ಟು ಮುಖ್ಯವೆಂದು ತೋರದ ಆಕೆಯ ಆತ್ಮೀಯ ವಚನಗಳಲ್ಲಿ ಹಲವು ಕಾಲಪುರುಷನ ಬಾಯಿಗೆ ತುತ್ತಾಗಿರುವಂತೆ ಕಾಣುತ್ತದೆ. ಆದರೆ ನಮ್ಮ ಸುದೈವದಿಂದ ಎಲ್ಲವೂ ಹಾಗೆ ನಷ್ಟವಾಗಿಲ್ಲ. ಕೆಲವು ಅಲ್ಲಲ್ಲೇ ಉಳಿದಿವೆ; ಮತ್ತೆ ಕೆಲವು ತಮ್ಮ ಪದಚಿಹ್ನೆ ಯನ್ನು ನಿಲ್ಲಿಸಿವೆ. ನಮ್ಮ ಕಣ್ಣಿಗೆ ಬಿದ್ದ ಇವುಗಳ ಆಕರಗಳನ್ನು ಸೂಚಿಸಿ, ಅಲ್ಲಿಂದ ಗಮನಾರ್ಹವಾದ ಕೆಲವು ವಚನಗಳನ್ನು ಉದ್ಧರಿಸಿ ಕೊಟ್ಟು ಒಂದೆರಡು ಮಾತನ್ನು ಹೇಳುವುದೇ ಈ ಲೇಖನದ ಗುರಿ.

೨

ಮಿಕ್ಕ ಆಕರಗಳ ಕಡೆಗೆ ತಿರುಗುವ ಮೊದಲು, ಶ್ರೀಮರ್ಾ ಹಳಕಟ್ಟಿಯವರಿಗೆ ಬಹುಶಃ ದೊರೆಯದಿದ್ದ ಎರಡು ವಚನಸಂಕಲನಗಳಿಂದ ಎರಡು ವಚನಗಳನ್ನು ಒಂದೊಂದರಿಂದ ಒಂದೊಂದರಂತೆ ಇಲ್ಲಿ ಉದ್ಧರಿಸಿಕೊಡುತ್ತೇವೆ. ಇವೆರಡರಲ್ಲೂ ಮಹಾದೇವಿಯಕ್ಕನ ಭಕ್ತಿನಿಷ್ಠೆಯೂ ಕವಿವಾಣಿಯೂ ಗೋಚರಿಸುತ್ತವೆ:

ಜೋಳಿಯನೆಂದು ನಂಬಬೇಡ. ಡಾಳಕನವಸು, ಜಗದ ಬಿನ್ನಾಣಿ.
ಬಾಣ ಮಯೂರ ಕಾಳಿದಾಸ ವೋಹಿಲಸುದ್ಭಟ ಮಲುಹಣನವರಿಗಿತ್ತ

ಪರಿ ಬೇಱೆ. ಮುಕ್ತಿಭುಕ್ತಿಯ ಶ್ರೋಱೆ ಭಕ್ತಿಯ ಮಱಸಿಕೊಂಬನು ಚೆನ್ನಮಲ್ಲಿಕಾರ್ಜುನನು.[1]

ಕೋಲ ತುದಿಯ ಕೋಡಗದಂತೆ ನೇಣ ತುದಿಯ ಬೊಂಬೆಯಂತೆ ಆಡಿದೆನಯ್ಯಾ ನೀನಾಡಿಸಿದಂತೆ. ಆ ನುಡಿದೆನಯ್ಯಾ ನೀನು ನುಡಿಸಿದಂತೆ. ಆನು ಇದ್ದೆನಯ್ಯಾ ನೀನು ಇರಿಸಿದಂತೆ, ಜಗದ ಯಂತ್ರವಾಹಕ ಚೆನ್ನಮಲ್ಲಿಕಾರ್ಜುನ ಸಾಕೆಂಬ[ನ್ನ]ಕ್ಕ.[2]

೩

ಚಾಮರಸನ 'ಪ್ರಭುಲಿಂಗಲೀಲೆ' ಅಲ್ಲಮಪ್ರಭುವೊಬ್ಬನ ಚರಿತ್ರೆಯಲ್ಲ; ಅದೊಂದು ಭಕ್ತಕಥಾವಳಿ. ಅದು ಷಟ್ಪದೀ ಕಾವ್ಯವಷ್ಟೇ ಅಲ್ಲ, ಅದೊಂದು ವಚನ ಕೋಶವೂ ಹೌದು. ತನ್ನ ಕಥೆಯ ನೆಯ್ಗೆಯಲ್ಲಿ ಚಾಮರಸನು ಶರಣರ ವಚನಗಳ ಸರಿಗೆಯೆಳೆಯನ್ನು ಸೇರಿಸಿಕೊಂಡಿರುವುದು ಮಾತ್ರವಲ್ಲದೆ, ಪ್ರಭುಲಿಂಗಲೀಲೆಯ ಪ್ರತಿಯೊಂದು ಗತಿಯ ಪ್ರಾರಂಭದಲ್ಲೂ ಅಲ್ಲಲ್ಲಿಗೆ ಅನುರೂಪವಾದ ವಚನಗಳನ್ನೂ ಮೊದಲು ಉದಾಹರಿಸಿ ಬಳಿಕ ಪದ್ಯರಚನೆಗೆ ತೊಡಗಿದ್ದಾನೆ. ಇದು ಚಾಮರಸನ ಕೈವಾಡವೇ ಎನ್ನುವುದಕ್ಕೆ ಈ ಬಗೆಯ ವಚನಗಳ ಅವತರಣಿಕೆ ಪ್ರಭುಲಿಂಗಲೀಲೆಯ ಎಲ್ಲ ಮಾತೃಕೆಗಳಲ್ಲೂ ತಪ್ಪದೆ ಕಾಣಬರುವುದು ದೊಡ್ಡ ಸಾಕ್ಷಿ. "ಈ ಎಲ್ಲ ಪ್ರತಿಗಳಲ್ಲಿ ಪ್ರತಿಯೊಂದು ಗತಿಯ ಆರಂಭದಲ್ಲಿ ಅವತರಿಸಿದ ವಚನಗಳು ಒಂದೇ ಸವ

---

[1] ಇದು ಮೈಸೂರು ಓರಿಯೆಂಟಲ್ ಲೈಬ್ರೆರಿಯಲ್ಲಿ 'ವಚನಸಂಗ್ರಹ' ಎಂಬ ಹೆಸರಿನಲ್ಲಿ ದೊರೆಯುವ ಓಲೆಗರಿಯ ಪ್ರತಿ (K 499) ಯಿಂದ ತೆಗೆದದ್ದು. ಈ ಸಂಗ್ರಹದಲ್ಲಿ ಸುಮಾರು ೮೦ ಕ್ಕೆ ಹೆಚ್ಚಿನ ವಚನಕಾರರ ವಚನಗಳು, ಮುಖ್ಯವಾಗಿ ತತ್ವಕ್ಕೆ ಸಂಬಂಧಪಟ್ಟವು, ದೊರೆಯುತ್ತವೆ. ಇಲ್ಲಿರುವ ಮಹಾದೇವಿಯಕ್ಕನ ವಚನಗಳು ೪ ಮಾತ್ರ; ಅವುಗಳಲ್ಲಿ ಎರಡು ಆಗಲೇ ಹಳಕಟ್ಟಿಯವರ ಸಂಕಲನದಲ್ಲಿ ಸೇರಿರತಕ್ಕವು.

[2] ಇದು ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್ಯರ ವಶದಲ್ಲಿರುವ 'ವಚನಸಾರ' ಎಂಬ ಓಲೆಯ ಪ್ರತಿಯಿಂದ ತೆಗೆದದ್ದು. (ಇದರ ಕಾಲ ಕ್ರಿ. ಶ. ೧೬೬೧.) ಇಲ್ಲಿಯೂ ಬೇರೆ ಬೇರೆ ವಚನಕಾರರ ವಚನಗಳುಂಟು. ಇಲ್ಲಿ ಬಂದಿರುವ ಮಹಾದೇವಿಯಕ್ಕನ ವಚನಗಳು ಸುಮಾರು ೩೫-೩೦ ಆಗಬಹುದು; ಇವೆಲ್ಲ ಒತ್ತಟ್ಟಿಗೆ ಇಲ್ಲ. (ಈ ವಚನಗಳಲ್ಲಿ ಹಲವು ಹಳಕಟ್ಟಿಯವರ ಸಂಕಲನದಲ್ಲಿ ಬಂದಿವೆ.)

'ವಚನ ಸಾರ'ದ ಪ್ರತಿಯನ್ನೂ ಗುಮ್ಮಳಾಪುರದ ಸಿದ್ಧಲಿಂಗಯತಿಯ ಶೂನ್ಯಸಂಪಾದನೆಯ ಪ್ರತಿಯನ್ನೂ ಉಪಯೋಗಿಸಿಕೊಳ್ಳಲು ನನಗೆ ಅವಕಾಶಕೊಟ್ಟದ್ದಕ್ಕಾಗಿಯೂ, ಉಪಯುಕ್ತವಾದ ಕೆಲವು ಸೂಚನೆಗಳನ್ನು ಕೊಟ್ಟದ್ದಕ್ಕಾಗಿಯೂ ಶ್ರೀಮಾನ್ ನರಸಿಂಹಾಚಾರ್ಯರಿಗೆ ನನ್ನ ಕೃತಜ್ಞತೆಯನ್ನು ಸಂತೋಷದಿಂದ ಸಲ್ಲಿಸುತ್ತೇನೆ.

ನಾಗಿಲ್ಲ"[1] ಎಂಬುದೇನೋ ನಿಜ. ಹಾಗೆಂದು ಉಪೇಕ್ಷಿಸದೆ, ವಚನಗಳ ಸಂಕಲನ ಪಾಠಶೋಧನೆಗಳ ದೃಷ್ಟಿಯಿಂದಲೇ ಪ್ರಭುಲಿಂಗಲೀಲೆಯ ಎಲ್ಲ ಮಾತೃಕೆಗಳನ್ನೂ ಪರಿಶೀಲಿಸುವುದು ಅಗತ್ಯ.

ಮಹಾದೇವಿಯಕ್ಕನ ಕಥೆ ಪ್ರಭುಲಿಂಗಲೀಲೆಯ ೧೦ ನೆಯ ಮತ್ತು ೧೭ ನೆಯ ಗತಿಗಳಲ್ಲಿ ಮುಖ್ಯವಾಗಿ ನಿರೂಪಿತವಾಗಿದೆ. ಇವೆರಡರ ಆದಿಯಲ್ಲೂ ಅವಳ ವಚನಗಳು ಬಂದಿವೆ. ಅಚ್ಚಿನ ಪ್ರತಿಯಲ್ಲೂ ಅಷ್ಟೇ, ನಾವು ಹೋಲಿಸಿ ನೋಡಿದ ಮಾತೃಕೆಗಳಲ್ಲೂ ಅಷ್ಟೇ.[2] ೧೦ ನೆಯ ಗತಿಯ ಮೊದಲಲ್ಲಿ ಬರುವ ವಚನಗಳ ಸಂಖ್ಯೆ ಆನುಪೂರ್ವಿಗಳು ಒಂದೇ ಆಗಿವೆ. ಆ ನಾಲ್ಕು ವಚನಗಳನ್ನೂ ಕೆಳಗೆ ಕೊಟ್ಟಿದ್ದೇವೆ. ಇವುಗಳಲ್ಲಿ ಒಂದು ಮಾತ್ರ ('ಕಾಯ ಕಱ್ರನೆ . . .') ಹಳಕಟ್ಟಿಯವರ ಸಂಕಲನದಲ್ಲಿ ಸ್ವಲ್ಪ ಪಾಠ ಭೇದದೊಡನೆ ಸಿಕ್ಕುತ್ತದೆ (ಪು. ೩೦–ವ. ೮).—

ಮುಡಿ ಬಿಟ್ಟು ಮೊಗ ಬಾಡಿ ತನು ಕರಗಿದವಳ ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ, ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ, ಬಲುಹಳಿದು ಭವಗೆಟ್ಟು ಛಲವಳಿದು ಭಕ್ತೆಯಾಗಿ ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ?

ಎರದ ಮುಳ್ಳಿನಂತೆ ಪರಗಂಡರೆನಗವ್ವಾ. ಸೋಂಕಲಮ್ಮೆ ಸುಳಿಯಲಮ್ಮೆ ನಂಬಿ ನಚ್ಚಿ ಮಾತಾಡಲಮ್ಮೆನವ್ವಾ. ಚೆನ್ನಮಲ್ಲಿಕಾರ್ಜುನನಲ್ಲದ ಗಂಡರ ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ.

---

[1] ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯಶಾಖೆಯ ಸಂಸ್ಕರಣ, ಮುನ್ನುಡಿ, ಪು. -೩-. "ಇವೆಲ್ಲ ವಚನಗಳಲ್ಲಿ ಯೋಗ್ಯಕಂಡವುಗಳನ್ನು ಮಾತ್ರ ಆರಿಸಿ ಆ ಆ ಗತಿಗಳ ಆರಂಭದಲ್ಲಿ ಕೊಟ್ಟಿದೆ" ಎಂದು ಮುನ್ನುಡಿಯ ಲೇಖಕರು ಹೇಳಿದ್ದಾರೆ.

[2] ಮೈಸೂರು ಓರಿಯೆಂಟಲ್ ಲೈಬ್ರರಿಯ ಪ್ರತಿಗಳು : ನಂ. K154, K180, K328, K356, KA170. K180 ರಲ್ಲಿ 'ಪ್ರಭುಲಿಂಗಲೀಲೆ' ಯೊಂದೇ ಇಲ್ಲ ; ಬೇರೆಯ ಗ್ರಂಥಗಳೂ ಇವೆ. ಇದಕ್ಕೆ ಲೈಬ್ರೆರಿಯವರು ಸೇರಿಸಿರುವ ವಿಷಯಸೂಚಿಕೆಯ ಕೊನೆಯಲ್ಲಿ 'ಅಕ್ಕಗಳ ವಚನ' ಎಂದಿದೆ ; ಆದರೆ ಗ್ರಂಥದಲ್ಲಿ ಇದಕ್ಕೆ ಸಂವಾದಿಯಾಗಿರುವುದು 'ಮಹಾದೇವಿಯಕ್ಕನ ವಚನ'ಗಳಲ್ಲ ; ಯಾವುವೋ ತತ್ವದ ಪದಗಳು.

[3] ಈ ಲೇಖನದಲ್ಲಿ ಉದಾಹರಿಸಿರುವ ವಚನಗಳು ಎರಡುಮೂರು ಕಡೆ ದೊರೆತಿದ್ದರೆ, ಭಿನ್ನ ಪಾಠಗಳನ್ನೆಲ್ಲಾ ಗುರುತಿಸುವ ಗೋಜಿಗೆ ಹೋಗಿಲ್ಲ. ಅತಿಮುಖ್ಯವಾದ ಪಾಠಭೇದವೇನಾದರೂ ಇದ್ದರೆ, ಅದನ್ನು ಮಾತ್ರ ಸೂಚಿಸಲಾಗಿದೆ. 'ಱ'ಕಾರವನ್ನು ಮಾತೃಕೆಗಳಲ್ಲಿ ನಿಯತವಾಗಿ ಪ್ರಯೋಗಿಸಿಲ್ಲದಿದ್ದರೂ, ಈ ಲೇಖನದೊಳಗೆ ಉದ್ಧರಿಸಿರುವ ಭಾಗಗಳಲ್ಲಿ ಕ್ಲುಪ್ತವಾಗಿ ತೋರಿಸಿದೆ.

ಕಾಯ ಕಱ್ರನೆ ಕಂದಿದರೇನಯ್ಯಾ, ಕಾಯ ಮಿಱ್ರನೆ ಮಿಂಚಿದರೇನಯ್ಯಾ? ಅಂತರಂಗ ಶುದ್ಧವಾದ ಬಳಿಕ್ಕ ಕಾಯವೇನಾದಡೇನಯ್ಯಾ? ಚೆನ್ನಮಲ್ಲಿಕಾರ್ಜುನಂಗೊಲಿದ ಕಾಯವೇನಾದಡೆ ನಿಮಗೇನಯ್ಯಾ?

ಎರೆಯಂತೆ ಕರಕರಗಿ ಮಳಲಂತೆ ಜರಿಜರಿದು ಕನಸಿನಲಿ ಕಳವಳಿಸಿ ಆಸು ಬೆಱಗಾದೆ. ಆವಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ. ಆಪತ್ತಿಗೆ ಸಖಿಯರ ನಾನಾರುವನು ಕಾಣೆ. ಅಱಸಿ ಕಾಣದ ತನುವ ಬೆರಸಿ ಕೂಡದ ಸುಖವ ಎನಗೆ ನೀ ಕರುಣಿಸು ಚೆನ್ನಮಲ್ಲಿಕಾರ್ಜುನಾ.

ಈ ನಾಲ್ಕು ವಚನಗಳೂ ಮಹಾದೇವಿಯಕ್ಕನ ಹೃದಯದ ಕುದಿಯಿಂದಲೇ ಉಕ್ಕಿರಬೇಕೆಂಬುದರಲ್ಲಿ ಯಾವ ಸಂದೇಹವೂ ಕಾಣಿಸದು. ಕೇಶಾಂಬರೆಯಾಗಿ ಹೊರಟ ಈ ಸುಂದರಿಯನ್ನು ಯಾರು ಯಾರು ಕೋಟಲೆಗೊಳಿಸಿದರೋ! ಯಾವ ಯಾವ ಸಂದರ್ಭಗಳಲ್ಲಿ ಈ ಆರ್ತಧ್ವನಿಗಳು ಹೊರಟುವೋ!

೧೭ನೆಯ ಗತಿಯ ಮೊದಲಲ್ಲಿ ಬರುವ ವಚನಗಳನ್ನು ಕುರಿತು ಈ ಬಗೆಯ ಐಕಮತ್ಯವಿಲ್ಲ. ನಾವು ಶೋಧಿಸಿದ ಐದು ಮಾತೃಕೆಗಳಲ್ಲೂ "ಚೆನ್ನಮಲ್ಲಿಕಾರ್ಜುನ" ಎಂಬ ಅಂಕಿತವುಳ್ಳ ಒಂದೇ ಒಂದು ವಚನ ದೊರೆಯುತ್ತದೆ; ಹಳಕಟ್ಟಿಯವರ ಸಂಕಲನದಲ್ಲಿ ಇದಕ್ಕಾಗಲೇ ಸ್ಥಾನ ಸಿಕ್ಕಿದೆ (ಪು. ೪೨—ಸಂ. ೧೨). ಪ್ರಭುಲಿಂಗಲೀಲೆಯ ಧಾರವಾಡದ ಮುದ್ರಣದಲ್ಲಿ ಮಹಾದೇವಿಯಕ್ಕನ ಇನ್ನೂ ಎಂಟು ವಚನಗಳು ಹೆಚ್ಚಾಗಿ ಉಂಟು. ಇವುಗಳಲ್ಲಿ ಮೂರು ಮಾತ್ರ ಹಳಕಟ್ಟಿಯವರ ಸಂಕಲನದಲ್ಲಿ ಕಾಣಿಸಿಕೊಳ್ಳುತ್ತವೆ.[1] ಮಿಕ್ಕವುಗಳಲ್ಲಿ[2] ಒಂದನ್ನು ಇಲ್ಲಿ ಎತ್ತಿಕೊಡುತ್ತೇವೆ. ಶಿವಸಾಕ್ಷಾತ್ಕಾರಕ್ಕಾಗಿ ಮಹಾದೇವಿಯಕ್ಕನು ಹಂಬಲಿಸಿ ತೊಳಲುತ್ತಿದ್ದುದು ಇಲ್ಲಿ ರಮ್ಯವಾಗಿ ವ್ಯಕ್ತವಾಗುತ್ತದೆ:

---

[1] ಪು. ೧೭—ಸಂ. ೭, ಪು. ೯—ಸಂ. ೮, ಪು. ೧೭—ಸಂ. ೪. ಇವಲ್ಲದೆ, 'ಸಾವಿಲ್ಲದ ಸಹಜಂಗೆ . . .' ಎಂದು 'ಪ್ರಭುಲಿಂಗಲೀಲೆ'ಯ ಈ ಪ್ರತಿಯಲ್ಲಿ ಬಂದಿರುವ ವಚನವೂ, ಹಳಕಟ್ಟಿಯವರ ಸಂಕಲನದಲ್ಲಿರುವ 'ಸಾವಿಲ್ಲದ, ಕೇಡಿಲ್ಲದ, . . .' ಎಂಬ ವಚನವೂ (ಪು. ೩೦—ಸಂ. ೭) ಮೂಲತಃ ಒಂದೇ ಆಗಿರಬೇಕೆಂದು ತೋರುತ್ತದೆ. ಆದರೆ ಪಾಠಭೇದ ಅತಿಶಯವಾಗಿ ಉಂಟು. ಈ ವಚನದ ಇನ್ನೊಂದು ರೂಪ 'ಶೂನ್ಯಸಂಪಾದನೆ'ಯಲ್ಲಿ ದೊರೆಯುತ್ತದೆ (ಹಳಕಟ್ಟಿಯವರ ಮುದ್ರಣ, ಪು. ೩೮೩—ಸಂ. ೩೩).

[2] ಇವುಗಳಲ್ಲಿ ಎರಡು ವಚನಗಳು ಶ್ರೀಮಾನ್ ಹಳಕಟ್ಟಿಯವರೇ ಅಚ್ಚುಮಾಡಿಸಿರುವ 'ಶೂನ್ಯಸಂಪಾದನೆ'ಯಲ್ಲಿ ದೊರೆಯುತ್ತವೆ (ಪು. ೩೭೮—ಸಂ. ೪, ಪು. ೩೭೯—ಸಂ. ೭). ಅವರ 'ಮಹಾದೇವಿಯಕ್ಕನ ವಚನಗಳ'ಲ್ಲಿ ಏಕೆ ಕೈಬಿಟ್ಟುಹೋದುವೋ.

ಗಿರಿಯೊಳು ವನದೊಳು ಗಿಡಗಿಡದತ್ತ ದೇವ ಎನ್ನ ದೇವ, ಬಾರಯ್ಯಾ ತೋಱಯ್ಯಾ ನಿಮ್ಮ ಕರುಣವನೆಂದು ನಾನು ಅಱಸುತ್ತ ಅಳಲುತ್ತ ಕಾಣದೆ ಸುಯಿದು ಬಂದು ಕಂಡೆ ಶರಣರ ಸಂಗದಿಂದ. ಅರಸಿ ಹಿಡಿದೇನೆಂದು ನೀನಡಗುವ ಠಾವ ಹೇಳಾ ಚೆನ್ನಮಲ್ಲಿ ಕಾರ್ಜುನಾ.

೪

'ಶೂನ್ಯಸಂಪಾದನೆ'ಯನ್ನು ಒಂದು ರೀತಿಯಲ್ಲಿ ಪ್ರಭುಲಿಂಗಲೀಲೆಯ ಗದ್ಯಾವತಾರವೆನ್ನಬಹುದು. ಈ ಬಗೆಯಾಗಿ ಶಿವಶರಣರ ವಚನಗಳನ್ನು ಕೂಡಿಸಿ ಜೋಡಿಸಿ "ಕಥಾಸಾಂಗತ್ಯ"ವನ್ನು ರಚಿಸಿದವರಿಗೆ ಪ್ರಭುಲಿಂಗಲೀಲೆಯಿಂದಲೇ ಪ್ರೇರಣೆ ಒದಗಿರಬೇಕೆಂಬುದು ಸ್ಪಷ್ಟ. ಮೊದಲು ಶಿವಗಣಪ್ರಸಾದಿ ಮಹಾದೇವಯ್ಯನು ಸಂಗ್ರಹಿಸಿದ ಈ ಕೃತಿ ಬೇರೆ ಬೇರೆ ಪರಿಷ್ಕರಣಗಳಿಗೆ ಹೇಗೆ ಒಳಗಾಯಿತೆಂಬ ವಿಷಯವನ್ನು ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿಗಳು ಸಪ್ರಮಾಣವಾಗಿ ಪ್ರತಿಪಾದಿಸಿದ್ದಾರೆ.[1] ಅವರು ಸೂಚಿಸಿರುವಂತೆ, ಈ ಭಿನ್ನಭಿನ್ನ ರೂಪಗಳನ್ನು 'ಶೂನ್ಯಸಂಪಾದನೆ' ತಾಳಿದ್ದಕ್ಕೆ ಸಿದ್ಧರಾಮನ ದೀಕ್ಷೆಯ ಪ್ರಸಂಗವೇ ಮುಖ್ಯ ಕಾರಣವಾಗಿರಬಹುದು; ಆದರೆ ಇಷ್ಟಕ್ಕೇ ಇವುಗಳ ವ್ಯತ್ಯಾಸ ಮುಗಿಯುವುದಿಲ್ಲ. ಮಹಾದೇವಿಯಕ್ಕನ ವೃತ್ತಾಂತವನ್ನು ನಿರೂಪಿಸುವಾಗ ಕೂಡ, ವಿಷಯದಲ್ಲೂ ವಚನಸಂಖ್ಯೆಯಲ್ಲೂ ಈ ಪ್ರತಿಗಳಲ್ಲಿ ಒಂದಕ್ಕೊಂದಕ್ಕೆ ಭೇದ ಬೇಕಾದಷ್ಟಿದೆ. ಇವುಗಳಲ್ಲೆಲ್ಲಾ, ಮಹಾದೇವಿಯಕ್ಕನನ್ನು ಕುರಿತ ಭಾಗ ಹೆಚ್ಚು ವಿಸ್ತಾರದೊಡನೆ ಬಂದಿರುವುದು ಹಲಗೆಯ ದೇವರ ಶೂನ್ಯಸಂಪಾದನೆಯಲ್ಲಿ. ಕಥೆಯ ಆದಿಭಾಗದಲ್ಲೇ

---

[1] 'ಪ್ರಬುದ್ಧ ಕರ್ಣಾಟಕ,' ಸಂ. ೧೫—ಸಂ. ೪ : 'ಶೂನ್ಯಸಂಪಾದನೆಗಳು.'

[2] ಶ್ರೀಮಾನ್ ಶ್ರೀನಿವಾಸಮೂರ್ತಿಗಳು 'ಶೂನ್ಯಸಂಪಾದನೆ'ಯ ಐದು ಪಾಠಗಳುಂಟೆಂದು ಲೆಕ್ಕಮಾಡಿದ್ದಾರೆ: (೧) ಶಿವಗಣಪ್ರಸಾದಿ ಮಹಾದೇವಯ್ಯನದು. ಬಹುಶಃ ಇದರದೇ ಒಂದು ಓಲೆಯ ಪ್ರತಿ ನನ್ನ ವಶದಲ್ಲಿದೆ; ಇದನ್ನು ವಿಶ್ವಾಸವಿಟ್ಟು ಕೊಟ್ಟವರು ಮೈಸೂರು ಓರಿಯೆಂಟಲ್ ಲೈಬ್ರೆರಿಯಲ್ಲಿರುವ ಶ್ರೀಮಾನ್ ಎಂ. ಡಿ. ಬಸಪ್ಪನವರು. ಈ ಪ್ರತಿಯಲ್ಲಿ 'ನಂಬಿಯಣ್ಣನ ರಗಳೆ' ಮೊದಲಾದ ಬೇರೆ ಗ್ರಂಥಗಳೂ ಸೇರಿವೆ. ಇಲ್ಲಿ ಬಂದಿರುವ 'ಶೂನ್ಯಸಂಪಾದನೆ'ಗೆ ಪೀಠಿಕಾ ಭಾಗವಿಲ್ಲ; ಪಿಂಡಸ್ಥಲದ ವಚನದಿಂದ ಮೊದಲಾಗುತ್ತದೆ; ಒಟ್ಟು ವಚನಸಂಖ್ಯೆ ೧೦೧೩ ಮಾತ್ರ; 'ಶಿವಗಣಪ್ರಸಾದಿ ಮಹಾದೇವಗಳು' ಇದನ್ನು ರಚಿಸಿದ ಸಂಗತಿ ಕೊನೆಯಲ್ಲಿ ಹೇಳಿದೆ; ಬೇರೆ ಯಾವ ಸಂಗ್ರಹಕಾರರ ಹೆಸರೂ ಇಲ್ಲ. (೨) ಕೆಂಚವೀರಣ್ಣೊಡೆಯನ ಪ್ರತಿ. ಇದು ದೊರೆತಂತೆ ಇದುವರೆಗೂ ತಿಳಿಯಬಂದಿಲ್ಲ. (೩) ಕಲ್ಲೇಶ್ವರದೇವರು ನಂಜೆಯದೇವರು ಮೊದಲಾದವರು

ಈ ವ್ಯತ್ಯಾಸ ಸ್ಪಷ್ಟವಾಗುತ್ತದೆ. ಮಿಕ್ಕ ಪ್ರತಿಗಳಲ್ಲಿ, ಮಹಾದೇವಿಯಕ್ಕನು ಕೌಶಿಕನನ್ನು ಬಿಟ್ಟುಬಂದ ಅಂಶವನ್ನು, "ಭವಿಯ ಸಂಗಮಂ ತೊಱೆದು," "ಅಂಗಸಂಗಮಂ ತೊಱೆದು", "ಲಿಂಗಧಾರಣವಾಗಲೊಲ್ಲೆ ವೆಂದ ಭವಿಯ ಸೋಂಕದೆ ಅಂಗಸಂಗಮಂ ತೊಱೆದು"—ಎಂಬಿಷ್ಟರಲ್ಲೇ, ಅವನ ಹೆಸರು ಕೂಡ ಎತ್ತದೆ ಸೂಚಿಸಿ, ಮದುವೆಯ ವಿಚಾರವನ್ನು ತಿಳಿಸಿಯೋ ನಿವೇಧಿಸಿಯೋ ಮುಗಿಸಿಬಿಟ್ಟಿದ್ದಾರೆ. ಹಲಗೆಯ ದೇವರ ಪ್ರತಿಯಲ್ಲಾದರೆ, ಮಹಾದೇವಿಗೆ ಪಾರ್ವತಿ ಕೊಟ್ಟ ಶಾಪವೂ, ಅದರಂತೆ ಅವಳು ಭೂಮಿಯ ಮೇಲೆ ಹುಟ್ಟಿ, "ದೇವಿಯರಿತ್ತ ಅವಧಿ ಬರೆ ಕೌಶಿಕನೆಂಬ ರಾಯಂಗೆ ವಧುವಾಗಿ, ನೀರು ತಾವರೆಯಂತೆ ಕಣ್ಣುಕಾಡಿಗೆಯಂತೆ ನೆಯಿ ನಾಲಗೆಯಂತೆ ಗಾಳಿ ಧೂಳಿನಂತೆ ಆ ಸಂಸಾರದೊಳಗಿದ್ದೂ ಇಲ್ಲದೆ, ತನುವನೆ ಸಂಸಾರಕ್ಕೆ ಎರವಾಗಿ ಕೊಟ್ಟು ಮನಮೆಚ್ಚಿ ಲಿಂಗದಲ್ಲಿದ್ದು ಗುರುಚರಲಿಂಗದಲ್ಲಿ ಪರಮ ದಾಸೋಹದಲ್ಲಿ ಭಕ್ತಿಯ ಮಾಡುವಲ್ಲಿ, ಆತ ಕೊಟ್ಟ ಭಾಷೆಗೆ ಉತ್ತರಮಂ ಮಾಡಿ ಹೋಗುತ್ತಿರೆ ಸೀರೆಯಂ ಪಿಡಿದೆಳೆಯೆ ಬಿಟ್ಟು ದಿಗಂಬರಿಯಾಗಿ ದಿಗಂಬರನ ನೆನೆವುತ್ತ" ಹೊರಹೊರಟ ವೃತ್ತಾಂತವೂ ಸ್ಪಷ್ಟೋಕ್ತಿಯಲ್ಲಿ ನಿರೂಪಿತವಾಗಿವೆ. ಇದು ಹರಿಹರ ಕವಿಯ 'ಮಹಾದೇವಿಯಕ್ಕನ ರಗಳೆ'ಯ ಕಥಾಸಂಗತಿಯನ್ನು ನೆನಪಿಗೆ ತರುತ್ತದೆ.

ಶೂನ್ಯಸಂಪಾದನೆಯ ಭಿನ್ನಪಾಠಗಳಲ್ಲಿ ಬಂದಿರುವ ಮಹಾದೇವಿಯಕ್ಕನ ವಚನಗಳನ್ನೆಲ್ಲಾ ಸಂಗ್ರಹಿಸುವ ಕೆಲಸಕ್ಕೆ ಈ ಲೇಖನದಲ್ಲಿ ಕೈಹಾಕಿಲ್ಲ; ಅದು ಮುಂದೆ ಮಾಡಬೇಕಾದ ಕಾರ್ಯ. ಇವುಗಳಲ್ಲಿ ಮಹಾದೇವಿಯಕ್ಕನ ಜೀವನಕಥೆಗೆ ಸಂಬಂಧಪಟ್ಟ ಒಂದು ಪ್ರಸಂಗದ ನಿರೂಪಣೆ ಹೇಗೆ ಬಂದಿದೆಯೆಂಬುದನ್ನು ಮಾತ್ರ ಗಮನಿಸಿ, ಅಲ್ಲಿ ಉದಾಹೃತವಾಗಿರುವ ಕೆಲವು ವಚನಗಳನ್ನು ಉದ್ಧರಿಸುತ್ತೇವೆ. ಮಹಾದೇವಿಯಕ್ಕನನ್ನು ಕಿನ್ನರ ಬೊಮ್ಮಯ್ಯನು ಸಂಧಿಸಿದ ಪ್ರಸಂಗವೇ ಇದು.

ಇದರ ಪ್ರಸ್ತಾವ ಶಿವಗಣಪ್ರಸಾದಿ ಮಹಾದೇವಯ್ಯನ ಪಾಠದಲ್ಲಿ—ಮಹಾದೇವಿಯಕ್ಕನು ". . . ದೇಶಾಂತರಮುಖದೊಳ್ ಚರಿಸಿ ಬಪ್ಪಾಗಳು ಕಿನ್ನರ ಬೊಮ್ಮಿತಂದೆಗಳು ಕಂಡು ಹರುಷಿಸಿ ನೋಡಲು, ಅಂತರಂಗದ ಜ್ಞಾನಾಗ್ನಿಯೊಳ್ ಕಾಮನಂ ಸುಟ್ಟು ಭಸ್ಮಮಂ ಮಾಡಿ ಅವರಂ ಬೀಳ್ಕೊಂಡು ಕಲ್ಯಾಣದತ್ತಲಭಿಮುಖ

ವಿಚಾರಿಸಲು ಅವರಿಗೆ ಹಲಗೆಯ ದೇವರು ನಿರೂಪಿಸಿದ್ದು. ಇದರ ಕೈಬರೆಹದ ಪ್ರತಿ ಮೈಸೂರು ಓರಿಯೆಂಟಲ್ ಲೈಬ್ರೆರಿಯಲ್ಲಿದೆ—ನಂ. KA 105. (೪) ಗುಮ್ಮಳಾಪುರದ ಸಿದ್ಧಲಿಂಗಯತಿಯದು. ಇದರ ಒಂದು ಓಲೆಯ ಪ್ರತಿ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರ ವಶದಲ್ಲಿದೆ. (೫) ಗೂಳೂರಿನ ಸಿದ್ಧವೀರಣಾರ್ಯನದು. ಇದನ್ನು ಶ್ರೀಮಾನ್ ಹಳಕಟ್ಟಿಯವರು ಅಚ್ಚುಮಾಡಿಸಿದ್ದಾರೆ. ಈ ಕೊನೆಯದೊಂದು ಹೊರತು ಬೇರೆ ಯಾವ ಪಾಠವೂ ಅಚ್ಚಾಗಿಲ್ಲ.

ವಾಗಿ ನಡೆತಂದು . . .'' ಎಂಬಿಷ್ಟರಲ್ಲಿ ಮುಗಿದಿದೆ; ಯಾವ ವಚನಗಳೂ ಉದಾಹೃತವಾಗಿಲ್ಲ. ಗೂಳೂರು ಸಿದ್ಧಲಿಂಗಯತಿಯ ಪಾಠದಲ್ಲಿ ವಸ್ತು ಇನ್ನು ಸ್ವಲ್ಪ ವಿಸ್ತಾರವಾಗುತ್ತದೆ. ಮಹಾದೇವಿಯಕ್ಕನು ದಿಗಂಬರೆಯಾಗಿ ಬರುತ್ತಿದ್ದಾಳೆಂಬುದನ್ನು ಬಸವಣ್ಣನಿಂದ ತಿಳಿದು, "ಪ್ರಭುದೇವರು ಸಕಲಪ್ರಮಥರಿಗೆ ಕಾಮಸಂಹಾರಿಯೆಂಬುದಂ ಪ್ರತ್ಯಕ್ಷವ ತೋಱಬೇಕೆಂದು ಭಕ್ತಿವಿಸ್ತಾರದಿಂದ ಕಿನ್ನರಯ್ಯಗಳಂ ಒಪ್ಪಿ ಕಳುಹಲು, ಆ ಪರಮ[ಜ್ಞಾ]ನಿಯಪ್ಪ ಕಿನ್ನರಯ್ಯಗಳು ದಳದಳನೆ ಇದಿರಿಸಲಿ ಬಂದು ಕಂಡು ಭಕ್ತಿಭಾವದಿಂದ ಸ್ಪರುಶಿಸಿ ನೋಡಲು, ಆ ಮಹಾದೇವಿಯಕ್ಕಗಳು ತಮ್ಮ ಅಂತರಂಗಜ್ಞಾನಾಗ್ನಿಯೊಳ್ ಕಾಮನಂ ಸುಟ್ಟು ಭಸ್ಮಮಂ ಮಾಡಿ ಕಿನ್ನರಯ್ಯಗಳಿಗೆ ತೋಱಿದ ಪ್ರಸ್ತಾವದ ವಚನ—

> ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ. ಮನದ ಭಂಗವ ಅಱುಹಿನ ಮುಖದಿಂದ ಗೆಲಿದೆ. ಜೀವದ ಭಂಗವ ಶಿವಾನುಭಾವದಿಂದ ಗೆಲಿದೆ. ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ. ಜವ್ವನದ ಹೊಱಮಿಂಚಿನಲ್ಲಿ ನಿಮ್ಮ ಕಂಗೆ ತೋಱುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯಾ. ಚೆನ್ನಮಲ್ಲಿಕಾರ್ಜು[ನ] ಕಾಮನ ಕೊಂದು ಮನಸಿಜನನುಳುಹಿದರೆ ಮನಸಿಜನ ತಲೆಯ ಬರಹವ ತೊಡೆವೆನು.[1]

ಇಂತು ಕಾಮನ ಸುಟ್ಟು ಭಸ್ಮಮಂ ಮಾಡಿ ಕಿನ್ನರಯ್ಯಗಳಿಗೆ ತೋಱಿಸಿ ಅವರಂ ಬೀಳ್ಕೊಂಡು ಕಲ್ಯಾಣದತ್ತಲಭಿಮುಖವಾಗಿ ನಡೆತಂದು . . ."—ಹೀಗೆ ನಿರೂಪಣೆಯಿದೆ. ಗೂಳೂರು ಸಿದ್ಧವೀರಣಾರ್ಯನ ಪಾಠದ ಆನುಪೂರ್ವಿಯೂ ಇದೇ. ಆದರೆ, ಅಲ್ಲಿ ಇನ್ನೆರಡು ವಚನಗಳು ಹೆಚ್ಚಾಗಿ ದೊರೆಯುತ್ತವೆ. (ಇವುಗಳಲ್ಲಿ ಒಂದು ಕಿನ್ನರಯ್ಯನದು; ಇನ್ನೊಂದು ಮಹಾದೇವಿಯಕ್ಕನದು. ಈ ಎರಡನ್ನೂ ಮುಂದೆ ಉದ್ಧರಿಸಲಾಗುತ್ತದೆ.)

ಹೀಗೆ, ಮೇಲೆ ನಿರ್ದೇಶಿಸಿದ ಶೂನ್ಯಸಂಪಾದನೆಯ ಪಾಠಗಳಲ್ಲಿ ಕಿನ್ನರಯ್ಯನು ಮಹಾದೇವಿಯ ದೇಹವನ್ನು ಭಕ್ತಿಭಾವದಿಂದ ಸ್ಪರ್ಶಿಸಿ ಪರೀಕ್ಷಿಸಿ ಅವಳು ಕಾಮಾತೀತಳೆಂಬುದನ್ನು ಅರಿತನೆಂದೂ, ಪ್ರಭುದೇವರು ಆತನನ್ನು ಈ ಉದ್ದೇಶಕ್ಕಾಗಿಯೇ ಕಳುಹಿಸಿದನೆಂದೂ ಪ್ರತೀತಿಯುಂಟಾಗುತ್ತದೆ. ಆದರೆ, ಹಲಗೆಯದೇವರ ಶೂನ್ಯಸಂಪಾದನೆಯ ಪಾಠದಲ್ಲಿ ಈ ಪ್ರಸಂಗ ಇನ್ನಷ್ಟು ವಿಸ್ತಾರವಾಗಿ, ಕೆಲವುಮಟ್ಟಿಗೆ ಬೇರೆ ರೀತಿಯಲ್ಲಿ, ಜರುಗುತ್ತದೆ. ಮಹಾದೇವಿಯಕ್ಕನು "ಶ್ರೀ

---

[1] ಇದು ಹಳಕಟ್ಟಿಯವರ 'ಮಹಾದೇವಿಯಕ್ಕನ ವಚನಗಳ'ಲ್ಲಿ ಬಂದಿದೆ (ಪುಟ. ೪೬—ಸಂ. ೭); ಅಮುಖ್ಯವಾದ ಪಾಠಭೇದವುಂಟು.

ಕಲ್ಯಾಣದತ್ತಲಭಿಮುಖೆಯಾಗಿ ಬರುತ್ತಿರಲಾಗ ಕಲ್ಯಾಣದ ಹೊಱವಳಯಕ್ಕೆ ತನ್ನ ಲೀಲಾವಿನೋದದಿಂ ಕಿನ್ನರ ಬ್ರಹ್ಮಯ್ಯಗಳು ಬಂದಿರಲಾ ಕಾಲದಲ್ಲಿ ಅಕ್ಕಗಳ ದಿಗಂಬರ ವೇಷಮಂ ನಿರ್ವಾಣದ ನಿಲುಕಡೆಯಂ ದಿವ್ಯಸ್ವರೂಪಿನ ಲಾವಣ್ಯಾವಂ ಕಂಡು, ಕಿನ್ನರ ಬೊಮ್ಮಣ್ಣಗಳು—ಈಕೆ ಲಿಂಗಾನುಭಾವಸಂಪನ್ನೆಯಾದರೆ ಗುರು ತಾಯೆಂದು ಶರಣೆಂಬೆನು. ದೇಹಲಜ್ಜಾಭಿಮಾನವುಳ್ಳಡೆ ಸ್ತ್ರೀಯಾಗಿ ಕೈವಿಡಿವೆನು—ಎಂದು ತನ್ನ ತಾ ನಿಶ್ಚೈಸಿ, " ಮಹಾದೇವಿಯಕ್ಕನನ್ನು ಒರೆದೊರೆದು ನೋಡಿದನಂತೆ. ಆ ಪ್ರಸ್ತಾವದಲ್ಲಿ ಅವನ ಈ ಎರಡು ವಚನಗಳನ್ನು ಕೊಟ್ಟಿದ್ದಾರೆ :

ಕಾಯದಲ್ಲಿ ಕಳವಳವಿರಲು ಪ್ರಾಣದಲ್ಲಿ ಮಾಯೆಯಿರಲು ಎತಱ ಗಮನ, ಇದೇತಱ ನಿರ್ವಾಣಾ? ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಸಾರಿಯೆಂಬನಲ್ಲದೆ ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ.[1]

ನಿನ್ನ ಸ್ವರೂಪ ಕಂಡೆನ್ನ ದೃಷ್ಟಿ ಸಟ್ಟುದೆನಗೆ. ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ. ನಿನ್ನ ಪ್ರೌಢಿಯಿಂದ ಕೂಡಿ[ಹೆ]ನೆಂಬುದು ಭಾವದಲ್ಲಿ ಬಚ್ಚಬಱಿಯ ಹೆಂಗುಸಾಗಿ ತೋಱುತ್ತೆನಗೆ. ಮಹಾಲಿಂಗತ್ರಿಪುರಾಂತಕನೆನಗೊಡ್ಡಿದ ಮಾಯೆಯ ನಿನ್ನ ಸಮುಸುಖ ಕೂಟದೊಳಿರ್ದು ಶಿವಭಾವಭಕ್ತಿಯಿಂ ಗೆಲುವೆನು ಬಾರಾ ಹೆಣ್ಣೆ ಎಂದು ಕೈವಿಡಿದೆನು.[2]

ಕಿನ್ನರ ಬೊಮ್ಮಯ್ಯನ ಈ ಕಾಮಾಸಕ್ತಿಯನ್ನು ಮಹಾದೇವಿಯಕ್ಕನು ಜರೆದು ಧಿಕ್ಕರಿಸುವ ವಚನಗಳು ಇವು :

ನೋಡುವ ಕಂಗಳಿಗೆ ರೂಪಿಂಬಾಗಿರಲು ನೀವು ಮನನಾಚದೆ ಬಂದಿರಣ್ಣಾ. ಕೇಳಿದ ಶ್ರೋತ್ರಸೊಗಸಿಗೆ ನೀವು ಮರುಳಾಗಿ ಬಂದಿ

---

[1] ಈ ವಚನ ಗೂಳೂರು ಸಿದ್ಧವೀರಣಾರ್ಯನ ಪಾಠದಲ್ಲೂ ಬಂದಿದೆ.

[2] ನಾವು ಹಿಂದೆಯೇ ಉದಾಹರಿಸಿರುವ 'ವಚನಸಂಗ್ರಹ'ದಲ್ಲಿ (ಮೈ. ಓ. ಲೈ. K 499) ಕಿನ್ನರಬೊಮ್ಮಯ್ಯನ ಮೂರು ವಚನಗಳಿವೆ. ಆ ಮೂರೂ ಹಲಗೆಯ ದೇವರ ಶೂನ್ಯಸಂಪಾದನೆಯಲ್ಲಿ ಕಿನ್ನರಯ್ಯ ಮಹಾದೇವಿಯರ ಪ್ರಸಂಗದ ನಿರೂಪಣೆಯಲ್ಲಿ ಬಂದಿರುವುದನ್ನು ಗಮನಿಸಬೇಕು. ಪಾಠಭೇದಗಳುಂಟು; ಮುಖ್ಯವೆಂದು ತೋರಿದವನ್ನು ಆಯಾ ವಚನದ ಕೆಳಗೆ ಈ ಲೇಖನದಲ್ಲಿ ಸೂಚಿಸಿದ್ದೇವೆ. ಮೇಲಿನ ವಚನದ ಪಾಠ ಈ ರೀತಿ ಇದೆ: "ದೃಷ್ಟಿ ನಟ್ಟು ಮನ ಹಾರೈಸಿತೆನಗೆ. ಭಾವದಲ್ಲಿ ಬಱಿ ಹೆಂಗುಸಾಗಿ ತೋರಿತ್ತೆನಗೆ. ಮಹಾಲಿಂಗ ತ್ರಿಪುರಾಂತಕ ಎನಗೊಡ್ಡಿದ ಮಾಯೆಯ ನಿನ್ನಿಂದ ಮುಱಿವೆ ಗೆಲುವೆ." ಈ ಪಾಠದಲ್ಲಿ ಮೂಲದ ಕೆಲವು ಮಾತು ಬಿಟ್ಟುಹೋಗಿದೆಯೋ, ಶೂನ್ಯಸಂಪಾದನೆಯ ಪಾಠವೇ ಇದರ ವಿಸ್ತಾರವೋ—ಮುಂದೆ ನಿರ್ಣಯವಾಗಬೇಕು.

ರಣ್ಣಾ. ನಾರಿಯೆಂಬ ರೂಪಿಂಗೆ ನೀವು ಒಲಿದು ಬಂದಿರಣ್ಣಾ. ಮೂತ್ರವು ಬಿಂದುವೊಸರುವ ನಾಳವೆಂದು ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ. ಬುದ್ಧಿಗೇಡತನದಿಂದ ಪರಮಾರ್ಥದ ಸುಖವ ಹೋಗಲಾಡಿಕೊಂಡು ಇದಾವ ಕಾರಣವೆಂದರಿಯದೆ ನೀವು ನರಕಹೇತುವೆಂದರಿದು ಮನಹೇಸದೆ ಬಂದಿರಣ್ಣಾ. ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರ. ಛೀ ಹೋಗಾ ಮರುಳೆ.

ಬಟ್ಟಿಹ ಮೊಲೆಯ ಭರದ ಜವ್ವನದ ಚೆಲುವ ಕಂಡು ಬಂದಿರಣ್ಣಾ. ಅಣ್ಣಾ ನಾನು ಹೆಂಗೂಸಲ್ಲ, ಅಣ್ಣಾ ನಾನು ಸೂಳೆಯಲ್ಲ. ಅಣ್ಣಾ ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ? ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಪುರುಷನು ನಮಗಾಗದ ಮೊರೆ ನೋಡಣ್ಣಾ.

ಬಳಿಕ ಈ ವಚನ ಬರುತ್ತದೆ:

ಎನ್ನಂತೆ ಪುಣ್ಯಗೆಯ್ದವರುಂಟೆ, ಎನ್ನಂತೆ ಭಾಗ್ಯಗೆಯ್ದವರುಂಟೆ! ಕಿನ್ನರನಂತಪ್ಪ ಸೋದರವೆನಗೆ, ಏಳೇಳು ಜನ್ಮದಲ್ಲಿ ಶಿವಭಕ್ತರೆ ಬಳಗವೆನಗೆ, ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ.[1]

ಇಷ್ಟಾದರೂ ಕಿನ್ನರಯ್ಯನು ಅರಿತುಕೊಳ್ಳಲಿಲ್ಲ. "ಬರಿಯ ಮಾತಿನ ಬಣ್ಣಣೆಯ ಪಸರಿಸೆ ನಾನು ಬಿಡುವೆನೆ ಬಾರೆಂದು ತುಡುಕಿ ಹಿಡಿಯಲು, ಆ ಮಹಾದೇವಿ ನೀನಿಂತು ಮುಂದುಗೆಡುವರೆ ನನ್ನ ತನುವನೊಪ್ಪಿಸಿಹೆನು ನಿನ್ನ ಮನಕ್ಕೆ ಬಂದಂತೆ ಮಾಡಿಕೊಳೆಂದು ಒಪ್ಪಿಸಲು, ಆತಂ ಸರ್ವಾಂಗಸ್ಥಾನಮಾನಂಗಳಂ" ಸ್ಪರ್ಶಿಸಿ ನೋಡಿ ಆಕೆಗೆ ದೇಹಾಭಿಮಾನವಿಲ್ಲದ್ದನ್ನು ತಿಳಿಯುತ್ತಾನೆ. ಆಕೆ ಕಾಮನನ್ನು ಸುಟ್ಟು ಬೂದಿ ಮಾಡಿದ ಕುರುಹನ್ನು ಕಂಡು ಭೀತನಾಗಿ ಈ ವಚನವನ್ನು ಹೇಳುತ್ತಾನೆ:

ಮಸ್ತಕವ ಮುಟ್ಟಿ ನೋಡಿದರೆ ಮನೋಹರನುಳುಮೆ ಕಾಣಬಂದಿತ್ತು. ಮುಖಕಮಲವ ಮುಟ್ಟಿನೋಡಿದರೆ ಮೂರ್ತಿಯ ಉಳಿವು ಕಾಣಬಂದಿತ್ತು. ಕೊರಳ ಮುಟ್ಟಿನೋಡಿದರೆ ಗರಳಧರನಿರವು ಕಾಣಬಂದಿತ್ತು. ತೋಳುಗಳ ಮುಟ್ಟಿ ನೋಡಿದರೆ ಶಿವನಪ್ಪು ಕಾಣ

---

[1] ಈ ವಚನ ಗೊಳೂರು ಸಿದ್ಧವೀರಣಾರ್ಯನ ಪಾಠದಲ್ಲಿಯೂ ಬಂದಿದೆ. ಹಳಕಟ್ಟಿಯವರ 'ಮಹಾದೇವಿಯಕ್ಕನ ವಚನ'ಗಳಲ್ಲಿಯೂ ಸೇರಿದೆ (ಪು. ೧೦—ಸಂ. ೧೧).

> ಬಂದಿತ್ತು. ಉರಸ್ಥಲವ ಮುಟ್ಟಿ ನೋಡಿದರೆ ಕರಸ್ಥಲದಂಗ ಕಾಣಬಂದಿತ್ತು. ಬಸುಱ ಮುಟ್ಟಿ ನೋಡಿದರೆ ಬ್ರಹ್ಮಾಂಡ ವಡಗಿ[ತ್ತು] ಕಾಣಬಂದಿತ್ತು. ಗುಹ್ಯವ ಮುಟ್ಟಿ ನೋಡಿದರೆ ಕಾಮದಹನ ಕಾಣಬಂದಿತ್ತು. ಮಹಾಲಿಂಗತ್ರಿಪುರಾಂತಕ ದೇವ, ಮಹಾದೇ[ವಿಯ]ಕ್ಕನ ನಿಲವನಱಯದೆ ಅಳುಪಿ ಕೆಟ್ಟೆನು.[1]

ಇದಕ್ಕೆ ಉತ್ತರವಾಗಿ, ನಾವು ಹಿಂದೆಯೇ ಉದಾಹರಿಸಿರುವ 'ಅಂಗದ ಭಂಗವ. . .' ಎಂಬ ಮಹಾದೇವಿಯಕ್ಕನ ವಚನ ಬರುತ್ತದೆ. ಆ ಬಳಿಕ, ಕಿನ್ನರಯ್ಯನು ವಿಷಯ ಪರವಶತೆಯಿಂದ ತಾನು ಕೆಟ್ಟೆನೆಂದು ಮೂರು ವಚನಗಳಲ್ಲಿ ಉಮ್ಮಳಿಸಿದ್ದನ್ನು ಕಂಡು, ಮಹಾದೇವಿಯಕ್ಕನು ಅವನನ್ನು ಹೀಗೆ ಸಂತೈಸುತ್ತಾಳೆ:

> ಎಲೆ ಅಣ್ಣಾ ಎಲೆ ಅಣ್ಣಾ ನೀವು ಮರುಳಲ್ಲಾ! ಅಣ್ಣಾ ಎನ್ನ ನಿನ್ನ ಳವೆ; ಹದಿನಾಲ್ಕುಲೋಕವ ನುಂಗಿದ ಕಾಮನ ಬಾಣದ ಗುಣ ಎನ್ನ ನಿನ್ನ ಳವೆ? ವಾರುವ ಮುಗ್ಗಿದಡೆ ಮಿಡಿಯು ಹಱಯು ಹೊಯ್ಬರೆ? ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು. ನಿನ್ನ ನೀ ಸಂಹರಿಸಿ ಕೈದುವ ಕೊಳ್ಳಿರಣ್ಣಾ. ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣಾ.

ಆಗ ಬೊಮ್ಮಯ್ಯನು ಈ ರೀತಿಯಾಗಿ ಬಿನ್ನೈಸುತ್ತಾನೆ:

> ಶರಣಾರ್ತಿ ಶರಣಾರ್ತಿ ಎಲೆ ತಾಯೆ ನಮ್ಮವ್ವಾ, ಶರಣಾರ್ತಿ ಶರಣಾರ್ತಿ ಕರುಣಾಸಾಗರನಿಧಿಯೆ, ದಯಾಮೂರ್ತಿ ತಾಯೆ ಶರಣಾರ್ತಿ ಶರಣಾರ್ತಿ. ಮಹಾಲಿಂಗತ್ರಿಪುರಾಂತಕನೊಡ್ಡಿದ ತೊಡಕ ನೀವು ಬಿಡಿಸಿದಿರಾಗಿ ನಿಮ್ಮ ದಯದಿಂದ ನಾನು ಹುಲಿ ನೆಕ್ಕಿ ಬದುಕಿದೆನು, ಶರಣಾರ್ತಿ ಶರಣಾರ್ತಿ ತಾಯೆ.[2]

---

[1] ಇದು ವಚನ 'ಸಂಗ್ರಹ'ದಲ್ಲಿ (ಮೈ. ಓ. ಲೈ. K 499) ಕಿನ್ನರಬೊಮ್ಮಯ್ಯನ ಹೆಸರಿನಲ್ಲಿ ದೊರೆಯುವ ಎರಡನೆಯ ವಚನ. ಮುಖ್ಯವಾದ ಪಾಠಭೇದಗಳಿಲ್ಲ.

[2] ಇದು ವಚನಸಂಗ್ರಹದಲ್ಲಿ (ಮೈ ಓ. ಲೈ. K499) ದೊರೆಯುವ ಮೂರನೆಯ ವಚನ. ಅಲ್ಲಿ ಇದರ ಪಾಠ ಹೀಗಿದೆ: "ಶರಣುಶರಣಾರ್ತಿ ಎಮ್ಮವ್ವ, ಶರಣುಶರಣಾರ್ತಿ ದಯಾಮೂರ್ತಳೆ, ಶರಣುಶರಣಾರ್ತಿ ಎನ್ನಕ್ಕ ಮಹಾದೇವಿ. ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕ ನೀವು ಬಿಡಿಸಿದಿರಾಗಿ ನಿಮ್ಮಿಂದಲಾನು ಬದುಕಿದೆನು, ಎಲೆ ತಾಯೆ ಶರಣುಶರಣಾರ್ತಿ." ಇಲ್ಲಿ ಮಹಾದೇವಿಯ ಹೆಸರು ಸೇರಿದೆ; 'ಹುಲಿನೆಕ್ಕಿ ಬದುಕಿದೆನು' ಎಂಬ ಸ್ವಾರಸ್ಯವಾದ ಚಿತ್ರ ಬಿಟ್ಟು ಹೋಗಿದೆ.

ವಿಷಯಗಳು ನಿರ್ವಿಷಯವಾದವೆಂದು. ಕರಣಂಗಳು ತರಹರಿಸಿ ನಿಂದವೆಂದು. ಎನ್ನ ಅಳಿಪೆಂಬ ಅ[ರ]ವಾವು ಮಡಿಯಿ[ತ್ತೆ]ಂದು, ಎನ್ನ ಹೃದಯಕಲ್ಮಷ ತೊಳೆಯಿ[ತ್ತೆ]ಂದು, ಮಹಾಲಿಂಗ ತ್ರಿಪುರಾಂತಕಯ್ಯಾ, ಮಹಾದೇವಿಯಕ್ಕಗಳ ಧರ್ಮದಿಂದ ಹಿಂದಣ ಹುಟ್ಟು ಮುಱಿಯಿತೆಂದು.

ಇಷ್ಟೆಲ್ಲಾ ನಡೆದ ತರುವಾಯ ಮಹಾದೇವಿಯಕ್ಕನೂ ಕಿನ್ನರಬೊಮ್ಮಯ್ಯನೂ ಒಬ್ಬರನ್ನೊಬ್ಬರು ನಮಸ್ಕಾರಪೂರ್ವಕವಾಗಿ ಬೀಳ್ಕೊಳ್ಳುತ್ತಾರೆ; ಈಕೆ ಕಲ್ಯಾಣ ನಗರಕ್ಕೆ ಬರುತ್ತಾಳೆ.

ಈ ಪ್ರಸಂಗವು ಮೇಲಿನ ನಿರೂಪಣೆಯಂತೆಯೇ ನಡೆಯಿತೇ ಹೇಗೆ ಎಂಬುದನ್ನು ನಿರ್ಧರಿಸಿ ಹೇಳುವುದು ಅಸಾಧ್ಯ.[1] ಶೂನ್ಯಸಂಪಾದನೆಯ ಈ ಪಾಠದ ಕರ್ತೃವಿಗೆ ಇಷ್ಟು ವಿವರಣೆಗೆಲ್ಲ ಆಧಾರ ಎಲ್ಲಿ ದೊರೆಯಿತೋ. ಆತನ "ಕಥಾಸಾಂಗತ್ಯ" ಹಾಗಿರಲಿ; ಇಲ್ಲಿ ಉದಾಹರಿಸಿರುವ ವಚನಗಳನ್ನೇ ನೋಡಿದರೂ ಇಂಥದೊಂದು ಸಂದರ್ಭ ನಡೆದಿರುವುದು ಅಸಂಭವವಲ್ಲವೆನ್ನಿಸುತ್ತದೆ. ಈ ವಚನಗಳಲ್ಲಿ ಯಾವುವೂ ಕಲ್ಪನೆಯ ಮಾತುಗಳಂತಿಲ್ಲ. ಮಹಾದೇವಿಯಕ್ಕನ ಒಂದು ವಚನದಲ್ಲಿ ಕಿನ್ನರಯ್ಯನ ಹೆಸರು ಬಂದಿದೆ. ಕಿನ್ನರಯ್ಯನ ವಚನಗಳಲ್ಲಂತೂ ಮಹಾದೇವಿಯ ಹೆಸರೂ ಅವಳನ್ನು ಅವನು ಮುಟ್ಟಿನೋಡಿದ ವಿಷಯವೂ ಅದಕ್ಕಾಗಿ ಅವನು ಪಟ್ಟ ಅನುತಾಪವೂ ಸ್ಪಷ್ಟವಾಗಿ ಕಾಣಿಸುತ್ತವೆ. ಅಧೋಗತಿಗೆ ಜಾರುತ್ತಿದ್ದ ತಾನು ಆಕೆಯ ಕರುಣೆಯಿಂದ ಉದ್ಧಾರವಾದ ಸಂಗತಿಯನ್ನು ಕಿನ್ನರಯ್ಯನು "ನಾನು ಹುಲಿ ಸಿಕ್ಕಿ ಬದುಕಿದೆನು" ಎಂದು ಹೇಳಿರುವುದು ಅರ್ಥಗರ್ಭಿತವಾಗಿದೆ, ಆಕೃತಕವೂ ಆಗಿದೆ.

ಕೌಶಿಕನನ್ನು ಕೊಡಹಿಬಂದ ಮಾತ್ರಕ್ಕೇ ಮಹಾದೇವಿಯಕ್ಕನ ಕೋಟಲೆಗಳು ಹರಿಯಲಿಲ್ಲ. ಅವಳ ಅನುಪಮವಾದ ಚೆಲುವು ಅವಳ ಜೊತೆಯಲ್ಲೇ ಶತ್ರುವಾಗಿ ಉದ್ದಕ್ಕೂ ಬಂದಿತು. ದಾರಿಯಲ್ಲಿ ಎಷ್ಟೋ ಮಂದಿ ಅವಳ ರೂಪಿಗೆ ಮರುಳಾಗಿ, ಅವಳ ದಿಗಂಬರವೇಷವನ್ನು ಕಂಡು ಉದ್ರಿಕ್ತರಾಗಿ ಕೆಣಕಿ ಪೀಡಿಸಿರಬೇಕು. (ಇಂಥ ಪ್ರಸಂಗಗಳು ನಡೆದಿರಬೇಕೆಂಬುದು ಆಕೆಯ ವಚನಗಳಿಂದಲೇ ವ್ಯಕ್ತವಾಗುತ್ತದೆ.) ಕಿನ್ನರ ಬೊಮ್ಮಯ್ಯನಂಥ ಶಿವಶರಣನನ್ನೂ ಅವಳ ರೂಪು ಸೆಳೆಯದೆ ಬಿಡಲಿಲ್ಲ. ಒಂದು ವೇಳೆ, ಆಕೆಯ ನಿಷ್ಠೆಯನ್ನು ಪರೀಕ್ಷಿಸಲೆಂದೇ ಆತನು ಬಂದಿದ್ದರೂ,

---

[1] ಚೆನ್ನಬಸವಾಂಕನ 'ಮಹಾದೇವಿಯಕ್ಕನ ಪುರಾಣ'ದಲ್ಲಿ (ಸಂಧಿ ೨೯) ಈ ಪ್ರಸಂಗದ ವಿಷಯ ಹೆಚ್ಚುಕಡಮೆ ಇದೇರೀತಿಯಾಗಿ ಬಂದಿದೆ; ಮಹಾದೇವಿಯಕ್ಕನ ಸತ್ವವನ್ನರಿತ ಬಳಿಕ ಕಿನ್ನರಬೊಮ್ಮಯ್ಯನು ಆಕೆಯನ್ನು ಕಲ್ಯಾಣಕ್ಕೆ ಕರೆದುತಂದನೆಂಬ ಅಂಶ ಹೆಚ್ಚಾಗಿದೆ.

ಅವಳನ್ನು ನೋಡಿದ ಬಳಿಕ ಅವನು ಅವಶನಾಗಿ ದುಡುಕಿದ್ದು ನಿಜವೆಂದು ತೋರು ತ್ತದೆ. ಮಹಾದೇವಿಯಕ್ಕನು ದೃಢವಿರಕ್ತಿಯ ಬಲದಿಂದ ತನ್ನ ಸತ್ವವನ್ನು ಕಾಪಾಡಿ ಕೊಂಡಳು, ಕಿನ್ನರಯ್ಯನನ್ನೂ ಬದುಕಿಸಿದಳು.

೫

ಹರಿಹರ ವಿರಚಿತವಾದ 'ಮಹಾದೇವಿಯಕ್ಕನ ರಗಳೆ' ಏಕಮುಖವಾದ ಗುರಿ ಯನ್ನುಳ್ಳ ಒಂದು ಸುಂದರ ಕಾವ್ಯ. ಮಹಾದೇವಿಗೆ "ಭವಿಯ ಸಂಗಂ ತಪ್ಪಿ ಭವನ ಸಂಗವನಪ್ಪಿ"ದುದೇ ಇದರ ವಸ್ತು. ಗುಪ್ತಗಣನಾಥನೊಬ್ಬನನ್ನು 'ಭವಿ'ಯೆಂದು ಕರೆದ ತಪ್ಪಿಗಾಗಿ ಈ ರುದ್ರಕನ್ನಿಕೆ ಭೂಮಿಯಲ್ಲಿ ಹೇಗೆ ಅವತರಿಸಿದಳು; ಚೆನ್ನಮಲ್ಲಿ ಕಾರ್ಜುನದೇವನೊಬ್ಬನಲ್ಲೇ ಮನನಟ್ಟು, ಭವಿಭಕ್ತರೆನ್ನದೆ ಮಿಕ್ಕ ಯಾವ ಪುರುಷ ನನ್ನೂ ವರಿಸಲು ಒಲ್ಲದಿದ್ದ ಈ ಚೆಲುವೆ ಕೌಶಿಕರಾಜನ ಕಣ್ಮನಗಳನ್ನು ಹೇಗೆ ಸೂರೆ ಗೊಂಡಳು; ತಾನು ಅವನನ್ನು ಮದುವೆಯಾಗದೆ ಹೋದರೆ ತನ್ನ ತಂದೆತಾಯಿಗಳನ್ನು ಅವನು ಕೊಲ್ಲಿಸಿಬಿಡುವನೆಂಬ ಬೆದರಿಕೆಯ ಮಾತನ್ನು ಕೇಳಿ, "ಏನಾಗಿಯಾದೊಡಂ ಭಕ್ತರಂ ರಕ್ಷಿಪುದು| ನಾನಾವಿಧಂ ಬಂದು ಶರಣರಂ ಸಲಹುವುದು||" ಎಂಬ ಪುರಾತನ ವಾಕ್ಯವನ್ನು ನೆನೆದು ಈ ಶಿವಭಕ್ತರ ರಕ್ಷಣೆಗೋಸ್ಕರ ತನ್ನ ಶರೀರವನ್ನು ಕೌಶಿಕನಿಗೆ ಹೇಗೆ ಒಪ್ಪಿಸಿಕೊಟ್ಟಳು; ಮಲ್ಲಿಕಾರ್ಜುನನ ಪೂಜೆಯಲ್ಲೂ ಮಾಹೇಶ್ವರ ಗೋಷ್ಠಿಯಲ್ಲೂ ದಿನವನ್ನೆಲ್ಲಾ ಕಳೆಯುತ್ತಾ, ಕೌಶಿಕನ ಸಂಗದ ವಿಷಮಾನುಭವವನ್ನು ಕನಸಿನ ಕೂಟದಂತೆಯೂ ಅದರಲ್ಲಿ ತನ್ನ ಶರೀರಕ್ಕಾದ ದುಃಖವನ್ನು ತಾನು ಸಾಕ್ಷಿಯಂತೆಯೂ ನೋಡುತ್ತಾ ಕಾಲವನ್ನು ಹೇಗೆ ನೂಕಿದಳು; ಕೌಶಿಕನು ಮೂರು ತಪ್ಪುಗಳನ್ನು ಮಾಡಿದ ಬಳಿಕ, ಹಿಂದೆ ಹೂಡಿದ್ದ ಒಪ್ಪಂದದ ಮೇರೆಗೆ ಬಿಡುಗಡೆ ಹೊಂದಿ ಕೇಶಾಂಬರೆಯಾಗಿ ಹೊರಟು "ಪುರದ ಹರಭಕ್ತಿ ಪರ್ವತಕೆಯ್ದಿ ನಡೆವಂತೆ" ಹೇಗೆ ನಿಷ್ಠೆಯಿಂದ ನಡೆದಳು; ಕೌಶಿಕನು ಮತ್ತೆ ತನ್ನನ್ನು ಪಡೆಯಲು ಒಡ್ಡಿದ ಜಾಲಗಳನ್ನೆಲ್ಲಾ ಪರಿಹರಿಸಿಕೊಂಡು ತನ್ನ ಹಂಬಲಿಕೆಯ ದೈವದಲ್ಲಿ ಹೇಗೆ ಐಕ್ಯ ವಾದಳು—ಎಂಬೀ ಕಥೆಯನ್ನು ಹರಿಹರನು ರಮ್ಯೋಜ್ವಲ ಕಾವ್ಯವಾಗಿ ರಚಿಸಿದ್ದಾನೆ.

ಇದನ್ನು ಕಟ್ಟಲು ಅವನಿಗೆ ಐತಿಹ್ಯಗಳ ಜೊತೆಗೆ ಮಹಾದೇವಿಯಕ್ಕನ ವಚನಗಳೂ ಆಧಾರವಾಗಿದ್ದಂತೆ ತೋರುತ್ತದೆ. ಕಥಾಪುರುಷರ ವಚನಗಳನ್ನು ಅವನು ಸಮಯೋಚಿತವಾಗಿ ಉಪಯೋಗಿಸಿಕೊಂಡಿರುವುದಕ್ಕೆ ಬಸವರಾಜದೇವರ ರಗಳೆ, ನಂಬಿಯಣ್ಣನ ರಗಳೆ ಮೊದಲಾದವುಗಳಲ್ಲಿ ನಿದರ್ಶನವಿದೆ.[1] ಆದರೆ

---

[1] ಉದಾಹರಣೆಗೆ, 'ಬಸವರಾಜದೇವರ ರಗಳೆ', ಸ್ಥಲ ೧೨; 'ನಂಬಿಯಣ್ಣನ ರಗಳೆ', ಸ್ಥಲ ೭.

'ಮಹಾದೇವಿಯಕ್ಕನ ರಗಳೆ'ಯಲ್ಲಿ ವಚನಗಳ ಪ್ರಸಕ್ತಿ ಬರುವಷ್ಟು ಮಟ್ಟಿಗೆ ಅವನ ಬೇರೆ ಯಾವ ಕೃತಿಯಲ್ಲೂ ಬರುವಂತೆ ಕಾಣುವುದಿಲ್ಲ. ಮಹಾದೇವಿ ಸಮಯ ಸ್ಫೂರ್ತಿಯಿಂದ "ಗೀತ"ಗಳನ್ನು ಹಾಡುತ್ತಿದ್ದಳೆಂಬುದನ್ನು ಹರಿಹರನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಕೆಳಗಿನ ನಿದರ್ಶನಗಳನ್ನು ನೋಡಿ:

"ಆಗಳಾಗಳಿನ ಶಿವಾನುಭವಕ್ಕೆ ನವಗೀತವಮಂ ಪಾಡಿ" (vi. ३४)
"ಗೀತವಮಂ ಪಾಡುತುಂ ಪೊಱಮಟ್ಟು ನಡೆತಂದು" (vii. ३९)
"ಕರತಳಕ್ಕೆ ಬಂದ ಮಲ್ಲಿನಾಥನಂ ಸಮರ್ಥೆ ನೋಡಿ
ಹರುಷದಿಂದ ಉರದೊಳೊತ್ತಿ ಕಣ್ಣೊಳೊತ್ತಿ ಮತ್ತೆ ನೋಡಿ
ಮುದ್ದನಿತ್ತು ಗಲ್ಲಸುಖಕೆ ಬಲ್ಲುದೊಂದು ಸೊಲ್ಲ ಹಾಡಿ" (v. ೭೯–೮೧).

ಇವುಗಳ ಜೊತೆಗೆ ಕಿನ್ನರ ಬೊಮ್ಮಯ್ಯನ ಹೆಸರನ್ನೆತ್ತುವ ಈ ಕೆಳಗಿನ ಚರಣಗಳನ್ನೂ ಸೇರಿಸಬಹುದು:

"ಬಂದ ಕಿನ್ನರಬೊಮ್ಮಿ ತಂದೆಯಂ ಕಾಣುತುಂ
ಅಂದಂದಿನುಚಿತಕ್ಕೆ ಗೀತವಮಂ ಪಾಡುತುಂ" (vii. ೧೯೯–೨೦೦).

ಬಸವಣ್ಣ, ಅಲ್ಲಮಪ್ರಭು ಮೊದಲಾದ ಶರಣರನ್ನು ಮಹಾದೇವಿಯಕ್ಕನು ಕಲ್ಯಾಣದಲ್ಲಿ ಸಂಧಿಸಿದ್ದಳೆಂಬ ನಿಶ್ಚಿತ ವಿಷಯವನ್ನು ಕೂಡ, ಅದು ತನ್ನ ಕಥಾವಾಹಿನಿಯ ಏಕಮುಖತೆಗೆ ಅಡ್ಡಿಯಾಗುವುದೆಂಬ ಶಂಕೆಯಿಂದಲೋ ಏನೋ, ತನ್ನ ಕಾವ್ಯದಲ್ಲಿ ಹೇಳದೆ ಬಿಟ್ಟ ಹರಿಹರನು ಕಿನ್ನರ ಬೊಮ್ಮಯ್ಯನ ಪ್ರಸಂಗವನ್ನು ಇಲ್ಲಿ ಸ್ಮರಿಸಿರುವುದು ಗಮನಾರ್ಹವಾದ ಸಂಗತಿ; 'ಶೂನ್ಯಸಂಪಾದನೆ'ಯ ಕಥೆಗೆ ಇದು ಬೆಂಬಲವನ್ನು ಕೊಡುತ್ತದೆ. ಕಿನ್ನರಯ್ಯನ ಹೆಸರನ್ನುಳ್ಳ ಮಹಾದೇವಿಯಕ್ಕನ ಒಂದು ವಚನವನ್ನಾದರೂ ಹರಿಹರನು ನೋಡಿಯೇ ಇರಬೇಕು. ("ಎನ್ನಂತೆ ಪುಣ್ಯಗೆಯ್ದವರುಂಟೆ . . ." ಎಂಬ ವಚನವೇ ಅದಾಗಿರಬಹುದೆ?) ಆದ್ದರಿಂದಲೇ "ಅಂದಂದಿನುಚಿತಕ್ಕೆ ಗೀತವಮಂ ಪಾಡುತುಂ" ಎಂಬ ಮಾತಿನಲ್ಲಿ ಅವನು ಮಹಾದೇವಿಯಕ್ಕನ ಪದ್ಧತಿಯನ್ನು ಕೀರ್ತಿಸಿದ್ದಾನೆ.

ಇಷ್ಟೇ ಅಲ್ಲ. ಈ "ಗೀತ"ಗಳ ಹುರುಳು ಏನೆಂಬುದನ್ನು ಹರಿಹರನು ಕೆಲವು ಕಡೆಗಳಲ್ಲಿ ನಿರೂಪಿಸಿ ನಮಗೆ ಉಪಕಾರಮಾಡಿದ್ದಾನೆ. ಅವುಗಳನ್ನು ಇಲ್ಲಿ ಪರಿಶೀಲಿಸಬಹುದು. ಸ್ಪಷ್ಟವಾದ ಆಧಾರ ಈಗ ನಮಗೆ ದೊರೆಯತಕ್ಕದ್ದು ಈ ಕೆಳಗಿನ ಕಾವ್ಯಭಾಗಕ್ಕೆ. ಮಹಾದೇವಿ ಭಾಷೆ ಸಲ್ಲಿಸಿ ಹೊರಟುಬಂದ ಮೇಲೂ ಕೌಶಿಕನು ಅವಳನ್ನು ಬಿಟ್ಟಿರಲಾರದೆ, ಮತ್ತೆ ಒಲಿಸಿಕೊಳ್ಳುವ ಆಸೆಯಿಂದ ಶಿವಭಕ್ತನ ವೇಷ ತಾಳಿ ಬಂದ ಪ್ರಸಂಗದಲ್ಲಿ, ಆಕೆ ಈ ರೀತಿಯಾಗಿ ಹೇಳಿಕೊಂಡಳಂತೆ:

ಬಿಟ್ಟಿಪ್ಪೆನೆಂದೊಡಂ ಬಿಡದು ನಿನ್ನಯ ಮಾಯೆ
ಒಟ್ಟಯಿಸಿ ಬಂದಡೊಡವಂದಪ್ಪುದೀ ಮಾಯೆ
ಜೋಗಿಗಂ ಜೋಗಿಣಿಯದಾಯ್ತು ನಿನ್ನಯ ಮಾಯೆ
ರಾಗದಿಂ ಸವಣಂಗೆ ಕಂತಿಯಾಯ್ತೀ ಮಾಯೆ
ಭಗವಂಗೆ ಮಾಸಕಬ್ಬೆಯ ಜೋಹವಾಯ್ತಯ್ಯ
ಬಗೆವರಾರವರವರ್ಗೆ ಅವರಂದವಾ[ಯ್ತ]ಯ್ಯ
ಗಿರಿಯನೇಱಿದೊಡಿರದೆ ಗಿರಿಯನೇಱಿತು ಮಾಯೆ
ಪರಿದಡವಿಯಂ ಪೊಕ್ಕಡೊಡನೆ ಪೊಕ್ಕುದು ಮಾಯೆ
ಚೆನ್ನ ಕಯ್ಯಂ ಬಿಡದು ಬಾಪು ಸಂಸಾರವೇ
ಎನ್ನನಂಜಿಸಿತು ಮಝು ಬಾಪು ಸಂಸಾರವೇ
ಕರುಣಾಕರಾ ನಿನ್ನ ಮಾಯೆಗಂಜುವೆನಯ್ಯ
ಪರಮೇಶ್ವರಾ ಮಲ್ಲಿನಾಥ ಕರುಣಿಪುದಯ್ಯ
ಇನ್ನೇವೆನಿನ್ನೇವೆನಯ್ಯೋ ಮಹಾದೇವ
ಪನ್ನಗಾಭರಣ ಕರುಣಿಪುದೆಲೆ ಮಹಾದೇವ
ಎಂದು ವೈರಾಗ್ಯದಿಂದಂ ಗೀತಮಂ ಪಾಡಿ
ಮುಂದಿರ್ದ ಕಾಮುಕನಸತಿ ರೋಷದಿಂ ನೋಡಿ . . .[1]

(vii. ೯೧ ಮುಂ.)

ಶ್ರೀಮಾನ್ ಹಳಕಟ್ಟಿಯವರ ವಚನಸಂಕಲನದಲ್ಲಿ ದೊರೆಯುವ ಈ ಎರಡು ವಚನಗಳನ್ನು ಇದರೊಂದಿಗೆ ಹೋಲಿಸಬಹುದು :

ಬಿಟ್ಟೆನೆಂದರೆ ಬಿಡದೀ ಮಾಯೆ. ಬಿಡದಿದ್ದರೆ ಬೆಂಬತ್ತಿತ್ತು ಮಾಯೆ. ಯೋಗಿಗೆ ಯೋಗಿಣಿಯಾಯಿತ್ತು ಮಾಯೆ. ಸವಣಗೆ ಸವಣಿಯಾಯಿತ್ತು ಮಾಯೆ. ಯತಿಗೆ ಪರಾಕಿಯಾಯಿತ್ತು ಮಾಯೆ. ನಿನ್ನ ಮಾಯೆಗೆ ನಾನಂಜುವಳಲ್ಲ ಚನ್ನಮಲ್ಲಿಕಾರ್ಜುನದೇವ ನಿಮ್ಮಾಣೆ.

(ಪು. ೫—ಸಂ. ೧೫.)

---

[1] ಶ್ರೀಮಾನ್ ಚೆನ್ನಮಲ್ಲಿಕಾರ್ಜುನರು ಸಂಪಾದಿಸಿ ಮುದ್ರಿಸಿರುವ ಪ್ರತಿಯಲ್ಲಿ ಈ ಭಾಗದಲ್ಲಿ ಕೆಲವು ಚರಣಗಳು ಪುನರುಕ್ತವಾಗಿರುವಂತೆ ತೋರುತ್ತದೆ. ಇಲ್ಲಿ ನಾವು ಮೈಸೂರು ಓರಿಯೆಂಟಲ್ ಲೈಬ್ರರಿಯ 'ಶರಣರಗಳೆ' ಎಂಬ ಓಲೆಗರಿಯ ಪ್ರತಿಯ (K 358) ಪಾಠವನ್ನು ಮುಖ್ಯವಾಗಿ ಅನುಸರಿಸಿದ್ದೇವೆ. ಹರಿಹರನ ರಗಳೆಯಿಂದ ಮಿಕ್ಕ ಭಾಗಗಳನ್ನು ಉದ್ಧರಿಸುವಾಗಲೂ ಉಚಿತವಾದ ಕಡೆಗಳಲ್ಲಿ ಮೈಸೂರು ಪ್ರತಿಯ ಪಾಠವನ್ನೇ ಅಂಗೀಕರಿಸಿದ್ದೇವೆ.

ಕಲ್ಲ ಹೊಕ್ಕರೆ ಕಲ್ಲ ಒರಿಸಿದೆ. ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ.
ಭಾಪು ಸಂಸಾರವೆ! ಬೆನ್ನಿಂದ ಬೆನ್ನ ಹತ್ತಿ ಬಂದೆ. ಚನ್ನಮಲ್ಲಿ
ಕಾರ್ಜುನಯ್ಯ ಇನ್ನೇವೆ ನಿನ್ನೇವೆ?

(ಪು. ೩—ಸಂ. ೭)

ಹರಿಹರನು ಹೇಳುವ ಗೀತಗಳು ಇವೇ ಆಗಿರಬೇಕಲ್ಲವೆ? ಅವುಗಳ ಭಾವವನ್ನೇ ಅಲ್ಲದೆ ಮಾತುಗಳನ್ನೂ ಹಾಗೆಹಾಗೆಯೇ ಅವನು ಅನುವಾದಮಾಡಿದ್ದಾನೆ.[1] "ಕರುಣಾಕರಾ ನಿನ್ನ ಮಾಯೆಗಂಜುವೆನಯ್ಯ" ಎಂಬುದಕ್ಕೆ ಪ್ರತಿಯಾಗಿ ವಚನದಲ್ಲಿ "ನಿನ್ನ ಮಾಯೆಗೆ ನಾನಂಜುವಳಲ್ಲ" ಇಂದು ಇದೆ; ಹರಿಹರನ ಪಾಠದಂತೆಯೇ ಮೂಲವಚನವಿದ್ದಿತೋ ಏನೋ.

ಹರಿಹರನ ಕಾವ್ಯಕ್ಕೂ ಮಹಾದೇವಿಯಕ್ಕನ ವಚನಗಳಿಗೂ ಇಷ್ಟು ನಿಕಟವಾದ ಸಂಬಂಧವುಂಟೆಂದು ಅರಿತಮೇಲೆ, "ಗೀತ"ಗಳ ಉಲ್ಲೇಖ ಹೀಗೆಯೇ ನಿರ್ದಿಷ್ಟವಾಗಿ ಅವನ ಕಾವ್ಯದಲ್ಲಿ ಮತ್ತೆಲ್ಲಾದರೂ ಕಾಣಬರುತ್ತದೆಯೇ ಎಂಬುದನ್ನು ನೋಡುವ ಕುತೂಹಲ ಸಹಜವಾಗಿ ಹುಟ್ಟುತ್ತದೆ. ಅಂಥ ಸ್ಥಳಗಳನ್ನು ಕೆಳಗೆ ಸಂಗ್ರಹಿಸಿ ಕೊಟ್ಟಿದೆ.

ಒಮ್ಮೆ ಮಹಾದೇವಿಯಕ್ಕನು ಶಿವಶರಣರ ಗೋಷ್ಠಿಯಲ್ಲಿರುವಾಗ ಸಂಜೆ ಕವಿಯುತ್ತದೆ; ಕೌಶಿಕರಾಜನ ಊಳಿಗದವರು ಅವಳನ್ನು ಕರೆಯಲು ಬರುತ್ತಾರೆ. ಆಗ ಅವಳು "ಮನವಿಲ್ಲದ ಮನದೊಳೆಂತಕ್ಕೆ ಮಾಹೇಶ್ವರರಂ ಮಹಮನೆಗೆ ಬಿಜಯಂಗೆಯ್ಯವೇಳ್ಪು ಬಿನ್ನಪಂಗೆಯ್ದು ಕಟ್ರಿಸೆ ಕಂದಿ ಸುಟ್ರಿಸೆ ಸುಯ್ದು ಸುಮ್ಮಾನವುಡುಗಿ ನಡೆತಂದು—

ದೇವಾ ಉಳಿವ ಕರೆವ ನೇಹವುಂಟೇ? ಸಂಸಾರಕ್ಕಂ ನಿಮ್ಮಲ್ಲಿ
ಗೆಡೆಯಾಡುವ ಭಕ್ತಿಯುಂಟೇ? ಏನಯ್ಯಾ ಶಿವನೆ ಏನೆಂದು ಪೇಳ್ದನೀ
ಲಜ್ಜೆಯ ಮಾತಂ—

ಎಂದು ಚೆನ್ನಮಲ್ಲಿಕಾರ್ಜುನಂಗೆ ಮೊಱೆಯಿಟ್ಟು ಮುಳಿದು ಗೀತಮಂ ಪಾಡಿ" ನಿರ್ವೇದದಿಂದ ಕೌಶಿಕನಲ್ಲಿಗೆ ಬರುತ್ತಾಳೆ.

ಇನ್ನೊಮ್ಮೆ ಮಾಹೇಶ್ವರಾರಾಧನೆಗೆ ಹತ್ತುಸಾವಿರ ಹೊನ್ನು ಬೇಕೆಂದು ಮಹಾದೇವಿ ಭಂಡಾರದ ಅಧಿಕಾರಿಗಳನ್ನು ಕೇಳಿದಾಗ ಅವರು 'ಕೌಶಿಕರಾಜನು ವೈಹಾಳಿ

---

[1] ಶ್ರೀಮಾನ್ ಕೆ. ಜಿ. ಕುಂದಣಗಾರರು ತಮ್ಮ 'ಮಹಾದೇವಿಯಕ್ಕ' ಎಂಬ ಗ್ರಂಥದ ಮುನ್ನುಡಿಯಲ್ಲಿ ಈ ಸಾಮ್ಯವನ್ನು ಗಮನಿಸಿದ್ದಾರೆ.

ಯಲ್ಲಿದ್ದಾನೆ; ಅವನಿಗೆ ಅರಿಕೆ ಮಾಡಿದ್ದಲ್ಲದೆ ಕೊಡಲು ಶಕ್ಯವಿಲ್ಲ' ಎಂದು ಹೇಳಲು, ಈ ಅಭಿಮಾನಶಾಲಿನಿ ಮನಗುಂದಿ ತನ್ನ ಆಭರಣಗಳನ್ನೇ ಮಾಹೇಶ್ವರರಿಗೆ ಅರ್ಪಿಸಿ ಕಳುಹಿಸಿಕೊಟ್ಟು, ಬಳಿಕ ಅನುತಾಪದಿಂದ—

"ದೇವಾ ಶಿವಲಾಂಛನವನೇಱಿಸಿಕೊಂಡು ಮನೆಗೆ ಬಂದವರಂ ಕಡೆಗಣಿಸಿ ಎಂತು ನೋಡುತಿರ್ಪೆನವರ್ಗೆ ಸತ್ಕಾರಮಂ ಮಾಡಲಿಲ್ಲ ದೊರ್ಡೆನ್ನನೀ ಧರೆಯಮೇಲಿರಿಸುವ ಕಾರಣವೇನಭವಾ? ನಿನ್ನವ ಳೆಂದೆನ್ನ ಮುದ್ದುತನವಂ ಸಲಿಸುವೊಡಿರಿಸುವುದಿಲ್ಲಾ, ಕೈಲಾಸಕ್ಕೆ ಕೊಂಡೊಯ್ವುದು—

ಎಂದು ಚೆನ್ನಮಲ್ಲಿಕಾರ್ಜುನಂಗೆ ಗೀತವಮಂ ಪಾಡುತಿಪ್ಪ ಸಮಯದೊಳು" ಕೌಶಿಕನು ಹಿಂದಿರುಗಿ ಬಂದು ನಡೆದ ವೃತ್ತಾಂತವನ್ನು ಕೇಳಿ ಭಂಡಾರಿಗಳನ್ನು ಜರೆದು ಬೀಗದಕೈಯನ್ನೇ ಮಹಾದೇವಿಗೆ ಒಪ್ಪಿಸಿಕೊಡುತ್ತಾನೆ.

ಮುಂದೆ, ಕೌಶಿಕನ ಮೂರು ತಪ್ಪುಗಳೂ ಸಂದಮೇಲೆ, ಮಹಾದೇವಿಯಕ್ಕನು ಬದುಕಿದೆನೆಂದು ಹರ್ಷಿಸಿ, ತಂದೆತಾಯಿಗಳನ್ನು ಬೀಳ್ಕೊಂಡು ಗುರುವಿನ ಅನುಜ್ಞೆ ಯನ್ನು ಪಡೆದು,

"ಅಶನದಾಸೆಯಂ ತೃಷೆಯ ತೃಷ್ಣೆಯಂ ಬೆಸನದ ಬೇಗೆಯಂ ವಿಷಯದ ವಿಹ್ವಳತೆಯಂ ತಾಪತ್ರಯದ ಕಲ್ಪನೆಗಳಂ ಗೆಲಿದೆನಿನ್ನೇ ನೆನ್ನಿಚ್ಛೆಯಾದುದು; ಚೆನ್ನಮಲ್ಲಿಕಾರ್ಜುನ ನಿನಗಂಜೆನಂಜೆಂ—

ಎಂದು ಗೀತವಮಂ ಪಾಡಿ" ವೈರಾಗ್ಯನಿಧಿಯಾಗಿ ಶ್ರೀಶೈಲವನ್ನು ಕುರಿತು ಹೊರಡು ತ್ತಾಳೆ.

ಈ ಮೂರು ಕಡೆಗಳಲ್ಲೂ ಮಹಾದೇವಿ ಹಾಡಿದ ಗೀತದ ವಿಷಯವೇನೆಂಬು ದನ್ನು ಹರಿಹರನು ಸ್ಪಷ್ಟವಾಗಿ ಕೊಟ್ಟಿದ್ದಾನೆ. ಇವಕ್ಕೆ ಆಧಾರವಾಗಿ ನಿಜವಾದ ವಚನಗಳೇ ಇದ್ದಿರಬೇಕೆಂಬುದು ಅವನ ಪದ್ಧತಿಯನ್ನರಿತವರಿಗೆ ಮನವರಿಕೆಯಾಗ ದಿರದು. ಈ ಮೂರು ಬಂದಿರುವುದೂ ಹರಿಹರನ ಕಾವ್ಯದ ಆರನೆಯ ಸ್ಥಲದಲ್ಲಿ; ಮಹಾದೇವಿಯಕ್ಕನು ಕೌಶಿಕನ ಸಂಗಡ ಒಲ್ಲದ ಸಂಸಾರವನ್ನು ನಡಸುತ್ತಿದ್ದ ಸಂದರ್ಭದಲ್ಲಿ—ಎಂಬುದನ್ನು ಗಮನಿಸಬೇಕು.

ಇನ್ನೊಂದು ಉಲ್ಲೇಖವುಂಟು. ಅದು ಈ ರಗಳೆಯ ಐದನೆಯ ಸ್ಥಲದಲ್ಲಿ, ಮಹಾದೇವಿಯ ನಿರ್ಭರ ಶಿವಪೂಜೆಯನ್ನು ವರ್ಣಿಸುವೆಡೆಯಲ್ಲಿ ಬರುತ್ತದೆ:

ಗೀತದೊಳಗೆ ಸೂತ್ನ ಭಕ್ತಿ ಜಾತವಾಗಲೋತು ಪಾಡಿ
ಗೀತದೊಳಗೆ [ಶ]ರ್ವನಱಿವು ತೆಱಹುಗುಡದೆ ತೀವಿ ಪಾಡಿ
ಭಕ್ತಿರಸದ ನದಿಯ ನಡುವೆ ಗೀತವುಣ್ಮಿ ಪೊಣ್ಮಿ ಪಾಡಿ
ಭಕ್ತಿಯೊಳ್ ವಿರಕ್ತಿ ನೆಲಸಿ ಮುಕ್ತಿ ಮುಂದುದೋಱೆ ಪಾಡಿ
ಒಲಿದು ಪಾಡಿ ಉಲಿದು ಪಾಡಿ ಮಲೆದು ಪಾಡಿ ಬಲಿದು ಪಾಡಿ
ಸಲುಗೆಯಿಂದೆ ಗೆಲಿದು ಪಾಡಿ ಪುಳಕವಡರೆ ನೋಡಿ ಪಾಡಿ—
ದೇವ ಎನಗೆ ಭವಿಯ ಸಂಗವೆಂದು ಮಾಣ್ಬುದೆನ್ನ ತಂದೆ
ದೇವ ಬೆರಕೆಯಿಲ್ಲದಚ್ಚ ಭಕುತಿಸುಖವದೆಂದು ತಂದೆ
ಪೂಜೆಯೊಳಗೆ ಮಚ್ಚಿ ಬೆಚ್ಚ ಮನವನೆಂತು ತೆಗೆವೆನಯ್ಯ
ಪೂಜೆಯೊಳಗೆ ಸಟ್ಟ ದಿಟ್ಟಿಗಳನದೆಂತು ಕೀಳ್ವೆನಯ್ಯ
—ಎನುತವರ್ಚಿಸುತ್ತುಮಲ್ಲಿ ಅಗಲಲಾಱದಾಲಿಸುತ್ತೆ . . .

(V. ೧೪೯ ಮುಂ.)

ಇಲ್ಲಿ, ಗೀತವನ್ನು ಹಾಡಿದಳೆಂಬ ಉಕ್ತಿ ಮಿಕ್ಕ ಕಡೆಗಳಲ್ಲಿರುವಂತೆ ಅನುವಾದದ ಕೊನೆಯಲ್ಲಿ ಬಾರದೆ ಅದಕ್ಕೆ ಅವತರಣಿಕೆಯಾಗಿ ಮೊದಲೇ ಬಂದಿದೆ; ಇಷ್ಟೇ ವಿಶೇಷ. ಇದಕ್ಕೂ ಮಹಾದೇವಿಯಕ್ಕನ ವಚನವೊಂದು ಆಧಾರವಾಗಿರುವುದು ಅಸಂಭವವಲ್ಲ. "ದೇವ ಎನಗೆ ಭವಿಯ ಸಂಗವೆಂದು ಮಾಣ್ಬುದೆನ್ನ ತಂದೆ"—ಎಂಬ ಮಾತನ್ನು ಇಲ್ಲಿ ಮುಖ್ಯವಾಗಿ ಲಕ್ಷಿಸಬೇಕು. ಇದು ಮೂಲವಚನದಲ್ಲಿಯೇ ಕಾಣಿಸಿಕೊಂಡಿದ್ದ ಪಕ್ಷದಲ್ಲಿ ಮಹಾದೇವಿಯಕ್ಕನ ಮದುವೆಯ ಸಮಸ್ಯೆ ಬಗೆಹರಿದಂತೆಯೇ ಸರಿ.

ಹರಿಹರನು ವೀರಶೈವ ಪುರಾಣಕಾರರಲ್ಲಿ ಮೊದಲನೆಯವನು. ಅವನು ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಮಹಾದೇವಿಯಕ್ಕ, ಬಸವಣ್ಣ ಮೊದಲಾದವರ ಸಮಕಾಲಿಕನಾಗಿ ಜೀವಿಸಿದ್ದನೇ ಎಂಬುದು ಚರ್ಚಾಸ್ಪದವಾದ ವಿಷಯ; ಹದಿಮೂರನೆಯ ಶತಮಾನದ ಪೂರ್ವಾರ್ಧಕ್ಕಿಂತ ಈಚಿನವನಲ್ಲವೆಂಬುದೇನೋ ನಿಸ್ಸಂದೇಹ. ಆ ವೇಳೆಗೆ ಇನ್ನೂ ಈ ಶಿವಶರಣರ ಅನೇಕ ವಚನಗಳು ಜನರ ನಾಲಗೆಗಳಲ್ಲಿ ನಲಿದು ಕಿವಿಗಳಲ್ಲಿ ಝೇಂಕರಿಸುತ್ತಿದ್ದಿರಬೇಕು; ಅವು ಉದಿಸಿದ ಸಂದರ್ಭವೇನೆಂಬುದು ವೃದ್ಧರಿಗೆ ಗೊತ್ತಿದ್ದಿರಬೇಕು. ಹರಿಹರನು ತನ್ನ ಕಾವ್ಯರಚನೆಯಲ್ಲಿ ಇವನ್ನೆಲ್ಲಾ ಉಪಯೋಗಿಸಿಕೊಂಡಿದ್ದಾನೆ. ಅವನು ಕವಿ; ಹಿಂದಿನವರ ವಚನಗಳನ್ನು ಎಲ್ಲ ಕಡೆಗಳಲ್ಲೂ ಅಕ್ಷರಶಃ ಅನುವಾದ ಮಾಡಿರಲಾರನು. ಆದರೆ, ಇಂಥ ಗೀತವನ್ನು ಮಹಾದೇವಿ ಹಾಡಿದಳೆಂದು ಅವನು ಬಾಯಿಬಿಟ್ಟು ಹೇಳಿರುವ ಮೇಲಿನ ಕಡೆಗಳಲ್ಲಾದರೂ ಆಯಾ ಮೂಲವಚನದ

ತಿರುಳನ್ನೂ ಹಲವು ಮಾತುಗಳನ್ನೂ ಉಳಿಸಿಕೊಟ್ಟಿದ್ದಾನೆಂದು ನಾವು ನಂಬಬಹುದು. ಕನ್ನಡನಾಡಿನ ಮೂಲೆಮೂಲೆಗಳಲ್ಲಿ ಅಡಗಿ ಇನ್ನೂ ಬೆಳಕಿಗೆ ಬಾರದಿರುವ ವಚನ ಸಂಗ್ರಹಗಳಲ್ಲಿ ಹರಿಹರನ ಅನುವಾದಗಳಿಗೆ ಸಂವಾದಿಯಾದ ವಚನಗಳು ದೊರೆಯುತ್ತವೆಯೇ ಎಂಬುದರ ಶೋಧನೆ ಚೆನ್ನಾಗಿ ನಡೆಯಬೇಕಾಗಿದೆ.

೬

ಮಹಾದೇವಿಯಕ್ಕ, ಬಸವಣ್ಣ ಮೊದಲಾದವರ ವಚನಗಳನ್ನು ಹರಿಹರನು "ಗೀತ"ಗಳೆಂದು ಕರೆದಿದ್ದಾನೆ; ಅವುಗಳನ್ನು ಹಾಡುತ್ತಿದ್ದರೆಂದು ಹೇಳಿದ್ದಾನೆ.[1] ಇವರ ಅನೇಕ ವಚನಗಳಲ್ಲಿ ಒಂದು ಬಗೆಯ ಲಯಬದ್ಧತೆಯೇನೋ ಸ್ಫುಟವಾಗಿ ಗೋಚರಿಸುತ್ತದೆ. ಇವುಗಳ ಧಾಟಿ ಪದ್ಯದಷ್ಟು ಬಿಗಿಯಲ್ಲ, ಸಾಮಾನ್ಯಗದ್ಯದಷ್ಟು ಸಡಿಲವೂ ಅಲ್ಲ. ಈ 'ವಚನ'ಗಳಲ್ಲಿ ಎಷ್ಟು ನಿಜವಾಗಿಯೂ ಹಾಡಿನ ಪೂರ್ಣ ಲಕ್ಷಣವನ್ನು ಒಳಕೊಂಡಿದ್ದುವು; ಎಷ್ಟನ್ನು ರಾಗದ ಛಾಯೆ ಮಾತ್ರ ತೋರಿಸಿ ವಾಚಿಸುತ್ತಿದ್ದರು ಎಂಬುದು ಇನ್ನೂ ನಿಷ್ಕರ್ಷೆಯಾಗಿಲ್ಲ. ಆದರೂ ಈಗ ವಚನವೆಂದು ಕರೆಯಿಸಿಕೊಳ್ಳುತ್ತಿರುವವುಗಳಲ್ಲಿ ಕೆಲವಾದರೂ ಮೊದಲಿಗೆ ಸಲಕ್ಷಣವಾದ ಹಾಡುಗಳಾಗಿದ್ದಂತೆಯೇ ತೋರುತ್ತದೆ. ಇದಕ್ಕೆ ಒಂದು ನಿದರ್ಶನವನ್ನು ಕೊಡಬಹುದು:

> ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ,
> ಪವಳದ ಚಪ್ಪರವನಿಕ್ಕಿ ಮುತ್ತುಮಾಣಿಕದ ಮೇಲುಕಟ್ಟ ಕಟ್ಟಿ,
> ಮದುವೆಯ ಮಾಡಿದರು, ನಮ್ಮವರೆನ್ನ ಮದುವೆಯ ಮಾಡಿದರು.
> ಕಂಕಣ ಕೈದಾರ ಸ್ಥಿರಸೇಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ
> ಗಂಡಗೆನ್ನ ಮದುವೆಯ ಮಾಡಿದರು.

ಇದು ಶ್ರೀಮರ್ಾ ಹಳಕಟ್ಟಿಯವರ ಸಂಕಲನದಲ್ಲಿದೆ (ಪು. ೮—ಸಂ. ೬); ಕೆಲವು ಪಾಠಭೇದಗಳೊಡನೆ 'ಶೂನ್ಯಸಂಪಾದನೆ'ಯ ಎರಡು ಪ್ರತಿಗಳಲ್ಲೂ,[2] ಹಿಂದೆ ನಾವು ಉದಾಹರಿಸಿರುವ 'ವಚನಸಾರ'ದಲ್ಲೂ ದೊರೆಯುತ್ತದೆ. ಇಲ್ಲೆಲ್ಲಾ ಇದೊಂದು ವಚನ ಮಾತ್ರವಾಗಿದೆ. ಹಲಗೆಯದೇವರ ಶೂನ್ಯಸಂಪಾದನೆಯ ಪ್ರತಿಯಲ್ಲಾದರೆ ಈ ರೀತಿಯಾಗಿ ಅದನ್ನು ಕೊಟ್ಟಿದ್ದಾರೆ:

---

[1] ಸಿದ್ಧರಾಮನ ವಚನಗಳನ್ನು ಶಿಷ್ಯರು ರಾಗಬದ್ಧವಾಗಿ ಹಾಡುತ್ತಿದ್ದರೆಂದು ರಾಘವಾಂಕನು ಹೇಳಿರುವುದನ್ನೂ ಇಲ್ಲಿ ಗಮನಿಸಬಹುದು: "ಹಾಡುತಿರ್ದರು ಗುಡ್ಡರೊಲಿದು ಗುರುವಿನ ವಚನಮಂ ಶುದ್ಧಭೈರವಿಯಲಿ" (ಸಿದ್ಧರಾಮಚಾರಿತ್ರ, viii. ೬೩).

[2] ಸಿದ್ಧಲಿಂಗಯತಿ, ಸಿದ್ಧವೀರಣಾರ್ಯ—ಇವರ ಪ್ರತಿಗಳು.

ರಾಗ ಕಾಂಬೋಧಿ ||

ಪಲ್ಲವ || ಎಮ್ಮವರೆನ್ನ ಮದುವೆಯ ಮಾಡಿದರು
ಲಿಂಗಕ್ಕೆನ್ನ ಮದುವೆಯ ಮಾಡಿದರು ||

ಪಚ್ಚೆಯ ನೆಲಗಟ್ಟು ಕನಕದ ತೋರಣ
ವಜ್ರದ ಕಂಭ ಮಾಣಿಕದ ಚಪ್ಪರವಿಕ್ಕಿ
ಮದುವೆ || ೧ ||

ಬಸವ ಬಂದಿಗಟ್ಟಿ ಸಂಗಯ್ಯ ಮದವಣಿಗ
ಆನು ಮು[ತ್ತೈ]ದೆ ಶರಣರು ದಿಬ್ಬಣಿಗರು || ೨ ||

ಕಂಕಣ ಕೈದಾರೆಗಟ್ಟಿ[1] ಸ್ಥಿರ ಸೇಸೆಯನಿಟ್ಟು
ಚೆನ್ನಮಲ್ಲಿಕಾರ್ಜುನನೆಂಬ ಗಂಡನಿಗೆನ್ನ
ಮದುವೆಯ ಮಾಡಿದರು || ೩ ||[2]

ಪದ ಸಹ ವಚನ ||

ಇಲ್ಲಿ ರಾಗದ ಹೆಸರನ್ನು ಹೇಳಿ ಪಲ್ಲವಿಯನ್ನು ಪ್ರತ್ಯೇಕವಾಗಿ ಕೊಟ್ಟು ಕೊನೆಯಲ್ಲಿ 'ಪದ'ವೆಂದು ಕರೆದಿರುವುದು ಗಮನಿಸತಕ್ಕ ವಿಷಯ. ಮಹಾದೇವಿಯಕ್ಕನು ಇದನ್ನು ಮೊದಲಿಗೆ ಹಾಡಾಗಿಯೇ ಕಟ್ಟಿದಳೆಂದು ಕಾಣುತ್ತದೆ. ಅಲ್ಲಿಂದೀಚೆಗೆ ಅದು ಸಾಮಾನ್ಯ ವಚನಗಳೊಡನೆ ಬೆರೆದುಹೋಗಿರಬೇಕು. ಮಹಾದೇವಿಯಕ್ಕನ ಇಂಥ ಪದಗಳು ಇನ್ನೂ ಕೆಲವು ಉಂಟು. ಅವುಗಳ ಶೋಧನೆ ಮುಂದುವರಿಯಬೇಕು.

ಇನ್ನೊಂದು ಮಾತು. ಮಹಾದೇವಿಯಕ್ಕನ ವಚನಗಳ ವಿಚಾರಮಾಡುವಾಗ ಅದನ್ನು ಹೇಳಿದರೂ ಅದು ಒಟ್ಟು ವಚನವಾಙ್ಮಯಕ್ಕೇ ಅನ್ವಯಿಸತಕ್ಕದ್ದು. ಅನೇಕ ವಚನಗಳು ಒಂದು ಖಚಿತವಾದ ಪಾಠದಲ್ಲಿ ನಮಗೆ ದೊರೆಯುವುದಿಲ್ಲ; ಬೇರೆ ಬೇರೆ ಮಾತೃಕೆಗಳಲ್ಲಿ ಅವು ಬೇರೆ ಬೇರೆ ರೂಪಗಳನ್ನು ತಾಳುತ್ತವೆ. ಇದಕ್ಕೆ ನಿದರ್ಶನಗಳನ್ನು ಈ ಲೇಖನದಲ್ಲೇ ತಕ್ಕಮಟ್ಟಿಗೆ ಕಂಡಿದ್ದೇವೆ. ಇದರ ಮೇಲೆ, ಹಿಂದಿನವರ ಅಂಕಿತಗಳನ್ನೇ ಉಪಯೋಗಿಸಿಕೊಂಡು ಹೊಸ ವಚನಗಳನ್ನು ಕಟ್ಟುವುದು ಸುಲಭ; ಮಿಕ್ಕ ಮತಗಳ ಪೂಜ್ಯಗ್ರಂಥಗಳಲ್ಲೂ ಸಾಹಿತ್ಯದಲ್ಲೂ

[1] ಇಲ್ಲಿ 'ಕೈದಾರೆ' ಎಂದಿಷ್ಟೇ ಇರಬೇಕಲ್ಲವೆ? 'ಗಟ್ಟಿ' ಎಂಬುದೂ ಸೇರಿದರೆ ಪದ್ಯ ಕೆಡುತ್ತದೆ.

[2] ಇಲ್ಲಿ ಒಂದನೆಯ ಮತ್ತು ಮೂರನೆಯ ನುಡಿಗಳ ಕೊನೆಯಲ್ಲಿ ಲಿಪಿಕಾರನು ಪಲ್ಲವಿಯ ಕೆಲಕೆಲವು ಮಾತುಗಳನ್ನು ಸೇರಿಸಿರುವಂತೆ ತೋರುತ್ತದೆ. ಅಚ್ಚು ಮಾಡುವಾಗ ಅವುಗಳನ್ನು ಪ್ರತ್ಯೇಕಿಸಿ ಕೊಡಲಾಗಿದೆ.

ಈ ಬಗೆಯ ಪ್ರಕ್ಷೇಪಗಳು ಆಗಿರುವುದಕ್ಕೆ ಬೇಕಾದಷ್ಟು ಉದಾಹರಣೆಗಳಿರುವಾಗ ವೀರಶೈವ ಮತದಲ್ಲಿ ಅದು ನಡೆದಿಲ್ಲವೆಂದು ಶಪಥಮಾಡುವುದು ಹೇಗೆ? ಇದಲ್ಲದೆ, ಒಂದೇ ವಚನವನ್ನು ಅಂಕಿತದಲ್ಲಿ ವ್ಯತ್ಯಾಸಮಾಡಿ ಬೇರೆ ಬೇರೆ ವಚನಕಾರರಿಗೆ ಆರೋಪಿ ಸಿರುವುದೂ ಉಂಟು.[1] ವಚನವಾಙ್ಮಯವನ್ನು ಶಾಸ್ತ್ರೀಯ ರೀತಿಯಲ್ಲಿ ಪರೀಕ್ಷಿಸಿ, ವಿಮರ್ಶಿಸಿ, ಅದರಲ್ಲಿರುವ ಪ್ರಕ್ಷೇಪಗಳನ್ನೂ ತಿದ್ದುಪಾಡುಗಳನ್ನೂ ಅಸಂಗತಗಳನ್ನೂ ನಿರ್ಧರಿಸಬೇಕು; ವಚನಗಳ ಶುದ್ಧಪಾಠವನ್ನು ಆಧಾರಸಹಿತವಾಗಿ ಪ್ರಕಟಿಸಬೇಕು. ಇದಕ್ಕಾಗಿ ಎಲ್ಲ ಆಕರಗಳನ್ನೂ ಉಪಯೋಗಿಸಿಕೊಳ್ಳಬೇಕು.[2] ಈ ಕಾರ್ಯವು ಸಮರ್ಪಕವಾಗಿ ನಡೆದು, ಮಹಾದೇವಿಯಕ್ಕನ ವಚನಗಳ ಭಾಷೆ ಶೈಲಿಗಳು, ಅವಳ ವ್ಯಕ್ತಿತ್ವಜೀವನ ವೃತ್ತಾಂತಗಳು—ಇವನ್ನೆಲ್ಲಾ ಕುರಿತು ಅಭಿಪ್ರಾಯಗಳನ್ನು ಹೂಡು ವುದಕ್ಕೆ ಭದ್ರವಾದ ನೆಲಗಟ್ಟು ಬೇಗ ಸಿದ್ಧವಾಗಲಿ.

ತೀ. ನಂ. ಶ್ರೀಕಂಠಯ್ಯ.

---

[1] ಉದಾಹರಣೆಗೆ, ಶ್ರೀಮಾನ್ ಹಳಕಟ್ಟಿಯವರ ಸಂಕಲನದಲ್ಲಿ, 'ಊರ ಸೀರೆಗೆ . . . (ಪು. ೩—ಸಂ. ೬) ಎಂಬುದು ಮಹಾದೇವಿಯಕ್ಕನ ಅಂಕಿತದೊಡನೆ ಬಂದಿದೆ; ಇದೇ ವಚನವೇ ಬಸವಣ್ಣನ ಅಂಕಿತದಲ್ಲೂ ಸಿಕ್ಕುತ್ತದೆ ('ಬಸವೇಶ್ವರನ ವಚನಗಳು,' ಪು. ೪೬—ಸಂ. ೬೦). ಇದು ಮೂಲತಃ ಬಸವಣ್ಣನ ವಚನವೇ ಆಗಿರಬೇಕು; ತಾನೇ ಹೆಣ್ಣಾಗಿರುವ ಮಹಾದೇವಿಯಕ್ಕನು 'ಹೊನ್ನೆನ್ನದು, ಹೆಣ್ಣೆನ್ನದು . . .' ಎಂದು ನೆನೆದಿರಲಾರಳು.

ಹೀಗೆಯೇ, 'ಸಜ್ಜನನಾಗಿ ಮಜ್ಜನಕ್ಕೆರೆವೆ, ಶಾಂತನಾಗಿ . . .' ಎಂಬ ವಚನದ ಪಾಠ ವನ್ನು ನೋಡಿದರೆ (ಪು. ೧೫—ಸಂ. ೭) ಅದು ಯಾರೋ ಗಂಡಸಿನ ಮಾತೆಂದು ತೋರುತ್ತದೆ.

'ಅಯ್ಯಾ ಆದಿಅನಾದಿಯಿಂದತ್ತತ್ತ . . .' ಎಂಬುದು (ಪು. ೬—ಸಂ. ೧೯) ನಿಜವಾಗಿ ಘಟ್ಟಿವಾಳಯ್ಯನ ವಚನ; 'ಚಿಕ್ಕಯ್ಯಪ್ರಿಯ ಸಿದ್ಧಲಿಂಗ' ಎಂಬ ಅದರ ಅಂಕಿತದಿಂದ ಇದು ಸ್ಪಷ್ಟ ವಾಗುತ್ತದೆ. ಇದರಲ್ಲಿ ವಚನಕಾರನು 'ಚನ್ನಮಲ್ಲಿಕಾರ್ಜುನನರ್ಧಾಂಗಿನಿ'ಯನ್ನು ಸಂಬೋಧಿಸಿ ದ್ದಾನೆ; ಅಷ್ಟೇ.

[2] 'ಮಹಾದೇವಿಯಕ್ಕನ ಸಾಂಗತ್ಯ'ವೆಂಬ ಗ್ರಂಥದಲ್ಲಿ ಆಕೆಯ ಏಳು ವಚನಗಳು 'ಗಿರಿ ಮಲ್ಲಿಕಾರ್ಜುನ' ಎಂಬ ಅಂಕಿತದೊಡನೆ ದೊರೆಯುವುವೆಂಬುದನ್ನು ಶ್ರೀಮಾನ್ ರಂ. ಶ್ರೀ. ಮುಗಳಿಯವರು ಪರಿಶೋಧಿಸಿರುವ ಅಂಶವನ್ನು ಇಲ್ಲಿ ಸ್ಮರಿಸಬಹುದು. ('ಶರಣಸಾಹಿತ್ಯ', ಸಂ. ೧, ಪು. ೩೫೨-೫೩).

ಕರ್ಮ

೧. ಕರ್ಮ—ಶ್ರೌತವೂ ಸ್ಮಾರ್ತವೂ

ಕರ್ಮಶಬ್ದವು ಅನೇಕಾರ್ಥಕವು. ಕರ್ತುರ್ವ್ಯಾಪಾರೈಃ ಯತ್ ಸಾಧ್ಯತೇ—ಕರ್ತೃವು ತನ್ನ ಕ್ರಿಯೆಗಳಿಂದ ಯಾವುದನ್ನು ಸಾಧಿಸುವನೋ—ಅದು ಕರ್ಮ ಎಂದು ವೈಯಾಕರಣರೂ, ಉತ್ಕ್ಷೇಪಣ ಅಪಕ್ಷೇಪಣ ಆಕುಂಚನ ಪ್ರಸಾರಣ ಗಮನಗಳು ಕರ್ಮ ಎಂದು ನೈಯಾಯಿಕರೂ ಹೇಳುವರು. ನಾವು ಲೌಕಿಕಕರ್ಮ ವೈದಿಕಕರ್ಮ ಎಂದು ಮಾತಾಡುವಾಗ ಮೇಲೆ ಹೇಳಿದ ಉತ್ಕ್ಷೇಪಣಾದಿಗಳು ಲೌಕಿಕಕರ್ಮಗಳು. ಯಜ್ಞಗಳು ವೈದಿಕಕರ್ಮಗಳು. ಇಷ್ಟಾಪೂರ್ತಗಳು ಕರ್ಮಗಳೆಂದು ಹೇಳುವಾಗ ಯಜ್ಞಗಳು ಇಷ್ಟಕರ್ಮಗಳು; ಕೂಪತಡಾಗ-ಖನನ ಮುಂತಾದ ಜನಹಿತಕರ್ಮಗಳು ಪೂರ್ತಕರ್ಮಗಳು. ಅಗ್ನಿಹೋತ್ರ ದರ್ಶಪೌರ್ಣಮಾಸಾದಿಗಳು ಕರ್ಮವೆಂದು ಮೀಮಾಂಸಕರಾದ ಜೈಮಿನ್ಯಾಚಾರ್ಯರು ಹೇಳುವರು.

'ಯಜ್ಞ' ಕರ್ಮವನ್ನು ಪ್ರತಿಪಾದಿಸುವುದಕ್ಕಾಗಿಯೇ ವೇದಗಳು ಹೊರಟಿವೆಯೆಂದೂ 'ಯಜ್ಞ' ಕರ್ಮವನ್ನು ಪ್ರತಿಪಾದಿಸದ ವೇದವಚನಗಳು ನಿರರ್ಥಕಗಳು ಇಲ್ಲವೆ ಅರ್ಥವಾದ (=ಸ್ತುತಿನಿಂದಾರ್ಥಕ)ಗಳು ಎಂದೂ ಜೈಮಿನ್ಯಾಚಾರ್ಯರು ಹೇಳುವರು.* ಅವರ ಈ ಮತವೇ ಜ್ಞಾನಕರ್ಮಗಳ ವಿರೋಧದ ಮೂಲವು.

೨. ವೈದಿಕ ಹವಿರ್ಯಜ್ಞ ಸೋಮಯಜ್ಞಗಳು

ವೈದಿಕ ಕರ್ಮಗಳಾದ ಯಜ್ಞಗಳು ದ್ವಿವಿಧಗಳು: ಹವಿರ್ಯಜ್ಞ, ಸೋಮಯಜ್ಞ ಎಂದು. ಹವಿರ್ಯಜ್ಞದಲ್ಲಿ ಕ್ಷೀರ ಘೃತ ಮಾಂಸಾದಿಗಳು ಆಹುತಿಗಳು; ಸೋಮಯಜ್ಞದಲ್ಲಿ ಸೋಮರಸವು ಆಹುತಿ. 'ಅರಣಿ'ಗಳ ಮಂಥನದಿಂದ ಅಗ್ನಿಯನ್ನು ಹುಟ್ಟಿಸಿ ವಿಧಿಯಿಂದ 'ಗಾರ್ಹಪತ್ಯ' ಅಗ್ನಿಯನ್ನು ಸ್ಥಾಪಿಸಿ, ಗಾರ್ಹಪತ್ಯಾಗ್ನಿಯಿಂದ ಆಹವನೀಯ ದಕ್ಷಿಣಾಗ್ನಿ ಎಂಬ ಮತ್ತೆ ಎರಡು ಅಗ್ನಿಗಳನ್ನು ಸ್ಥಾಪಿಸಿ ಆ ಅಗ್ನಿಗಳಲ್ಲಿ ಪ್ರಾತಃಸಂಧ್ಯಾಕಾಲಗಳಲ್ಲಿ ಕ್ಷೀರಾದಿ ಆಹುತಿಗಳನ್ನು ಅರ್ಪಿಸುವುದು ಅಗ್ನಿಹೋತ್ರ ಕರ್ಮವು. ವೈದಿಕ ಅಗ್ನಿಹೋತ್ರಗಳು ಈಗ ನಾಮಶೇಷವಾಗುತ್ತ ಬಂದಿವೆ; ಅಗ್ನಿಹೋತ್ರಿ ಸೋಮಯಾಜಿ ವಾಜಪೇಯಿ ಮುಂತಾದ

---

* ಆಮ್ನಾಯಸ್ಯ ಕ್ರಿಯಾರ್ಥತ್ವಾತ್ ಆನರ್ಥಕ್ಯಂ ಅತದರ್ಥಾನಾಮ್. ಜೈ. ಸೂ.

ಮನೆ ಹೆಸರುಗಳು ಮಾತ್ರ ಈಗಲೂ ಉಂಟು. ಸೋಮಯಜ್ಞಗಳಲ್ಲಿ ಸೋಮಲತೆ ಯನ್ನು ವಿಧಿಪೂರ್ವಕವಾಗಿ ಕಲ್ಲುಗಳ ಮೇಲೆ ಅರೆದು ಹಿಂಡಿ ರಸವನ್ನು ತೆಗೆದು ಅದನ್ನು ಅಗ್ನಿಯಲ್ಲಿ ಆಹುತಿಹಾಕುವರು. ಆ ರಸದಲ್ಲಿ ಮೊಸರು ಮೊದಲಾದುವನ್ನು ಸೇರಿಸಿ ವೈದಿಕ ಋಷಿಗಳು ಅದನ್ನು ಕುಡಿಯುತ್ತಿದ್ದರು.* ಇದು 'ಸೋಮಪಾನ'ವು. ಈಗಿನ 'ಬೀರ್' ಎಂಬುದರಂತೆ ಸೋಮರಸವು ಕಿಂಚಿನ್ಮಾದಕವು. ಸೋಮ ಯಜ್ಞಗಳಲ್ಲಿ ಅಗ್ನಿಷ್ಟೋಮ ರಾಜಸೂಯ ಅಶ್ವಮೇಧ ಮುಂತಾದುವು ಪ್ರಸಿದ್ಧ ವಾಗಿವೆ. ಸೋಮರಸದ ಆಹುತಿಗಳನ್ನು ಪ್ರತಿದಿನ ಮೂರುಬಾರಿ ಅಗ್ನಿಯಲ್ಲಿ ಅರ್ಪಿಸುವರು. ಇವೇ 'ತ್ರಿಸವನ'ಗಳು: ಪ್ರಾತಃಸವನ ಮಾಧ್ಯಂದಿನಸವನ ಸಾಯಂಸವನ ಎಂದು.

ಈಗ ರೂಢವಾಗಿರುವ ವ್ರತ ಪೂಜೆ ಮುಂತಾದ ಕರ್ಮಗಳು ಸ್ಮಾರ್ತಗಳು ಎಂದರೆ ಸ್ಮೃತ್ಯುಕ್ತಗಳು. ವೈದಿಕ ಕರ್ಮಗಳಿಗೂ ಈ ಸ್ಮಾರ್ತ ಕರ್ಮಗಳಿಗೂ ಏನೂ ಸಂಬಂಧವಿದ್ದಂತೆ ತೋರುವುದಿಲ್ಲ. ಈ ಸ್ಮಾರ್ತ ಕರ್ಮಗಳಿಂದ ಶ್ರುತ್ಯುಕ್ತ ಸ್ವರ್ಗಾದಿ ಫಲಗಳು ದೊರೆಯಲಾರವು. ಆದರೆ ಇವುಗಳಿಂದಲೂ ಸದ್ಗತಿ ದೊರೆ ಯುವುದೆಂದು ಸ್ಮೃತಿಗಳು ಹೇಳುವುವು.

೩. ಅಗ್ನಿ, ಪ್ರಾಚೀನ ಪಾರ್ಸಿಗಳ ಆವೇಸ್ತಾ

ಋಗ್ವೇದವು ಮಾನವಜಾತಿಯ ಇತಿಹಾಸದ ಆದಿಮಗ್ರಂಥವು. ಅದರ ಮೊದಲ ನೆಯ ಮಂತ್ರವೇ ಅಗ್ನಿಸ್ತುತಿಪರವು: "ಯಜ್ಞದ ಪುರೋಹಿತನು ಋತ್ವಿಜನು ಹೋತೃವು ರತ್ನಗಳ ಖನಿಯು ಎನಿಸಿದ ಅಗ್ನಿದೇವನನ್ನು ಕೊಂಡಾಡುವೆನು."‡ ಅಗ್ನಿಗೆ ಇಷ್ಟೊಂದು ಮನ್ನಣೆ ಹೇಗೆ ಬಂದಿತು? ನಮ್ಮ ವೈದಿಕಋಷಿಗಳಷ್ಟೇ ಅಲ್ಲ; ಪ್ರಾಚೀನ ಗ್ರೀಕರು ಲ್ಯಾಟಿನರು ಪಾರ್ಸಿಗಳು ಮಿಸರರು ಕೂಡ ಅಗ್ನಿಪೂಜಕರು. ಇವರಲ್ಲಿಯೂ ಪ್ರಾಚೀನ ಇರಾಣನಿವಾಸಿಗಳಾದ ಪಾರ್ಸಿಗಳು ಅಗ್ನಿಪೂಜಕರೆಂಬು ದನ್ನು ನಾವು ಈಗಲೂ ನೋಡಬಹುದು. ಇವರು ಈಗ ಮುಂಬಯಿಯಲ್ಲಿಯೂ ಅದರ ನೆರೆಹೊರೆಯಲ್ಲಿಯೂ ವಾಸಮಾಡಿರುವರು. ಪಾರ್ಸಿಗಳ ಪ್ರಾಚೀನಗ್ರಂಥವು ಆವೇಸ್ತಾ; ನಮ್ಮ ಋಗ್ವೇದದಂತೆ ಅದರೊಳಗಿನ ಒಂದು ಭಾಗವು ಅಗ್ನಿಸ್ತುತಿರೂ ಪವಾಗಿದೆ. ಪ್ರಾಚೀನ ಪಾರಸೀಕರು (ಪಾರ್ಸಿಗಳು) ಯಜ್ಞಾಗ್ನಿಯಲ್ಲಿ ಸೋಮ ರಸದ ಆಹುತಿಗಳನ್ನು ಕೊಡುತ್ತಿದ್ದರು; ಸೋಮಪಾನಮಾಡುತ್ತಿದ್ದರು. ಸೋಮ

---

* ಅಪಾಮ ಸೋಮಂ ಅಮೃತಾ ಅಭೂಮ.

‡ "ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಂ | ಹೋತಾರಂ ರತ್ನಧಾತಮಂ"

ವನ್ನು 'ಹೋಮ' ಎಂದು ಹೇಳುವರು. ಸಂಸ್ಕೃತ ಸಕಾರಕ್ಕೆ ಹಕಾರವಾಗು ವುದು ಪಾರ್ಸಿ ಭಾಷೆಯ ವಾಡಿಕೆ. ಉದಾ: ಸಿಂಧು—ಹಿಂದು. ಅರಣಿಗಳಿಂದ ಅಗ್ನಿ ಮಂಥನಮಾಡುವ ಪುರೋಹಿತರಿಗೆ ಪಾರ್ಸಿಯಲ್ಲಿ ಅಥ್ರವನ್ ಎಂಬ ಹೆಸರು. ಬ್ರಹ್ಮನ ಮಗನಿಗೆ ಅಥರ್ವಾ ಎಂಬುದು ನಮ್ಮಲ್ಲಿಯ ಹೆಸರು. ಬ್ರಹ್ಮ ಅಥರ್ವ ಇವು ಯಜ್ಞದ ಪುರೋಹಿತರ ಹೆಸರುಗಳು. ವೈದಿಕ ದೇವತೆಗಳ ಮತ್ತು ಪಾರ್ಸಿ ದೇವತೆ ಗಳ ಹೆಸರುಗಳೂ ಬಹುಮಟ್ಟಿಗೆ ಒಂದೇ ಆಗಿವೆ. ಋಗ್ವೇದದಲ್ಲಿ ಅಸುರ ಶಬ್ದವು ಸೂರ್ಯ ಇಂದ್ರ ವರುಣ ಮಿತ್ರ ಮುಂತಾದ ದೇವತೆಗಳ ಹೆಸರಾಗಿ ಮೇಲೆ ಮೇಲೆ ಪ್ರಯೋಗಿಸಲ್ಪಟ್ಟಿದೆ. ಹತ್ತನೆಯ ಮಂಡಲದ ಕೊನೆಯಲ್ಲಿ ಮಾತ್ರ ದೇವಶತ್ರು ಎಂಬ ಅರ್ಥದಲ್ಲಿ ಅಸುರ ಶಬ್ದದ ಪ್ರಯೋಗವುಂಟು. ಪಾರ್ಶಿಗಳಲ್ಲಿ ಅಹುರ ಎಂಬುದು ದೇವರ ಹೆಸರು. ಸಕಾರಸ್ಥಾನದಲ್ಲಿ ಹಕಾರವಿರುವದಷ್ಟೇ ಭೇದವು. ವೈದಿಕ ಮಿತ್ರ ವರುಣ ಇಂದ್ರ ನಾಸತ್ಯ ಯಮ ಮೊದಲಾದ ದೇವತೆಗಳಿಗೆ ಆವೇಸ್ತಾ ಗ್ರಂಥದಲ್ಲಿ ಮಿಥ್ರ ವರುಣ ಇಂದ್ರ ನಾಸತ್ಯ ಯಿಮ ಎಂಬ ಹೆಸರು. ವೈದಿಕ ವೃತ್ರಘ್ನ-ವೃತ್ರಹಂತೃ (ಇಂದ್ರ) ಅಪಾಂನಪಾತ್ (ನೀರಿನ ವಂಶಧರ) ಭಗ ಎಂಬ ದೇವತೆಗಳಿಗೂ ಆವೇಸ್ತಾ ಗ್ರಂಥದೊಳಗಿನ ವೇರೇಥ್ರಘ್ನ ಅಪಾಂನಪಾತ್ ಭಗ ಇವರಿಗೂ ಭೇದವಿಲ್ಲ. ಇಂದ್ರನ ವೃತ್ರವಧೆಯ ಕಥೆ ವೇದದಲ್ಲಿಯೂ ಆವೇಸ್ತಾ ದಲ್ಲಿಯೂ ಒಂದೇ. ಇಂದ್ರನ ಮೊದಲಿನ ವೈದಿಕನಾಮವು 'ತ್ರಿತ;' ಆವೇಸ್ತಾದಲ್ಲಿ 'ಥೇಯಿತೋನಾ.' ವೈದಿಕ ಇಂದ್ರನು ಅಹಿಯನ್ನು ಎಂದರೆ ವೃತ್ರನನ್ನು ಸಂಹರಿಸಿ ದಂತೆ ಪಾರ್ಸಿಗಳ ಥೇಯಿತೋನಾ ಅಜ್ಹಿಯನ್ನು ಎಂದರೆ 'ವರತ್' ಎಂಬವನನ್ನು ಸಂಹರಿಸಿದನು. ವೈದಿಕ ದೇವಾಸುರ ಯುದ್ಧವು ಪಾರ್ಸಿಗಳಲ್ಲಿಯೂ ಉಂಟು. ಆದರೆ ವೈದಿಕ ದೇವಾಸುರ ಯುದ್ಧವು ಪಾರ್ಸಿಗಳ ಅಸುರದೇವ ಯುದ್ಧವು. ವೈದಿಕ ದೇವರು ಲೋಕಹಿತಕರರು, ಪಾರ್ಶಿಗಳ ದೇವರು ಲೋಕಾನಿಷ್ಟಕರರು; ವೈದಿಕ ಅಸುರರು ಲೋಕಾನಿಷ್ಟಕರರು, ಪಾರ್ಸಿಗಳ ಅಸುರರು ಲೋಕಹಿತಕರರು ಇಷ್ಟೇ ಭೇದವು. ಇದರಿಂದ ದೇವಾಸುರಯುದ್ಧವು ಒಂದು ಪ್ರಾಚೀನ ಐತಿಹಾಸಿಕ ವೃತ್ತಾಂತವಿರಬಹು ದೆಂದು ತೋರುವುದು. ಕಾಲಕ್ರಮದಲ್ಲಿ ಅದು ಮರೆತುಹೋಗಿರಬೇಕು. ಶ್ರೀ ಶಂಕರಾಚಾರ್ಯರು ಛಾಂದೋಗ್ಯಭಾಷ್ಯದಲ್ಲಿ—ದೇವ ಎಂದರೆ ಒಳ್ಳೆಯ ಮನೋ ವೃತ್ತಿ, ಅಸುರ ಎಂದರೆ ತಮ-ಆತ್ಮಕ ಮನೋವೃತ್ತಿ ಎಂದು ಇಟ್ಟುಕೊಂಡು ದೇವಾಸುರ ಯುದ್ಧದ ವ್ಯಾಖ್ಯಾನವನ್ನು ಆ ಎರಡು ತರದ ಮನೋವೃತ್ತಿಗಳ ಯುದ್ಧವೆಂದು ಮಾಡಿರುವರು.

೪. ಅಗ್ನಿಯ ಮಾಹಾತ್ಮ್ಯ ಮತ್ತು ಯಜ್ಞದ ಮೂಲ

ಅಗ್ನಿಗೆ ಇಡಿ ಜಗತ್ತಿನಲ್ಲಿಯೇ ಗೌರವವು ಬರಲು ಕಾರಣವೇನು? ೩೩೩೯ ಜನ ದೇವತೆಗಳು ಅಗ್ನಿಯ ಸೇವೆಯನ್ನು ಮಾಡಿದರು, ಘೃತದಿಂದ ಆತನಿಗೆ ಸೇಚನ ಮಾಡಿದರು, ಆತನಿಗಾಗಿ ಕುಶಗಳನ್ನು ಹರಡಿದರು. ಹೋತೃವೆಂದು ತಿಳಿದು ಆತನನ್ನು ಅವುಗಳ ಮೇಲೆ ಕುಳ್ಳಿರಿಸಿದರು.—

ತ್ರೀಣಿ ಶತಾ ತ್ರಿಸಹಸ್ರಾಣ್ಯಗ್ನಿಂ ತ್ರಿಂಶಚ್ಚ ದೇವಾ ನವಚಾಸಪರ್ಯಯನ್ |
ಉಕ್ಷನ್ ಘೃತೈರಸ್ತೃಣನ್ ಬಹಿರಸ್ಮಾ ಆದಿದ್ಧೋತಾರಂ ನ್ಯಸಾದಯಂತ ||

ವಿಶ್ವಾಮಿತ್ರಋಷಿಯು ಅಗ್ನಿಯನ್ನು ಸಂಬೋಧಿಸಿ ಹೇಳುತ್ತಾನೆ: "ಕಾಮಯ ಮಾನೋವನಾತ್ತ್ವಂ" (ಇಲ್ಲಿ ದಾವಾಗ್ನಿಯನ್ನು ಅನುಲಕ್ಷಿಸಿದಂತಿದೆ.)

ಸಸ್ಸವಾಂಸ ಮಿವತ್ಮನಗ್ನಿ ಮಿತ್ಥಾ ತಿರೋಹಿತಂ |
ಏನಂ ನಯನ್ ಮಾತರಿಶ್ವಾ ಪರಾವತೋ ದೇವೇಭ್ಯೋ ಮಥಿತಂ ಪರಿ ||

ಮಗನು ಹೊರಟುಹೋದರೂ ಆತನನ್ನು ಹಿಡಿದು ತರುವಂತೆ ಅಡಗಿದ ಅಗ್ನಿಯನ್ನು ಮಾತರಿಶ್ವನು ಮಂಥನದಿಂದ ಉತ್ಪನ್ನಮಾಡಿ ದೇವಗಣದ ಸಲುವಾಗಿ ತರುವನು. ಇಲ್ಲಿ ಅಗ್ನಿ ಆರಲು ಅರಣಿಗಳ ಮಂಥನದಿಂದ ಆತನನ್ನು ಮತ್ತೆ ಎಬ್ಬಿಸುವುದರ ಉಲ್ಲೇಖವಿದೆ. ಪ್ರಮೇಥೂಜನು (Prometheus) ಲೋಕಹಿತಕ್ಕಾಗಿ ಸ್ವರ್ಗದಿಂದ ಅಗ್ನಿಯನ್ನು ಕದ್ದು ತಂದನೆಂದು ಗ್ರೀಕರಲ್ಲಿ ಆಖ್ಯಾಯಿಕೆಯಿದೆ. ಈ ಶಬ್ದಕ್ಕೂ ಪ್ರಮಂಥನ (=ಬಲಪೂರ್ವಕವಾದ ಅರಣಿದ್ವಯಮಂಥನ) ಶಬ್ದಕ್ಕೂ ಹೆಚ್ಚಿಗೆ ಹೋಲಿಕೆಯಿದೆ. ಋಗ್ವೇದದ ಐತರೇಯ ಬ್ರಾಹ್ಮಣದಲ್ಲಿ—*"ಅಗ್ನಿಯೇ ಎಲ್ಲ ದೇವರು, ವಿಷ್ಣುವೇ (ಮಧ್ಯಾಹ್ನ ಸೂರ್ಯನೇ) ಎಲ್ಲ ದೇವರು; ಈ ಅಗ್ನಿವಿಷ್ಣುಗಳ ಶರೀರವೇ ಯಜ್ಞದೇವತೆಗಳ ಆದಿಯೂ ಅಂತವೂ ಆಗಿದೆ. ಆದುದರಿಂದ ಅಗ್ನಿವಿಷ್ಣು ಗಳಿಗಾಗಿ ಅರ್ಪಿಸಿದ ಪುರೋಡಾಶವು ಎಲ್ಲ ದೇವತೆಗಳ ಸುಖವನ್ನುಂಟುಮಾಡು ವುದು." ಈ ಮೇರೆಗೆ ಅಗ್ನಿಸ್ತುತಿಯುಂಟು.

ಇಂತು ಅಗ್ನಿಗೆ ದೇವತೆಗಳಲ್ಲೆಲ್ಲ ಶ್ರೇಷ್ಠತೆಯೆನೋ ಹೇಳಿದೆ; ಆದರೆ ಅದಕ್ಕೆ ಕಾರಣವನ್ನು ಸರಿಯಾಗಿ ಹೇಳುವುದು ಇತಿಹಾಸಕ್ಕೂ ಮೀರಿದ ಮಾತು. ಇತಿಹಾಸ ಕಾಲಕ್ಕಿಂತ ಪೂರ್ವದಲ್ಲಿಯೇ ಅಗ್ನಿಯ ಗೌರವವು ನೆಲೆಸಿದೆ. ಅಗ್ನಿಯ ಈ ಗೌರವದ

---

* ಅಗ್ನಿರ್ವೈ ಸರ್ವಾ ದೇವತಾ ವಿಷ್ಣುಃ ಸರ್ವಾ ದೇವತಾ | ಏತೇ ವೈ ಯಜ್ಞಸ್ಯಾಂತ್ಯೇ ತನ್ವೋ ಯದಗ್ನಿಶ್ಚ ವಿಷ್ಣುಶ್ಚ ತದ್ಯದಾಗ್ನಾವೈಷ್ಣವಂ ಪುರೋಡಾಶಂ ನಿರ್ವಪಂತ್ಯತ ಏವ ತದ್ದೇ ವಾನೃಧ್ನುವಂತಿ.

ಕಾರಣವನ್ನು ನಿರ್ಧರಿಸುವುದು ಅಸಾಧ್ಯವಾದರೂ ಅಗ್ನಿ ಮಾಯವಾದಾಗ ವೈದಿಕ ಋಷಿಗಳು ಎಷ್ಟು ತೊಂದರೆಗೊಳ್ಳುತ್ತಿದ್ದರೆಂಬುದನ್ನು ಋಗ್ವೇದದ ಒಂದೆರಡು ಸೂಕ್ತಗಳಿಂದ ಊಹಿಸಬಹುದು:

"ಅಗ್ನಿ ನೀರಿನಲ್ಲಿ ಅಡಗಿದನು; ಹಸು ತಪ್ಪಿಸಿಕೊಂಡರೆ ಹೆಜ್ಜೆಗಳಿಂದ ಅದನ್ನು ಹುಡುಕುವಂತೆ ಹಲವರು ಪರಿಚಾರಕರು ಅಗ್ನಿಯನ್ನು ಹುಡುಕಾಡಿದರು. ವೀರರಾದ ಭೃಗುವಂಶೀಯರು ಅಗ್ನಿ ಸಿಕ್ಕಬೇಕೆಂದು ಆತನ ಸ್ತುತಿಮಾಡುತ್ತ ಮಾಡುತ್ತ ಆತನನ್ನು ಪಡೆದರು. ವೈಭೂವಸತ್ರಿತನು ಬಹುವಾಗಿ ಬಯಸಿ ಈ ಅಗ್ನಿಯನ್ನು ಭೂಮಿಯಲ್ಲಿ ಪಡೆದನು."

"ಬಹುಪರಿಚಯಾದವಜ್ಞಾ" ಎಂಬಂತೆ ಅಗ್ನಿಯ ಗೌರವವು ಈ ಕಾಲದಲ್ಲಿ ಕುಗ್ಗಿಹೋಯಿತು. ಹನ್ನೆರಡು ವರ್ಷದ ಬಾಲಕನ ಜೇಬಿನಲ್ಲಿ ಕೂಡ ಕಡ್ಡಿಪೆಟ್ಟಿಗೆ, ಬಾಯಲ್ಲಿ ಹೊಗೆಯುತ್ತಿರುವ ಸಿಗಾರೇಟು. ಅಗ್ನಿಹೋತ್ರಿಗಿಂತ ಮಿಗಿಲಾಗಿ ಆತನು ಅಗ್ನಿಸಿದ್ಧಿ ಪಡೆದವನು. ಈಗ ಹೀಗಿರುವಾಗ ಪೂರ್ವಕಾಲದಲ್ಲಿ ವೈದಿಕ ಋಷಿಗಳು "ಅಗ್ನಿಮೀಳೇ . . ." ಮೊದಲಾಗಿ ಅಗ್ನಿಯನ್ನು ಅಷ್ಟೊಂದು ಸ್ತುತಿಸಿದುದಕ್ಕೆ ನಾವು ಬೆರಗಾಗುವುದೇನೋ ನಿಜವೇ. ಈ ಕಾಲದಲ್ಲಿ ಯಾವ ದೇಶದಲ್ಲಿಯೇ ಆಗಲಿ ನೀರಿನ ದುರ್ಭಿಕ್ಷವಿರುವುದನ್ನು ಕೇಳುವೆವು; ಆದರೆ ಜ್ಞಾನಾಭಿವೃದ್ಧಿಯ ಈ ನಾಗರಿಕತೆಯ ಕಾಲದಲ್ಲಿ ಅಗ್ನಿಯ ದುರ್ಭಿಕ್ಷವನ್ನು ನಾವು ಎಲ್ಲಿಯೂ ಕೇಳಲಾರೆವು.

ಆದಿಕಾಲದ ಮಾನವನು ಈಗಿನಂತೆ ಕೃತ್ರಿಮವಾಗಿ ಅಗ್ನ್ಯುತ್ಪಾದನವನ್ನು ಅರಿತಿರಲಿಲ್ಲ. ಆರ್ಯರ ಮೂಲನಿವಾಸಸ್ಥಾನಗಳಾದ ಶೀತಪ್ರಧಾನ ದೇಶಗಳಲ್ಲಿ ಅಗ್ನಿಯಿಲ್ಲದಾಗ ಯಾವ ತೊಂದರೆಯಾಗುತ್ತಿರಬಹುದೆಂಬುದನ್ನು ಊಹಿಸಿರಿ. ಕಂದ ಮೂಲಾದಿಗಳಿಂದ ಆತನು ಆಹಾರವನ್ನು ಹೇಗಾದರೂ ಸಾಗಿಸಿರಬಹುದು; ಆದರೆ ರಾತ್ರಿಯ ಕತ್ತಲೆಯಲ್ಲಿಯೂ ಮಿತಿಮೀರಿದ ಚಳಿಯಲ್ಲಿಯೂ ಆತನ ಕಷ್ಟಕ್ಕೆ ಎಣೆ ಇರುತ್ತಿರಲಿಲ್ಲ. ಒಮ್ಮೊಮ್ಮೆ ದಟ್ಟಡವಿಗಳಲ್ಲಿ ಮರಗಳ ಟೊಂಗೆಗಳು ಒಂದನ್ನೊಂದು ಘರ್ಷಿಸುವಾಗ ಅಗ್ನಿ ಹುಟ್ಟಿದುದನ್ನು ಆತನು ಕಂಡನು; ತನ್ನ ಅಂಗೈಗಳನ್ನು ಒಣ ಕಟ್ಟಿಗೆಗಳನ್ನು ತಿಕ್ಕಿದಂತೆ ತಿಕ್ಕಿಕೊಂಡಾಗ ಅವು ಬಿಸಿಯಾಗುವುದನ್ನೂ ಅವುಗಳಲ್ಲಿ ಉಷ್ಣತೆ ಹೆಚ್ಚುವುದನ್ನೂ ಕಲ್ಲಿಗೆ ಕಲ್ಲನ್ನು ಕಡೆದಾಗ ಕಿಡಿ ಬರುವುದನ್ನೂ ಆತನು ಕಂಡನು. ಆಗ ಕಟ್ಟಿಗೆಗಳನ್ನು ಒಂದರ ಮೇಲೊಂದು ಹೆಚ್ಚಾಗಿ ತಿಕ್ಕಿದನು; ಥಕ್ಕನೆ ಅಗ್ನಿ ಹುಟ್ಟಿತು. ಆತನಿಗೆ ಹಿಡಿಸಲಾರದಷ್ಟು ಸಂಭ್ರಮ! ಉರುವಲನ್ನು ಹಾಕಲು ಆದೇ ಶಿಶು ಅಗ್ನಿಯು ತನ್ನ ಬಗೆಬಗೆಯ ಬಣ್ಣದ ಏಳು ನಾಲಿಗೆಗಳನ್ನು ಚಾಚಿ ಕಾವು ಬೆಳಕುಗಳನ್ನು ಹೊರಚಿಮ್ಮಿಸುತ್ತ ಸುತ್ತಲೂ ಸುಖವನ್ನೂ ಶೋಭೆಯನ್ನೂ

ಹರಡುವುದನ್ನು ಕಂಡು ಆತನು ಆನಂದಿತನಾದನು. ಉಗಿ ಬಂಡಿಯನ್ನು ಎಲ್ಲಕ್ಕೂ ಮೊದಲು ನೋಡಿದಾಗ ಜನರು ಅಚ್ಚರಿಬಟ್ಟರು; ಗ್ರಾಮೋಫೋನು ಮುಂತಾದ್ದು ವನ್ನು ಮೊದಲು ನೋಡಿದಾಗ ಇನ್ನೂ ಹೆಚ್ಚಾಗಿ ಬೆರಗಾದರು; ವಿಮಾನಗಳನ್ನು ನೋಡಿದಾಗ ಅವರು ಚಕಿತರಾಗಿ ಹೋದರು. ಆದರೆ ಅರಣಿಗಳನ್ನು ಕಡೆಯಲು ಅಗ್ನಿ ಪ್ರಕಟವಾದುದನ್ನು ಕಂಡು ಆದಿಕಾಲದ ಮಾನವನಿಗೆ ಆದ ಆಶ್ಚರ್ಯದ ಮುಂದೆ ಈಗಿನವರ ಆಶ್ಚರ್ಯವು ಏನೂ ಅಲ್ಲ. ಆದುದರಿಂದಲೇ ಆರ್ಯಋಷಿಗಳ ಹೃದಯವು ಉಕ್ಕಿ ಬರಲು ಅವರ ಮುಖದಿಂದ "ಅಗ್ನಿಮೀಳೇ . . ." ಎಂಬುದಾಗಿ ಸಂಭ್ರಮದೊಡನೆ ಸ್ತುತಿಸೂಕ್ತಗಳು ಹೊರಬಿದ್ದುವು. ಅರಣಿಗಳಲ್ಲಿ ಮೊದಲು ಹೊನ್ನಿ (ಮಿಣಕು) ಹುಳುವಿನಷ್ಟು ಕಂಡ ಸಣ್ಣ ಕಿಡಿ ತನ್ನ ಮೇಲೆ ಹಾಕಿದ ಉರುವಲನ್ನೆಲ್ಲ ಸುಡುತ್ತ ಜಗವನ್ನೆಲ್ಲ ಧ್ವಂಸಮಾಡಲು ಸಮರ್ಥವಾಗುತ್ತಿದೆ; ಅಡವಿಯಲ್ಲಿ ಮರಗಳ ತಿಕ್ಕಾಟದಿಂದ ಉಂಟಾದ ಕಿಡಿ ನಿರಾಕಾರದಿಂದ ಸಾಕಾರವು ಪ್ರಕಟವಾದಹಾಗೆ ಪ್ರಕಟವಾಗಿ ಹೊತ್ತಿ ಹೊಗೆದು ಉರಿದು ಸಿಕ್ಕಿದ್ದನ್ನೆಲ್ಲ ಬೂದಿಮಾಡಿ ಮತ್ತೆ ನಿರಾಕಾರದಲ್ಲಿ ಅಡಗಿದಂತೆ ಕಾಣಿಸದಂತಾಗುತ್ತಿದೆ; ಕುಣಿದಾಡಿ ಬಳಲಿದ ಶಿಶು ತೊಟ್ಟಿಲಲ್ಲಿ ಮಲಗುವ ಹಾಗೆ ಕಟ್ಟಿಗೆಯಲ್ಲಿ ಮಲಗುತ್ತಿದೆ; ಇದನ್ನೆಲ್ಲ ನೋಡಿದ ಆ ಪ್ರಾಚೀನ ಋಷಿಗಳ ಮನಸ್ಸು ಏಕಕಾಲದಲ್ಲಿ ಆಶ್ಚರ್ಯ ಹರ್ಷಭಕ್ತಿಭಾವಗಳಿಂದ ತಲಕುಮಲಕಾಗಿ ಹೋಗಿರಬೇಕು! ಈ ಮಹಾ ಪ್ರತಾಪಶಾಲಿ ಅಗ್ನಿಯು ಎಲ್ಲಿ ಅಡಗಿದ್ದನು, ಹೇಗೆ ಹೊರಬಿದ್ದನು, ಮತ್ತೆ ಎಲ್ಲಿ ಅಡಗಿದನು ಎಂಬುದು ಅವರಿಗೆ ತಿಳಿಯದಂತಾಯಿತು. ಅವರ ಸ್ವಾಭಾವಿಕ ಕವಿತ್ವಪೂರ್ಣದೃಷ್ಟಿಗೆ ಆ ಅಗ್ನಿಯು ದೇವತೆಯೆಂದು, ಅವ್ಯಕ್ತದಲ್ಲಿ ವ್ಯಕ್ತವೆಂದು ಕಂಡುದು ಅರಿದಲ್ಲ. ಆದುದರಿಂದಲೇ ಅವರು ಘೃತಾದಿ ಆಹುತಿಹಸ್ತರಾಗಿ ಆತನ ಪೂಜೆಗೆ ಮುಂದುವರಿದರು. ಇಂದ್ರಾದಿ ಬೇರೆ ದೇವತೆಗಳ ದೇವತ್ವವೂ ಹೀಗೆಯೇ ಬಂದಿರಬೇಕು. ಇದೇ ವೈದಿಕಯಜ್ಞಗಳ ಮೂಲತತ್ತ್ವವು. ಕಾಲಾಂತರದಲ್ಲಿ 'ಅತಿಪರಿಚಯಾದವಜ್ಞಾ' ಎಂಬಂತೆ ಅಗ್ನ್ಯಾದಿ ದೇವತೆಗಳು ಹಿಂದೆ ಬಿದ್ದರು; ಯಜ್ಞಗಳು ನಿಂತುಹೋದವು. ಅಗ್ನ್ಯಾದಿ ದೇವತೆಗಳ ವಿಷಯದಲ್ಲಿ ಮೊದಲಿನ ವಿಸ್ಮಯಹರ್ಷಭಕ್ತಿಗಳು ಮಾಯವಾದವು. ಅವರ ದೇವತ್ವ ವಿಷಯದಲ್ಲಿ ಸಂಶಯವು ತಲೆದೋರಿತು. ಋಗ್ವೇದದ ಎಂಟನೆಯ ಮಂಡಲದಲ್ಲಿ ಇಂದ್ರನ ಅಸ್ತಿತ್ವ ವಿಷಯವಾಗಿಯೇ ಒಬ್ಬ ಋಷಿ ಸಂಶಯಗೊಂಡುದು ಕಾಣ ಬರುವುದು. "*ಇಂದ್ರನು ನಿಜವಾಗಿ ಇದ್ದುದೇ ಆದರೆ ಆತನನ್ನು ಕುರಿತು ಸತ್ಯ

---

* ಪ್ರಸುಸ್ತೋಮಂ ಭರತವಾಜಯಂತ ಇಂದ್ರಾಯ ಸತ್ಯಂ ಯದಿ ಸತ್ಯಮಸ್ತಿ | ನೇಂದ್ರೋಸ್ತೀತಿ ನೇಮಉತ್ವ ಆಹ ಕ ಇಂದದರ್ಶ ಕಮಭಿಷ್ಟವಾಮ ||

ಸ್ತೋಮ (–ಸ್ತುತಿ) ವನ್ನು ಮಾಡು; ನೇಮ-ಋಷಿ ಹೇಳುತ್ತಾನೆ—ಇಂದ್ರನು ಇಲ್ಲ; ಆತನನ್ನು ನೋಡಿದವರಾರು? ಯಾರ ಸ್ತುತಿಯನ್ನು ಮಾಡುವ?" ಈ ಸಂಶಯವು ದಿನದಿನಕ್ಕೆ ಪ್ರಬಲವಾಯಿತು.

೫. ಯಜ್ಞದ ಕೊನೆ; ಜ್ಞಾನ ಮತ್ತು ಕರ್ಮ ಇವುಗಳ ವಿವಾದದ ಆರಂಭ

ದೇವತಾವಿಷಯಕ ಸಂಶಯವು ದೃಢವಾಯಿತು. ಯಾರ ಸ್ತುತಿಯನ್ನು ಮಾಡುವ? ಯಾರಿಗೆ ಆಹುತಿಗಳನ್ನು ಅರ್ಪಿಸುವ? ಎಂಬ ಮಾತುಗಳಿಗೆ ಮೊದಲಾಯಿತು. ಸಂಶಯದೊಡನೆ ಆ ದೇವತೆಗಳ ವಿಷಯದಲ್ಲಿ ಆಂತರಿಕಶ್ರದ್ಧೆ ಕಡಮೆಯಾಗುತ್ತಾ ಬಂದಿತು. ಇತ್ತ ಈ ನ್ಯೂನತೆಯ ಪೂರೈಕೆಗೋ ಎಂಬಂತೆ ಯಜ್ಞಗಳ ಬಾಹ್ಯಾಡಂಬರವು ಬಳೆಯುತ್ತ ಬಂದಿತು. ಈ ಸಮಯದಲ್ಲಿ ಪೌರೋಹಿತ್ಯವ್ಯವಸಾಯವು ಬಳಕೆಗೆ ಬಂದಿತು. ಸ್ತೋತ್ರ ಮಂತ್ರಗಳನ್ನು ಪರಂಪರೆಯಾಗಿ ಕಲಿತ, ಕರ್ಮಗಳ ತಂತ್ರಗಳನ್ನು ಬಲ್ಲ, ಜನರು ಪುರೋಹಿತರೆನಿಸಿದರು. ಇರಾಣದ ಪುರೋಹಿತವರ್ಗದಂತೆ ಈ ದೇಶದಲ್ಲಿಯೂ ಪುರೋಹಿತವರ್ಗವು ಉಂಟಾಯಿತು. ಪೌರೋಹಿತ್ಯವ್ಯವಸಾಯವು ಬಳೆಯುತ್ತ ನಡೆದಂತೆ ಯಜ್ಞಗಳ ಆಡಂಬರವೂ ಬಳೆಯುತ್ತ ನಡೆಯಿತು. ಪುರೋಹಿತರು ತಮ್ಮ ವ್ಯವಸಾಯದ ಬೆಳೆವಣಿಗೆಗಾಗಿ ಯಜ್ಞಗಳೊಡನೆ ಐಹಿಕ ಪಾರತ್ರಿಕ ಫಲಗಳನ್ನು ಹೇಳುವ ಹಲವು ಉಪಕಥೆಗಳನ್ನು—"ಪುಷ್ಪಿತಾಂ ವಾಚಮ್"—ಪ್ರಚಾರಗೊಳಿಸಿದರು. ಇವು ಕಾಲಕ್ರಮದಲ್ಲಿ ಐತರೇಯ ಮೊದಲಾದ ಬ್ರಾಹ್ಮಣಗಳ ಆಕಾರವನ್ನು ಹೊಂದಲು ಪೌರೋಹಿತ್ಯಕ್ಕೆ ಹೆಚ್ಚಾಗಿ ಕಳೆಯೇರಿತು. ಯಜ್ಞಗಳ ನಿಜವಾದ ರಹಸ್ಯವು ಮರೆಯಾಗುತ್ತ, ಅಂಧ ಭಕ್ತಿ ಬಳೆಯುತ್ತ ನಡೆಯಿತು. ಯಜ್ಞಗಳ ಈ ಬಾಹ್ಯಾಡಂಬರದ ಕಾಲದಲ್ಲಿ ಅಶ್ವಮೇಧ ರಾಜಸೂಯ ಮುಂತಾದ ಮಹಾ ಯಜ್ಞಗಳು ತಲೆದೋರಿದುವು. ಋಗ್ವೇದದ ಎಂಟನೆಯ ಮಂಡಲದಲ್ಲಿ ರಾಜರು ಪುರೋಹಿತರಿಗೆ ಯಾವ ಮೇರೆಗೆ ಧಾರಾಳವಾಗಿ ಹಣವನ್ನು ಕೊಡುತ್ತಿದ್ದರೆಂಬುದನ್ನು ಕಾಣಬಹುದು. ಸೋಭರಿಋಷಿ, ಚಿತ್ರರಾಜನ ಧನದಾನವನ್ನು ಇಂತು ಕೊಂಡಾಡುತ್ತಾನೆ.—

"*ಈ ಧನವನ್ನು ನಮಗೆ ಇಂದ್ರನಾಗಲಿ, ಈ ಸುಭಗೆ ಸರಸ್ವತಿಯಾಗಲಿ ಕೊಟ್ಟಿರುವಳೇ? ಇಲ್ಲವೆ ಎಲೈ ಚಿತ್ರ(ರಾಜ)ನೇ ನೀನು ಕೊಟ್ಟಿರುವೆಯೋ?"

---

* ಇಂದ್ರೋ ವಾ ಘೇದಿಯನ್ಮಘಂ ಸರಸ್ವತೀವಾ ಸುಭಗಾ ದದಿರ್ವಸು| ತ್ವಂ ವಾ ಚಿತ್ರ ದಾಶುಷೇ ||

ವಶಋಷಿ ಮಾಡಿದ ಪೃಥಸ್ರವನ ದಾನದ ಸ್ತುತಿ:—"*ನಾನು ಅರುವತ್ತು ಸಹಸ್ರ ಅಯುತ ಅಶ್ವ, ಇಪ್ಪತ್ತುನೂರು ಒಂಟೆ, ಹತ್ತುಸಾವಿರ ಹಸುಗಳು ಇವನ್ನು ಪಡೆದಿರುವೆನು."

ಈ ಮೇರೆಗೆ ಯಜ್ಞಗಳಿಗೂ ಪುರೋಹಿತರ ಸ್ವಾರ್ಥಕ್ಕೂ ತಳಕು ಬಿದ್ದಿತ್ತು. ಪುರೋಹಿತರಿಗೆ ತಮ್ಮ ವ್ಯವಸಾಯವು ಕುಗ್ಗಬಾರದೆಂಬ ಹಂಬಲ. ಅದಕ್ಕಾಗಿ ಅವರು ತಮ್ಮ ವ್ಯವಸಾಯವು ಸೆಳ್ಳೆಗೊಳ್ಳುವಂತೆ ಉಪಾಯಗಳನ್ನು ಕೈಕೊಂಡರು. ಇದರಿಂದ ಯಜ್ಞಗಳು ಮೊದಲಿನಂತೆ ಸುಲಭಸಾಧ್ಯವಾಗದಂತಾಯಿತು. ಯಜಮಾನನೂ ಯಜಮಾನ ಪತ್ನಿಯೂ ತಾವೇ ಅಗ್ನಿಯನ್ನು ಪ್ರಜ್ವಲಿಸಿ, ತಾವೇ ಅಗ್ನಿಯ ಆಸನಕ್ಕಾಗಿ ಕುಶಗಳನ್ನು ಹರಡಿ, ಅಗ್ನಿಯೇ ಆಗಮಿಸು (—"ಅಗ್ನ ಆಯಾಹಿ") ಎಂದು ಕರೆದು, ಕುಶಗಳ ಮೇಲೆ ಕುಳಿತುಕೊಳ್ಳು (—"ನಿಷತ್ಸಿ ಬರ್ಹಿಷಿ") ಹವ್ಯದಾತನ ಹವ್ಯವನ್ನು ಸ್ವೀಕರಿಸು ಎಂದು ಸ್ವಹಸ್ತದಿಂದ ಆಹುತಿಗಳನ್ನು ಅರ್ಪಿಸುವುದು ಮುಂತಾದ ಸಹಜಸಾಧ್ಯ ಯಜ್ಞಕರ್ಮವು ಈಗ ತೊಡಕಿನದಾಯಿತು. ಪುರೋಹಿತರು ಕ್ರಮದಿಂದ ನಾಲ್ವರು ತರುವಾಯ ಏಳು ಜನರು ಆ ಬಳಿಕ ಹದಿನಾರು ಜನರು ಆದರು. ಐತರೇಯ ಬ್ರಾಹ್ಮಣವನ್ನು ನೋಡಿದರೆ ಯಜ್ಞದ ತಂತ್ರಗಳು ಎಷ್ಟು ತೊಡಕಿನವು ಆದವೆಂಬುದೂ ಅವು ಪುರೋಹಿತರನ್ನುಳಿದು ಬೇರೆ ಯಾರೂ ತಿಳಿಯದಂತಾಗಿವೆಯೆಂಬುದೂ ಕಾಣಬರುವುದು. ಚರುಪುರೋಡಾಶಗಳನ್ನು ಹೇಗೆ ಸಿದ್ಧಪಡಿಸಬೇಕು ಮುಂತಾದ ವಿಷಯಗಳು—ಏಕಾದಶ ಖಂಡಕಪಾಲಗಳಲ್ಲಿ ಪುರೋಡಾಶವು ಕೊಡಲ್ಪಡುವುದು, ಅದನ್ನು ಅಗ್ನಿ ಮತ್ತು ವಿಷ್ಣು ಈ ಇಬ್ಬರು ದೇವತೆಗಳು ಪಡೆಯುವರು; ಇದು ಯಾವ ಸೂತ್ರದಿಂದ ಹೇಗೆ ವಿಭಾಗಿಸಲ್ಪಡುವುದು ಮುಂತಾದ ಅತಿ ಸೂಕ್ಷ್ಮ ವಿಷಯಗಳು—ಸೇರಿವೆ. ಅಗ್ನಿಯಲ್ಲಿ ಕಾಷ್ಠವನ್ನು ಹಾಕುವಾಗ ಯಾವ ಋಙ್ಮಂತ್ರವನ್ನು ಯಾವ ಪುರೋಹಿತನು ಉಚ್ಚರಿಸಬೇಕು, ಯಜಮಾನನಿಗೆ ಹೇಗೆ ಸಂಸ್ಕಾರಮಾಡಬೇಕು, ಎಷ್ಟು ಮುಷ್ಟಿ ಕುಶಗಳಿಂದ ಯಜಮಾನನ ಶರೀರವನ್ನು ಶುದ್ಧಿಗೊಳಿಸಬೇಕು, ದೀಕ್ಷಿತನ ಶರೀರವನ್ನು ಗರ್ಭಸ್ಥಶಿಶುವಿನಂತೆ ವಸ್ತ್ರದಿಂದ ಆಚ್ಛಾದನಮಾಡುವ ಬಗೆ ಯಾವುದು, ಕೃಷ್ಣಮೃಗಚರ್ಮದಿಂದ ದೀಕ್ಷಿತನ ಶರೀರವನ್ನು ಜರಾಯುವಿನಿಂದ ಹೊದಿಸಿದಂತೆ ಹೊದಿಸುವ ಬಗೆ ಯಾವುದು, ದೀಕ್ಷಿತನು ಗರ್ಭಸ್ಥಶಿಶುವಿನಂತೆ ಹೇಗೆ ಅಂಗೈಗಳನ್ನು ಮುಷ್ಟಿಗಟ್ಟಿಗೊಂಡು ಇರಬೇಕು ಮುಂತಾದ ವಿಷಯಗಳು ಆಳವಾಗಿ ಆಲೋಚಿಸಲ್ಪಟ್ಟಿವೆ. ಇದಲ್ಲದೆ ಕೆಲವು ಸಂಕೇತಗಳು ಹೇಳಿವೆ: ಪುತ್ರಪಶ್ವಾದಿ ಅವಲಂಬನ

* "ಷಷ್ಟಿಂ ಸಹಸ್ರಾಶ್ವಸ್ಯಾಯುತಾಸನಮುಷ್ಟ್ರಾಣಾಂ ವಿಂಶತಿಂ ಶತಾ | ದಶಸ್ಯಾ . . ."

ರಹಿತವ್ಯಕ್ತಿಯು ಘೃತಪಕ್ವತಂಡುಲಗಳ ಚರುವನ್ನು ಅರ್ಪಿಸಬೇಕು; ಆ ಚರುವಿನಲ್ಲಿ ಘೃತವು ಸ್ತ್ರೀಶಕ್ತಿಸಾಧನದಲ್ಲಿ, ತಂಡುಲವು ಪುರುಷಶಕ್ತಿಸ್ಥಾನದಲ್ಲಿ. ಈ ಘೃತಯುಕ್ತ ಚರು ದಂಪತಿಸದೃಶವು ಇತ್ಯಾದಿ.

ಈ ಮೇರೆಗೆ ತಂತ್ರಭಾಗವು ರಹಸ್ಯಮಯವಾಯಿತು. ಅಲ್ಲಿ ಪುರೋಹಿತರಲ್ಲದೆ ಇನ್ನಾರೂ ಪ್ರವೇಶಿಸಲು ಬಾರದಂತಾಯಿತು. ಯಜ್ಞಗಳ ಈ ಗೊಂದಲವನ್ನು ಕಂಡೇ ಗೀತೆ—"ಜನ್ಮಕರ್ಮಫಲಪ್ರದಾಂ, ಕ್ರಿಯಾವಿಶೇಷ ಬಹುಲಾಂ ಭೋಗೈಶ್ವರ್ಯ ಗತಿಂ ಪ್ರತಿ" ಎಂದು ನುಡಿಯಿತು.

ಇತ್ತ ಯಜ್ಞವಿಷಯಕ ಜನಭಾವನೆ ವಿರುದ್ಧಮುಖವಾಯಿತು. ಋಗ್ವೇದದ ದಶಮಮಂಡಲದ ಪುರುಷಸೂಕ್ತದಲ್ಲಿ—ದೇವತೆಗಳು ವಿಶ್ವಪುರುಷನನ್ನೇ ಹವಿಯೆಂದು ಕಲ್ಪಿಸಿ ಯಜ್ಞವನ್ನು ಮಾಡಿದರು; ಆ ಯಜ್ಞದಲ್ಲಿ ಆಜ್ಯವು ವಸಂತವು, ಯಜ್ಞ ಕಾಷ್ಠವು ಗ್ರೀಷ್ಮವು, ಘೃತವು ಶರತ್ತು; ದೇವತೆಗಳು ಆ ಆದಿಪುರುಷನನ್ನು ಯಜ್ಞ ರೂಪನೆಂದು ಅಗ್ನಿಯಲ್ಲಿ ಆಹುತಿ ಹಾಕಿದರು. ಆದರಿಂದ ಪಶ್ವಾದಿಗಳೂ ವೇದಗಳೂ ಉತ್ಪನ್ನವಾದುವು. ದೇವತೆಗಳು ಆ ಪುರುಷನನ್ನೆ ಖಂಡಖಂಡವಾಗಿ ಮಾಡಿದರು. ಅದರ ಒಂದು ಖಂಡದಿಂದಲೇ ಬ್ರಾಹ್ಮಣಾದಿಚತುರ್ವರ್ಣಗಳು ಚಂದ್ರಸೂರ್ಯಾಗ್ನಿಗಳು ಇಂದ್ರವಾಯುಗಳು ಅಂತರಿಕ್ಷದ್ಯುಲೋಕಗಳು ಭೂಮಿ ದಿಕ್ಕು ಇವೆಲ್ಲ ಉತ್ಪನ್ನವಾದುವು ಎಂದು ಹೇಳಿದೆ. ಯಜ್ಞವು ಕೇವಲ ಬಾಹ್ಯಾನುಷ್ಠಾನವಾಗಿ ಉಳಿಯಲಿಲ್ಲ; ಭಕ್ತಕವಿಗಳು ಸಮಸ್ತಪ್ರಪಂಚವನ್ನು ಒಂದು ಮಹಾಯಜ್ಞವನ್ನಾಗಿ ನೋಡ ತೊಡಗಿದರು; ಮತ್ತು 'ಯಜ್ಞೋ ವೈ ವಿಷ್ಣುಃ' ಎಂದು ಹೇಳತೊಡಗಿದರು. ಯಜ್ಞವು ಗೂಢವಾದ ಒಂದು ಆಧ್ಯಾತ್ಮಿಕವ್ಯಾಪಾರವೆಂದೆನಿಸತೊಡಗಿತು. ಗೀತೆಯಲ್ಲಿ ಹಲವು ತರದ ಯಜ್ಞಗಳು ಹೇಳಲ್ಪಟ್ಟುವು: ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞ, ಸ್ವಾಧ್ಯಾಯಯಜ್ಞ, ಜ್ಞಾನಯಜ್ಞ, ಮುಂತಾಗಿ. ಮನುಸ್ಮೃತಿಯಲ್ಲಿ ಅಧ್ಯಯನಾಭ್ಯಾಸನ (—ಬ್ರಹ್ಮಯಜ್ಞ), ತರ್ಪಣ (—ಪಿತೃಯಜ್ಞ), ಹೋಮ (—ದೇವಯಜ್ಞ), ಬಲಿ (—ಭೂತಯಜ್ಞ), ಅತಿಥಿಪೂಜೆ (—ನೃಯಜ್ಞ), ಎಂಬೀ ಪಂಚಮಹಾಯಜ್ಞಗಳು ಹೇಳಲ್ಪಟ್ಟುವು. ಬುದ್ಧದೇವನ ಕಾಲಕ್ಕೆ ಮುಂಚೆಯೇ ಹಲವುಜನ ಜ್ಞಾನಿ-ಋಷಿಗಳು ವೈದಿಕಕರ್ಮಕಾಂಡ ವಿಷಯದಲ್ಲಿ ಅನಾಸ್ಥೆಯನ್ನು ತೋರ್ಪಡಿಸಿದ್ದರು: "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ"—ಯಜ್ಞಲಬ್ಧಪುಣ್ಯದ ಕ್ಷಯವಾಗಲು ಮರ್ತ್ಯ ಲೋಕಕ್ಕಿಳಿಯುತ್ತಾರೆ. "ನಾಕಸ್ಯ ಪೃಷ್ಠೇ ತೇ ಸುಕೃತೇನುಭೂತ್ವೇಮಂ ಲೋಕಂ ಹೀನತರಂ ವಾ ವಿಶಂತಿ"—ಸ್ವರ್ಗದಲ್ಲಿ ಸತ್ಕರ್ಮಗಳ ಫಲವನ್ನು ಅನುಭೋಗಿಸಿ ಮತ್ತೆ ಅವರು ಮರ್ತ್ಯಕ್ಕೆ ಇಲ್ಲವೆ ನರಕಾದಿ ಹೀನಲೋಕಕ್ಕೆ ತೆರಳುವರು.

ಈ ಮೇರೆಗೆ ಕಾಲಕ್ರಮದಲ್ಲಿ ನಮ್ಮ ದೇಶದಲ್ಲಿ ಜ್ಞಾನ ಕರ್ಮ ಇವುಗಳ ಶ್ರೇಷ್ಠತೆ ಕನಿಷ್ಠತೆಗಳನ್ನು ಕುರಿತು ವಾದಕ್ಕೆ ಆರಂಭವಾಯಿತು. ಪುರೋಹಿತವರ್ಗದ ಪಕ್ಷಪಾತಿಗಳು—"ಕರ್ಮದಿಂದ ಜೀವನ ಜನ್ಮವು; ಕರ್ಮಪ್ರತಿಷ್ಠೆಯೇ ವೇದದ ಗುರಿ" ಎಂದು ಹೇಳತೊಡಗಿದರು. ಜ್ಞಾನಪಕ್ಷಪಾತಿಗಳು—"ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥಾಽಮೃತಸ್ಯೈಷ ಸೇತುಃ"—ಆತ್ಮನೊಬ್ಬನನ್ನು ತಿಳಿಯಿರಿ, ಬೇರೆ ಮಾತುಗಳನ್ನು ಬಿಡಿರಿ, ಆತ್ಮಜ್ಞಾನವೇ ಅಮೃತತ್ವಪ್ರಾಪ್ತಿಯ ಮಾರ್ಗವು ಎಂದು ವಾದಿಸಿದರು. ಮೊದಲಿನ ವರ್ಗದವರ ಮುಂದಾಳು ಜೈಮಿನಿ ಋಷಿ; ಎರಡನೆಯ ವರ್ಗದವರ ಮುಂದಾಳು ಬಾದರಾಯಣಋಷಿ. ಜೈಮಿನಿ ಮತವು: ಕರ್ಮವೇ ಮುಖ್ಯ; ಜ್ಞಾನವು ಆನುಷಂಗಿಕ. ಬಾದರಾಯಣ ಮತವು: ಜ್ಞಾನವೇ ಮುಖ್ಯ; ಕರ್ಮವು ಆನುಷಂಗಿಕ. ಕರ್ಮವಾದಿಗಳ ಮತದಲ್ಲಿ ಜ್ಞಾನಪ್ರತಿಪಾದಕ ಶ್ರುತಿಗಳು ಅರ್ಥವಾದ; ಜ್ಞಾನವಾದಿಗಳ ಮತದಲ್ಲಿ ಚಿತ್ತಶುದ್ಧಿ ಮೂಲಕ ಜ್ಞಾನಕ್ಕೆ ಸಹಾಯಕವಾಗುವುದೇ ಕರ್ಮದ ಪ್ರಯೋಜನ; ಬೇರೆ ಪ್ರಯೋಜನವಿಲ್ಲ. ಈ ಉಭಯರ ನಡುವೆ ಇನ್ನೊಂದು ಮತದವರು ತಲೆಯೆತ್ತಿದರು. ಅವರು ಕರ್ಮಜ್ಞಾನಗಳ ಸಮನ್ವಯವನ್ನು ಸ್ಥಾಪಿಸಲು ಯತ್ನಿಸಿದರು. ಅವರು ಜ್ಞಾನಕರ್ಮಗಳೆರಡೂ ಒಂದೇ ಎಂದು ಹೇಳಿದರು:

"ಸಾಂಖ್ಯಯೋಗೌ ಪೃಥಗ್‌ಬಾಲಾಃ ಪ್ರವದಂತಿ ನ ಪಂಡಿತಾಃ |"

ಜ್ಞಾನಕರ್ಮಗಳು ಬೇರೆ ಬೇರೆ ಎಂದು ಬಾಲರು ಮಾತ್ರ ಹೇಳುವರಲ್ಲದೆ ಪಂಡಿತರು ಹೇಳರು.—ಗೀತೆ. ಹಕ್ಕಿಗೆ ಆಕಾಶದಲ್ಲಿ ಹಾರಲು ಎರಡು ರೆಕ್ಕೆಗಳೂ ಬೇಕಾಗುವಂತೆ ಮನುಷ್ಯನಿಗೆ ಜ್ಞಾನಕರ್ಮಗಳೆರಡೂ ಬೇಕು. "ಉಭಾಭ್ಯಾಮೇವ ಪಕ್ಷಾಭ್ಯಾಂ ಯಥಾ ಖೇ ಪಕ್ಷಿಣೋ ಗತಿಃ"—ಯೋಗವಾಸಿಷ್ಠ.

೬. ವೈದಿಕಕರ್ಮಕ್ಕೂ ಬೌದ್ಧಧರ್ಮಕ್ಕೂ ಸಂಗ್ರಾಮ

ಒಂದೆಡೆಗೆ ಹೊಸದಾಗಿ ಪ್ರಕಟವಾದ ಬೌದ್ಧಧರ್ಮದ ಪ್ರಭಾವವು ಹಾ ಹಾ ಎನ್ನುವದರೊಳಗಾಗಿ ದೇಶವನ್ನೆಲ್ಲ ವ್ಯಾಪಿಸಿಬಿಟ್ಟಿತು. ಬುದ್ಧದೇವನ ಉದಾರವಾದ ಸಾರ್ವಭೌಮಿಕ ಪ್ರೇಮ ಸಮಭಾವ ಇವುಗಳಿದಿರಿಗೆ ವೈದಿಕ ಕರ್ಮಮಾರ್ಗದ ಮಳಲ ಉಪ್ಪರಿಗೆ ಗಟ್ಟಿಯಾಗಿ ನಿಲ್ಲಲಿಲ್ಲ. ಪುರೋಹಿತರ ಕೈಯೊಳಗಿನ ತುತ್ತನ್ನು ಒಮ್ಮೆಲೆ ಹಾರಿಸಿ ಒಗೆದಂತಾಯಿತು. ಆದರೂ ಪುರೋಹಿತ ವರ್ಗವು ಸುಮ್ಮನೆ ಕುಳ್ಳಿರಲಿಲ್ಲ. ಅವರು ಸಮಯವನ್ನು ಕಾಯುತ್ತ ಇದ್ದರು. ಕಾಲಕ್ರಮದಲ್ಲಿ ಬೌದ್ಧಧರ್ಮವು ಪ್ರೇಮ ಭಕ್ತಿಶೂನ್ಯವಾಗಿ ಶುಷ್ಕ ಹೇತುವಾದವನ್ನಷ್ಟೇ ಇಟ್ಟುಕೊಂಡಿತು.

ಈ ಸುಸಂಧಿಯಲ್ಲಿ ಪುರೋಹಿತವರ್ಗವು ಮತ್ತೆ ತಮ್ಮ ವ್ಯವಸಾಯವನ್ನು ಅಭಿವೃದ್ಧಿ ಗೊಳಿಸಲು ಮನಮುಟ್ಟಿ ಪ್ರಯತ್ನಿಸತೊಡಗಿತು. ಶಬರಸ್ವಾಮಿಯು ಜೈಮಿನಿಯ ಕರ್ಮ ಮೀಮಾಂಸಾಸೂತ್ರಗಳಿಗೆ ಪಾಂಡಿತ್ಯಪೂರ್ಣ ಭಾಷ್ಯವನ್ನು ರಚಿಸಿದನು. ಸುಪ್ರಸಿದ್ಧವಿದ್ವಾಂಸನಾದ ಕುಮಾರಿಲಭಟ್ಟನು ಆ ಭಾಷ್ಯಕ್ಕೆ ವಿದ್ವತ್ಪೂರ್ಣವಾದ ವಾರ್ತಿಕವನ್ನು ರಚಿಸಿದನು. ಕುಮಾರಿಲಭಟ್ಟನು ಬೌದ್ಧ ಪಂಡಿತರೊಡನೆ ವಾದ ಮಾಡುವಾಗ ಹಲವು ಬಾರಿ ಸೋತನು. ಆಗ ಆತನು ಬೌದ್ಧಧರ್ಮವನ್ನು ಸ್ವೀಕರಿಸಿ ಅದನ್ನು ಚೆನ್ನಾಗಿ ಕಲಿತನು. ಮತ್ತೆ ಆತನು ವೈದಿಕನಾಗಿ ವೈದಿಕಕರ್ಮಮಾರ್ಗದ ಪಕ್ಷವನ್ನು ಹಿಡಿದು ಬೌದ್ಧರೊಡನೆ ವಾದಮಾಡುವದಕ್ಕಾಗಿ ದಿಗ್ವಿಜಯಕ್ಕೆ ಹೊರ ಟನು. ಆತನು ವಾದದಲ್ಲಿ ಜೈನ ಬೌದ್ಧಪಂಡಿತರನ್ನು ಸೋಲಿಸಿ ರಾಜಾಶ್ರಯದಿಂದ ಅವರ ನಾಶದ ಉಪಾಯಗಳನ್ನು ಕೈಕೊಂಡನು.

ಇಷ್ಟು ಪರಿಶ್ರಮಮಾಡಿದರೂ ಹಿಂದೆಬಿದ್ದ ವೈದಿಕಕರ್ಮಗಳೂ ವೈದಿಕದೇವತೆ ಗಳೂ ಬಲವುಳ್ಳುವಾಗಲಿಲ್ಲ. ಪುರೋಹಿತವರ್ಗವು ಸೈಷ್ಮುರ್ಯ ನೀತಿಯಿಂದ ಬೌದ್ಧ ಧರ್ಮವನ್ನು ನಾಶಗೊಳಿಸಿ ಆ ಧರ್ಮದ ಅವಶೇಷವನ್ನು ತಮ್ಮ ಧರ್ಮದಲ್ಲಿ ಸೇರಿಸಿ ಕೊಳ್ಳುವ ಕೃಪಾನೀತಿಯನ್ನು ಅವಲಂಬಿಸಿತು. ವೈದಿಕಧರ್ಮದಲ್ಲಿ ಮೂರ್ತಿಪೂಜೆಗೆ ಸ್ಥಾನವಿಲ್ಲದಿದ್ದರೂ ಪುರೋಹಿತರು ಬೌದ್ಧರ ಬುದ್ಧಮೂರ್ತಿ ಪೂಜೆಯನ್ನು ಅನುಕರಿಸಿ ದೇಶದಲ್ಲೆಲ್ಲ ಬಗೆಬಗೆಯ ದೇವದೇವಿಯರ ಮೂರ್ತಿಗಳನ್ನು ಸ್ಥಾಪಿಸಿದರು. ಮತ್ತು ಬುದ್ಧನು ವಿಷ್ಣುವಿನ ಒಂದು ಅವತಾರವೆಂದು ಸಾರಿದರು. ವಿಷ್ಣುವಿನ ಅವತಾರ ವಾದರೂ ಬುದ್ಧನಿಗೆ ಮನ್ನಣೆ ಶೂನ್ಯ. ಪದ್ಮಪುರಾಣದಲ್ಲಿ ಶಿವನು ಪಾರ್ವತಿಗೆ ಹೇಳುತ್ತಾನೆ: "ದೈತ್ಯರ ವಿನಾಶಕ್ಕಾಗಿ ಬುದ್ಧರೂಪನಾದ ವಿಷ್ಣು, ಕ್ಷಪಣಕ ಜೈನ ಮುಂತಾದ ಅಸತ್‌ಶಾಸ್ತ್ರಗಳನ್ನು ನಿರ್ಮಿಸಿದನು." ಕಾಲಕ್ರಮದಲ್ಲಿ ಬೌದ್ಧ ಧರ್ಮಕ್ಕೆ ಈ ದೇಶದಿಂದ ಅರ್ಧಚಂದ್ರವು ದೊರೆಯಿತು. ಈ ಸಂಧಿಯಲ್ಲಿ ಪುರೋಹಿತರು ತಮಗೆ ಅನುಕೂಲವಾದ ಹಲವು ಕಾರ್ಯಗಳನ್ನು ಮಾಡಿದರು. ಪ್ರಾಚೀನ ಪುರಾಣಗಳಲ್ಲಿ ಹೆಚ್ಚುಕಡಿಮೆ ಮಾಡಿ ವೈದಿಕಧರ್ಮದ ಕೆಲವೊಂದು ವಿಷಯವನ್ನು ಅವಲಂಬಿಸಿ ವ್ಯಾಸರ ಹೆಸರಿನಿಂದ ಹೊಸ ಪುರಾಣಗಳನ್ನು ಬರೆದು ಇಲ್ಲವೆ ಶಿವನ ಹೆಸರಿನಿಂದ ತಂತ್ರಗಳನ್ನು ಬರೆದು ಅಜ್ಞಜನರ ಮನೋರಂಜನೆ ಯಾಗುವ ದೇವದೇವಿಯರನ್ನೂ ಪೂಜಾದಿಗಳನ್ನೂ ಕಲ್ಪಿಸಿ ತಮ್ಮ ವ್ಯವಸಾಯವು ಲಾಭಪ್ರದವಾಗುವಂತೆ ಮಾಡಿಕೊಂಡರು. ಶ್ರೀಮದ್ಭಾಗವತದಲ್ಲಿ ನಾರದನು ವ್ಯಾಸ ರನ್ನು ಕುರಿತು ಹೇಳುತ್ತಾನೆ: "ಕಾಮ್ಯಫಲಪ್ರಾಪ್ತಿಗಾಗಿ ನಾಮರೂಪಾದಿಯುಕ್ತ ಕಲ್ಪಿತ ದೇವತೆಗಳ ಪೂಜೆಯಲ್ಲಿ ಜನವನ್ನು ನೀವು ತೊಡಗಿಸಿದಿರಿ. ಜುಗುಪ್ಸಿತ

ಈ ಮೇರೆಗೆ ಕಾಲಕ್ರಮದಲ್ಲಿ ನಮ್ಮ ದೇಶದಲ್ಲಿ ಜ್ಞಾನ ಕರ್ಮ ಇವುಗಳ ಶ್ರೇಷ್ಠತೆ ಕನಿಷ್ಠತೆಗಳನ್ನು ಕುರಿತು ವಾದಕ್ಕೆ ಆರಂಭವಾಯಿತು. ಪುರೋಹಿತವರ್ಗದ ಪಕ್ಷಪಾತಿಗಳು—"ಕರ್ಮದಿಂದ ಜೀವನ ಜನ್ಮವು; ಕರ್ಮಪ್ರತಿಷ್ಠೆಯೇ ವೇದದ ಗುರಿ" ಎಂದು ಹೇಳತೊಡಗಿದರು. ಜ್ಞಾನಪಕ್ಷಪಾತಿಗಳು—"ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥಾಽಮೃತಸ್ಯೈಷ ಸೇತುಃ"—ಆತ್ಮನೊಬ್ಬ ನನ್ನು ತಿಳಿಯಿರಿ, ಬೇರೆ ಮಾತುಗಳನ್ನು ಬಿಡಿರಿ, ಆತ್ಮಜ್ಞಾನವೇ ಅಮೃತತ್ವಪ್ರಾಪ್ತಿಯ ಮಾರ್ಗವು ಎಂದು ವಾದಿಸಿದರು. ಮೊದಲಿನ ವರ್ಗದವರ ಮುಂದಾಳು ಜೈಮಿನಿ ಋಷಿ; ಎರಡನೆಯ ವರ್ಗದವರ ಮುಂದಾಳು ಬಾದರಾಯಣಋಷಿ. ಜೈಮಿನಿ ಮತವು: ಕರ್ಮವೇ ಮುಖ್ಯ; ಜ್ಞಾನವು ಆನುಷಂಗಿಕ. ಬಾದರಾಯಣ ಮತವು: ಜ್ಞಾನವೇ ಮುಖ್ಯ; ಕರ್ಮವು ಆನುಷಂಗಿಕ. ಕರ್ಮವಾದಿಗಳ ಮತದಲ್ಲಿ ಜ್ಞಾನ ಪ್ರತಿಪಾದಕ ಶ್ರುತಿಗಳು ಅರ್ಥವಾದ; ಜ್ಞಾನವಾದಿಗಳ ಮತದಲ್ಲಿ ಚಿತ್ತಶುದ್ಧಿ ಮೂಲಕ ಜ್ಞಾನಕ್ಕೆ ಸಹಾಯಕವಾಗುವುದೇ ಕರ್ಮದ ಪ್ರಯೋಜನ; ಬೇರೆ ಪ್ರಯೋಜನವಿಲ್ಲ. ಈ ಉಭಯರ ನಡುವೆ ಇನ್ನೊಂದು ಮತದವರು ತಲೆಯೆತ್ತಿದರು. ಅವರು ಕರ್ಮಜ್ಞಾನಗಳ ಸಮನ್ವಯವನ್ನು ಸ್ಥಾಪಿಸಲು ಯತ್ನಿಸಿದರು. ಅವರು ಜ್ಞಾನಕರ್ಮಗಳೆರಡೂ ಒಂದೇ ಎಂದು ಹೇಳಿದರು:

"ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ |"

ಜ್ಞಾನಕರ್ಮಗಳು ಬೇರೆ ಬೇರೆ ಎಂದು ಬಾಲರು ಮಾತ್ರ ಹೇಳುವರಲ್ಲದೆ ಪಂಡಿತರು ಹೇಳರು.—ಗೀತೆ. ಹಕ್ಕಿಗೆ ಆಕಾಶದಲ್ಲಿ ಹಾರಲು ಎರಡು ರೆಕ್ಕೆಗಳೂ ಬೇಕಾಗುವಂತೆ ಮನುಷ್ಯನಿಗೆ ಜ್ಞಾನಕರ್ಮಗಳೆರಡೂ ಬೇಕು. "ಉಭಾಭ್ಯಾಮೇವ ಪಕ್ಷಾಭ್ಯಾಂ ಯಥಾ ಖೇ ಪಕ್ಷಿಣೋ ಗತಿಃ"—ಯೋಗವಾಸಿಷ್ಠ.

೬. ವೈದಿಕಕರ್ಮಕ್ಕೂ ಬೌದ್ಧಧರ್ಮಕ್ಕೂ ಸಂಗ್ರಾಮ

ಒಂದೆಡೆಗೆ ಹೊಸದಾಗಿ ಪ್ರಕಟವಾದ ಬೌದ್ಧಧರ್ಮದ ಪ್ರಭಾವವು ಹಾ ಹಾ ಎನ್ನುವದರೊಳಗಾಗಿ ದೇಶವನ್ನೆಲ್ಲ ವ್ಯಾಪಿಸಿಬಿಟ್ಟಿತು. ಬುದ್ಧದೇವನ ಉದಾರವಾದ ಸಾರ್ವಭೌಮಿಕ ಪ್ರೇಮ ಸಮಭಾವ ಇವುಗಳಿದಿರಿಗೆ ವೈದಿಕ ಕರ್ಮಮಾರ್ಗದ ಮಹಲ ಉಪ್ಪರಿಗೆ ಗಟ್ಟಿಯಾಗಿ ನಿಲ್ಲಲಿಲ್ಲ. ಪುರೋಹಿತರ ಕೈಯೊಳಗಿನ ತುತ್ತನ್ನು ಒಮ್ಮೆಲಿ ಹಾರಿಸಿ ಒಗೆದಂತಾಯಿತು. ಆದರೂ ಪುರೋಹಿತ ವರ್ಗವು ಸುಮ್ಮನೆ ಕುಳ್ಳಿರಲಿಲ್ಲ. ಅವರು ಸಮಯವನ್ನು ಕಾಯುತ್ತ ಇದ್ದರು. ಕಾಲಕ್ರಮದಲ್ಲಿ ಬೌದ್ಧ ಧರ್ಮವು ಪ್ರೇಮ ಭಕ್ತಿಶೂನ್ಯವಾಗಿ ಶುಷ್ಕಹೇತುವಾದವನ್ನಷ್ಟೇ ಇಟ್ಟುಕೊಂಡಿತು.

ಈ ಸುಸಂಧಿಯಲ್ಲಿ ಪುರೋಹಿತವರ್ಗವು ಮತ್ತೆ ತಮ್ಮ ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ಮನಮುಟ್ಟಿ ಪ್ರಯತ್ನಿಸತೊಡಗಿತು. ಶಬರಸ್ವಾಮಿಯು ಜೈಮಿನಿಯ ಕರ್ಮ ಮೀಮಾಂಸಾಸೂತ್ರಗಳಿಗೆ ಪಾಂಡಿತ್ಯಪೂರ್ಣ ಭಾಷ್ಯವನ್ನು ರಚಿಸಿದನು. ಸುಪ್ರಸಿದ್ಧ ವಿದ್ವಾಂಸನಾದ ಕುಮಾರಿಲಭಟ್ಟನು ಆ ಭಾಷ್ಯಕ್ಕೆ ವಿದ್ವತ್ತಾಪೂರ್ಣವಾದ ವಾರ್ತಿಕವನ್ನು ರಚಿಸಿದನು. ಕುಮಾರಿಲಭಟ್ಟನು ಬೌದ್ಧ ಪಂಡಿತರೊಡನೆ ವಾದ ಮಾಡುವಾಗ ಹಲವು ಬಾರಿ ಸೋತನು. ಆಗ ಆತನು ಬೌದ್ಧಧರ್ಮವನ್ನು ಸ್ವೀಕರಿಸಿ ಅದನ್ನು ಚೆನ್ನಾಗಿ ಕಲಿತನು. ಮತ್ತೆ ಆತನು ವೈದಿಕನಾಗಿ ವೈದಿಕಕರ್ಮಮಾರ್ಗದ ಪಕ್ಷವನ್ನು ಹಿಡಿದು ಬೌದ್ಧರೊಡನೆ ವಾದಮಾಡುವದಕ್ಕಾಗಿ ದಿಗ್ವಿಜಯಕ್ಕೆ ಹೊರಟನು. ಆತನು ವಾದದಲ್ಲಿ ಜೈನ ಬೌದ್ಧಪಂಡಿತರನ್ನು ಸೋಲಿಸಿ ರಾಜಾಶ್ರಯದಿಂದ ಅವರ ನಾಶದ ಉಪಾಯಗಳನ್ನು ಕೈಕೊಂಡನು.

ಇಷ್ಟು ಪರಿಶ್ರಮಮಾಡಿದರೂ ಹಿಂದೆಬಿದ್ದ ವೈದಿಕಕರ್ಮಗಳೂ ವೈದಿಕದೇವತೆಗಳೂ ಬಲವುಳ್ಳುವಾಗಲಿಲ್ಲ. ಪುರೋಹಿತವರ್ಗವು ಸೈಷ್ಮ್ಯರ್ಯ ನೀತಿಯಿಂದ ಬೌದ್ಧಧರ್ಮವನ್ನು ನಾಶಗೊಳಿಸಿ ಆ ಧರ್ಮದ ಅವಶೇಷವನ್ನು ತಮ್ಮ ಧರ್ಮದಲ್ಲಿ ಸೇರಿಸಿಕೊಳ್ಳುವ ಕೃಪಾನೀತಿಯನ್ನು ಅವಲಂಬಿಸಿತು. ವೈದಿಕಧರ್ಮದಲ್ಲಿ ಮೂರ್ತಿಪೂಜೆಗೆ ಸ್ಥಾನವಿಲ್ಲದಿದ್ದರೂ ಪುರೋಹಿತರು ಬೌದ್ಧರ ಬುದ್ಧಮೂರ್ತಿ ಪೂಜೆಯನ್ನು ಅನುಕರಿಸಿ ದೇಶದಲ್ಲೆಲ್ಲ ಬಗೆಬಗೆಯ ದೇವದೇವಿಯರ ಮೂರ್ತಿಗಳನ್ನು ಸ್ಥಾಪಿಸಿದರು. ಮತ್ತು ಬುದ್ಧನು ವಿಷ್ಣುವಿನ ಒಂದು ಅವತಾರವೆಂದು ಸಾರಿದರು. ವಿಷ್ಣುವಿನ ಅವತಾರವಾದರೂ ಬುದ್ಧನಿಗೆ ಮನ್ನಣೆ ಶೂನ್ಯ. ಪದ್ಮಪುರಾಣದಲ್ಲಿ ಶಿವನು ಪಾರ್ವತಿಗೆ ಹೇಳುತ್ತಾನೆ: "ದೈತ್ಯರ ವಿನಾಶಕ್ಕಾಗಿ ಬುದ್ಧರೂಪನಾದ ವಿಷ್ಣು, ಕ್ಷಪಣಕ ಜೈನ ಮುಂತಾದ ಅಸತ್‌ಶಾಸ್ತ್ರಗಳನ್ನು ನಿರ್ಮಿಸಿದನು." ಕಾಲಕ್ರಮದಲ್ಲಿ ಬೌದ್ಧಧರ್ಮಕ್ಕೆ ಈ ದೇಶದಿಂದ ಅರ್ಧಚಂದ್ರವು ದೊರೆಯಿತು. ಈ ಸಂಧಿಯಲ್ಲಿ ಪುರೋಹಿತರು ತಮಗೆ ಅನುಕೂಲವಾದ ಹಲವು ಕಾರ್ಯಗಳನ್ನು ಮಾಡಿದರು. ಪ್ರಾಚೀನ ಪುರಾಣಗಳಲ್ಲಿ ಹೆಚ್ಚುಕಡಿಮೆ ಮಾಡಿ ವೈದಿಕಧರ್ಮದ ಕೆಲವೊಂದು ವಿಷಯವನ್ನು ಅವಲಂಬಿಸಿ ವ್ಯಾಸರ ಹೆಸರಿನಿಂದ ಹೊಸ ಪುರಾಣಗಳನ್ನು ಬರೆದು ಇಲ್ಲವೆ ಶಿವನ ಹೆಸರಿನಿಂದ ತಂತ್ರಗಳನ್ನು ಬರೆದು ಅಜ್ಞಜನರ ಮನೋರಂಜನೆಯಾಗುವ ದೇವದೇವಿಯರನ್ನೂ ಪೂಜಾದಿಗಳನ್ನೂ ಕಲ್ಪಿಸಿ ತಮ್ಮ ವ್ಯವಸಾಯವು ಲಾಭಪ್ರದವಾಗುವಂತೆ ಮಾಡಿಕೊಂಡರು. ಶ್ರೀಮದ್ಭಾಗವತದಲ್ಲಿ ನಾರದನು ವ್ಯಾಸರನ್ನು ಕುರಿತು ಹೇಳುತ್ತಾನೆ: " ಕಾಮ್ಯಫಲಪ್ರಾಪ್ತಿಗಾಗಿ ನಾಮರೂಪಾದಿಯುಕ್ತ ಕಲ್ಪಿತ ದೇವತೆಗಳ ಪೂಜೆಯಲ್ಲಿ ಜನವನ್ನು ನೀವು ತೊಡಗಿಸಿದಿರಿ. ಜುಗುಪ್ಸಿತ

ಕಾಮ್ಯಕರ್ಮಗಳಲ್ಲಿ ಜನವು ಸ್ವಾಭಾವಿಕವಾಗಿ ಪ್ರೀತಿಯುಳ್ಳುದು. ಆ ತರದ ಕಾಮ್ಯ ಕರ್ಮವನ್ನು ಧರ್ಮವೆಂದು ಉಪದೇಶಿಸಿದುದು ನೀವು ಮಾಡಿದ ಅನ್ಯಾಯವು. ನಿಮ್ಮ ಮಾತನ್ನು ನಂಬಿ ಸಾಮಾನ್ಯಜನವು ಕಾಮ್ಯಕರ್ಮವನ್ನೇ ಧರ್ಮವೆಂದು ಬಗೆಯುವದು. ಯಾವನೊಬ್ಬ ತತ್ವಜ್ಞಾನಿಯು ಅವರಿಗೆ ಈ ಕಾಮ್ಯಕರ್ಮಗಳಲ್ಲಿ ತೊಡಗಬೇಡಿರೆಂದು ಹೇಳಿದರೆ ಅವರು ಆತನ ಮಾತನ್ನು ಒಪ್ಪುವುದಿಲ್ಲ."

—"ಜುಗುಪ್ಸಿತಂ ಧರ್ಮಕೃತೇಽನುಪಾಸತಃ ಸ್ವಭಾವರಕ್ತಸ್ಯ ಮಹಾನ್ ವ್ಯತಿಕ್ರಮಃ।
ಯದ್ವಾಕ್ಯತೋ ಧರ್ಮ ಇತೀತರಃ ಸ್ಥಿತಃ ನ ಮನ್ಯತೇ ತಸ್ಯ ನಿವಾರಣಂ ಜನಃ॥"

ಏನೇ ಇರಲಿ, ಪುರೋಹಿತವರ್ಗವು ತಮ್ಮ ಬುದ್ಧಿಯ ಬಲದಿಂದ ಜನರ ಭಕ್ತಿ ಭಾವನೆಯನ್ನು ಸಾರ್ಥಕಗೊಳಿಸಿ ತನ್ನ ಧ್ಯೇಯವನ್ನು ಸಾಧಿಸಿಕೊಂಡಿತು. ಕುಮಾರಿಲಭಟ್ಟರ ಅವತಾರವು ಮುಗಿಯುವ ಹೊತ್ತಿಗೆ ಶಂಕರಾಚಾರ್ಯರು ಆವಿರ್ಭವಿಸಿದರು. ವೈದಿಕ ಜ್ಞಾನಮಾರ್ಗವನ್ನು ಪ್ರತಿಷ್ಠಿಸುವುದು ಎಂದರೆ ಉಪನಿಷದ್ಗಮ್ಯವಾದ ಬ್ರಹ್ಮಜ್ಞಾನವನ್ನು ಪ್ರಚಾರಗೊಳಿಸುವುದು ಶಂಕರಾಚಾರ್ಯರು ಕೈಕೊಂಡ ಕಾರ್ಯವು. ಅವರು ಕರ್ಮಮಾರ್ಗಕ್ಕೆ ಸಂಪೂರ್ಣ ವಿರೋಧಿಗಳಲ್ಲ. ಚಿತ್ತಶುದ್ಧಿಗೆ ಸಹಾಯಕವಾಗದ ಕರ್ಮಕ್ಕಷ್ಟೇ ಅವರು ವಿರೋಧಿಗಳು. "ಚಿತ್ತಸ್ಯ ಶುದ್ಧಯೇ ಕರ್ಮ." ಚಿತ್ತಶುದ್ಧಿಯನ್ನು ಸಾಧಿಸಿ ಜ್ಞಾನಸಪ್ರಾಪ್ತಿಗೆ ಸಹಾಯವಾಗುವುದನ್ನು ಳಿದು ಕರ್ಮಕ್ಕೆ ಸ್ವತಂತ್ರ ಪ್ರಯೋಜನವೇನೂ ಇಲ್ಲ ಎಂದು ಅವರು ಹೇಳಿದರು. ಐಹಿಕ ಪಾರತ್ರಿಕ ಸುಖಪ್ರಾಪ್ತಿಗಾಗಿ ಮಾಡುವ ಕಾಮ್ಯಕರ್ಮಕ್ಕೆ ಮಾತ್ರ ಅವರು ಕಡುತರ ಹಗೆಗಳು. ಇಷ್ಟೇ ಕಾರಣದಿಂದಲೇ ಕರ್ಮವಾದಿಗಳು ಶಂಕರಾಚಾರ್ಯರನ್ನು ಪ್ರಚ್ಛನ್ನಬೌದ್ಧರೆಂದು ನಿಂದಿಸಿದುದುಂಟು. ಪದ್ಮಪುರಾಣದಲ್ಲಿ ಶಿವನು ಪಾರ್ವತಿಗೆ ಶಂಕರಾಚಾರ್ಯರು ಪ್ರಚಾರಗೊಳಿಸಿದ ಅದ್ವೈತಮತ, ನೈಷ್ಕರ್ಮ್ಯ ಮತ, ಮಾಯಾವಾದ, ಇವುಗಳನ್ನು ಕುರಿತು ಹೇಳುತ್ತಾನೆ: ದೇವೀ, ಕಲಿಕಾಲದಲ್ಲಿ ನಾನೇ (ಶಂಕರಾಚಾರ್ಯ), ಬ್ರಾಹ್ಮಣರೂಪದಿಂದ ಮಾಯಾವಾದವೆಂಬ ಪ್ರಚ್ಛನ್ನ ಬೌದ್ಧ ಅಸತ್‌ಶಾಸ್ತ್ರವನ್ನು ಪ್ರಸಾರಗೊಳಿಸಿದ್ದೇನೆ. ನಾನು ಅದರಲ್ಲಿ ಶ್ರುತಿವಾಕ್ಯಗಳಿಗೆ ಲೋಕನಿಂದಿತವಾದ ಅಯಥಾರ್ಥವನ್ನು ತೋರ್ಪಡಿಸಿದ್ದೇನೆ. ಕರ್ಮವನ್ನು ಸಂಪೂರ್ಣವಾಗಿ ಬಿಡಬೇಕೆಂದು ಹೇಳಿದ್ದೇನೆ. ಸರ್ವಕರ್ಮ ಪರಿಭ್ರಷ್ಟನಾದವನಿಗೆ ನೈಷ್ಕರ್ಮ್ಯಲಾಭವನ್ನೂ, ಜೀವಾತ್ಮ ಪರಮಾತ್ಮರ ಏಕತ್ವವನ್ನೂ ಮತ್ತು ಪರಬ್ರಹ್ಮನ ನಿರ್ಗುಣತ್ವವನ್ನೂ ಪ್ರತಿಪಾದಿಸಿದ್ದೇನೆ. ಮೇಲೆ ಮೇಲೆ ನೋಡಿದರೆ ವೇದಾರ್ಥಕ್ಕೆ ಅನುಸರಿಸಿದ್ದೆಂದು ತೋರಿ ನಿಜವಾಗಿ ಆ ವೈದಿಕವಾದ ಮಾಯಾವಾದ ರೂಪ ಮಹಾಶಾಸ್ತ್ರವನ್ನು ಸಮಸ್ತ ಲೋಕದ ವಿನಾಶಕ್ಕಾಗಿ ಕಲಿಕಾಲದಲ್ಲಿ ನಾನೇ

ಪ್ರಸಾರಗೊಳಿಸಿದ್ದೇನೆ.'' ಈ ವಚನಗಳಿಂದ ಪದ್ಮಪುರಾಣವು ಎಷ್ಟು ಅರ್ವಾಚೀನ ವೆಂಬುದು ಮಾತ್ರ ಸಿದ್ಧವಾಗುವುದು.

ಈ ವರೆಗೆ ಶ್ರೌತ ಸ್ಮಾರ್ತ ಕರ್ಮಗಳ ಕಾಲಕ್ರಮಾನುಗತವಾದ ಇತಿಹಾಸ ವನ್ನು ಹೇಳಿದೆವು. ಶ್ರೌತಕರ್ಮವು ಬಹುಕಾಲದಿಂದ ಲುಪ್ತಪ್ರಾಯವಾಗಿದೆಯೆಂದು ಹೇಳಬಹುದು. ಸ್ಮಾರ್ತಕರ್ಮವು ಹೇಗೋ ಬದುಕಿದೆ. ಮನುಸ್ಮೃತಿಯಲ್ಲಿ ವೇದೋ ಖಿಲೋ ಧರ್ಮಮೂಲಃ (೨-೬) ವೇದವು ಧರ್ಮಕರ್ಮಗಳ ಮೂಲವು, ಎಂದು ಹೇಳಿದೆ. ಸ್ಮೃತಿಗಳಿಗೂ ವೇದವೇ ಮೂಲವು—ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ (೨-೧೩), ಇದಕ್ಕೆ ಟೀಕಾಕಾರರಾದ ಕಲ್ಲೂಕ ಭಟ್ಟರು ವಿವರಣೆ ಮಾಡಿರುತ್ತಾರೆ: ಶ್ರುತಿ ಮತ್ತು ಸ್ಮೃತಿ ಇವುಗಳ ಅರ್ಥದಲ್ಲಿ ವಿರೋಧವು ಕಂಡುಬಂದಲ್ಲಿ ಸ್ಮೃತಿಯ ಅರ್ಥವು ಗ್ರಾಹ್ಯವಲ್ಲ. ಜಾಬಾಲಋಷಿ ಹೇಳುವುದೇನೆಂದರೆ: "ಶ್ರುತಿಸ್ಮೃತಿವಿರೋಧೇ ತು ಶ್ರುತಿರೇವ ಗರೀಯಸೀ" ಮತ್ತು "ವಿರೋಧೇತ್ವನಪೇಕ್ಷ್ಯಂ ಸ್ಯಾತ್ ಅಸತಿ ಹ್ಯನುಮಾನಂ'' ಎಂಬ ಜೈಮಿನಿ ಮತವನ್ನೂ ಆತನು ಆಧಾರವಾಗಿ ಕೊಟ್ಟಿದ್ದಾನೆ. ಈ ವಿಷಯದಲ್ಲಿ ಶ್ರುತಿಯು ಮೌನವನ್ನವಲಂಬಿಸಿದೆ. ಆದರೂ ಅದು ಅಪೌರುಷೇಯ; ಪ್ರತ್ಯಕ್ಷಜ್ಞಾನದಂತೆ ಭ್ರಾಂತಿಶೂನ್ಯವಾದ ಈಶ್ವರವಾಣಿ. ಆದರೆ ಸ್ಮೃತಿಗೆ ಈ ಗೌರವವಿಲ್ಲ. ಅದು ಅನುಮಾನಪ್ರಮಾಣದಂತೆ. ಬೇರೆ ಅನುಮಾನಗಳನ್ನು ನಾವು ಪರೀಕ್ಷಿಸುವಂತೆ ಸ್ಮೃತಿಯೂ ಪರೀಕ್ಷಾಪೇಕ್ಷವಾದದ್ದು. ರೂಪಾಯಿಯನ್ನು ಬಾರಿಸಿ ಹಿಡಿಯು ವಂತೆ ಸ್ಮೃತಿವಚನವನ್ನೂ ಬಾರಿಸಿ (ಪರೀಕ್ಷಿಸಿ) ಹಿಡಿಯಬೇಕು. ಸ್ವತಃಪ್ರಮಾಣತೆ ಶ್ರುತಿಯೊಂದಕ್ಕೆ ಮಾತ್ರ. ಉದಾಹರಣೆಗಾಗಿ ಮನುಸ್ಮೃತಿಯಲ್ಲಿ—"ನ ಶೂದ್ರಾಯ ಮತಿಂ ದದ್ಯಾತ್'' ಎಂಬ ವಚನವಿದೆ. ಈ ನಿಷೇಧಕ್ಕೆ ಶ್ರುತಿಯಲ್ಲಿ ಆಧಾರವಿಲ್ಲ. ಶ್ರುತಿಯು ಈಶ್ವರವಾಣಿಯಾಗಿರುವಾಗ ಅದರಲ್ಲಿ ಈ ತರದ ಶೂದ್ರವಿದ್ವೇಷವು ಇರಲಾರದು. ಮನು ಬೇಕಾದಷ್ಟು ಪ್ರಾಚೀನನಾದರೂ ವೇದದೃಷ್ಟಿಯಿಂದ ಅರ್ವಾ ಚೀನನು. ಯಾವನೊಬ್ಬ ಶೂದ್ರದ್ವೇಷಿಯು ಮನುವಿನ ವಾಣಿಯೆಂದು ಈ ಮಾತನ್ನು ಸೇರ್ಪಡೆಮಾಡಿರಬಹುದೋ ಏನೋ! ಆದುದರಿಂದ "ನ ಶೂದ್ರಾಯ . . ." ಎಂಬ ವಚನವು ಪ್ರಮಾಣವೆನಿಸಲಾರದು.

ಶ್ರುತ್ಯುಕ್ತ ಯಜ್ಞಾದಿಕರ್ಮ, ಸ್ಮೃತ್ಯುಕ್ತ ವ್ರತಪೂಜಾದಿಕರ್ಮ, ಇವಕ್ಕೆಲ್ಲ ಚಿತ್ತಶುದ್ಧಿಯೇ ಪ್ರಯೋಜನವೆಂದು ಹೇಳಬಹುದು. ಚಿತ್ತಶುದ್ಧಿಯನ್ನು ಮಾಡುವ ಕರ್ಮವು ನಿಜವಾದ ಕರ್ಮವು; ಅದೇ ಆಚರಣೀಯವು. ವಾಪೀತಟಾಗಖನನ, ಜ್ಞಾನದಾನ ಮುಂತಾದ ಕರ್ಮಗಳಿಂದ ಚಿತ್ತಶುದ್ಧಿಯಾಗುವುದು; ಮನುಷ್ಯರನ್ನು

ಪ್ರೀತಿಸುವುದು, ಮನ್ನಿಸುವುದು, ಇವುಗಳಿಂದ ಚಿತ್ತಶುದ್ಧಿಯಾಗುವುದು; ಆದುದರಿ
ಅವು ನಿಜವಾದ ಕರ್ಮಗಳು. ಈಶ್ವರನಿಗೆ ಭಕ್ತಿಕೃತಜ್ಞತೆಗಳನ್ನು ತೋರ್ಪಡಿಸುವುದು,
ಆತನ ಸೇವೆಯೆಂದು ಆತನು ಸೃಜಿಸಿದ ಮಾನವಜಾತಿಯ ಸೇವೆಮಾಡುವುದು ಇ
ಆತನಿಗೆ ಪ್ರಿಯವೆನಿಸುವ ಕರ್ಮಗಳು. ಇವು ಚಿತ್ತಶುದ್ಧಿಕರವಾದುದರಿಂದ ನಿಜವಾ
ಕರ್ಮಗಳು. "ತಸ್ಮಿನ್ ಪ್ರೀತಿಃ ತಸ್ಯ ಪ್ರಿಯಸಾಧನಂ ಚ" ಎಂಬುದಿಷ್ಟೇ ಅಲ್ಲ
ಧರ್ಮರಹಸ್ಯವು? ಕರ್ಮದ ಮೂಲವೂ ಇದೇ. "ಶುಚಿರ್ದ್ವಿಜೋऽಹಂ ಕೃಷ್ಣ
ವ್ರಜೇತಿ" ಈ ತರದ ಅಭಿಮಾನದಿಂದ ಇತರರನ್ನು ಹಿಯ್ಯಾಳಿಸುವುದರಿಂದ ಚಿತ್ತ
ಅಶುದ್ಧವಾಗುವುದು; ಆದುದರಿಂದ ಅದು ಕುಕರ್ಮವು.

ಉದಾತ್ತದೃಷ್ಟಿಯಲ್ಲಿ ವೈದಿಕಕರ್ಮ ಲೌಕಿಕಕರ್ಮ ಇವುಗಳಲ್ಲಿ ಭೇದ
ಅಡಗುವದು. ಇದೇ ಕರ್ಮದ ಸಾರವು—ರಹಸ್ಯವು.*

ಮಹಾದೇವ ಪ್ರ. ಪೂಜಾರ್.

---

* ಶ್ರೀ. ದ್ವಿಜದಾಸದತ್ತರವರ ವಂಗಲೇಖನದ ಅವಲಂಬನದಿಂದ.

ವಿಶಾಲಾಕ್ಷಿಯ ಕಾಗದಗಳು

೧

ವೆಂಕು,

ನಾನು ಹೊರಟುಬರುವಾಗ ಕಾಗದ ಬರೆಯುತ್ತೇನೆಂದು ಹೇಳಿದ್ದೆ; ಅಲ್ಲದೆ, ನನಗೆ ಇಲ್ಲಿ ಇನ್ನೂ ಯಾರೂ ಗುರುತಿಲ್ಲ. ಅದಕ್ಕೋಸ್ಕರವೇ ಈ ಕಾಗದ ಬರೆಯುತ್ತಿದ್ದೇನೆ.

ನಾವು ಈ ಊರಿಗೆ ಸುಖವಾಗಿ ಬಂದು ತಲಪಿದೆವು. ಇನ್ನೇನು ಬರೆಯಬೇಕೋ ನನಗೆ ತಿಳಿಯದು. ಏನಾದರೂ ವಿಶೇಷವಿದ್ದರೆ ಕಾಗದ ಬರೆಯುತ್ತೇನೆ. ನಮ್ಮೂರಿನಲ್ಲೂ ಏನಾದರೂ ಹೊಸ ವಿಷಯವಿದ್ದರೆ ಬರಿ.

ಇಂತು ನಿನ್ನ ಗೆಳತಿ

೨

ವೆಂಕು,

ನಿನ್ನ ಕಾಗದ ನೋಡಿ ನಮ್ಮ ಹಿಂದಿನ ಸ್ನೇಹ ಜ್ಞಾಪಕಕ್ಕೆ ಬಂತು. ನೀನು ಬರೆದಿರುವೆ, "ನಾನು ನಿನ್ನನ್ನು ಬಿಟ್ಟು ಬೇರೆ ಯಾರ ಜೊತೆಯನ್ನೂ ಸೇರುತ್ತಿರಲಿಲ್ಲ. ಈಗ ನೀನೂ ಇಲ್ಲ. ಏನಾದರೂ ಬರೆದರೂ ಸರಿಯೆ, ಇಲ್ಲದಿದ್ದರೂ ಸರಿಯೆ, ಸುಮ್ಮನೆಯಾದರೂ ಒಂದು ಕಾಗದ ಬಂದರೆ ನನಗೆಷ್ಟೋ ಸಂತೋಷ'' ಎಂದು.

ಆಗಲಿ; ನೀನು ಹೇಳಿದಂತೆಯೇ ಕಾಗದ ಬರೆಯುತ್ತೇನೆ. ಬರೆದ ಕಾಗದಗಳನ್ನು ಮಾತ್ರ ನೀನು ಯಾರಿಗೂ ತೋರಿಸಕೂಡದು. ನಾನು ನಿನಗೇನೇನು ಬರೆಯಬೇಕೆಂದು ಮನಸ್ಸಿನಲ್ಲಿ ಯೋಚಿಸಿಕೊಳ್ಳುತ್ತೇನೋ ಅದನ್ನೇ ಇನ್ನೊಂದು ಸಲ ನೆನೆಸಿಕೊಂಡರೆ ನನಗೆ ನಾಚಿಕೆಯಾಗುತ್ತದೆ. ಆದರೆ ಅದೆಲ್ಲವನ್ನೂ ನಿನಗೆ ಬರೆಯದೆ ಹೋದರೆ ನನ್ನ ಮನಸ್ಸಿಗೆ ಸಮಾಧಾನವಿರುವುದಿಲ್ಲವೆಂದು ಕಾಣುತ್ತದೆ.

'ಅವರನ್ನು' ಕಂಡರೆ ನನಗೇನೋ ಒಂದು ತರದ ಮಿತಿಮೀರಿದ ಪ್ರೇಮ. ಯಾವಾಗಲೂ ಜೊತೆಯಲ್ಲೇ ಇರಬೇಕು, 'ಅವರನ್ನು' ನೋಡುತ್ತಿರಬೇಕು, ಅವರು ಮಾತಾಡುವುದನ್ನೇ ಕೇಳುತ್ತಿರಬೇಕು, ಎನ್ನಿಸುತ್ತದೆ. ಆದರೆ ಅದು ಸಾಧ್ಯವಿಲ್ಲ. ಏನೋ ಒಂದು ಬಗೆಯ ನಾಚಿಕೆ. ಅವರು ಬಂದ ಕೂಡಲೆ ನಮ್ಮ ಅತ್ತೆಯ ಹಿಂದೆ ಹೋಗಿ ನಿಂತುಕೊಂಡು ಬಿಡುತ್ತೇನೆ. ಅವರು ನನ್ನ ಕಡೆ ನೋಡುತ್ತಿದ್ದರೆ, ನನ್ನನ್ನೇ

ನೋಡುತ್ತಿದ್ದಾರೆಂದು ನನಗೆ ತಿಳಿದರೆ, ಆಕಡೆ ತಿರುಗಿ ನೋಡಲು ಕೂಡ ಆಗುವುದಿಲ್ಲ. ಏನು ಮಾಡಲಿ? ನಾನೊಬ್ಬಳೆ ಇದ್ದಾಗ "ಧೈರ್ಯವಾಗಿರಬೇಕು, ಅವರು ಯಾ... ದೂರದವರೆ? ಅವರೊಬ್ಬರಿದ್ದಾಗ ಕೂಡ ಏಕೆ ಈ ನಾಚಿಕೆ? ಮುಂದೆಯಾದ... ಸರಿಯಾಗಿರಬೇಕು" ಎಂದುಕೊಂಡು ಮಾಡಿದ್ದಕ್ಕೆಲ್ಲ ಸಂಕಟಪಟ್ಟುಕೊಳ್ಳುತ್ತೇನೆ. ಮುಂದೆ ಹಾಗಿರಬಾರದು, ಸರಿಯಾಗಿರಬೇಕೆಂದು ನಿಶ್ಚಯಿಸಿಕೊಳ್ಳುತ್ತೇನೆ. ಆದ... ಇಷ್ಟೆಲ್ಲ ಗಟ್ಟಿಮಾಡಿಕೊಂಡ ಮನಸ್ಸು ಅವರನ್ನು ನೋಡಿದೊಡನೆಯೇ ಏನೇನೋ ಆಗಿ ಹೋಗುತ್ತದೆ. ಇದಕ್ಕೇನು ಮಾಡಬೇಕೋ ತಿಳಿಯದು.

ಖಂಡಿತ ಈ ಕಾಗದ ಯಾರಿಗೂ ತೋರಿಸಬೇಡ, ಕಂಡೆಯಾ?

ಇಂತು ನಿನ್ನ ಪ್ರೀತಿಯ ಗೆಳತಿ.

೩

ವೆಂಕು,

'ನಿನ್ನ ಕಾಗದ ಓದಿಕೊಂಡೆ. ಯಾರಿಗೂ ತೋರಿಸುವುದಿಲ್ಲ. ನಿನ್ನ ಕಾಗ... ಓದಿದರೆ ನನಗೂ ಒಂದು ಬಗೆಯ ಆನಂದವಾಗುತ್ತದೆ' ಎಂದು ನೀನು ಬರೆದಿರು... ಈಗ ಎರಡು ದಿನಗಳ ಹಿಂದೆ ನಡೆದ ಒಂದು ವಿಷಯ ಹೇಳಬೇಕೆನ್ನಿಸುತ್ತದೆ.

ನಾನು ಹಜಾರದಲ್ಲಿ ಒಬ್ಬಳೇ ನಿಂತಿದ್ದೆ. ಅತ್ತೆಮ್ಮನವರು ನೀರು ತರ... ಹೋಗಿದ್ದರು. ಮಾವನವರು ಎಲ್ಲೋ ಮನೆಯಲ್ಲಿರಲಿಲ್ಲ. 'ಅವರು' ಬಂದರು. 'ಅವರು' ಎಂದರೆ ಯಾರು ಎಂದು ಕೇಳಿದ್ದೀಯೆ! ನಿನಗೆ ತಿಳಿಯದೊ ಅವ... ಎಂದರೆ ಯಾರು ಎಂದು? ಇಲ್ಲ, ನನ್ನನ್ನು ಹಾಸ್ಯಮಾಡುವೆಯೋ?

ಇದನ್ನಿಷ್ಟಕ್ಕೇ ಬಿಡು. ಅವರು ಬಂದರು. ಬಂದದ್ದು ನನಗೆ ಗೊತ್ತಾಗಲಿಲ್ಲ. ಬಂದವರು ಮೆಲ್ಲನೆ ನನ್ನ ಹಿಂದೆ ಬಂದು ನನ್ನ ಎರಡು ಭುಜದ ಮೇಲೂ ತಮ್ಮೆರಡು ಕೈಗಳನ್ನಿಟ್ಟರು. ಬೆಚ್ಚಿಬಿದ್ದೆ. ಹಿಂತಿರುಗಿ ನೋಡಿದೆ; ನಗುತ್ತಾ ನಿಂತಿದ್ದರು ಅವರು.

"ಏಕೆ? ಹೆದರಿಕೊಂಡೆಯಾ?" ಎಂದು ಕೇಳಿದರು.

"ಇಲ್ಲ" ಎನ್ನುವಂತೆ ತಲೆಯಲ್ಲಾಡಿಸಿದೆ.

"ಮತ್ತೆ ಏತಕ್ಕೆ ನನ್ನೊಡನೆ ಮಾತಾಡುವುದಿಲ್ಲ? ಒಂದು ಘಳಿಗೆಯೂ ನನ್ನೊಡನೆ ಇರುವುದಿಲ್ಲ?"

ನಾನು ಮಾತನಾಡಲಿಲ್ಲ. ನನ್ನ ಬಲಗೈಯನ್ನು ತಮ್ಮ ಎರಡು ಕೈಗಳಲ್ಲಿ ಮುಚ್ಚಿ ಹಿಡಿದುಕೊಂಡರು; ಮೆಲ್ಲಗೆ ಒತ್ತಿದರು. ನನಗೆ ಏನೋ ಒಂದು ಬಗೆಯ ಸಂತೋಷ; ಒಂದು ಬಗೆಯ ಹೆದರಿಕೆ; ಮುಖವೆಲ್ಲ ಬೆವತು ಕೆಂಪಗಾಗಿರಬೇಕೆಂದು ಕಾಣುತ್ತದೆ.

"ಹೋಗಲಿ, ಇನ್ನು ಮೇಲೆ ಹೀಗೆ ಮಾಡಬೇಡ. ಮಧ್ಯಾಹ್ನ, ಊಟವಾದ ಮೇಲೆ ನನ್ನ ರೂಮಿಗೆ ಬಂದು ಅರ್ಧ ಘಂಟೆಯಾದರೂ ನನ್ನೊಡನೆ ಇರಬೇಕು. ಏನು ಹೇಳು!" ಎಂದರು.

"ಹು" ಎಂದೆ.

ಹೊರಗೆ ನಮ್ಮ ಅತ್ತೆ ಬಂದ ಸದ್ದಾಯಿತು. ಅವರು ರೂಮಿಗೆ ಹೊರಟು ಹೋದರು. ನಾನು ಅತ್ತೆಯವರನ್ನು ನೋಡಲು ಹೊರಗೆ ಬಂದೆ.

ಇಂತು ನಿನ್ನ ಗೆಳತಿ.

೪

ವೆಂಕು,

ಏನೇ, ನನ್ನನ್ನೊಳ್ಳೆ ಇರುಕಿಗೆ ಸಿಕ್ಕಿಸಿಕೊಂಡೆ? ಅಂದು ಬಾಗಿಲು ತಡೆದಾಗ ಹೆಸರು ಹೇಳಿದ್ದನ್ನು ಕೇಳಿದ್ದು ಸಾಲದೆ? ಮತ್ತೆ ಹೇಳಬೇಕೆ? ಅದು ಮಾತ್ರ ನನ್ನ ಕೈಯಲಾಗದಮ್ಮ.

"ಅವರು ಯಾರು? ನನ್ನಾಣೆಗೂ ಹೇಳಬೇಕು" ಎಂದು ಬರೆದಿರುವೆ. ಹೇಗೆ ಹೇಳಲಿ? ಆಗಲಿ ಹೇಳುತ್ತೇನೆ. ನಾನು ನಮ್ಮ ಮನೆಯಲ್ಲಿ ಯಾರಾರಿದ್ದಾರೆಂದು ನಿನಗೆ ಹೇಳಿದ್ದೇನಲ್ಲವೆ? ಆದ್ದರಿಂದ ನಿನಗೆ ಗೊತ್ತಿದೆ ನಮ್ಮ ಮನೆಯಲ್ಲಿ ಯಾರು ಯಾರಿದ್ದಾರೆಂದು. ಅವರು ಎಂದರೆ ನಮ್ಮ ಮಾವನವರಲ್ಲ, ಅತ್ತೆಯವರಲ್ಲ, ನಾದಿನಿಯಲ್ಲ. ಉಳಿದವರು ಯಾರೋ ಅವರು. ಯಾರು ಎನ್ನುವುದು ಗೊತ್ತಾಯಿತೋ ಈಗ?

ನಮ್ಮ ಮಾವನವರು ಇವತ್ತು ಬೆಳಗ್ಗೆ ಯಾರೋ ಶಾಸ್ತ್ರಿಗಳೊಡನೆ ಮಾತಾಡುತ್ತಿದ್ದರು. ನಾನು ನಡುಮನೆಯಲ್ಲಿ ನಿಂತಿದ್ದೆ. "ದೇವರನ್ನು ನಾವು ಹಾಗೆ ಹೀಗೆ— ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ನಾವು 'ಓಂ—ತತ್'—'ಅದು' ಎಂದು ಕರೆಯುವುದು" ಎಂದು ಶಾಸ್ತ್ರಿಗಳು ಹೇಳಿದರು. 'ಅವರು' ಎನ್ನುವುದೂ ಹಾಗೆಯೇ ಎಂದು ನನ್ನ ಭಾವನೆ.

ಇಂತು ನಿನ್ನ ಗೆಳತಿ.

೫

ವೆಂಕು,

ನನ್ನ ಹಿಂದಿನ ಕಾಗದದಲ್ಲಿ "ನಾನು ನಿತ್ಯವೂ ಅವರ ರೂಮಿನಲ್ಲಿ ಅರ್ಧ ಘಂಟೆ ಕಳೆಯುವಂತೆ ನಿರ್ಧರವಾದದ್ದನ್ನು ಬರೆದಿದ್ದೆ. ಅದು ಹಾಗೆಯೇ ನಡೆಯುತ್ತಿದೆ. ಅವರು ನನ್ನನ್ನು ಮಾತಾಡಿಸಬೇಕೆಂದು ಏನೇನೋ ಪ್ರಶ್ನೆ ಕೇಳುತ್ತಾರೆ. ಅದಕ್ಕೆಲ್ಲ

'ಉಂಟು' 'ಇಲ್ಲ' ಎಂಬ ಅರ್ಥ ಬರುವಂತೆ ತಲೆಯುಲ್ಲಾಡಿಸಿಬಿಡುತ್ತೇನೆ. ಹೆಚ್ಚೆಂದರೆ 'ಹು' 'ಉಹು' ಎಂದುಬಿಡುತ್ತೇನೆ.

ಆದರೆ ನೆನ್ನೆ ಒಂದು ವಿಷಯ ನಡೆಯಿತು. ಹೇಳಲೋ? ಬೇಡವೋ? ಆಗಲಿ ಹೇಳಿಯೇಬಿಡುತ್ತೇನೆ. ನೀನು ನಗುತ್ತೀಯೇನೋ! ನಕ್ಕರೂ ಚಿಂತೆಯಿಲ್ಲ. ನಿನಗಲ್ಲದೆ ಇನ್ನಾರಿಗೆ ಹೇಳಲಿ?

ನೆನ್ನೆ ಎಂದಿಗಿಂತ ಸ್ವಲ್ಪ ನಿಧಾನವಾಗಿ ರೂಮಿಗೆ ಹೋದೆ. ಅರ್ಧ ಘಂಟೆಯಷ್ಟು ನಿಧಾನವಾಗಿರಬಹುದು. ಅವರು ನಾನು ಬರುವುದಿಲ್ಲವೆಂದು ನಿದ್ದೆಹೋಗಿರಬೇಕು. ಇಲ್ಲ, ನಿದ್ದೆ ಬಂದವರಂತೆ ಮಲಗಿದ್ದಿರಬೇಕು. ನಾನು ಮೆಲ್ಲಗೆ ಹೋದೆ. ಮಂಚದ ಹತ್ತಿರ ನಿಂತುಕೊಂಡೆ. ನಾನು ಬಂದದ್ದು ಗೊತ್ತಾಗಲೆಂದು ಸ್ವಲ್ಪ ಸದ್ದುಮಾಡಿದೆ. ಒಂದು ಸಲ ನಕ್ಕೆ. ಆದರೆ ಗೋಡೆ ಕಡೆಗೆ ಮುಖಮಾಡಿಕೊಂಡಿದ್ದ ಅವರು ನನ್ನ ಕಡೆಗೆ ತಿರುಗಿ ನೋಡಲೇ ಇಲ್ಲ. ಅವರು ಓದುತ್ತಿದ್ದ ಪುಸ್ತಕವು ಎಲ್ಲಿಯವರೆಗೆ ಓದಿದ್ದರೋ ಅದೇ ಪೇಜಿನಲ್ಲಿ ತೆರೆದುಕೊಂಡು ಬೋರಲಾಗಿ ಅವರ ಎದೆಯ ಮೇಲಿತ್ತು. ಆ ಪುಸ್ತಕವನ್ನು ಮೆತ್ತಗೆ ತೆಗೆದುಕೊಂಡೆ. ಆದರೂ ಅವರಿಗೆ ಎಚ್ಚರ ವಾದಂತೆ ಕಾಣಲಿಲ್ಲ. ನಿಜವಾಗಿಯೂ ನಿದ್ದೆ ಬಂದಿರಬೇಕೆಂದು ಭಾವಿಸಿದೆ. ವೆಂಕು, ನಿನಗೆ ಗೊತ್ತೇ, ಅವರು ನನ್ನನ್ನು ನೋಡುತ್ತಿದ್ದಾಗ ಅವರನ್ನು ನಾನು ನೋಡ ಲಾಗುವುದಿಲ್ಲವೆಂದು? ಆದರೆ ಈಗ ಅವರಿಗೆ ನಿದ್ದೆ ಬಂದಿದೆಯೆಂದು ಗೊತ್ತಾಗಲು ಸ್ವಲ್ಪ ಹೊತ್ತು ಹಾಗೆಯೇ ನೋಡುತ್ತಾ ನಿಂತುಕೊಂಡೆ. ನಾನು ಎಂದೂ ಅವರನ್ನು ದೃಷ್ಟಿಸಿ ನೋಡಿರಲಿಲ್ಲ.

ವೆಂಕೂ, ಅವರು ಎಷ್ಟು ಚೆನ್ನಾಗಿದ್ದಾರೆ! ಆ ಕ್ರಾಪು, ಆ ಕಣ್ಣುಗಳು, ಆ ತುಟಿಗಳು, ನೋಡಲು ಎರಡು ಕಣ್ಣು ಸಾಲದು ಎನ್ನಿಸಿತು. ನನ್ನನ್ನು ನಾನೇ ಮರೆತೆನೆಂದು ಕಾಣುತ್ತದೆ. ನನಗೋಸ್ಕರವೆ ಕುಳಿತುಕೊಳ್ಳಲು ಜಾಗ ಬಿಟ್ಟಿರುವಂತೆ ಮಂಚದ ಅಂಚಿನಲ್ಲಿ ಜಾಗವಿತ್ತು. ಅಲ್ಲಿ ಕುಳಿತುಕೊಂಡೆ. ಮುಂದಕ್ಕೆ ಬಾಗಿ ಎರಡು ಕೈಗಳಿಂದಲೂ ಅವರ ಮುಖವನ್ನು ಹಿಡಿದುಕೊಂಡು ಒಂದುಬಾರಿ ಮುತ್ತಿಟ್ಟೆ. ಇದ್ದಕ್ಕಿದ್ದ ಹಾಗೆಯೇ ಅವರ ತುಟಿಗಳ ಮೇಲೆ ನಗು ಸುಳಿಯಿತು. ಕಣ್ಣು ಬಿಟ್ಟರು. ನಿದ್ದೆಮಾಡುತ್ತಿದ್ದ ಗುರುತು ಒಂದೂ ಇರಲಿಲ್ಲ. ಮೋಸಹೋದದ್ದು ಗೊತ್ತಾಯಿತು. ತಲೆ ಬಗ್ಗಿಸಿಕೊಂಡೆ. ಮೈಯೆಲ್ಲ ನಡುಗಿ ಬೆವತುಹೋಯಿತು.

ವೆಂಕು, ನಾವು ಮಾಡಿದ ಯಾವ ಒಂದು ಒಳ್ಳೆಯ ಕೆಲಸವೂ ಮುಂದೆ ಫಲಿಸುವುದೆಂದು ಹೇಳುತ್ತಾರೆ. ಆದರೆ ಅಂದು ನಾನು ಮಾಡಿದ ಕೆಲಸಕ್ಕೆ ಮಾತ್ರ ತಕ್ಷಣವೇ ಹತ್ತಾಗಿ ನೂರಾಗಿ ಫಲ ದೊರೆಯಿತು.

ನೀನು ಈ ಕಾಗದ ಓದುತ್ತಲೂ ಬಿದ್ದುಬಿದ್ದು ನಗಬಹುದು. ನಾನು ಅಲ್ಲಿಗೆ ಬಂದಾಗ ಹಾಸ್ಯಮಾಡಬಹುದು. ಚಿಂತೆಯಿಲ್ಲ. ಈ ಸಂತೋಷವನ್ನು ನಾನೊಬ್ಬಳೇ ತಡೆಯಲಾರೆ. ಈಗ ನಿನಗೆ ಹೇಳಿದುದರಿಂದ ಅರ್ಧ ಸಮಾಧಾನವಾಯಿತು. ಈಗ ಕಾಗದ ಬರೆಯುತ್ತಿದ್ದರೆ, ನನ್ನ ಎದೆಯು ಡವಗುಟ್ಟುತಿದ್ದುದು ನನಗೇ ಕೇಳಿಸುತ್ತಿತ್ತು. ಅದು ಏಕೋ ಕಾಣೆ.

ನಾನು ನಿನ್ನನ್ನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ನನ್ನಾಣೆಗೂ ಖಂಡಿತ ಯಾರಿಗೂ ಈ ಕಾಗದಗಳನ್ನು ತೋರಿಸಬೇಡ.

ಇಂತು ನಿನ್ನವಳು.

೬

ವೆಂಕು,

ನಿನ್ನ ಕಾಗದ ನೋಡಿದ ಮೇಲೆ, ನೀನು ಯಾರಿಗೂ ತೋರಿಸುವುದಿಲ್ಲವೆಂದು ಬರೆದದ್ದನ್ನು ಓದಿದ ಮೇಲೆ, ಸಮಾಧಾನವಾಯಿತು. ಆದರೆ ಒಂದು ತರದ ಸಂಕಟ ವಾಯಿತು. ನನ್ನ ಸಂತೋಷದಲ್ಲಿ ನಿನ್ನ ಸ್ಥಿತಿಯನ್ನು ಯೋಚನೆಮಾಡದೆ ಹೀಗೆಲ್ಲ ಬರೆದದ್ದು ಸರಿಯಲ್ಲ. ನನಗೆ ಏನೂ ತೋಚದೆಹೋಯಿತು. ಯಾರಿಗಾದರೂ ನನ್ನ ಸಂತೋಷವನ್ನು ಹೇಳಿಕೊಳ್ಳಬೇಕೆನ್ನಿಸಿತು. ಹಾಗೆ ಮಾಡುವುದರಿಂದ ನಿನಗೆ ನೋವುಂಟಾಗುವುದೆಂದು ಮಾತ್ರ ಯೋಚನೆಮಾಡದೆ ಎಂತಹ ತಪ್ಪುಮಾಡಿದೆ! ನನ್ನ ವಿಷಯ ಮಾತ್ರ ಯೋಚಿಸಿದೆನೇ ಹೊರತು ಮತ್ತೊಬ್ಬರ ವಿಷಯ ಯೋಚಿಸದೆ ಹೋದೆ. ಮನಸ್ಸಿಗೆ ಏನೂ ತಿಳಿದುಕೊಳ್ಳಬೇಡ. ಇನ್ನುಮೇಲೆ ಕಾಗದ ಬರೆಯುವಾಗ ಕೊಂಚ ಹುಷಾರಾಗಿ ಬರೆಯುತ್ತೇನೆ. ಈ ಸಲ ತಪ್ಪುಮಾಡಿದ್ದಕ್ಕೆ ಕ್ಷಮಿಸು.

ನಿನ್ನ ಕಾಗದದಲ್ಲಿ ಒಂದೆರಡು ಅಕ್ಷರಗಳು ಕಲಸಿಹೋಗಿದ್ದುದನ್ನು ನೋಡಿದೆ. ನೋಡಿದಾಗ ನನಗೆ ಬಹಳ ಸಂಕಟವಾಯಿತು. ನನ್ನ ಕಾಗದ ಓದುವಾಗಲೂ ನನಗೆ ಬರೆಯುವಾಗಲೂ ನೀನು ಬಹಳ ಅತ್ತಿರಬೇಕೆಂದೆನ್ನಿಸಿತು. ಇನ್ನೊಂದು ಬಾರಿ ದಯವಿಟ್ಟು ಕ್ಷಮಿಸು ಎಂದು ಬೇಡಿಕೊಳ್ಳುತ್ತೇನೆ.

ಇಂತು ನಿನ್ನವಳು.

೭

ವೆಂಕು,

ಕಾಗದವನ್ನು ಕೈಗೆ ತೆಗೆದುಕೊಂಡ ಕೂಡಲೆ, ಏನು ಬರೆದಿರುವೆಯೋ ನಿನಗೆ ಎಷ್ಟು ನೋವುಂಟುಮಾಡಿರುವೆನೊ ಎಂದುಕೊಂಡು ಬಹಳ ಹೆದರಿದ್ದೆ. ಕಾಗದ ನೋಡಿದಮೇಲೆ ದುಃಖವು ಕಡಿಮೆಯಾಗದಿದ್ದರೂ ಮನಸ್ಸು ಸಮಾಧಾನಕ್ಕೆ ಬಂದಿತು.

"ನನಗೆ ನೋವೇನೊ ಉಂಟಾಯಿತು. ಆದರೆ ಆ ನೋವಿನಲ್ಲಿ ಒಂದು ಆನಂದವೂ ಇದೆ. ನನ್ನ ಭಾಗಕ್ಕಂತೂ ಆ ಆನಂದ ಸಿಗುವಂತಿಲ್ಲ. ಆದರೆ ನೀನು ಅನುಭವಿಸಿದ ಆನಂದವನ್ನು ನಿನ್ನ ಕಾಗದದಲ್ಲಿ ಓದಿದಾಗ ಅದೇ ತರದ ಒಂದು ಆನಂದವುಂಟಾಯಿತು. ಇಂತಹ ಒಂದು ಆನಂದವು ನನಗೆ ಉಂಟಾಗಬಾರದೆಂದು ನಿನ್ನ ಆಸೆಯಿದ್ದರೆ ನನಗೆ ಅಂತಹ ಕಾಗದಗಳನ್ನು ಬರೆಯಬೇಡ" ಎಂದು ಬರೆದಿದ್ದೀಯೆ. "ಹಾಗೆ ಮಾಡಿದಲ್ಲಿ ನನ್ನ ನಿನ್ನ ಸ್ನೇಹ ಕೊನೆಯಾಗುತ್ತದೆ" ಎಂದು ಬರೆದಿರುವೆ. ಇದರಿಂದ ನಾನು ಏನು ತಿಳಿದುಕೊಳ್ಳಬೇಕೋ ಕಾಣೆ.

ಇದು ಹಾಗಿರಲಿ. ಈಗಲೂ ನಿನ್ನ ಹಾಸ್ಯ ನೀನು ಬಿಟ್ಟಿಲ್ಲವಲ್ಲ! "ನೀನು ಕಾಗದ ಬರೆಯುವುದನ್ನು ಬಿಟ್ಟರೆ ನಿನ್ನ ಕಾಗದಗಳ ಕಟ್ಟನ್ನೇ, ನಿದ್ದೆಮಾಡುತ್ತಿ[...] ವಿಷಯ ಬರೆದಿರುವೆಯಲ್ಲ ಅದನ್ನೂ, ನಿಮ್ಮ ಯಜಮಾನರಿಗೆ ಕಳುಹಿಸಿಬಿಡುತ್ತೇನೆ ಜೋಕೆ" ಎಂದು ಹೆದರಿಸಿರುವೆ. ಸದ್ಯ ಅದು ಮಾತ್ರ ಮಾಡಬೇಡ, ಒಂದು ಕಾಗದ ಬರೆಯುತ್ತೇನೆ.

ಇಂತು ನಿನ್ನವಳು.

೮

ವೆಂಕು,

"'ಅವರ' ವಿಷಯವಿಲ್ಲದ ಕಾಗದವೊಂದನ್ನು ಬರೆಯಬಾರದೆ? ಯಾವುದನ್ನ ನೋಡಿದರೂ ಅವರ ವಿಷಯವೆ. ಅವರ ವಿಷಯವಿಲ್ಲದ ಕಾಗದವೊಂದೂ ಇಲ್ಲ" ಎಂದಿರುವೆ. ಅದು ಏಕೋ ನನಗೆ ತಿಳಿಯದು. ಅವರ ಜೊತೆಯಲ್ಲಿರಬೇಕು. ಇಲ್ಲ ಅವರ ವಿಷಯ ಯೋಚನೆಮಾಡುತ್ತಿರಬೇಕು. ಎರಡೂ ಅಲ್ಲದೆ ಸುಮ್ಮನೆ ಮಾತ್ರ ಒಂದು ಗಳಿಗೆಯೂ ಇರುವುದಕ್ಕಾಗುವುದಿಲ್ಲ. ಹೀಗಿರಲು, ಕಾಗದ ಬರೆಯುವಾಗ 'ಅವರ' ವಿಷಯ ಯೋಚನೆಮಾಡದೆ ಹೇಗಿರಲಿ? "ಅವರ ವಿಷಯವಿಲ್ಲದ ಕಾಗದವೊಂದನ್ನು ಬರೆಯಬಾರದೆ?" ಎಂಬ ನಿನ್ನ ಮಾತಿಗೆ ಉತ್ತರವಾಗಿ ನಾನೊಂದು ಬರಿಯ ಕಾಗದ ಕಳುಹಿಸಬೇಕಾಗುತ್ತದೆ. ಅದು ಏಕೋ ನನಗೆ ತಿಳಿಯದು. ಒಂದೊಂದುಸಲ ಚೆನ್ನಾಗಿ ಯೋಚಿಸಿದಾಗ ಅವರಿಲ್ಲದೇ ನಾನಿಲ್ಲ ಎನ್ನಿಸುತ್ತದೆ ಆದರ ಕಾರಣ ಹೇಳುವುದಕ್ಕೆ ಬಾರದು.

ಇನ್ನೊಂದು ವಿಷಯ. ನಿನಗಾಗಲೇ ಹೇಳಿದ್ದೇನೆ, ನಾನು ನಿತ್ಯವೂ ಊಟವಾದ ಮೇಲೆ ಅರ್ಧಘಂಟೆ ಅವರೊಡನೆ ರೂಮಿನಲ್ಲಿರುತ್ತೇನೆ ಎಂದು. ಅವರು ಯಾವಾಗಲೂ ಏನಾದರೂ ಓದುತ್ತಲೇ ಇರುವರು. ಅವರಿಗೆ ಓದುವ ಹುಚ್ಚು ಹೆಚ್ಚು. ಆದರೆ ನಾನು ರೂಮಿಗೆ ಹೋದರೆ ಪುಸ್ತಕ ಮುಚ್ಚಿಡುವರು.

ನೆನ್ನೆ ನಾನು ಎಂದೆ: "ನಾನು ಬಂದರೆ ನಿಮಗೆ ಓದುವುದಕ್ಕೆ ತೊಂದರೆ!"

"ಆದರೂ ಚಿಂತೆಯಿಲ್ಲ. ಅದೇ ಸೇವ ಮಾಡಿಕೊಂಡು ಬರುವುದನ್ನು ಬಿಡಬೇಡ."

"ನಾನು ಬಂದರೆ ನೀವು ಓದುವುದೇಕೆ ನಿಲ್ಲಿಸುತ್ತೀರಿ? ನಿಮ್ಮಷ್ಟಿಗೆ ನೀವು ಓದುತ್ತಿರಿ."

"ನೀನೇನು ಮಾಡುತ್ತಿಯೆ?"

"ನಾನು ಸುಮ್ಮನೆ ನಿಮ್ಮನ್ನು ನೋಡುತ್ತಿರುತ್ತೇನೆ."

"ಇಲ್ಲ, ನಿನಗೆ ಸಿಟ್ಟುಬರುತ್ತದೆ. ಅಲ್ಲದೆ ನಿನ್ನನ್ನು ನೋಡುತ್ತಿದ್ದರೆ ಇರುವ ಆನಂದ ಪುಸ್ತಕ ಓದಿದರೆ ಬರುವುದಿಲ್ಲ."

"ಪುಸ್ತಕ ಓದಿದರೆ ಆನಂದವಿದೆಯೇ?" ಎಂದು ನಾನು ಕೇಳಿದೆ.

ಈಗ ನಾವು ಮಧ್ಯಾಹ್ನ ಸ್ವಲ್ಪ ಹೊತ್ತು ಪುಸ್ತಕಗಳನ್ನೋದುತ್ತೇವೆ. ಕನ್ನಡದ ಪುಸ್ತಕಗಳಾದರೆ ನಾನು ಓದುತ್ತೇನೆ; ಅವರು ಕೇಳುತ್ತಾರೆ. ಇಂಗ್ಲಿಷ್ ಅಥವಾ ಸಂಸ್ಕೃತ ಪುಸ್ತಕಗಳ ಕೆಲವು ಭಾಗಗಳನ್ನು ಅವರು ಓದಿ ಹೇಳುತ್ತಾರೆ. ಅವರು ಒಂದು ಸಲ ಹೇಳಿದರು.—"ವಿಶಾಲಿ, ಯಾವುದಾದರೂ ಚೆನ್ನಾಗಿರುವ ಪುಸ್ತಕ ಓದಿದರೆ ನಿನಗೂ ಅದನ್ನು ಓದಿ ಹೇಳದಿದ್ದರೆ ನನ್ನ ಮನಸ್ಸೇ ಸುಮ್ಮನಿರುವುದಿಲ್ಲ" ಎಂದು. ನಾನು ಅವರಷ್ಟೆ ಓದಿದ್ದರೆ ಎಷ್ಟು ಚೆನ್ನಾಗಿತ್ತು!

ನಿನ್ನ ಪ್ರೀತಿಯ ಗೆಳತಿ.

೯

ವೆಂಕು,

ಸರಿ, ಯಾವಾಗಲೂ ನೀನು ಹೀಗೆಯೇ. ಅದೇನು ಇನ್ನೊಬ್ಬರನ್ನು ಗೋಳು ಹೊಯ್ದುಕೊಳ್ಳಲು ನಿನಗೆ ಆಶೆಯೋ ನನಗೆ ಗೊತ್ತಿಲ್ಲ.

ನಮ್ಮ ಓದುಗಾರಿಕೆ ಕಮಲು ಅವಳ ಗಂಡನ ಕೈಲಿ ಹಿಂದಿ ಹೇಳಿಸಿಕೊಂಡ ಹಾಗೆ ಅಂತ ತಿಳಿದುಕೊಂಡೆಯಾ? ನೀನು ಬರೆದಿರುವುದನ್ನು ನೆನಸಿಕೊಂಡಾಗಲೆಲ್ಲ ನನಗೆ ನಗುಬರುತ್ತದೆ.

ನನಗೂ ತಿಳಿಯದು ಕಮಲೂಗೆ ಏಕೆ ಹಿಂದಿ ಬರುವುದಿಲ್ಲ ಎನ್ನುವುದಕ್ಕೆ ಕಾರಣ. ಅವಳಿಗೆ ನಾಲದ್ದಕ್ಕೆ ನಿತ್ಯ ಎರಡು ಗಂಟೆ ಪಾಠ ಎಂದು ಹೇಳುತ್ತೀಯೆ. ಪ್ರಾರಂಭಿಸಿ ತಿಂಗಳಾದರೂ ಇನ್ನೂ ಬಾಲಬೋಧೆಯಲ್ಲಿ ನೆಟ್ಟಗೆ ಐದು ಪಾಠ ಬರುವುದಿಲ್ಲ ಅಂತೀಯೆ. ನಮ್ಮ ಜೊತೆ ಓದುತ್ತಿದ್ದಾಗ ಅವಳು ಕ್ಲಾಸಿನಲ್ಲಿ ಮೊದಲನೆ ಯವಳಾಗಿದ್ದಳು. ದೊಡ್ಡವರಾದ ಮೇಲೆ ಪಾಠ ಬರುವುದಿಲ್ಲವಂತೆ. ಹಾಗೇನಾದರೂ ಇರಬಹುದು, ಅಲ್ಲವೆ?

ಅದೇನೋ ಇದು ನಿನಗೆಷ್ಟು ಆಶ್ಚರ್ಯವುಂಟುಮಾಡಿದೆಯೋ ನನಗೂ ಅಷ್ಟೆ ಆಶ್ಚರ್ಯವನ್ನುಂಟುಮಾಡಿದೆ.

ಇಂತು ನಿನ್ನ ಗೆಳತಿ

೧೦

ವೆಂಕು,

"ನೀವೆಲ್ಲ ಒಂದೇ ಜಾತಿ. ಒಬ್ಬರ ಗುಟ್ಟು ಒಬ್ಬರು ಬಿಡುವುದಿಲ್ಲ, ನನಗೆ ಗೊತ್ತಿತ್ತು" ಎಂದು ಬರೆದಿದೀಯೆ. ಅದು ಗೊತ್ತಿದ್ದೂ ನನ್ನೇಕೆ ಕೇಳಿದೆ? ನೀನೆಂತಹ ಕೀಟಲೆಯವಳು ಎನ್ನುವುದು ನನಗೆ ಗೊತ್ತಿಲ್ಲವೇನು?

ಇದು ಹಾಗಿರಲಿ. ನನಗೆ ಈಗ ನಿನಗೆ ಕಾಗದ ಬರೆಯುವುದಕ್ಕೇ ಬೇಜಾರು. ಹೀಗೆ ಬರೆದಿದ್ದೇನೆಂದು ನೀನೇನೂ ಮನಸ್ಸಿಗೆ ತಿಳಿದುಕೊಳ್ಳಬೇಡ. ನಿನ್ನ ಹತ್ತಿರ ನಿಜವನ್ನು ಮರೆಮಾಚಲು ನನಗೆ ಮನಸ್ಸು ಬಾರದು. ಅದಕ್ಕೇ ಕಾಗದ ಬರೆಯಲು ಬೇಜಾರು. ನನಗೆ ಮತ್ತೇನೂ ಬೇಕಾಗಿಲ್ಲ. ಇಲ್ಲ, ಅವರೊಡನೆ ಇರಬೇಕು. ಇಲ್ಲದಿದ್ದರೆ ಅವರಿಗೆ ಸಂತೋಷವಾಗುವ ಯಾವುದಾದರೊಂದು ಕೆಲಸಮಾಡುತ್ತಿರಬೇಕು. ಈಗ ನಮ್ಮ ರೂಮು ಹೇಗಿದೆ ಅನ್ನುವುದು ಗೊತ್ತೆ? ನಮ್ಮತ್ತೆ ನಮ್ಮ ರೂಮಿಗೆ ಬರುವುದು ಅಪರೂಪ. ಮೊನ್ನೆ ಸುಮ್ಮನೆ ಹಾಗೇ ಬಂದರು. ಯಾವುದೋ ಪಟಗಳನ್ನು ಗೋಡೆ ಕಡೆಗೆ ತಗಲುಹಾಕುತ್ತಿದ್ದೆ. ಒಂದು ಘಳಿಗೆ ನಿಂತುಕೊಂಡು ನೋಡಿದರು.

ಕೆನ್ನೆಯ ಮೇಲೆ ಕೈಯಿಟ್ಟುಕೊಂಡು "ಬೆಳಗ್ಗೆಯಿಂದ ಸಾಯಂಕಾಲದ ವರೆಗೂ ಏನು ಕೆಲಸ ಮಾಡುತ್ತಾಳಪ್ಪ ಅಂತಿದ್ದೆ. ಈಗ ಗೊತ್ತಾಯಿತು" ಎಂದು "ಇದು ಯಾವಾಗ ಹಾಕಿದ್ದೆ ಈ ಮಣಿ ತೋರಣ? ಅವತ್ತು ಹಾಕುತ್ತಾ ಇದ್ದ ಕಸೂತಿ ಇದೇಯೋ?" ಅಂತ ಇನ್ನೂ ಏನೇನೋ ಕೇಳಿದರು.

ಈಗ ಬಟ್ಟೆ ಇಸ್ತ್ರಿ ಮಾಡುವುದನ್ನು ಕಲಿತುಕೊಂಡಿದೇನೆ. ಅಲ್ಲಿದ್ದಾಗ ನಾನು ಬಟ್ಟೆ ಒಗೆಯುತ್ತಿರಲಿಲ್ಲ ಅನ್ನುವುದೂ ಒಂದುಸಲ ನಾನು ಬಟ್ಟೆ ಒಗೆಯುವುದಿಲ್ಲ ಅಂದಿದ್ದಕ್ಕೆ ಅಮ್ಮನ ಕೈಲಿ ಬೈಸಿಕೊಂಡದ್ದೂ ನಿನಗೆ ಗೊತ್ತು. ಆದರೆ ಈಗ ಅವರ ಬಟ್ಟೆಯನ್ನೆಲ್ಲಾ ನಾನೇ ಒಗೆಯುತ್ತಿದ್ದೇನೆ. ಇಸ್ತ್ರಿ ಮಾಡುವಾಗ ಬೆರಳು ಸುಟ್ಟು ಬೊಬ್ಬೆ ಬಂದಿದೆ. ಆದರೂ ನನಗೆ ನೋವೇ ಆಗುತ್ತಿಲ್ಲ. ಯಾಕೆಂದರೆ ಇಂತಹ ಸಣ್ಣ ಕೆಲಸಕ್ಕೂ ಸಿಕ್ಕುವ ಬಹುಮಾನ ನೆನಸಿಕೊಂಡರೆ ಅದರ ಕಷ್ಟ ನೋವು ಒಂದೂ ಕಾಣುವುದೇ ಇಲ್ಲ.

ಇಂತು ನಿನ್ನ ಗೆಳತಿ.

೧೧

ವೆಂಕು,

ನೆನ್ನೆ ಒಂದು ವಿಷಯ ನಡೆಯಿತು—ನಿನಗೆ ಹೇಳುವುದೋ ಬೇಡವೋ ಅಂತಿದ್ದೆ. ಆದರೆ ಹೇಳಿಯೇ ಬಿಡಬೇಕೆಂದು ಮನಸ್ಸಾದ್ದರಿಂದ ಮೊನ್ನೆಯೇ ಕಾಗದ ಬರದಿದ್ದರೂ ಇನ್ನೊಂದು ಕಾಗದ ಇಷ್ಟು ಬೇಗ ಬರೆಯಲು ಕುಳಿತಿದ್ದೇನೆ.

ನೆನ್ನೆ ನಮ್ಮ ಅತ್ತೆ ಏನೋ ಗೊಣಗಿಕೊಳ್ಳುತ್ತಿದ್ದರು: "ಎಷ್ಟು ದಿವಸವೆಂದು ಇವರ ಸೇವೆಮಾಡುವುದೋ ನಾನು ಕಾಣೆ. ಪುಣ್ಯಾತ್ಮರ ಮನೆಯಲ್ಲಿ ಸೊಸೆಯರು ಎಂದು ಹೇಗಿರುತ್ತಾರೆ! ಒಂದು ಉಪ್ಪುಗಾರಣ (ಕುಡಿಯುವ ಪಾತ್ರೆಗಳನ್ನು ತೊಳೆಯುವುದು) ಗೋಮ ಸಹಿತ ಮಾಡುವುದಿಲ್ಲ, ಮಹರಾಯಿತಿ. . ." ಎಂದು. ಇದು 'ಅವರ' ಕಿವಿಗೆ ಬಿತ್ತು.

ಅವರು ಬಹಳ ಸಿಟ್ಟಿನಿಂದ ಬಂದರು. ನಾನು ಅವರು ನಗುವುದು, ಒಳ್ಳೆಯ ಮಾತಾಡುವುದು, ಮಾತ್ರ ನೋಡಿದ್ದೆ, ಕೇಳಿದ್ದೆ; ಆದರೆ ಸಿಟ್ಟುಬಂದು ಹುಬ್ಬು ಗಂಟಿಕ್ಕಿಕೊಂಡು ಗಟ್ಟಿಯಾಗಿ ಮಾತಾಡಿದುದನ್ನು ಕೇಳಿದ್ದು ಇವತ್ತೆ. ನನಗನ್ನಿಸಿತು "ಅದೇಕೆ ಇವರು ಇದಕ್ಕೆ ಇಷ್ಟು ಸಿಟ್ಟುಮಾಡಿಕೊಳ್ಳುವುದು? ಒಳ್ಳೆ ಮಾತಿನಲ್ಲೇ ಹೇಳಿದರೆ ಆಗದೆ?" ಎಂದು. ನನಗೂ ಸಿಟ್ಟುಬಂದಿತು. "ನನಗೆ ಕೆಲಸಮಾಡುವುದಕ್ಕೆ ಬರುವುದಿಲ್ಲ" ಎಂದೆ. ಅವರು ಮಾತನಾಡಲಿಲ್ಲ. ರೂಮು ಬಿಟ್ಟು ಹೊರಟುಹೋದರು. ಅವರು ಹೊರಟುಹೋದ ಮೇಲೆ ನನಗೂ ಏನೋ ಸಂಕಟವಾಯಿತು. ಸುಮ್ಮನೆ ಸ್ವಲ್ಪಹೊತ್ತು ಅತ್ತುಬಿಟ್ಟೆ.

ಇಂತು ನಿನ್ನ ಗೆಳತಿ.

೧೨

ವೆಂಕು,

ಸ್ವಲ್ಪ ದಿನಗಳ ಹಿಂದೆ ಇಂತಹ ಕಾಗದವನ್ನು ನಾನು ಬರೆಯುತ್ತೇನೆಂದು ತಿಳಿದುಕೊಂಡಿರಲಿಲ್ಲ. ಏನಿದ್ದರೂ ನಮ್ಮ ಚೆಲ್ಲಾಟದ ಸಂತೋಷದ ಸುದ್ದಿಗಳನ್ನೇ ಬರೆಯುತ್ತೇನೆಂದುಕೊಂಡಿದ್ದೆ. ಈಗ ಎಲ್ಲ ವಿಪರೀತಕ್ಕಿಟ್ಟುಕೊಂಡಿದೆ. ನನಗೂ ಒಂದು ಸಿಟ್ಟು, ಜಂಭ; ಬಹಳ ಬಿಗಿಯಾಗಿದ್ದೇನೆ. ನಮ್ಮತ್ತೆ ಹುಬ್ಬು ಗಂಟಿಕ್ಕಿಕೊಂಡು ಮುಖ ದಪ್ಪಗೆ ಮಾಡಿಕೊಂಡಿದಾರೆ. 'ಅವರು' ಹೆಚ್ಚು ಹೊತ್ತು ಮನೆಯಲ್ಲೇ ಇರುವುದಿಲ್ಲ. ಅವತ್ತಿನಿಂದ ಇದುವರೆಗೂ ನನ್ನೊಡನೆ ಒಂದು ಮಾತೂ ಆಡಿಲ್ಲ. ಯಾವೊತ್ತೂ ನನಗೂ ಅವರಿಗೂ ಸಂಬಂಧವೇ ಇಲ್ಲವೇನೊ ಅನ್ನುವ ಹಾಗಿದ್ದಾರೆ 'ಅವರು'. ಅವರು ಹೀಗೆ ಇರುವುದು ನೋಡಿದರೆ ನನಗೆ ಬಹಳ ಅಳು ಬರುತ್ತದೆ.

ಒಬ್ಬೊಬ್ಬಳೇ ಇದ್ದಾಗ ಅತ್ತೂ ಅತ್ತೂ ಅಳುತ್ತೇನೆ. ಆದರೂ ಸೋಲುವುದಕ್ಕೆ ಮನಸ್ಸು ಬಾರದು.

ನಾನು ನಿನಗೆ ಹಿಂದೆ ಬರೆದಿದ್ದುದು ಜ್ಞಾಪಕವಿದೆಯೇ? "ನಾವು ಪುಸ್ತಕಗಳನ್ನೋದುತ್ತೇವೆ" ಎಂದು. 'ವೇಣೀಸಂಹಾರ'ವೆನ್ನುವುದೊಂದು ಸಂಸ್ಕೃತ ನಾಟಕ. ಅದು ಭಾರತದ ಕಥೆ. ಅದರಲ್ಲಿ ಭೀಮ ಒಂದು ಸಲ ಬಹಳ ಕೋಪದಲ್ಲಿರುತ್ತಾನೆ. ಆಗ ದ್ರೌಪದಿ ಹತ್ತಿರ ಬಂದು ನಿಂತುಕೊಂಡದ್ದು ಗೊತ್ತಾಗಲಿಲ್ಲ. ಗೊತ್ತಾದ ಮೇಲೆ "ಕೋಪದಲ್ಲಿ ನೋಡಲಿಲ್ಲ, ಕ್ಷಮಿಸು" ಎಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಅವಳು ಹೇಳುತ್ತಾಳೆ, "ನೀವು ಕೋಪಗೊಂಡಿದ್ದರೆ ನನಗೆ ಕೋಪವಿಲ್ಲ. ನೀವು ಉದಾಸೀನವಾಗಿದ್ದರೆ ನನಗೆ ದುಃಖ" ಎಂದು.

ಈಗ ನಾನು ಅದೇ ಸ್ಥಿತಿಯಲ್ಲಿದ್ದೇನೆ. ಅವರು ಅಂದು ಕೋಪಬಂದಾಗ ಒಂದು ಏಟು ಹೊಡೆದಿದ್ದರೂ ನನಗೆ ಸಂಕಟವಾಗುತ್ತಿರಲಿಲ್ಲ. ಆದರೆ ಈ ಉದಾಸೀನವನ್ನು ಸಹಿಸುವುದು ಮಾತ್ರ ನನ್ನಿಂದಾಗದು.

ರೂಮಿನಲ್ಲಿ ಒಟ್ಟಿಗೆ ಕೂತು ಕಥೆಗಳನ್ನೋದುತ್ತಾ ನಗುತ್ತಾ ನಲಿಯುತ್ತಾ ಕಾಲ ಕಳೆಯುತ್ತಿದ್ದುದು ಹೇಗಿತ್ತು? ಎದುರಿಗೆ ಬಂದಾಗ ಒಬ್ಬರ ಮುಖ ಪೂರ್ವಕ್ಕೆ ಮಾಡಿಕೊಂಡರೆ ಇನ್ನೊಬ್ಬರು ಪಶ್ಚಿಮಕ್ಕೆ ಮಾಡಿಕೊಳ್ಳುವುದು ಹೇಗಿದೆ?

ದೊಡ್ಡ ಕಾಗದ ಬರೆದೆನೆಂದು ಬೇಜಾರುಪಟ್ಟುಕೊಳ್ಳಬೇಡ. ಬರೆಯದಿದ್ದರೆ ನನಗೆ ಸಮಾಧಾನವಾಗುತ್ತಿರಲಿಲ್ಲ. ಅದಕ್ಕಾಗಿ ಕ್ಷಮಿಸು.

ಇಂತು ನಿನ್ನ ಗೆಳತಿ.

೧೩

ವೆಂಕು,

ನಿನ್ನ ಕಾಗದ ಬಂತು. ನಾನು ಮನಸ್ಸಿನಲ್ಲಿ ಏನು ನಿರ್ಧರಿಸಿದ್ದೆನೋ ಅದನ್ನೇ ನೀನೂ ಬರೆದಿದ್ದೀಯೆ. ಇಂದು ಅವರೊಡನೆ ಮಾತಾಡಿ ನನ್ನ ತಪ್ಪು ಒಪ್ಪಿಕೊಂಡು ಅವರ ಮನಸ್ಸಿಗೆ ಒಪ್ಪುವಂತೆ ಮುಂದೆ ನಡೆದುಕೊಳ್ಳುವೆನೆಂದು ಹೇಳುವುದಕ್ಕೆ ಆಗಲೇ ಮನಸ್ಸು ಮಾಡಿದ್ದೆ.

ಇವತ್ತು ಊಟವಾದ ಮೇಲೆ ಅವರು ಬಟ್ಟೆ ಹಾಕಿಕೊಳ್ಳಲು ರೂಮಿನೊಳಕ್ಕೆ ಹೋದರು. ನಾನೂ ಹೋದೆ. ಹಿಂತಿರುಗಿ ನೋಡಿದರು. ನಾನು ಬಂದದ್ದನ್ನು ನೋಡಿ ಮುಖವನ್ನು ಅತ್ತಕಡೆ ತಿರುಗಿಸಿಕೊಂಡರು. ನಾನು ರೂಮು ಬಾಗಿಲು ಮುಚ್ಚಿಕೊಂಡು ಅದನ್ನೇ ಒರಗಿಕೊಂಡು ನಿಂತೆನು. ಅವರು ಬಾಗಿಲು ಮುಚ್ಚಿದ ಸದ್ದು ಕೇಳಿ ಮತ್ತೆ ತಿರುಗಿ ನೋಡಿದರು. ಹೊರಗೆ ಹೋಗಲಾಗದಂತೆ ಬಾಗಿಲ

ಮುಚ್ಚಿಕೊಂಡು ನಿಂತಿರುವುದನ್ನು ನೋಡಿ ಮತ್ತೆ ಮೊದಲಿನಂತೆ ಮುಖ ತಿರುಗಿಸಿಕೊಂಡರು. ಹೊದೆದಿದ್ದ ಶಲ್ಯ ತೆಗೆದು ಮಡಿಸಿದರು, ಮತ್ತೆ ಮತ್ತೆ ಮಡಿಸಿದರು. ಇದನ್ನು ನೋಡಿ ನನಗೇನೂ ತಿಳಿಯಲಿಲ್ಲ; ಅಳು ಬಂತು. ಹಾಗೇ ತಲೆ ಬಗ್ಗಿಸಿಕೊಂಡು ಅತ್ತುಬಿಟ್ಟೆ. ಎಷ್ಟುಹೊತ್ತು ಅಳುತ್ತಿದ್ದೆನೋ ಗೊತ್ತಿಲ್ಲ. ಅವರು ಹತ್ತಿರ ಬಂದು "ಏಕೆ ಅಳುತ್ತೀಯ ?" ಎಂದರು. ನಾನು ಮಾತಾಡಲಿಲ್ಲ. ಮಾತಾಡದಿದ್ದರೆ ಅವರು ಕೋಪಗೊಳ್ಳಬಹುದೆಂದು ಗೊತ್ತಿತ್ತು. ಆದರೂ ಮಾತನಾಡಲಾಗಲಿಲ್ಲ.

"ಅವತ್ತು ನಾನು ಗಟ್ಟಿಯಾಗಿ ಮಾತನಾಡಿದುದು ತಪ್ಪು; ಮನಸ್ಸಿಗೇನೂ ತಿಳಿದುಕೊಳ್ಳಬೇಡ" ಎಂದು ಹೆಗಲ ಮೇಲೆ ಕೈಯಿಟ್ಟರು. ನಾನು ಅವರು ಕೋಪಗೊಂಡು ಬಯ್ಯಬಹುದು, ಹೊಡೆಯಬಹುದೆಂದುಕೊಂಡಿದ್ದೆ. ಹೀಗೆ ಮಾತಾಡಿದ್ದು ಕೇಳಿ ನನ್ನ ತಪ್ಪನ್ನು ನಾನೂ ಒಪ್ಪಿಕೊಂಡೆ. "ನೀವು ಅವತ್ತು ಹೊಡೆದಿದ್ದರೂ ಚಿಂತೆಯಿರಲಿಲ್ಲ. ಹೀಗೆ ಮಾಡಬಾರದಾಗಿತ್ತು" ಎಂದೆ.

"ಹೊಡೆಯಬೇಕಾಗಿತ್ತು, ಹೊಡೆಯಬೇಕಾಗಿತ್ತು" ಎಂದು ಎರಡುಮೂರು ಬಾರಿ ತಮ್ಮಲ್ಲಿ ತಾವೇ ಮೆಲ್ಲಗೆ ಅಂದುಕೊಂಡರು. ಹೊಡೆಯುವುದು ತಮ್ಮ ಕೈಯಲ್ಲಾಗದ ಕೆಲಸವೆಂಬಂತೆ ತಲೆಯಲ್ಲಾಡಿಸಿದರು. ಇದನ್ನು ಕಂಡು ನನ್ನ ಮನಸ್ಸು ಪೂರ್ತಿ ಸೋತುಹೋಯಿತು. ನನ್ನ ಬಿಗುಮಾನ ತಪ್ಪೆಂದು ಗೊತ್ತಾಯಿತು. "ನನಗೆ ಕೆಲಸಮಾಡಲು ಬೇಜಾರು; ಅಭ್ಯಾಸವಿಲ್ಲ. ಕಲಿತುಕೊಳ್ಳುವುದಕ್ಕೆ ಆಸೆಯೂ ಉಂಟಾಗಲಿಲ್ಲ" ಎಂದೆ.

"ನಿನಗೆ ಬಟ್ಟೆಗಳನ್ನು ಇಸ್ತ್ರಿಮಾಡುವುದು ಬರುತ್ತಿತ್ತೆ? ಎಷ್ಟು ದಿನದಿಂದ ನೀನು ಮೇಜಿನ ಮೇಲಿದ್ದ ಪುಸ್ತಕಗಳನ್ನು ತೆಗೆದಿಟ್ಟು ಅಚ್ಚುಕಟ್ಟು ಮಾಡುವುದನ್ನು ಅಭ್ಯಾಸಮಾಡಿದ್ದೆ ?" ಎಂದು ಕೇಳಿದರು.

"ಇಲ್ಲ; ಹಾಗೆ ಮಾಡಿದರೆ ನಿಮಗೆ ಸಂತೋಷವಾಗುವುದೆಂದು ತಿಳಿದುಕೊಂಡೆ. ಆದ್ದರಿಂದ ಕಲಿತುಕೊಂಡೆ."

"ಹಾಗಾದರೆ ನಾನು ಹೇಳುವುದು ಸ್ವಲ್ಪ ಕೇಳು. ನೀನು ಮನೆಯ ಕೆಲಸದಲ್ಲಿ ಅಮ್ಮನಿಗೆ ನೆರವಾದರೆ ಅವಳಿಗೂ ಸಂತೋಷವಾಗುತ್ತದೆ. ಅದನ್ನು ನೋಡಿದರೆ ನನಗೂ ನಿನ್ನಲ್ಲಿ ಪ್ರೀತಿ ಹೆಚ್ಚುತ್ತದೆ."

ವೆಂಕೂ, ಕೆಲಸಮಾಡಿದರೆ ಅವರಿಗೆ ನನ್ನಲ್ಲಿ ಪ್ರೀತಿ ಹೆಚ್ಚುತ್ತದೆಯೆಂದುಕೊಳ್ಳುತ್ತಾ ನಾನು ಆದಷ್ಟು ಕೆಲಸಗಳಲ್ಲಿ ಅತ್ತೆಯವರಿಗೆ ನೆರವಾಗಲು ಮೊದಲು ಮಾಡಿದ್ದೇನೆ.

ಸಾಯಂಕಾಲ ನನ್ನ ನಗುಮುಖವನ್ನು ನೋಡಿ ಅತ್ತೆಯವರು, "ಮಹರಾಯಿತಿ,

ಒಬ್ಬೊಬ್ಬಳೇ ಇದ್ದಾಗ ಅತ್ತೂ ಅಳುತ್ತೇನೆ. ಆದರೂ ಸೋಲುವುದಕ್ಕೆ ಮನಸ್ಸು ಬಾರದು.

ನಾನು ನಿನಗೆ ಹಿಂದೆ ಬರೆದಿದ್ದುದು ಜ್ಞಾಪಕವಿದೆಯೇ? "ನಾವು ಪುಸ್ತಕಗಳನ್ನೋದುತ್ತೇವೆ" ಎಂದು. 'ವೇಣೀಸಂಹಾರ'ವೆನ್ನುವುದೊಂದು ಸಂಸ್ಕೃತ ನಾಟಕ. ಅದು ಭಾರತದ ಕಥೆ. ಅದರಲ್ಲಿ ಭೀಮ ಒಂದು ಸಲ ಬಹಳ ಕೋಪದಲ್ಲಿದ್ದಾನೆ. ಆಗ ದ್ರೌಪದಿ ಹತ್ತಿರ ಬಂದು ನಿಂತುಕೊಂಡದ್ದು ಗೊತ್ತಾಗಲಿಲ್ಲ. ಗೊತ್ತಾದ ಮೇಲೆ "ಕೋಪದಲ್ಲಿ ನೋಡಲಿಲ್ಲ, ಕ್ಷಮಿಸು" ಎಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಅವಳು ಹೇಳುತ್ತಾಳೆ, "ನೀವು ಕೋಪಗೊಂಡಿದ್ದರೆ ನನಗೆ ಕೋಪವಿಲ್ಲ. ನೀವು ಉದಾಸೀನವಾಗಿದ್ದರೆ ನನಗೆ ದುಃಖ" ಎಂದು.

ಈಗ ನಾನು ಅದೇ ಸ್ಥಿತಿಯಲ್ಲಿದ್ದೇನೆ. ಅವರು ಅಂದು ಕೋಪಬಂದಾಗ ಒಂದು ಏಟು ಹೊಡೆದಿದ್ದರೂ ನನಗೆ ಸಂಕಟವಾಗುತ್ತಿರಲಿಲ್ಲ. ಆದರೆ ಈ ಉದಾಸೀನವನ್ನು ಸಹಿಸುವುದು ಮಾತ್ರ ನನ್ನಿಂದಾಗದು.

ರೂಮಿನಲ್ಲಿ ಒಟ್ಟಿಗೆ ಕೂತು ಕಥೆಗಳನ್ನೋದುತ್ತಾ ನಗುತ್ತಾ ನಲಿಯುತ್ತಾ ಕಾಲ ಕಳೆಯುತ್ತಿದ್ದುದು ಹೇಗಿತ್ತು? ಎದುರಿಗೆ ಬಂದಾಗ ಒಬ್ಬರ ಮುಖ ಪೂರ್ವಕ್ಕೆ ಮಾಡಿಕೊಂಡರೆ ಇನ್ನೊಬ್ಬರು ಪಶ್ಚಿಮಕ್ಕೆ ಮಾಡಿಕೊಳ್ಳುವುದು ಹೇಗಿದೆ?

ದೊಡ್ಡ ಕಾಗದ ಬರೆದೆನೆಂದು ಬೇಜಾರುಪಟ್ಟುಕೊಳ್ಳಬೇಡ. ಬರೆಯದಿದ್ದರೆ ನನಗೆ ಸಮಾಧಾನವಾಗುತ್ತಿರಲಿಲ್ಲ. ಅದಕ್ಕಾಗಿ ಕ್ಷಮಿಸು.

ಇಂತು ನಿನ್ನ ಗೆಳತಿ.

೧೩

ವೆಂಕು,

ನಿನ್ನ ಕಾಗದ ಬಂತು. ನಾನು ಮನಸ್ಸಿನಲ್ಲಿ ಏನು ನಿರ್ಧರಿಸಿದ್ದೆನೋ ಅದನ್ನೇ ನೀನೂ ಬರೆದಿದ್ದೀಯೆ. ಇಂದು ಅವರೊಡನೆ ಮಾತಾಡಿ ನನ್ನ ತಪ್ಪು ಒಪ್ಪಿಕೊಂಡು ಅವರ ಮನಸ್ಸಿಗೆ ಒಪ್ಪುವಂತೆ ಮುಂದೆ ನಡೆದುಕೊಳ್ಳುವೆನೆಂದು ಹೇಳುವುದೆಂದು ಆಗಲೇ ಮನಸ್ಸು ಮಾಡಿದ್ದೆ.

ಇವತ್ತು ಊಟವಾದ ಮೇಲೆ ಅವರು ಬಟ್ಟೆ ಹಾಕಿಕೊಳ್ಳಲು ರೂಮಿನೊಳಕ್ಕೆ ಹೋದರು. ನಾನೂ ಹೋದೆ. ಹಿಂತಿರುಗಿ ನೋಡಿದರು. ನಾನು ಬಂದದ್ದನ್ನು ನೋಡಿ ಮುಖವನ್ನು ಅತ್ತಕಡೆ ತಿರುಗಿಸಿಕೊಂಡರು. ನಾನು ರೂಮು ಬಾಗಿಲು ಮುಚ್ಚಿಕೊಂಡು ಅದನ್ನೇ ಒರಗಿಕೊಂಡು ನಿಂತೆನು. ಅವರು ಬಾಗಿಲು ಮುಚ್ಚಿದ ಸದ್ದು ಕೇಳಿ ಮತ್ತೆ ತಿರುಗಿ ನೋಡಿದರು. ಹೊರಗೆ ಹೋಗಲಾಗದಂತೆ ಬಾಗಿಲು

ಮುಚ್ಚಿಕೊಂಡು ನಿಂತಿರುವುದನ್ನು ನೋಡಿ ಮತ್ತೆ ಮೊದಲಿನಂತೆ ಮುಖ ತಿರುಗಿಸಿ ಕೊಂಡರು. ಹೊದೆದಿದ್ದ ಶಲ್ಯ ತೆಗೆದು ಮಡಿಸಿದರು, ಮತ್ತೆ ಮತ್ತೆ ಮಡಿಸಿದರು. ಇದನ್ನು ನೋಡಿ ನನಗೇನೂ ತಿಳಿಯಲಿಲ್ಲ; ಅಳು ಬಂತು. ಹಾಗೇ ತಲೆ ಬಗ್ಗಿಸಿಕೊಂಡು ಅತ್ತುಬಿಟ್ಟೆ. ಎಷ್ಟುಹೊತ್ತು ಅಳುತ್ತಿದ್ದೆನೋ ಗೊತ್ತಿಲ್ಲ. ಅವರು ಹತ್ತಿರ ಬಂದು "ಏಕೆ ಅಳುತ್ತೀಯ ?" ಎಂದರು. ನಾನು ಮಾತಾಡಲಿಲ್ಲ. ಮಾತಾಡದಿದ್ದರೆ ಅವರು ಕೋಪಗೊಳ್ಳಬಹುದೆಂದು ಗೊತ್ತಿತ್ತು. ಆದರೂ ಮಾತನಾಡಲಾಗಲಿಲ್ಲ.

"ಅವತ್ತು ನಾನು ಗಟ್ಟಿಯಾಗಿ ಮಾತನಾಡಿದುದು ತಪ್ಪು; ಮನಸ್ಸಿಗೇನೂ ತಿಳಿದುಕೊಳ್ಳಬೇಡ" ಎಂದು ಹೆಗಲ ಮೇಲೆ ಕೈಯಿಟ್ಟರು. ನಾನು ಅವರು ಕೋಪ ಗೊಂಡು ಬಯ್ಯಬಹುದು, ಹೊಡೆಯಬಹುದೆಂದುಕೊಂಡಿದ್ದೆ. ಹೀಗೆ ಮಾತಾಡಿದ್ದು ಕೇಳಿ ನನ್ನ ತಪ್ಪನ್ನು ನಾನೂ ಒಪ್ಪಿಕೊಂಡೆ. "ನೀವು ಅವತ್ತು ಹೊಡೆದಿದ್ದರೂ ಚಿಂತೆಯಿರಲಿಲ್ಲ. ಹೀಗೆ ಮಾಡಬಾರದಾಗಿತ್ತು" ಎಂದೆ.

"ಹೊಡೆಯಬೇಕಾಗಿತ್ತು, ಹೊಡೆಯಬೇಕಾಗಿತ್ತು" ಎಂದು ಎರಡುಮೂರು ಬಾರಿ ತಮ್ಮಲ್ಲಿ ತಾವೇ ಮೆಲ್ಲಗೆ ಅಂದುಕೊಂಡರು. ಹೊಡೆಯುವುದು ತಮ್ಮ ಕೈಯಲ್ಲಾಗದ ಕೆಲಸವೆಂಬಂತೆ ತಲೆಯಲ್ಲಾಡಿಸಿದರು. ಇದನ್ನು ಕಂಡು ನನ್ನ ಮನಸ್ಸು ಪೂರ್ತಿ ನೋತುಹೋಯಿತು. ನನ್ನ ಬಿಗುಮಾನ ತಪ್ಪೆಂದು ಗೊತ್ತಾಯಿತು. "ನನಗೆ ಕೆಲಸಮಾಡಲು ಬೇಜಾರು; ಅಭ್ಯಾಸವಿಲ್ಲ. ಕಲಿತುಕೊಳ್ಳುವುದಕ್ಕೆ ಆಸೆಯೂ ಉಂಟಾಗಲಿಲ್ಲ" ಎಂದೆ.

"ನಿನಗೆ ಬಟ್ಟೆಗಳನ್ನು ಇಸ್ತ್ರಿಮಾಡುವುದು ಬರುತ್ತಿತ್ತೆ? ಎಷ್ಟು ದಿನದಿಂದ ನೀನು ಮೇಜಿನ ಮೇಲಿದ್ದ ಪುಸ್ತಕಗಳನ್ನು ತೆಗೆದಿಟ್ಟು ಅಚ್ಚುಕಟ್ಟು ಮಾಡುವುದನ್ನು ಅಭ್ಯಾಸಮಾಡಿದ್ದೆ ?" ಎಂದು ಕೇಳಿದರು.

"ಇಲ್ಲ; ಹಾಗೆ ಮಾಡಿದರೆ ನಿಮಗೆ ಸಂತೋಷವಾಗುವುದೆಂದು ತಿಳಿದುಕೊಂಡೆ. ಆದ್ದರಿಂದ ಕಲಿತುಕೊಂಡೆ."

"ಹಾಗಾದರೆ ನಾನು ಹೇಳುವುದು ಸ್ವಲ್ಪ ಕೇಳು. ನೀನು ಮನೆಯ ಕೆಲಸದಲ್ಲಿ ಅಮ್ಮನಿಗೆ ನೆರವಾದರೆ ಅವಳಿಗೂ ಸಂತೋಷವಾಗುತ್ತದೆ. ಅದನ್ನು ನೋಡಿದರೆ ನನಗೂ ನಿನ್ನಲ್ಲಿ ಪ್ರೀತಿ ಹೆಚ್ಚುತ್ತದೆ."

ವೆಂಕೂ, ಕೆಲಸಮಾಡಿದರೆ ಅವರಿಗೆ ನನ್ನಲ್ಲಿ ಪ್ರೀತಿ ಹೆಚ್ಚುತ್ತದೆಯೆಂದು ಕೊಳ್ಳುತ್ತಾ ನಾನು ಆದಷ್ಟು ಕೆಲಸಗಳಲ್ಲಿ ಅತ್ತೆಯವರಿಗೆ ನೆರವಾಗಲು ಮೊದಲು ಮಾಡಿದ್ದೇನೆ.

ಸಾಯಂಕಾಲ ನನ್ನ ನಗುಮುಖವನ್ನು ನೋಡಿ ಅತ್ತೆಯವರು, "ಮಹರಾಯಿತಿ,

ನೀನೇನು ಕೆಲಸಮಾಡದಿದ್ದರೂ ಚಿಂತೆಯಿಲ್ಲ. ಸದ್ಯಕ್ಕೆ ನಗುನಗುತ್ತಾ ಒಪ್ಪ ಕೊಂಡಿದ್ದರೆ ಸಾಕು. ಅವನು ಮುಖ ಸಿಂಡರಿಸಿಕೊಂಡು ನೀನು ಮುಖ ದಪ್ಪವಾ ಕೊಂಡಿರುವುದನ್ನು ಯಾರು ನೋಡುವುದಕ್ಕಾಗುತ್ತೆ, ಹೇಳು!" ಎಂದರು.

ಇಂತು ನಿನ್ನ ಗೆಳತಿ.

೧೪

ವೆಂಕು,

ಮಳೆ ಬಂದಮೇಲೆ ಬಿಸಿಲು ಚೆನ್ನಾಗಿ ಬರುತ್ತಲ್ಲವೆ? ಈಗ ಹಾಗೆ ತಿ ಮೊದಲಿನ ಸುಖಕ್ಕಿಂತ ಹೆಚ್ಚಾದ ಸಂತೋಷದ ದಿನಗಳು ಬಂದಿವೆ.

ನೆನ್ನೆ ನಾನು ರೂಮಿಗೆ ಹೋದಾಗ ಅವರು ಮಂಚದ ಮೇಲೆ ಕುಳಿತಿದ್ದ ನಾನು ಒಳಗೆ ಹೋದ ಕೂಡಲೆ ನನ್ನ ಕೈಹಿಡಿದು ಪಕ್ಕದಲ್ಲಿ ಕೂಡಿಸಿಕೊಂಡರು. ನ ಮುಂದಲೆಯನ್ನು ಹಿಂದಕ್ಕೆ ಸವರುತ್ತ "ವಿಶಾಲೀ, ಈಗ ನೋಡು, ನೀನು ಸರಿಯ ಹುಡುಗಿ. ಅಮ್ಮ ನಿನ್ನನ್ನು ಹೊಗಳುತ್ತಿದ್ದುದನ್ನು ಕೇಳಿದೆಯಾ?" ಎಂದರು.

ವೆಂಕು, ಅವರು ನನ್ನ ಮುಂದಲೆಯನ್ನು ಸರಿಮಾಡಿ ಹೇಗೆ ಮಾತನಾಡಿಸುವರ ಹಾಗೆ ನಾನೂ ಅವರ ಕ್ರಾಪಿನ ಕೂದಲನ್ನು ಸರಿಮಾಡಿ ಬನೀನಿನ ಕಾಲ ಸರಿಮಾಡಬೇಕೆನ್ನಿಸುತ್ತದೆ. ಆದರೆ ಅದು ಏನು ಕಾರಣವೋ ಕಾಣೆ, ಹಾಗೆ ಮಾ ವುದಕ್ಕೆ ಆಗುವುದಿಲ್ಲ. ಆಮೇಲೆ, ಅವರು ಹೊರಟುಹೋದ ಮೇಲೆ, ಏಕೆ ನಾ ಹಾಗೆ ಮಾಡಲಿಲ್ಲವೆಂದು ನೊಂದುಕೊಳ್ಳುತ್ತೇನೆ.

ನಾನು ಹೀಗೆಯೇ ಸರಿಯಾಗಿ ನಡೆದುಕೊಂಡರೆ ಬಹುಮಾನಕೊಡುವೆನೆ ದ್ದಾರೆ. ನಾನು ಒಂದು ಜೊತೆ ಬೊಂಬಾಯಿ ಬಳೆ ಬೇಕೆಂದು ಕೇಳಿದ್ದೇನೆ.

ಇಂತು ನಿನ್ನ ಗೆಳತಿ.

೧೫

ವೆಂಕು,

ನಮ್ಮ ಮನೆಯ ಪಕ್ಕದಲ್ಲಿ ಕಮಲಮ್ಮ ಅನ್ನುವರೊಬ್ಬರಿದ್ದಾರೆ. ಅವರಿಗೊಂ ಮಗು ಇದೆ. ಅವರ ಯಜಮಾನರಿಗೆ ೨೦ ರೂಪಾಯಿ ಸಂಬಳದ ಕೆಲಸ ಮನೆ ತಪ್ಪಿದ ನಾದಿನಿ, ಅತ್ತೆ, ಮಾವ, ಇದ್ದಾರೆ. ದೊಡ್ಡ ಸಂಸಾರ; ಸಂ ಸ್ವಲ್ಪ; ಹೊಟ್ಟೆಗಾದರೆ ಬಟ್ಟೆಗಿಲ್ಲ, ಬಟ್ಟೆಗಾದರೆ ಹೊಟ್ಟೆಗಿಲ್ಲ ಎನ್ನುವ ಹಾಗಿದ್ದಾ ಆದರೂ ಬಹಳ ನೆಮ್ಮದಿಯಾಗಿದ್ದಾರೆ. ನಗುತ್ತಾ ನಲಿಯುತ್ತಾ ಜೀವನ ಸಾಗಿ ತ್ತಿದ್ದಾರೆ. ನಮ್ಮ ಬೀದಿಯ ಕೊನೆಯಲ್ಲಿ ರಾಜಮ್ಮ ಎಂದು ಇನ್ನೊಬ್ಬರಿದ್ದಾ

ಅವರ ಯಜಮಾನರಿಗೆ ೫೦ ರೂಪಾಯಿಗಳ ಕೆಲಸವಿದೆ. ಮನೆಯಲ್ಲಿ ಎಲ್ಲೂ ಇಲ್ಲದ ಆಡಂಬರ. ಇರುವವರು ಗಂಡಹೆಂಡರಿಬ್ಬರೇ ಆದರೂ ಬರುವ ೫೦ ರೂಪಾಯಿಗಳು ಸಾಲದು; ಗಂಡಹೆಂಡರಿಬ್ಬರೂ ಒಳ್ಳೆಯ ಆಗರ್ಭ ಶ್ರೀಮಂತರಂತಿರುವುದಕ್ಕೆ ಆಸೆ ಪಡುತ್ತಿದಾರೆ.

ಇದನ್ನು ನೋಡಿ ನಾನು ಅವರನ್ನು ಕೇಳಿದೆ: "ಕಮಲಮ್ಮನವರ ಮನೆಯ ವರಿಗೆ ಬರುವುದು ೨೦ ರೂಪಾಯಿ ಸಂಬಳ. ಮನೆ ತುಂಬ ಜನ. ಆದರೂ ಎಲ್ಲರೂ ಸಂತೋಷವಾಗಿದಾರೆ. ರಾಜಮ್ಮನ ಮನೆಯವರಿಗೆ ಬರುವುದು ೫೦ ರೂಪಾಯಿ ಸಂಬಳ, ಆದರೂ ನೆಮ್ಮದಿಯಿಲ್ಲ. ತಿಂಗಳಲ್ಲಿ ೮ ದಿನ ರಾಜಮ್ಮನವರ ಮುಖ ದಪ್ಪಗಿ ರುತ್ತದೆ. ೧೫ ದಿನ ಅವರ ಯಜಮಾನರ ಮೋರೆ ಕಪ್ಪಿಟ್ಟಿರುತ್ತದೆ ಏಕೆ?"

ಅದಕ್ಕೆ ಅವರು ಹೇಳಿದರು: "ಆಚೆಯ ಬೀದಿಯ ಸರಸಮ್ಮನವರ ಮಗಳನ್ನು ನೋಡಿದ್ದೀಯಾ?"

"ಹೌದು, ನೋಡಿದ್ದೇನೆ"

"ಆ ಹುಡುಗೀಗೆ ಹಲ್ಲುಬ್ಬು, ಹೌದೋ ಅಲ್ಲವೊ?"

"ಹೌದು."

"ಅವರ ಅಣ್ಣನ ಮಗನಿಗೆ ಆ ಹುಡುಗಿಕೊಟ್ಟಿದಾರೆ. ಮೊದಲು ಹುಡುಗ 'ಹುಡುಗಿಗೆ ಹಲ್ಲುಬ್ಬು; ನಾನೊಲ್ಲೆ' ಅಂದ. ಆಮೇಲೆ ಅವರಪ್ಪ ಅಮ್ಮ 'ಹಳೆ ನಂಟಸ್ತನ ಬಿಟ್ಟು ಹೋಗಬಾರದುಕಣೋ! ಇಷ್ಟರ ಮೇಲೆ ಒಂದೇ ಹುಡುಗಿ; ಕೊಟ್ಟು ಬಿಟ್ಟು (ಕೊಡಬೇಕಾದ ಉಡುಗೆರೆಗಳನ್ನೆಲ್ಲಾ ಕೊಟ್ಟು) ಮಾಡುತ್ತಾರೆ' ಎಂದು ಹೇಳಿದ ಮೇಲೆ ಹುಡುಗ ಒಪ್ಪಿಕೊಂಡ. ಮೊನ್ನೆ ದೀಪಾವಳಿಗೆ ಬಂದಾಗ ಅವರತ್ತೆ ರಾಮಯ್ಯನವರ ಮಗಳನ್ನು ತೋರಿಸಿ 'ನಮ್ಮ ಸೀತು ಹಲ್ಲು ಇಷ್ಟು ಉಬ್ಬೇನೋ?' ಎಂದು ಕೇಳಿದರಂತೆ. ರಾಮಯ್ಯನವರ ಮಗಳ ಹಲ್ಲನ್ನು ನೋಡಿದ ಮೇಲೆ ಅವನಿಗೆಷ್ಟೋ ಸಮಾಧಾನವಾಗಿರಬೇಕು. ಈಗ ಹದಿನೈದು ದಿನಗಳ ಹಿಂದೆ ನನಗೆ ಮೈಸೂರಿನಲ್ಲಿ ಸಿಕ್ಕಿದಾಗ ಆ ಹುಡುಗ ಮಾತಿಗೆಮಾತು ಬಂದಾಗ ಹೇಳಿದ 'ನನ್ನ ಹೆಂಡತಿಯದು ಉಬ್ಬು ಹಲ್ಲೇನೂ ಅಲ್ಲ ಅನ್ನಿ' ಎಂದು. ಹಾಗೆ, ನೋಡು. ಕಮಲಮ್ಮನವರು ತಮಗಿಂತ ಕಡಮೆಯಾಗಿರುವವರನ್ನೆಲ್ಲ ನೋಡಿಕೊಂಡು ಸರಸಮ್ಮ ನವರ ಅಳಿಯನ ಹಾಗೆ ನಾವೆಷ್ಟೋ ವಾಸಿ ಎಂದುಕೊಂಡು ಸಂತೋಷವಾಗಿದಾರೆ. ರಾಜಮ್ಮನವರು ತಮಗೆ ಸಿಕ್ಕದ್ದಕ್ಕೆ ಆಸೆಪಟ್ಟು ಸುಮ್ಮನೆ ಒದ್ದಾಡುತ್ತಾರೆ" ಎಂದು ಹೇಳಿದರು.

ನನಗೆ ಅವರು ಹೇಳಿದುದು ಸರಿ ಎಂದು ತೋರಿತು. ನಾನು ಕಮಲಮ್ಮನವರ

ಹಾಗಿರಬೇಕೆಂದು ಮನಸ್ಸುಮಾಡಿದೇನೆ. ಸರಿಯಲ್ಲವೆ ಹೇಳು. ಆಸೆಮಾಡು
ಹೋದರೆ ಕೊನೆಯೆಲ್ಲಿ? ಕಾಗದ ಬಹಳ ಉದ್ದವಾಗಿದೆ; ಬೇಜಾರುಮಾಡಿಕೊಳ್ಳ

ಇಂತು ನಿನ್ನ ಗೆಳತಿ.

೧೩

ವೆಂಕು,

"ನಿನ್ನ ಕಾಗದ ದೊಡ್ಡದಾಗಿದ್ದರೂ ಚೆನ್ನಾಗಿದೆ. ನೀನು ನನ್ನ ವಿ
ಏನು ತಿಳಿದುಕೊಂಡಿದೀಯ? ನೀನು ದೊಡ್ಡ ಕಾಗದ ಬರೆದರೆ ನನಗೆ ಓದುವು
ಪುರುಸತ್ತಿಲ್ಲವೆಂದು ತಿಳಿದುಕೊಂಡೆಯಾ? ಅದರ ಬದಲು ನಿನ್ನ ಕಾಗದ ಬರುವು
ಕಾಯುತ್ತಿರುತ್ತೇನೆ. ಬೇಜಾರಾದಾಗ ನಿನ್ನ ಹಳೆಯ ಕಾಗದಗಳನ್ನೂ ಇನ್ನೊ
ನ್ನೊಂದು ಸಲ ಓದುತ್ತೇನೆ" ಎಂದು ಬರೆದಿರುವೆ.

ವೆಂಕು, ಈಗ ನನಗೆ ಕಾಗದ ಬರೆಯುವುದಕ್ಕೇ ಪುರುಸತ್ತಿಲ್ಲ. ಅ
ಮನೆಯಲ್ಲಿದ್ದಾಗ ಹರಟೆ. ವೆಂಕು, ನಿನಗೆ ಹೇಳಬೇಕೆನ್ನುವುದು ಎಷ್ಟೋ
ಕೆಲವನ್ನು ನಿನಗೆ ಹೇಳಬೇಕೆಂದು ಜ್ಞಾಪಿಸಿಕೊಂಡಿರುತ್ತೇನೆ. ಆದರೆ ಬರೆಯುವು
ಕುಳಿತಾಗ ಎಲ್ಲೋ ಮರೆತುಹೋಗುತ್ತದೆ. ಇನ್ನು ಕೆಲವನ್ನು ನಿನಗೆ ಬ
ತಿಳಿಸುವುದಕ್ಕೆ ಆಗುವುದಿಲ್ಲ.

ಮೊನ್ನೆ ಅವರು ಯಾವುದೋ ಒಂದು ಪುಸ್ತಕ ಓದುತ್ತಾ ಹೇಳಿದ
ನೋಡು, ಇಲ್ಲೊಬ್ಬ ಕವಿ ಬರೆದಿರುವುದನ್ನು.—"ಅಯ್ಯೋ ಕವಿಗಳೆಲ್ಲಾ ತಾ
ಹೇಳಬೇಕೆಂದಿದ್ದದ್ದರಲ್ಲಿ ಅರ್ಧದಷ್ಟು ಹೇಳಿದ್ದರೆ . . ." ಎಂದು. ಹೌದು
ನಿಜವೆಂದು ಕಾಣುತ್ತದೆ. ನನಗೆಷ್ಟು ಸಂತೋಷವಾಗಿದೆಯೋ ಅದರರ್ಧದಷ್
ನಿನಗೆ ಹೇಳುವುದಕ್ಕಾಗಲಿಲ್ಲ.

ಈಗ ನನಗೆ ಮನೆಯ ಕೆಲಸಗಳನ್ನು ಮಾಡಲು ಬಲು ಆಸೆ. ಏಕೆಂದರೆ ಕೆ
ಮಾಡುವಾಗಲೆಲ್ಲ ಅವರು ಹೇಳಿದುದು ಜ್ಞಾಪಕಬರುತ್ತದೆ: "ನಾನು ನಿನ್ನ
ಹೆಚ್ಚು ಪ್ರೀತಿಸುತ್ತೇನೆ" ಎಂದದ್ದು. ಆಮೇಲೆ, ಬಹುಮಾನ ಬೇರೆ. ಇನ್ನೇ
ಬಹುಮಾನ ಸಿಕ್ಕುವ ದಿನ ಹತ್ತಿರ ಬಂತು. ಇದು ಹಾಗಿರಲಿ ಯಾವತ್ತೊ ಒಂ
ದಿನ ಸಿಗುವ ಬಹುಮಾನ. ನಿತ್ಯವೂ ಸಾಯಂಕಾಲ ಹತ್ತಿರ ನಿಲ್ಲಿಸಿಕೊಂಡು ಹೆ
ಮೇಲೆ ಕೈಯಿಟ್ಟು ಅವರು ಮೆಲ್ಲಗಾಡುವ ಪ್ರೀತಿಯ ಮಾತುಗಳನ್ನು ನೆನಸಿಕೊಂ
ನನ್ನನ್ನೇ ನಾನು ಮರೆತುಹೋಗುತ್ತೇನೆ.

ಇಂತು ನಿನ್ನ ಗೆಳತಿ.

೧೭

ವೆಂಕು,

ನಾನು ನಿನಗೆ ಹೇಳಿದ್ದೆ ಅಲ್ಲವೆ ಬಹುಮಾನದ ಬೊಂಬಾಯಿಬಳೆಯ ವಿಷಯ ವನ್ನು? ನೆನ್ನೆ ಬಹಳ ಜಗಳಮಾಡಿ—'ಜಗಳ' ಅಂದರೆ ಜಗಳ ಅಲ್ಲ—ನಾಳೆ ಕೊಟ್ಟೇ ಕೊಡಬೇಕೆಂದು ಒಪ್ಪಿಸಿದೆ. ಆಗಲಿ ಎಂದು ಹೇಳಿದರು.

ಇವತ್ತು ಬೆಳಗ್ಗೆ ಬೀದಿಯಲ್ಲಿ "ಬೊಂ ಬಾ ಯಿ ಬಳೇ" ಎಂದು ಕೂಗಿಕೊಂಡು, ಒಬ್ಬ ಬಳೆಗಾರ ಹೋಗುತ್ತಿದ್ದ. ಪಕ್ಕದಲ್ಲಿ ನಿಂತಿದ್ದ ತಮ್ಮ ತಂಗಿಯನ್ನು ಕರೆದು "ಲೇ ಬೇಗ ಹೋಗಿ ಬಳೆಯವನನ್ನು ಕರೆದು ವಿಶಾಲಿ ಕೈಗಾಗುವ ಎರಡು ಜೊತೆ ಬಳೆ ತೆಗೆದುಕೊಂಡುಬಾ" ಎಂದು ನಾಲ್ಕಾಣೆ ಕೊಟ್ಟರು. ಅವಳು ತಂದಮೇಲೆ "ತೆಗೆದುಕೊ, ಒಂದು ಜೊತೆ ಕೇಳಿದ್ದಕ್ಕೆ ಎರಡು ಜೊತೆ" ಎಂದರು. ನನಗಾಗ ಅರ್ಥವಾಯಿತು. ಬೊಂಬಾಯಿ ಬಳೆ ಎಂದು ನಾನು ಕೇಳಿದ್ದಕ್ಕೆ ಬೊಂಬಾಯಿ ಬಳೆ ಬಂತು. ಆದರೆ ಚಿನ್ನದ್ದು ಎಂದು ಮನಸ್ಸಿನಲ್ಲಂದುಕೊಂಡಿದ್ದಕ್ಕೆ ಗಾಜಿನದು ಬಂತು. ನನಗೆ ಬಹಳ ಸಿಟ್ಟು ಬಂತು. ನಾನು ಅಲ್ಲಿ ಒಂದು ಘಳಿಗೆಯೂ ನಿಲ್ಲದೆ ಹೊರಟುಬಂದೆ.

ಇಂತು ನಿನ್ನ ಗೆಳತಿ.

೧೮

ವೆಂಕು.

ನಾನು ಅವರನ್ನಿದುವರೆಗೂ ಮಾತಾಡಿಸಿಲ್ಲ. ರೂಮಿಗೂ ಹೋಗಿಲ್ಲ. ಏನೋ ನನಗೆ ಸಿಟ್ಟು. ಮೊನ್ನೆ ನಾನು ಹಜಾರದಿಂದ ಅಡಿಗೆಮನೆಗೆ ಹೋದಾಗ ಅವರು ಬಾಗಿಲ ಬಳಿ ನಿಂತಿದ್ದರು. ಹತ್ತಿರದಲ್ಲಿ ಅವರ ತಂಗಿ ಇದ್ದಳು. "ಏನೇ, ನಿಮ್ಮತ್ತಿಗೆ ಗೇಕೇ ಸಿಟ್ಟು ಬಂದಿದೆ? ನನ್ನನ್ನೇಕೆ ಮಾತಾಡಿಸುವುದಿಲ್ಲ? ನೋಡು, ಹೇಗೆ ನಾಗರ ಹಾವಿನ ಹಾಗೆ ಹೋಗುತ್ತಾಳೆ!" ಎಂದರು. ಅಲ್ಲದೆ ನನ್ನನ್ನು ನೋಡಿದಾಗಲೆಲ್ಲ ನನಗೆ ಸಿಟ್ಟು ಬರುವಹಾಗೆ ಒಂದು ತರಹ ನಗುತ್ತಾರೆ. ನನಗಿನ್ನೂ ಸಿಟ್ಟು ಹೆಚ್ಚುತ್ತದೆ.

ನೆನ್ನೆ ಸಾಯಂಕಾಲ ನಾನೊಬ್ಬಳೇ ಮನೆಯಲ್ಲಿದ್ದೆ. ಅವರು ಬಂದರು. ಅವರು ಬಂದದ್ದು ನೋಡಿ ನಾನು ಅಡಿಗೆ ಮನೆಗೆ ಹೋದೆ. ಅವರು ಅಲ್ಲಿಗೂ ಬಂದರು. ಅಡಿಗೆ ಮನೆಯ ಒಂದು ಕೊನೆಗೆ ಹೋದೆ; ಅಲ್ಲಿಗೂ ಬಂದರು. ನಾನಿನ್ನೆಲ್ಲಿಗೂ ಹೋಗಲಾಗಲಿಲ್ಲ. ಗೋಡೆಯ ಕಡೆಗೆ ಮುಖ ತಿರುಗಿಸಿಕೊಂಡೆ. ಅವರು ನನ್ನೆರಡು ತೋಳುಗಳನ್ನೂ ಹಿಡಿದುಕೊಂಡು ತಮ್ಮ ಕಡೆಗೆ ತಿರುಗಿಸಿದರು. ನನಗಿದ್ದ ಕೋಪ ವೆಲ್ಲ ಹೋಗಿ ನಗು ಬಂತು; ನಕ್ಕುಬಿಟ್ಟೆ. ಅವರೂ ನಕ್ಕುಬಿಟ್ಟರು. ಆಮೇಲೆ ನನ್ನ ಕೈ ಹಿಡಿದು ರೂಮಿಗೆಳೆದುಕೊಂಡು ಹೋದರು. ಮಂಚದ ಮೇಲೆ ಒಂದು

ಕೊನೆಯಲ್ಲಿ ಕೂಡಿಸಿ ಪಕ್ಕದಲ್ಲಿ ಕೂತುಕೊಂಡರು. ಓಡಿಹೋಗದ ಹಾಗೆ ಎ
ಕೈಗಳನ್ನೂ ಹಿಡಿದುಕೊಂಡರು. 'ಏನು ಸಿಟ್ಟು?' ಎಂದು ಕೇಳಿದರು.

ನಾನು ಮಾತಾಡಲಿಲ್ಲ. ಆದರೆ ನಗುಮಾತ್ರ ತಡೆಯುವುದಕ್ಕಾಗದಷ್ಟು ಬ
ತ್ತಿತ್ತು.

'ಮಾತನಾಡುವುದಿಲ್ಲವೆ?' ಎಂದು ಕೇಳಿದರು. 'ಉಹು' ಎನ್ನುವಂತೆ ತ
ಲ್ಲಾಡಿಸಿದೆ. 'ಮಾತನಾಡುವ ಹಾಗೆ ಮಾಡಲೋ?' ಎಂದು ಜೇಬಿನಿಂದ ಒ
ಕಾಗದದ ಪೊಟ್ಟಣ ತೆಗೆದರು. ಕಾಗದ ಬಿಚ್ಚಿ ಒಂದು ಜೊತೆ ಚಿನ್ನದ ಬಳೆ ತೆಗೆ
"ತೆಗೆದುಕೊ' ಎಂದರು. 'ಈಗ ಮಾತಾಡುತ್ತೀಯಾ?' ಎಂದರು. ನಕ್ಕುಬಿ
"ಈಗ ನಾನೊಂದು ಮಾತು ಕೇಳುತ್ತೇನೆ, ಹೇಳುತ್ತೀಯ?' ಎಂದರು.

'ಹು' ಎಂದೆ.

'ನಿನಗೆ ಬಳೆ ಏಕೆ?'

'ಹಾಕಿಕೊಳ್ಳುವುದಕ್ಕೆ.'

'ಏಕೆ ಹಾಕಿಕೊಳ್ಳಬೇಕು?'

'ಚೆನ್ನಾಗಿ ಕಾಣುವುದಕ್ಕೆ.'

'ಯಾರ ಕಣ್ಣಿಗೆ?'

'ಇನ್ನು ಯಾರ ಕಣ್ಣಿಗೆ' ಎಂದು ನಾನವರ ಕಡೆ ನೋಡಿದೆ.

'ನಾನೊಂದು ಮಾತು ಹೇಳುತ್ತೇನೆ. ಏನೂ ತಿಳಿದುಕೊಳ್ಳುವುದಿಲ್ಲವೋ?'

'ಇಲ್ಲ, ಹೇಳಿ.'

'ಹಾಗಾದರೆ ಹೇಳುತ್ತೇನೆ. ನೋಡು, ಚೆನ್ನಾಗಿ ಕಾಣುವುದರಲ್ಲಿ ಮ
ತರವಿದೆ. ಒಳ್ಳೆಯ ಒಡವೆ ಬಟ್ಟೆ ಹಾಕಿಕೊಳ್ಳುವುದರಿಂದ ಚೆನ್ನಾಗಿ ಕಾಣಬಹು
ಹೌದೊ?'

'ಗೊತ್ತಾಯಿತು' ಅನ್ನುವಂತೆ ತಲೆಯಲ್ಲಾಡಿಸಿದೆ.

'ಇದು ಚೆನ್ನಾಗಿರುವುದೇ ಆದರೂ ಇದು ಮನುಷ್ಯರು ಮಾಡಿಕೊ
ಅಲಂಕಾರ. ಇದಕ್ಕಿಂತಲೂ ದೇವರು ಕೊಟ್ಟಿರುವ ಅಲಂಕಾರ ಒಂದಿದೆ. ಅ
ಇನ್ನೂ ಚೆನ್ನಾಗಿರುತ್ತೆ. ಯಾವುದು, ಗೊತ್ತೆ? ಕೈಕಾಲು ಚೆನ್ನಾಗಿದ್ದು ಕ
ಮೂಗು ನೇರವಾಗಿದ್ದು ಬೆಳ್ಳಗೆ ತೆಳ್ಳಗೆ ಇರುವುದು. ಶಾಕುಂತಲ ನಾಟಕ ನಾ
ಓದಿದೆವಲ್ಲ, ಅದರಲ್ಲಿ ದುಷ್ಯಂತ ಶಕುಂತಲೆಯನ್ನು ಋಷ್ಯಾಶ್ರಮದಲ್ಲಿ ನೋಡಿ
ತನ್ನಲ್ಲೇ ಹೇಳಿಕೊಂಡದ್ದು ಜ್ಞಾಪಕವಿದೆಯೋ ". . . ಸ್ವಭಾವವಾಗಿ ಚೆನ್ನಾ
ವವರಿಗೆ ಅಲಂಕಾರ, ಏಕೆ" ಎಂದು? ಇದು ಅಲ್ಲದೆ ಇನ್ನೂ ಒಂದಿದೆ. ಅ

ಎಲ್ಲದಕ್ಕಿಂತಲೂ ಚೆನ್ನಾದದ್ದು. ಪಡೆಯಬೇಕು ಎಂದು ಕಷ್ಟಪಟ್ಟು ತಪಸ್ಸುಮಾಡಿದವರಿಗೆ ಇದು ಸಿಕ್ಕುತ್ತದೆ. ಅದೇನು ಅಂದರೆ ಒಳ್ಳೆಯ ಗುಣ, ಒಳ್ಳೆಯ ನಡತೆ. ಕಣ್ಣುಮೂಗು ನೇರವಾಗಿದ್ದವರನ್ನೇನೋ ನೋಡಿದಾಗ 'ಎಷ್ಟು ಚೆನ್ನಾಗಿದ್ದಾರೆ' ಎನ್ನಿಸಬಹುದು. ಆದರೆ ಅವರ ನಡೆ ನುಡಿ ಸರಿಯಾಗಿಲ್ಲವೆಂದಮೇಲೆ ಅವರನ್ನು ಕಂಡರೆ ಏನೋ ಒಂದು ಬಗೆಯ ಅಸಹ್ಯವಾಗುತ್ತದೆ. ನನ್ನ ಈ ಉಪನ್ಯಾಸ ಕೇಳಿ ನಿನಗೆ ಬೇಜಾರಾಗುತ್ತೇನು ?"

'ಇಲ್ಲ' ಎಂದೆ. ಅದೇನೋ ನನಗೆ ಅವರು ಮಾತಾಡುತ್ತಿದ್ದರೆ ಕೇಳುವುದಕ್ಕೆ ಬೇಜಾರಾಗುವುದಿಲ್ಲ. ಆಮೇಲೆ, ಇದಕ್ಕೆಲ್ಲ ಏನೇನೋ ದೊಡ್ಡ ದೊಡ್ಡ ಹೆಸರು ಹೇಳಿದರಮ್ಮ, ನನಗೆ ಜ್ಞಾಪಕಕ್ಕೆ ಬರುವುದಿಲ್ಲ. ಹು, ಈಗ ಗೊತ್ತಾಯಿತು. ನೋಡು— "ಅಲಂಕಾರ ಸೌಂದರ್ಯ", "ಅಂಗಸೌಂದರ್ಯ" ಮತ್ತು "ಆತ್ಮಸೌಂದರ್ಯ" ಎಂದು.

"ನೋಡು, ಈಗ ನೀನೊಪ್ಪಿದರೆ ಇದಿಟ್ಟುಕೊ, ಇಲ್ಲದಿದ್ದರೆ ವಾಪಸು ಕೊಡು, ಬೇರೆ ತರೋಣ. ನಾನು ಅಂಗಡಿಯವನಿಗೆ 'ತೋರಿಸಿಕೊಂಡು ಬರುತ್ತೇನೆ' ಎಂದು ಹೇಳಿ ತಂದಿದ್ದೇನೆ" ಎಂದರು.

ನನಗೇಕೋ ಬಳೆ ಬೇಡ ಅನ್ನಿಸಿತು. 'ಹಿಂದಕ್ಕೆ ಕೊಟ್ಟುಬಿಡಿ, ನನಗೆ ಬಳೆ ಬೇಡ' ಅಂದೆ.

"ಏಕೆ ಬೇಡ ?"

"ಇದಕ್ಕಿಂತಲೂ ಚೆನ್ನಾಗಿರುವ ಅಲಂಕಾರ ನಾನೇ ಸಂಪಾದಿಸುತ್ತೇನೆ" ಎಂದೆ.

"ಅದೀಗ ಸರಿ; ನೀನು ಒಳ್ಳೆಯ ಹುಡುಗಿ" ಎಂದು ನನ್ನ ಕೆನ್ನೆಯ ಮೇಲೆ ಮೆತ್ತಗೊಂದು ಏಟುಕೊಟ್ಟರು.

ಇಂತು ನಿನ್ನವಳು.

೧೯

ವೆಂಕು,

ಅದೇನೋ ನನಗೆ ತಿಳಿಯದು, ಏನಾದರೂ ಹೊಸದಿದ್ದರೆ ನಿನಗೆ ಕಾಗದ ಬರೆಯದಿದ್ದರೆ ನನಗೆ ಸಮಾಧಾನವೇ ಇರುವುದಿಲ್ಲ. ಏನಾದರೂ ದುಃಖವಾದರೆ ನಿನಗೆ ಹೇಳಿಕೊಂಡರೆ ಇದ್ದದ್ದರಲ್ಲಿ ಮನಸ್ಸು ಸಮಾಧಾನಗೊಂಡ ಹಾಗೆ ಆಗುವುದು. ಸಂತೋಷವಾದದ್ದನ್ನು ಬರೆದರೆ ಮಾಡಬೇಕಾದ ಕೆಲಸವನ್ನು ಮಾಡಿದುದರಿಂದ ಬರುವ ತೃಪ್ತಿ ಉಂಟಾಗುವುದು.

ನಿನ್ನೆ ಮಧ್ಯಾಹ್ನ ಕಾಫಿ ತೆಗೆದುಕೊಂಡು ರೂಮಿಗೆ ಹೋದೆ. ಅವರು ಕ್ಟ್ ಯಲ್ಲಿ ಏನೋ ನೋಡುತ್ತಿದ್ದರು. ನಾನು ಏಕೆ ಕೂಗಲಿ ಎಂದು ಮೇಜಿನ್ಮೇ ಕಾಫಿ ಇಟ್ಟು ಒಂದುಕಡೆ ನಿಂತುಕೊಂಡೆ. ಸ್ವಲ್ಪ ಹೊತ್ತಾದ ಮೇಲೆ ಕ್ಟ್ ಅವರು ತಿರುಗಿ ನೋಡಲಿಲ್ಲ; ಏನು ನೋಡುತ್ತಿರಬಹುದೆಂದು ಹಾಗೇ ನೋಡ್ ನಮ್ಮ ಮನೆಯ ಎದುರಿಗೆ ಪಕ್ಕದ ಮನೆಯ ಒಂದು ಕಿಟಕಿ ಇದೆ. ಅದರಲ್ಲಿ ಮನೆಯ ಹುಡುಗಿಯೊಂದು ಕನ್ನಡಿಯಿಟ್ಟುಕೊಂಡು ತಲೆಬಾಚಿಕೊಳ್ಳುತ್ತಾ ನಿಂತ್ತಿ ಇಷ್ಟರಲ್ಲೆ ಅವರು ಹಿಂತಿರುಗಿ ನೋಡಿ,

"ಯಾವಾಗ ಬಂದೆಯೆ?" ಎಂದರು.

"ನಾನು ಬಂದದ್ದು ಹೋದದ್ದು ನಿಮಗೇನು ಬೇಕು, ಹೇಳಿ!" ಎಂದೆ. ಕಾಫಿ ಕೈಗೆ ತೆಗೆದುಕೊಂಡು "ಕಾಫಿ ತಣ್ಣಗಾಗಿದೆಯಲ್ಲೆ?" ಎಂದು ಕೇಳಿದ

"ನಿಮಗೆ ಕಾಫಿ ತಾನೆ ಏಕೆ ಬೇಕಾಗುತ್ತೆ!" ಎಂದೆ.

"ಹೌದು, ನೀನು ಬಹಳ ಹೆಚ್ಚಿಕೊಂಡಿದ್ದೀಯೆ, ನಿನಗೆ ಬುದ್ಧಿ ಕಲಿಸಬೇಕು" ಎಂದು ನನ್ನನ್ನು ಹಿಡಿದುಕೊಳ್ಳಲು ಬಂದರು. ನಾನು ಬಾಗಿಲಿನಿಂದಾಚೆ ಇದ್ದೆ.

ಇಂತು ನಿನ್ನವಳು.

೨೦

ವೆಂಕು,

ಈಚೆಗೆ ಅವರು ಬದಲಾಯಿಸಿರುವ ಹಾಗೆ ಕಾಣುತ್ತದೆ. ನನ್ನನ್ನು ಮೊ ನಂತೆಯೇ ಮಾತನಾಡಿಸುತ್ತಾರೆ. ಹಾಗೆಯೇ ಪ್ರೀತಿಸುವಂತೆಯೂ ಕಾಣುತ್ತಾ ಆದರೂ ಏನೋ ಬದಲಾಯಿಸಿರುವ ಹಾಗೆ ನನಗೆ ಕಾಣುತ್ತದೆ.

ನಿನ್ನೆ ದಿವಸ ಕೂಡ ಅವರು ಅದೇ ಕಿಟಕಿಯ ಬಳಿ ನಿಂತುಕೊಂಡು ನೋ ತ್ತಿದ್ದರು. ಆ ಹುಡುಗಿಯೂ ತಮ್ಮ ಮನೆ ಕಿಟಕಿಯಲ್ಲಿ ನಿಂತು ನೋಡುತ್ತಿದ್ದ ನಿಜವಾಗಿಯೂ ನನಗೆ ಮೈಯೆಲ್ಲ ಉರಿದುಹೋಯಿತು. ರೂಮಿನೊಳಕ್ಕೆ ಹೋ ದ್ದವಳು ಬಾಗಿಲನ್ನು ಧೊಪ್ಪನೆ ಹಾಕಿಕೊಂಡು ಹಿಂದಕ್ಕೆ ಹೊರಟುಬಂದೆ. ನ ಮನೆಯ ಹಿತ್ತಲಿನಲ್ಲಿ ಒಂದು ದಾಳಿಂಬರೆ ಹಣ್ಣಿನ ಗಿಡವಿದೆ. ಅದರ ಕೆಳಗೆ ನಿ ಕೊಂಡೆ. ತಡೆಯಲಾರದೆ ಹೋಯಿತು. ಒಂದು ಕೊಂಬೆಯನ್ನು ಹಿಡಿದುಕೊಂ ನಿಂತು ಅತ್ತುಬಿಟ್ಟೆ.

ಆಮೇಲೆ ಒಳಕ್ಕೆ ಬಂದೆ. ನಮ್ಮ ಮನೆಯ ದೊಡ್ಡ ಕನ್ನಡಿಯಲ್ಲಿ ನೋ ಕೊಂಡೆ. ನನಗೆ ಅನ್ನಿಸಿತು, "ನಾನು ಆ ಹುಡುಗಿಗಿಂತ ಎಷ್ಟು ಚೆನ್ನಾಗಿದ್ದ

ಅವರು ಏಕೆ ಆ ಹುಡುಗಿಯನ್ನು ನೋಡುವುದು?" ಎಂದು. ನನ್ನ ಕೈ ನೋಡಿಕೊಂಡೆ. ಇಷ್ಟು ಬೆಳ್ಳಗಿದ್ದಾಳೆಯೇ ಅವಳು ಎಂದುಕೊಂಡೆ. ಅಷ್ಟುಹೊತ್ತಿಗೆ ಅದೇನೋ ಆ ಹುಡುಗಿಯೇ ನಮ್ಮ ಮನೆಗೆ ಬಂದಳು. "ಏನ್ರೀ ವಿಶಾಲಾಕ್ಷಮ್ಮ, ಚೌಕದಲ್ಲಿ ಎಳೆ ತೆಗೆಯುವುದನ್ನು ಹೇಳಿಕೊಡುತ್ತೀರೇನ್ರಿ? ನಿಮಗೆ ಚೆನ್ನಾಗಿ ಬರುತ್ತಂತಲ್ರಿ, ಎದುರುಮನೆ ಸೀತಮ್ಮ ಹೇಳಿದರು ಕಣ್ರಿ" ಎಂದಳು.

ನಾನು ಆ ಹುಡುಗಿಯೊಡನೆ ಯಾವತ್ತೂ ಮಾತಾಡಿರಲಿಲ್ಲ. ಮಾತಾಡಿದ್ದು ಇವತ್ತೇ ಮೊದಲನೆಯ ದಿನ. ಆದರೂ ನನಗೆ ಅವಳನ್ನು ನೋಡಿ ಎಲ್ಲೂ ಇಲ್ಲದ ಸಿಟ್ಟು ಬಂತು. "ನನಗೇನೂ ಬರುವುದಿಲ್ಲಮ್ಮ! ಬಂದರೂ ನನಗೆ ಈಗ ಹೇಳಿಕೊಡುವುದಕ್ಕಾಗುವುದಿಲ್ಲಮ್ಮ!" ಎಂದು ಸಿಡುಕಲಾಗಿ ಹೇಳಿದೆ. ಆ ಹುಡುಗಿ ಪೆಚ್ಚಾಗಿ ಹೊರಟುಹೋದಳು. ನಿಜವಾಗಿಯೂ ಆ ಹುಡುಗಿಯಮೇಲೆ ಏಕೆ ಕೋಪಿಸಿಕೊಂಡೆನೋ ನನಗೆ ತಿಳಿಯದು.

ಇಂತು ನಿನ್ನ ದುಃಖಪಡುತ್ತಿರುವ ಗೆಳತಿ.

೨೧

ವೆಂಕು,

ನಿನ್ನ ಎರಡು ಕಾಗದಗಳಿಗೂ ಉತ್ತರಕೊಡದಿದ್ದುದಕ್ಕೆ ಕ್ಷಮಿಸು. ನನಗೇಕೋ ಮೈಯಲ್ಲಿ ಸ್ವಸ್ಥವಿರಲಿಲ್ಲ. ಮೈಯಲ್ಲೇನು, ಮನಸ್ಸಿನಲ್ಲಿ ಎಂದರೆ ಸರಿಹೋಗುತ್ತೆ. ಎತ್ತ ಕಡೆ ತಿರುಗಿದರೂ ನನ್ನ ಕಣ್ಣಿಗೆ ಅದೇ ನೋಟ ಕಾಣುತ್ತಿದೆ. "ಅವರು ನಮ್ಮ ಮನೆಯ ಕಿಟಕಿಯಿಂದ ಅವಳನ್ನು ನೋಡುತ್ತಿರುವುದು. ಅವಳು ತಮ್ಮ ಮನೆಯ ಕಿಟಕಿಯಿಂದ ಅವರನ್ನು ನೋಡುತ್ತಿರುವುದು." ಒಬ್ಬೊಬ್ಬಳೇ ಇದ್ದಾಗ, ಇದ್ದಕ್ಕಿದ್ದ ಹಾಗೆಯೇ ತಡೆಯಿಲ್ಲದಂತೆ ಕಣ್ಣಿನಲ್ಲಿ ನೀರು ಹರಿದುಬರುವುದು. ಒರಸಿಕೊಂಡಷ್ಟೂ ಹೆಚ್ಚು ಹೆಚ್ಚು ಬರುವುದು. ಅವರು ಬಂದಾಗ, ಆಕಡೆಗೆ ತಿರುಗಿನೋಡಲು ಕೂಡ ಮನಸ್ಸು ಬರುತ್ತಿರಲಿಲ್ಲ.

ಹೀಗೆ ಎರಡುಮೂರು ದಿನಗಳಾದವು. ಒಂದು ದಿನ ತಡೆಯಲಾರದಷ್ಟು ಜ್ವರ ಬಂದಿತು. ರೂಮಿಗೆ ಹೋಗಿ ಹಾಸಿಗೆ ಹಾಕಿಕೊಂಡು ಮಲಗಿದೆ. ಅವರು ಬಂದರು. ಅವರು ಒಳಗೆ ಬಂದದ್ದನ್ನು ನೋಡಿ ಮುಸುಕುಹಾಕಿಕೊಂಡೆ. ಅತ್ತಕಡೆ ಮುಖ ತಿರುಗಿಸಿಕೊಂಡೆ. ನಾನು ಮುಸುಕು ತೆಗೆದು ಮಾತನಾಡಿಸಬಹುದೆಂದು ಅವರು ಬಹಳ ಹೊತ್ತು ಹತ್ತಿರ ನಿಂತಿದ್ದರೆಂದು ಕಾಣುತ್ತದೆ. ನಾನು ಬಹಳ ಹೊತ್ತಿನ ವರೆಗೂ ಮುಸುಕು ತೆಗೆಯಲಿಲ್ಲ. ಆಮೇಲೆ ಒಂದುಸಲ ಮುಸುಕು ತೆಗೆದು ನೋಡಿದಾಗ

ಅವರು ಮಂಚದ ಪಕ್ಕದಲ್ಲಿ ಒಂದು ಕುರ್ಚಿ ಎಳೆದುಕೊಂಡು ಕುಳಿತುಕೊಂಡಿದ್ದ ಮುಖ ಸಪ್ಪಗಿತ್ತು, ತಲೆ ಬಗ್ಗಿಸಿಕೊಂಡು ಏನೂ ಬೇಡದವರಂತೆ, ಬಹಳ ಯೋ ಮಾಡುವಂತೆ, ಕಾಣುತ್ತಿತ್ತು. ಮತ್ತೆ ನಾನು ಮುಸುಕು ತೆಗೆದಾಗ ಸಾಯಂಕಾ ವಾಗಿತ್ತು. ಅವರು ಮಾತ್ರ ಹಾಗೆಯೇ ಕುಳಿತಿದ್ದರು. ನಮ್ಮತ್ತೆ ಹೊರಗ "ಊಟ ಬೇಡವೇನೋ ಮಗು ಇನ್ನೂ?" ಎಂದು ಕೂಗಿದರು. ಅವರು ಮಾತ ಲಿಲ್ಲ. "ಏನಾದರೂ ಮಾಡಿಕೊಳ್ಳಿ, ನಿಮಗೆ ಯಾರು ಹೇಳುವುದಕ್ಕಾಗುತ್ತದೆ! ಎಂದು ಗೊಣಗಿಕೊಂಡರು.

ಅವರು ಅಷ್ಟುಹೊತ್ತು ಹಾಗೆಯೇ ಊಟಮಾಡದೆ ಕುಳಿತಿರುವುದನ್ನು ಕಂ ನನಗೆ ಬಹಳ ಸಂಕಟವಾಯಿತು. ದಿಂಬಿನ ಮೇಲೆ ತಲೆಯಿಟ್ಟುಕೊಂಡು ಅತ್ತು ಇದ್ದ ಅಸಮಾಧಾನವೆಲ್ಲ ಕರಗಿಹೋಯಿತು. ನಾನು ಅಳುತ್ತಿರುವುದನ್ನು ನೋ ಅವರು ಹತ್ತಿರ ಬಂದು ತಲೆಯ ಮೇಲೆ ಕೈಯಿಟ್ಟು,

"ಯಾಕೆ, ಏನಾಯಿತು?" ಎಂದರು.

ನಾನು ಮಾತನಾಡಲಿಲ್ಲ. "ನಾನು ಬಂದರೆ ಮುಖ ಮುಚ್ಚಿಕೊಳ್ಳುತ್ತೀ ಮಾತಾಡಿಸಿದರೆ ಮಾತಾಡುವುದಿಲ್ಲ. ನಾನು ಅಂತಹ ತಪ್ಪೇನು ಮಾಡಿರುವುದು ಎಂದರು.

"ನಿಮಗೆ ನನ್ನಲ್ಲಿ ಪ್ರೀತಿಯಿಲ್ಲ. ನಾನೊಂದು ಅಡ್ಡಿ ನಿಮ್ಮ ದಾರಿಯ ಎಂದು ಬಹಳ ಕಷ್ಟದಿಂದ ಹೇಳಿದೆ.

"ನಾನು ಹಾಗೆಂದು ಯಾವತ್ತು ಹೇಳಿದೆ?"

"ನೀವು ಹೇಳಬೇಕೆ? ನನಗೇ ಗೊತ್ತಾಯಿತು."

"ಹೇಗೆ?"

"ಅದೂ ಹೇಳಬೇಕೆ? ನೀವು ಆ ಮನೆಯ ಹುಡುಗಿಯನ್ನೇಕೆ ನೋಡು... ಎಂದೆ.

"ಇಷ್ಟೆತಾನೆ! ಇದಕ್ಕೇ ಇಷ್ಟೆಲ್ಲ ಕೋಪ? ಅದಕ್ಕೆ ಜ್ವರವೇ? ವಿಶಾ ನಾನು ಹೇಗೆ ಇದು ಸುಳ್ಳು ಎನ್ನುವುದನ್ನು ತೋರಿಸಲಿ? ಇಷ್ಟುದಿನ ಜೊತೆಯಲ್ಲಿದ್ದ ನನ್ನನ್ನು ನೀನು ತಿಳಿದುಕೊಳ್ಳಲಾರದೆ ಹೋದೆಯಲ್ಲ! ನಾನು ಎಲ್ಲೋ ಸುಮ್ಮ ನೋಡಿದೆನೋ ಇಲ್ಲವೊ ಅದಕ್ಕೇನೇನೋ ಕಥೆ ಕಟ್ಟುವೆಯಲ್ಲ! ವಿಶಾಲೀ, ನಿ ಗಿಯೂ ನಿನ್ನಾಣೆಗೂ ಇದರಲ್ಲೇನೇನೂ ನಿಜವಿಲ್ಲ" ಎಂದು ನನ್ನ ಕೈ ಹಿಡ ಕೊಂಡು ಸಂಕಟದಿಂದ ಹೇಳಿದರು. ಎರಡುತೊಟ್ಟು ಕಣ್ಣೀರು ನನ್ನ ಕೈಮೇ ಬಿದ್ದಿತು. ಕತ್ತೆತ್ತಿ ನೋಡಿದೆ; ಅವರು ಅಳುತ್ತಿದ್ದರು. ನನಗೆ ತಡೆಯುವುದಕ್ಕಾಗ

ಬೆಳಗಿನಿಂದ ಏಳುವುದಕ್ಕಾಗದಿದ್ದವಳು—ಹೇಗೊ ಏನೋ ತಿಳಿಯದು—ಥಟ್ಟನೆ ಎದ್ದು ಅವರ ಭುಜದಮೇಲೆ ತಲೆಯಿಟ್ಟು ಅಳುತ್ತಾ, "ಇಲ್ಲ, ನಾನು ಮಾಡಿದುದು ತಪ್ಪಾಯಿತು" ಎಂದು ನಾನೇ ಕೇಳಿಕೊಂಡೆ.

ವೆಂಕು, ಅದೇನು ವಿಷಯವೊ ನನಗೆ ತಿಳಿಯದು. ನಾನು ಅವರಲ್ಲಿ ಎಷ್ಟು ಬೇಗ ಅನುಮಾನಪಟ್ಟೆನೋ, ಸಿಟ್ಟುಮಾಡಿಕೊಂಡೆನೋ, ಅಷ್ಟೇ ಬೇಗ ಅನುಮಾನ ವೆಲ್ಲಾ ಮಾಯವಾಗಿ ದೃಢವಾದ ನಂಬಿಕೆ ಬಂತು.

ಈಗ ಆರೋಗ್ಯವಾಗಿದೇನೆ. ಹಿಂದಿನದೆಲ್ಲ ನೆನಸಿಕೊಂಡರೆ ಈಗ ಅದೆಲ್ಲಾ ಹುಚ್ಚು ಎನ್ನಿಸುತ್ತದೆ. ಏನಾದರೂ ಮಾತಿಗೆ ಮಾತು ಬಂದರೆ ಅವರು ಒಂದೊಂದು ಸಲ ಹೇಳುತ್ತಾರೆ. "ನೋಡು. ಆ ಮನೆಯ ಹುಡುಗಿಯನ್ನು ಈವತ್ತು ಮಾತಾಡಿ ಸುತ್ತೇನೆ. ಜೋಕೆ" ಎಂದು. ಆದರೆ ನನಗೆ ಗೊತ್ತು, ಆ ಹುಡುಗಿ ಎದುರಿಗೆ ಬಂದರೂ ಅವರು ತಲೆಯೆತ್ತಿ ನೋಡುವುದಿಲ್ಲವೆಂದು.

ಇಂತು ನಿನ್ನವಳು.

೨೨

ವೆಂಕು,

ಒಂದು ಹೊಸ ಸಮಾಚಾರ. ಅದು ನಿನಗೆ ಸಂಬಂಧಿಸಿದ್ದೆ. ನಮ್ಮ ಯಜ ಮಾನರ ಹಳೆಯ ಸ್ನೇಹಿತರೊಬ್ಬರು ಬಂದಿದಾರೆ. ಅವರು ಯಾವುದೋ ದೊಡ್ಡ ಪರೀಕ್ಷೆಯಲ್ಲಿ ಪಾಸಾಗಿ ಬೊಂಬಾಯಿನಲ್ಲಿ ಕೆಲಸದಲ್ಲಿದ್ದಾರೆ. ೫೦೦ ರೂಪಾಯಿಗಳ ಸಂಬಳ ಬರುತ್ತಿದೆ. ಅವರಿಗಿನ್ನೂ ಮದುವೆಯಿಲ್ಲ. ಈಗ ಮದುವೆಮಾಡಿಕೊಳ್ಳ ಬೇಕೆಂದು ಅಪೇಕ್ಷಿಸಿದ್ದಾರೆ. ನಾನೂ ಅವರೂ ಆಗಾಗ್ಗೆ ನಿನ್ನ ಮಾತು ಆಡುತ್ತಿರು ತ್ತೇವೆ. ಇವತ್ತು ಅವರಿಗೆ ನಾನು ಹೇಳಿದೆ. "ನಿಮ್ಮ ಸ್ನೇಹಿತರು ಬಾಲವಿಧವೆ ಯನ್ನು ಮದುವೆಮಾಡಿಕೊಳ್ಳಬೇಕೆಂದಿದಾರಲ್ಲ, ನಮ್ಮ ವೆಂಕೂನೇ ಮಾಡಿಕೊಂಡರೆ ಎಷ್ಟು ಚೆನ್ನಾಗಿರುತ್ತೆ!" ಎಂದೆ. ಅವರು ತಮ್ಮ ಸ್ನೇಹಿತರೊಡನೆ ಪ್ರಸ್ತಾಪಮಾಡಿಧ ರೆಂದು ಕಾಣುತ್ತದೆ. ಸ್ವಲ್ಪ ದಿನದಲ್ಲೆ ನಿಮ್ಮೂರಿಗೆ ಬರಬಹುದು; ನಿಮ್ಮ ತಂದೆತಾಯಿ ಗಳೊಡನೆ ಮಾತಾಡಿಕೊಂಡು ನಿನ್ನನ್ನು ನೋಡಿಕೊಂಡು ಬರಬಹುದು.

ವೆಂಕು, ಇದೇನಾದರೂ ಆದರೆ ಎಷ್ಟು ಚೆನ್ನಾಗಿರುತ್ತೆ! ನಮ್ಮ ಮನೆಯವರು ಆಗಾಗ್ಗೆ ತಮ್ಮ ಸ್ನೇಹಿತರ ವಿಷಯ ಮಾತಾಡುತ್ತಿರುತ್ತಾರೆ. ಬಹಳ ಒಳ್ಳೆಯವರೆಂದು ಕಾಣಬರುತ್ತದೆ. ನಿನ್ನ ಕಾಗದವನ್ನು ಎದುರುನೋಡುತ್ತಿದ್ದೇನೆ.

ಇಂತು ನಿನ್ನವಳು.

೨೩

ವೆಂಕು,

ನಿನ್ನ ಕಾಗದ ಓದುತ್ತಲೂ ಬಹಳ ಸಂಕಟವಾಯಿತು. ದೇವರು ದೊಡ್ಡವ... ಎಲ್ಲವನ್ನೂ ಸರಿಮಾಡುವಂತೆ ಕಾಣುತ್ತದೆ. ನೀನು ಬರೆದಿರುವದನ್ನೂ ... ಮರೆಯುವಂತಿಲ್ಲ: "ನನಗೆ ಗಂಡನೆಂದರೇನೋ ಸರಿಯಾಗಿ ಗೊತ್ತಿಲ್ಲ. ನಿನ್ನ ಕಾ... ಗಳನ್ನು ಓದಿದ ಮೇಲೆ, ಅಯ್ಯೋ ನನಗೂ ಅಂತಹವರೊಬ್ಬರು ಬೇಕೆನ್ನಿಸುತ್ತ... ಇಲ್ಲದಿದ್ದರೆ ಬದುಕಿರುವುದೇ ಕಷ್ಟ ಎನ್ನುವ ಹಾಗಾಗುತ್ತದೆ. ಎಲ್ಲರೂ 'ಈ ಹುಡು... ಗಂಡನಿಲ್ಲ' ಎನ್ನುತ್ತಾರೆ. ನನಗೆ ಅಂತಹವರೊಬ್ಬರಿದ್ದರು ಎನ್ನುವ ಜ್ಞಾಪನ... ಚೆನ್ನಾಗಿಲ್ಲ."

ವೆಂಕು, ನೀನೇನು ಇನ್ನು ಯೋಚನೆಮಾಡಬೇಕಾಗಿಲ್ಲ. ನಿಮ್ಮ ತಂದೆತಾ... ಇಬ್ಬರೂ ಹೇಳಿದರಂತೆ "ಈ ದುಃಖ ನಮ್ಮ ಕೈಲಿ ನೋಡಲಾಗುವುದಿಲ್ಲ. ಎಲ್ಲಾದ... ಚೆನ್ನಾಗಿದ್ದರೆ ಸರಿ" ಎಂದು. ನಿನ್ನದೂ ಅಡ್ಡಿಯಿಲ್ಲ. ಅವರೂ ನಿನ್ನನ್ನು ಒಪ್ಪಿದ್ದಾ... ಆದರೆ ನಿನ್ನ ಹೆಸರು ಚೆನ್ನಾಗಿಲ್ಲವಂತೆ. 'ಮೀನಾಕ್ಷಿ' ಎಂದು ನಿನಗೆ ಬೇರೆ ನಾಮಕ... ವಾಗಬಹುದು. ವೆಂಕೂ, ನಿಮ್ಮ ಯಜಮಾನರು ನಿನ್ನನ್ನು "ಮೀನಾ" ಎ... ಕರೆಯಬಹುದಲ್ಲವೆ?

ಮೀನಾಕ್ಷಮ್ಮನವರೆ, ಬೊಂಬಾಯಿಗೆ ಹೋಗಿ ಸಾಹೇಬರ ಹೆಂಡತಿಯಾ... ಮೇಲೆ ನಮ್ಮನ್ನೆಲ್ಲ ದಯವಿಟ್ಟು ಮರೆತುಬಿಡಬೇಡಿ. ಬಡವರ ಮೇಲೆ ದಯೆಯಿರಲಿ.

ಇಂತು ನಿನ್ನವಳು.

೨೪

ವೆಂಕು,

ನೀನು ಅಂತಹ ಹುಡುಗಿಯಲ್ಲ ಅನ್ನುವುದು ನನಗೆ ಗೊತ್ತಿಲ್ಲವೆ? ಸುಮ್ಮ... ಬರೆದೆ ಅಷ್ಟೆ. ನೀನು ನಿಮ್ಮ ಯಜಮಾನರಿಗೆ ಮೀನಾಕ್ಷಿಯಾದರೂ ನನಗೆ ನ... ಹಳೆಯ ವೆಂಕುವೇ. ಆಮೇಲೆ, ನಿನಗೆ ಇನ್ನೊಂದು ವಿಷಯ ಬರೆಯಲೇ ಇ... ನೀನು ಬೊಂಬಾಯಿಗೆ ಹೋಗುವುದಕ್ಕೆ ಮುಂಚೆ ನಾನು ಊರಿಗೆ ಬರುತ್ತೀ... ನಮ್ಮತ್ತೆ ನೆರೆಮನೆಯವರೊಬ್ಬರೊಡನೆ ಹೇಳುತ್ತಿದ್ದರು: "ನಮ್ಮ ವಿಶಾಲಾಕ್ಷಿ... ಅವರ ತವರುಮನೆಯವರು ಕರೆದುಕೊಂಡು ಹೋಗಬಹುದು. ಅವರೂ ನಮ್ಮ ಹಾ... ಅಲ್ಲವೆ? ಈಗ ನಮ್ಮ ಹುಡುಗೀನ ನಾವು ಕರೆದುಕೊಂಡು ಬರಲಿಲ್ಲವೆ? ಪೌ... ಪೌರ್ಣಿಮೆಗೆ ಐದು ತಿಂಗಳು ತುಂಬಿತು" ಎಂದು.

ನಮ್ಮತ್ತಿಗೆ ಬಂದಿದ್ದಾರೆ. ಅವರ ಮಗು ಕಿಟ್ಟು ಎಷ್ಟು ಚೆನ್ನಾಗಿದೆ ಅಂತಿಯಾ? ಅದಕ್ಕೆ ನನ್ನ ಕಂಡರೆ ಪ್ರಾಣ. ಅವರಮ್ಮ ನನ್ನೂ ಕೂಡ ಮರೆತು ನನ್ನ ಹತ್ತಿರ ಇರುತ್ತೆ.

ನನ್ನಲ್ಲಿರುವ ದೊಡ್ಡ ಕರ್ಪೂರದ ಬೊಂಬೆ ನೋಡಿರುವೆಯಲ್ಲ? ಅದಕ್ಕೆ ನಿನ್ನೆ ಒಂದು ಸಿಲ್ಕಿನ ಅಂಗಿ ಹೊಲಿಯುತ್ತಿದ್ದೆ. ಅವರು ಬಂದರು.

"ಏನೆ, ಅದಕ್ಕೇನು ವೈಭವ ಮಾಡಿಸುತ್ತೀಯೆ, ಜೀವವಿಲ್ಲದ ಬೊಂಬೆಗೆ?" ಎಂದರು.

"ನಿಮಗೇನು, ನಾನೇನಾದರೂ ಮಾಡಿಕೊಳ್ಳುತ್ತೇನೆ!" ಎಂದೆ. ಅಷ್ಟು ಹೊತ್ತಿಗೆ ಕಿಟ್ಟು ಬಂದು ತೊಡೆಯ ಮೇಲೆ ಕುಳಿತುಕೊಂಡಿತು. ನಾನು ಬೊಂಬೆ ಆ ಕಡೆಗಿಟ್ಟು ಅವನನ್ನೆತ್ತಿಕೊಂಡೆ. ಇದನ್ನು ನೋಡಿ ಅವರು, "ಅದೇನು ಹುಚ್ಚೋ ಈ ಹುಡುಗೀರಿಗೆ, ಯಾವುದಾದರೂ ಮಕ್ಕಳನ್ನು ಕಂಡರೆ ಪ್ರಾಣ ಬಿಡುತ್ತಾರೆ. ನಿನಗೂ ಒಂದು ಮಗು ಬೇಕೆನ್ನಿಸುತ್ತೆ, ಅಲ್ಲವೆ?"

"ನಿಮಗಿನ್ನೇನೂ ಕೆಲಸವಿಲ್ಲ. ನನ್ನ ಮಾತಾಡಿಸಬೇಡಿ, ಹೋಗಿ" ಎಂದೆ.

"ಅಲ್ಲ, ಬೇಕೆ, ಹೇಳು."

"ಬೇಕಾದರೆ ನೀವೇನು ಕೊಡ್ತೀರಾ" ಎಂದು ಕೇಳಿದೆ.

"ಓಹೊ! ಅಕ್ಕನಿಗೆ ಹೇಳಿ ಕಿಟ್ಟೂನೆ ಕೊಡಿಸುತ್ತೇನೆ" ಎಂದರು.

"ನನಗೆ ಕಿಟ್ಟು ಕಂಡರೇನೋ ಪ್ರೀತಿ ಇದೆ. ಆದರೆ ನನ್ನ ಮಗುವನ್ನೇ ಎತ್ತಿಕೊಂಡು ಆಡಿಸಿ, ತೊಡೆಯ ಮೇಲೆ ಮಲಗಿಸಿಕೊಂಡು ತಟ್ಟಿ ಮಲಗಿಸಬೇಕು ಎನ್ನಿಸುತ್ತೆ. ನಮ್ಮತ್ತಿಗೆ ಕಿಟ್ಟೂನ ತೊಡೆ ಮೇಲೆ ಮಲಗಿಸಿಕೊಂಡು ಹಾಲು ಕುಡಿಸು ತ್ತಿರುವಾಗ ಅದು ಸಂತೋಷದಿಂದ ಕೈಕಾಲು ಕುಣಿಸುತ್ತಾ ಇರುವುದನ್ನು ನೋಡಿದರೆ, ಆಗ ನಮ್ಮತ್ತಿಗೆಯ ಮುಖ ನೋಡಿದರೆ, ನಾನು ತಾಯಿಯಾಗಬೇಕು ಎನ್ನಿಸುತ್ತೆ."

"ಸರಿ, ಇನ್ನೇನು, ನಿನಗೂ ಒಂದು ಮಗು ಆಗುತ್ತಲ್ಲ. ಆ ಮೇಲೆ ನನ್ನನ್ನೇನು ನೀನು ಮಾತಾಡಿಸುವ ಹಾಗೆ ಕಾಣುವುದಿಲ್ಲ. ಈ ಬೊಂಬೆಯನ್ನು ಇಷ್ಟು ಮಟ್ಟಿಗೆ ಕುಣಿಸುವುದನ್ನೂ ಕಿಟ್ಟುವನ್ನು ಎಡಬಿಡದೆ ಇರುವುದನ್ನೂ ನೋಡಿದರೆ ಮಗುವಾದ ಮೇಲೆ ನೀನು ನನ್ನನ್ನೇಕೆ ಮಾತಾಡಿಸುತ್ತೀ ಹೇಳು! ಇದೆಲ್ಲ ಯೋಚನೆಮಾಡಿ ಕೊಂಡರೆ ನಾನೇ ಆ ಮಗು ಆಗಬಾರದೆ ಅನ್ನಿಸುತ್ತೆ ನನಗೆ" ಎಂದರು.

ನಾನು "ಸಾಕು, ಸುಮ್ಮನಿರಿ" ಎಂದೆ.

ಆ ಮೇಲೆ ನಾನು ಇನ್ನು ಸ್ವಲ್ಪ ಹೊತ್ತು ರೂಮಿನಲ್ಲಿದ್ದೆ. ಅವರೂ ಇದ್ದರು. ಆದರೆ ಮುಂದೇನು ನಡೆಯಿತೋ ನನಗೆ ಜ್ಞಾಪಕವಿಲ್ಲ. ಇಲ್ಲದಿದ್ದರೆ, ಊರಿಗೆ ಬಂದಾಗ

ಹೇಳುತ್ತೇನೆ. ಅದೆಲ್ಲ ಕಾಗದದಲ್ಲಿ ಬರೆಯಬಾರದು. ನಾನು ತಾನೆ ಏನು ಹೇಳಬೇ
ಇನ್ನು ಸ್ವಲ್ಪ ದಿನಕ್ಕೆ ನೀನೇ ನನಗೆಲ್ಲ ಹೇಳಿಕೊಡುತ್ತೀಯೆ!

ಊರಿಗೆ ಇನ್ನೆರಡು ಮೂರು ದಿನದಲ್ಲೇ ಬರಬಹುದು; ಅವರೂ ಬರುತ್ತಾ
ನಿಮ್ಮ ಯಜಮಾನರೇನೂ ನಮ್ಮ ಜೊತೆಯಲ್ಲಿ ಬರುವುದಿಲ್ಲ, ಹೆದರಬೇಡ.

ಇಂತು ನಿನ್ನ ಗೆಳತಿ—ವಿಶಾಲಾಕ್ಷಿ.

ಸಿ. ಕೃಷ್ಣ.

ಪ್ರಾಣಿಗಳಲ್ಲಿ ಬೇಟಕೂಟಗಳು

ಜಗತ್ತಿನಲ್ಲಿರುವ ಪ್ರತಿಯೊಂದು ಜೀವಿಗೂ ತನ್ನ ಸಂತತಿಯು ಛೇದವಾಗದಿರಲಿ ಎಂಬ ಒಂದು ಆಶೆಯು ಬಲವಾಗಿರುವುದು. ಆಹಾರಾನ್ವೇಷಣೆ, ಆತ್ಮಸಂರಕ್ಷಣೆ, ಜೀವನದಲ್ಲಿ ಹೋರಾಟ, ಇವೆಲ್ಲವೂ ಕಟ್ಟಕಡೆಗೆ ಒಂದು ಘನ ಉದ್ದೇಶವನ್ನು ಸಾಧಿಸುವುದಕ್ಕೇ ನೆರವಾಗುವುವು. ಆ ಘನವಾದ ಉದ್ದೇಶವೇ ವಂಶಾಭಿವೃದ್ಧಿ. ಪ್ರತಿಯೊಂದು ಜೀವಿಗೂ ಇದನ್ನು ಸಾಧಿಸಲು ಅತಿಶಯವಾದ ಆಸಕ್ತಿಯುಂಟು. ಅದಕ್ಕಾಗಿ ಪ್ರಾಣಿಗಳು ನಾನಾ ವಿಧವಾಗಿ ಪ್ರಯತ್ನಪಡುವುವು. ಕಾದಾಟದಿಂದಾಗಲಿ, ಮೋಹಿಸುವುದರಿಂದಾಗಲಿ, ಬಲವಂತದಿಂದಾಗಲಿ, ಸಮ್ಮತಿಯಿಂದಾಗಲಿ, ನ್ಯಾಯದಿಂದಾಗಲಿ, ಅನ್ಯಾಯದಿಂದಾಗಲಿ, ಅಂತೂ ಯಾವುದಾದರೊಂದು ರೀತಿಯಲ್ಲಿ ತಮ್ಮ ಉದ್ದೇಶವನ್ನು ಸಫಲಗೊಳಿಸಿಕೊಳ್ಳದೇ ಬಿಡುವುದಿಲ್ಲ. ಕಡೆಗೆ ತನ್ನನ್ನೇ ತಾನು ಬಲಿಕೊಡುವುದಕ್ಕೂ ಹಿಂಜರಿಯುವುದಿಲ್ಲ. ಈ ಬಗೆಯ ಒಂದು ಹಟವು ಅತಿ ಸಣ್ಣ ಪ್ರಾಣಿಯಿಂದ ಹಿಡಿದು ಮಾನವನ ವರೆಗೆ ಎಲ್ಲಾ ಜಾತಿಯ ಪ್ರಾಣಿಗಳಲ್ಲೂ ಕಂಡುಬರುವುದು.

ಮಾನವ ಜಾತಿಯಲ್ಲಿ ಈ ಉದ್ದೇಶವನ್ನು ಸಾಧಿಸಲು 'ಮದುವೆ' ಎಂಬ ಉತ್ಸವವನ್ನು ಆಚರಣೆಗೆ ತಂದಿರುತ್ತಾರೆ. ಹಿಂದಿನ ಕಾಲದಲ್ಲಿ ಮದುವೆಯಾಗುವವನು ಬಲಶಾಲಿಯಾಗಿರಬೇಕೆಂಬ ಒಂದು ನಿಯಮವಿತ್ತು. ಏಕೆಂದರೆ ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳಲ್ಲೆಲ್ಲಾ ಪರಾಕ್ರಮ ಉಳ್ಳವನು ಮಾತ್ರವೇ ಮದುವೆಯಾಗುವ ನಿದರ್ಶನಗಳನೇಕವನ್ನು ನಾವು ನೋಡಿದ್ದೇವೆ. ಈ ಪದ್ಧತಿಯು ಈಗಲೂ ಕಾಡುಜನರನೇಕರಲ್ಲಿ ಕಂಡುಬರುವುದು. ಅವರಲ್ಲಿ ಮದುವೆಯಾಗಲಿಚ್ಛಿಸುವ ತರುಣರು ಒಳ್ಳೆಯ ಮಾಂಸಖಂಡಗಳಿಂದ ತುಂಬಿಕೊಂಡು, ದೇಹದಾರ್ಢ್ಯ ಉಳ್ಳವರಾಗಿದ್ದರೆ ಅವರಿಗೇ ಮದುವೆಯಾಗಲು ಹೆಚ್ಚು ಅಧಿಕಾರ. ಬಲಶಾಲಿಯಾಗಿದ್ದಾನೆಂದರೆ ಸಾಕು, ಅವನು ಮದುವೆಯಾಗಲು ಯಾವ ಅಭ್ಯಂತರವೂ ಇರಲಿಲ್ಲ. ನಾಗರಿಕ ಜನಾಂಗಗಳನ್ನೊಳಗೊಂಡ ಆಧುನಿಕ ಸಮಾಜದಲ್ಲಿಯೂ ಕೂಡ ಐಶ್ವರ್ಯದ ಕಡೆಗೆ ಕೆಲವು ವೇಳೆ ಹೆಚ್ಚು ಗಮನವಿಟ್ಟರೂ ಮುಖಭಾವವನ್ನು ಪರಿಗಣಿಸದೇ ತಿರಸ್ಕರಿಸುವುದಿಲ್ಲ. ಅಂದರೆ ಒಟ್ಟಿನಲ್ಲಿ ಮಾನವನು, ಶೌರ್ಯ, ಐಶ್ವರ್ಯ, ರೂಪ, ಇವು ಮೂರನ್ನೂ ಪರಿಶೀಲಿಸುವನು ಎಂದು ಹೇಳಿದಂತಾಯಿತು.

ಪ್ರಾಣಿಗಳಲ್ಲೂ ಕೂಡ ಐಶ್ವರ್ಯಕ್ಕಿಲ್ಲದಿದ್ದರೂ ಶೌರ್ಯ ಮತ್ತು ಸೌಂದರ್ಯಗಳಿಗೆ ಸ್ಥಾನವಿದೆ. ಅವುಗಳಲ್ಲಿ ಜೊತೆ ಪ್ರಾಣಿಯನ್ನು ಸಂಪಾದಿಸಲು ಕಾದಾಟವೇ ಹೆಚ್ಚಾದ್ದರಿಂದ ಬಲವುಳ್ಳದ್ದು ಮಾತ್ರ ಜಯಹೊಂದುವ ಸಂಭವವುಂಟು. ಆದ್ದರಿಂದ ಪರಾಕ್ರಮವು ಅತ್ಯಾವಶ್ಯಕವಾಗಿ ಬೇಕು. ಹಾಗೆಯೇ ಸೌಂದರ್ಯವೂ ಬೇಕು. ಏಕೆಂದರೆ ಅನೇಕ ಪ್ರಾಣಿಗಳಲ್ಲಿ ಹೆಣ್ಣುಗಳು ತಮ್ಮ ಸೌಂದರ್ಯ, ಅಲಂಕಾರ, ಇವುಗಳ ಸಹಾಯದಿಂದಲೇ ಸರಿಯಾದ ಜೊತೆಯನ್ನು ಪಡೆಯುತ್ತವೆ. ಮತ್ತು ಜಗತ್ತಿನ ವಿಕಾಸದಲ್ಲಿ ಇನ್ನೂ ಮುಂದುವರಿದ ಪ್ರಾಣಿವರ್ಗಗಳಲ್ಲಿ ಬರಿಯ ಸೌಂದರ್ಯ ಒಂದೇ ಅಲ್ಲದೆ ಮಾನವ ಜಾತಿಯಲ್ಲಿರುವಂತೆ ಸಂಗೀತ, ನಾಟ್ಯ, ಇವೇ ಮೊದಲಾದವುಗಳ ಕಲಾಭಿರುಚಿಯೂ ಮನೆಮಾಡಿಕೊಂಡಿದೆ. ಅಂದರೆ ಮಾನವವರ್ಗಕ್ಕೂ ಪ್ರಾಣಿವರ್ಗಕ್ಕೂ ಈ ವಿಷಯದಲ್ಲಿ ಬಾಂಧವ್ಯವು ಹೆಚ್ಚು.


ಪ್ರಾಣಿಗಳಲ್ಲಿ ಬೇಟಕೂಟಗಳೆಂದರೇನು, ಅವು ಪ್ರಾಣಿವರ್ಗದ ವಿವಿಧ ಪಂಗಡಗಳಲ್ಲಿ ಯಾವ ಯಾವ ರೀತಿಯಲ್ಲಿ ನಡೆಯುವುವು, ಮತ್ತು ಅವುಗಳ ಸೂಚನೆಯೇನು ಎಂಬುದನ್ನು ಪರಿಶೀಲಿಸುವುದೇ ಈ ಲೇಖನದ ಉದ್ದೇಶ.

ಸಂತತಿವೃದ್ಧಿಗಾಗಿ ಒಂದು ಜಾತಿಯು ಇನ್ನೊಂದು ಜಾತಿಯನ್ನು ಹುಡುಕಿಕೊಂಡು ಹೋಗುವುದು ಸ್ವಭಾವ. ಹಾಗೆ ಅಲೆಯುವಾಗ ಒಂದನ್ನೊಂದು ಭೇಟಿಯಾದ ಕೂಡಲೆ ಪ್ರಾಣಿಗಳು ತಮ್ಮ ಉದ್ದೇಶವನ್ನು ಸಫಲಗೊಳಿಸಿಕೊಳ್ಳಲು ಪ್ರಯತ್ನಪಡುವುದಿಲ್ಲ. ಎರಡು ವ್ಯಕ್ತಿಗಳೂ ಕೂಡುವುದಕ್ಕೆ ಮೊದಲು ಆಟಪಾಟ, ಅಂಗಭಂಗಿ, ಇವೇ ಮೊದಲಾದ ಚಲನವಲನಗಳನ್ನು ನಡೆಸುವುವು. ಇದನ್ನು 'ಬೇಟ' ಎಂದು ಕರೆಯಬಹುದು. ಎಂದರೆ ಬೇಟವು. ವಂಶಾಭಿವೃದ್ಧಿಗೆ ಮೊದಲನೆಯ ಮೆಟ್ಟಲು; ಅದು ಆದ ಮೇಲೆ ಕೂಟ. ಕೆಲವು ಪ್ರಾಣಿಗಳಲ್ಲಿ ಬೇಟವು ಕೂಟವನ್ನು ಆಕ್ಷಣದಿಂದ ಉತ್ತರೋತ್ತರ ವೃದ್ಧಿಯಾಗುವಂತೆ ಕಲ್ಪಿಸಿದರೂ ಕಲ್ಪಿಸಬಹುದು. ಅಥವಾ ಹಾಗಲ್ಲದೆ ಕೆಲವು ಬಾತುಗಳಲ್ಲಿರುವಂತೆ ಬೇಟಕ್ಕೂ ಕೂಟಕ್ಕೂ ನಡುವೆ ಇಷ್ಟೇ ಎಂದು ಒಂದು ನಿರ್ದಿಷ್ಟಕಾಲದ ಅವಧಿ ಇರುವುದೂ ಉಂಟು. ಜೀವಶಾಸ್ತ್ರಕ್ಕೆ ಅನುಸಾರವಾಗಿ ಈ ಚೇಷ್ಟೆಯು ಕಾಮೋದ್ರೇಕದಿಂದ ಆಗುವ ಫಲ. ಇದು ಗಂಡು ಹೆಣ್ಣು ಎರಡೂ ಅನ್ಯೋನ್ಯ ಸ್ನೇಹದಿಂದ ಜೀವಿಸುವುದಕ್ಕೂ ಒಂದು ಸಾಧನ.

ಪ್ರಾಣಿಗಳಲ್ಲಿ ಬೇಟವು ವಿವಿಧರೀತಿಯಲ್ಲಿ ನಡೆಯುತ್ತದೆ. ಅದು ಪಂಚೇಂದ್ರಿಯಗಳಲ್ಲಿ ಒಂದಾದ ಕಿವಿಗೆ ಮಾತ್ರವೇ ಹಾಡುಗಾರಿಕೆ, ರೆಕ್ಕೆ ಬಡಿದುಕೊಳ್ಳುವುದು ಇವೇ ಮೊದಲಾದುವುಗಳ ರೀತಿಯಲ್ಲಿ ಆನಂದಕೊಡುವುದಾಗಿರಬಹುದು. ಅಥವಾ ನಾಟ್ಯವೇ ಮೊದಲಾದ ರೀತಿಯಲ್ಲಿ ಕಣ್ಣಿಗೆ ಮಾತ್ರವೇ ಆನಂದಕೊಡುವುದಾಗಿರ

ಬಹುದು. ಇಲ್ಲವೇ ಕಾಗೆಯ ಜಾತಿಗೆ ಸೇರಿದ ಕೆಲವು ಹಕ್ಕಿಗಳಲ್ಲಿರುವಂತೆ ಗಂಡು ಹೆಣ್ಣಿನ ತಲೆಯ ಮೇಲೆ ಕೊಕ್ಕಿನಿಂದ ಕುಕ್ಕಿ ಅವುಗಳನ್ನು ಅಟ್ಟಿಸಿಕೊಂಡು ಹೋಗಿ ಪ್ರೀತಿಯನ್ನು ಹುಟ್ಟಿಸಬಹುದು. ಅಥವಾ ಕೆಲವು ನೀರುಕೋಳಿಗಳಲ್ಲಿರುವಂತೆ ಗಂಡು ಹೆಣ್ಣುಗಳು ನೀರಿನಲ್ಲಿ ಬೆಳೆಯುತಕ್ಕ ಜೊಂಡು ಕಡ್ಡಿಗಳನ್ನು ವಧೂವರರು 'ಹೂವಿನ ಚಂಡು' ಆಡುವಂತೆ ಎಸೆದಾಡಬಹುದು. ಬೇಟವು ಹೀಗೆ ಚಿತ್ರವಿಚಿತ್ರವಾಗಿ ನಡೆಯುತ್ತದೆ. ಇವೆಲ್ಲಕ್ಕೂ ಕಾಮದ ಪ್ರೇರಣೆಯೇ ಮೂಲಕಾರಣ.

ಈ ಕಾಮದ ಪ್ರೇರಣೆಯು ಮೊದಲು ಜನನೇಂದ್ರಿಯಗಳಲ್ಲಿರತಕ್ಕ ರಸದೂತಗಳಲ್ಲಿ ಅಂಕುರಿಸಿ ಇಡೀ ದೇಹವನ್ನೇ ಕೆರಳಿಸುತ್ತದೆ. ಶೇಕಡ ತೊಂಬತ್ತೊಂಬತ್ತು ಪ್ರಾಣಿಗಳಲ್ಲಿ ಯಾವಾಗಲೂ ಬೇಟಕ್ಕೆ ಅಂಕುರಾರ್ಪಣ ಮಾಡತಕ್ಕದ್ದು ಸಾಮಾನ್ಯವಾಗಿ ಗಂಡೇ. ಆದರೆ ಇದಕ್ಕೆ ಕೆಲವು ಪ್ರತಿಷೇಧಗಳೂ ಇವೆ. ಪಾರಿವಾಳಗಳಲ್ಲಿ ಈ ಕಾಮದ ಪ್ರೇರಣೆಯು ಗಂಡು ಹೆಣ್ಣು ಎರಡರಲ್ಲೂ ಏಕಕಾಲದಲ್ಲಿ ಹುಟ್ಟುತ್ತದೆ.



ಚಿತ್ರ ೧. ಫ್ಯಾಲರೋಪ್ ಎಂಬ ಹಕ್ಕಿ

ಹೆಣ್ಣು ಬೇಟವನ್ನು ನಡಸುತ್ತದೆ. ಗಂಡು ಮೊಟ್ಟೆಗಳಿಗೆ ಕಾವುಕೊಟ್ಟು ಮರಿಮಾಡುತ್ತದೆ.


ಬೂದುಬಣ್ಣದ 'ಫ್ಯಾಲರೋಪ್' ಎಂಬ ಪ್ರಾಣಿಗಳಲ್ಲಿ ಹೆಣ್ಣು ಬೇಟವನ್ನು ನಡಸುತ್ತದೆ: ಗಂಡು ಮೊಟ್ಟೆಗಳಿಗೆ ಕಾವುಕೊಟ್ಟು ಮರಿಮಾಡುತ್ತದೆ. (ಚಿತ್ರ ೧.)


ಪ್ರಾಣಿಗಳಲ್ಲಿ ಬೇಟವೆಂದರೆ ಮಾನವಜಾತಿಯಲ್ಲಿರುವಂತೆ ಅವು ಒಂದು ದೊಡ್ಡ ವಿಜೃಂಭಣೆಯ ಹಬ್ಬವನ್ನು ಏರ್ಪಾಡುಮಾಡಿಕೊಳ್ಳುವುವೆಂದು ತಿಳಿಯಬಾರದು. ಮೇಲಾಗಿ, ಪ್ರಾಣಿಯು ಕಾಮೋತ್ಕರ್ಷದ ಪಾಶಕ್ಕೆ ಸಿಕ್ಕಿಬಿದ್ದು ಯಾವ ಅರಿವೂ ಇಲ್ಲದೆ ಸ್ವೇಚ್ಛೆಯಾಗಿ ವಿಹರಿಸುತ್ತದೆ. ಆದ್ದರಿಂದ ಈ ಬೇಟಕೂಟಗಳು ಕೆಲವುವೇಳೆ ಬಹು ಚಮತ್ಕಾರವಾಗಿಯೂ ಬಹಳ ಪ್ರಯಾಸವಾಗಿಯೂ ಕಂಡುಬರುವುವು. ಹೀಗಿದ್ದಲ್ಲಿ ಅದು ಒಂದು ಗಾಢವಾದ ಸಂಗತಿಯ ಸೂಚನೆಯನ್ನೊಳಕೊಂಡಿರುತ್ತದೆ. ಏಕೆಂದರೆ, ಕಾಮೋತ್ಕರ್ಷದ ಉಪಟಳವು ಇಳಿದುಹೋದ ಮೇಲೆ ಗಂಡುಹೆಣ್ಣುಗಳು ಬಹುಕಾಲ ಅನ್ಯೋನ್ಯದಿಂದ ಸುಖವಾಗಿದ್ದು, ಮಕ್ಕಳುಮರಿಗಳನ್ನು ಹೆತ್ತು, ಸಂತಾನ ಸಂರಕ್ಷಣೆ ಮಾಡಿ, ತಾಯಿತಂದೆಗಳ ಜವಾಬ್ದಾರಿಯನ್ನು ನಿರ್ವಹಿಸಿ ಸಂತತಿ ವೃದ್ಧಿ ಮಾಡುವುದಕ್ಕೆ ಇದು ಅತ್ಯಂತ ಸಹಾಯಕವಾಗಿರುವುದು. ಮತ್ತು ಗಂಡುಹೆಣ್ಣುಗಳು ತಮ್ಮ ಕಾಮ ಜೀವನವನ್ನು ಒಂದು ಹದ್ದಿನಲ್ಲಿಟ್ಟದ್ದೇ ಆದರೆ ಅವೆರಡರಲ್ಲೂ ಒಲುಮೆಯು ಶತಾಧಿಕವಾಗಿ, ಎರಡೂ ಜೀವಾವಧಿ ಒಂದನ್ನೊಂದು ಬಿಟ್ಟಿರಲಾರದೆ ಹೋಗುವುವು.

ಶಾಸ್ತ್ರಜ್ಞರು ಪ್ರಾಣಿವರ್ಗವನ್ನು ಕಶೇರುಕಗಳು ಮತ್ತು ಅಕಶೇರುಕಗಳು ಎಂದು ಎರಡು ದೊಡ್ಡ ಪಂಗಡಗಳಾಗಿ ವಿಂಗಡಿಸಿರುತ್ತಾರೆ. ಬೆನ್ನುಮೂಳೆ ಇರುವ ಪ್ರಾಣಿಗಳೆಲ್ಲವೂ ಕಶೇರುಕಗಳು. ಮೀನುಗಳು, ದ್ವಿಚರಪ್ರಾಣಿಗಳು, ಸರೀಸೃಪಗಳು, ಹಕ್ಕಿಗಳು ಮತ್ತು ಸಸ್ತನಿಗಳು ಇದಕ್ಕೆ ಉದಾಹರಣೆಗಳು. ಬೆನ್ನುಮೂಳೆ ಇಲ್ಲದೇ ಇರುವ ಪ್ರಾಣಿಗಳೆಲ್ಲವೂ ಅಕಶೇರುಕಗಳು. ಹುಳುಗಳು, ಏಡಿಗಳು, ಕ್ರಿಮಿಕೀಟಗಳು, ಬಸವನಹುಳು, ಜೇಡ, ಜಿರಲೆ, ಇವು ಇದಕ್ಕೆ ಉದಾಹರಣೆಗಳು. ಅಕಶೇರುಕಗಳು ಕಶೇರುಕಗಳಿಗಿಂತಲೂ ಸೃಷ್ಟಿಯಲ್ಲಿ ಬಹಳ ಹಿಂದುಳಿದ ಪ್ರಾಣಿವರ್ಗಕ್ಕೆ ಸೇರಿವೆ. ಅವುಗಳಲ್ಲಿ ಬುದ್ಧಿಶಕ್ತಿಗೆ ಸಂಬಂಧಪಟ್ಟ ಅವಯವಗಳ ಬೆಳೆವಣಿಗೆ ಬಹಳ ಕಡಮೆಯಾದ್ದರಿಂದ ಜೀವನಪಥದಲ್ಲಿ ಅದರ ಸ್ಥಾನ ಬಹಳ ಹಿಂದುಳಿದಿದೆ. ಹಾಗೆಯೇ ಬೇಟದ ಚಮತ್ಕಾರಗಳೂ ಅವುಗಳಲ್ಲಿ ವಿಶೇಷ ಕಂಡುಬರುವುದಿಲ್ಲ. ನಳ್ಳಿಗಳಿಗಿಂತಲೂ ವಿಕಾಸದಲ್ಲಿ ಹಿಂದುಳಿದ ಅತಿ ಸಣ್ಣಪುಟ್ಟ ಪ್ರಾಣಿಗಳಲ್ಲಿ ಬೇಟದ ಚಿಹ್ನೆಯೇ ಇಲ್ಲವೆಂದು ಹೇಳಬಹುದು. ಅವುಗಳಲ್ಲಿ ಎರಡು ವ್ಯಕ್ತಿಗಳಿಗೂ ಹಿಂದಿನಿಂದಲೂ ಪರಿಚಯವಿಲ್ಲದೆ ಸೌಹಾರ್ದ ಸಮ್ಮತಿಗಳಿಲ್ಲದೆ ಸಂಪರ್ಕ ಉಂಟಾಗಬಹುದು. ಅಂದರೆ ಬೇಟವಿಲ್ಲದೆಯೇ ಕೂಟವು ಸಂಭವಿಸಬಹುದು. ಈ ಪ್ರಾಣಿಗಳು ಒಂದನ್ನೊಂದು 'ಆ' 'ಊ' ಎಂದು ಕೂಗುವ ಪ್ರಮೇಯವೇ ಕಾಣಿಸುವುದಿಲ್ಲ. ಎಲ್ಲ ಕೆಲಸಗಳೂ ಕ್ರಮೇಣ ಬೇಕು

ಹರಿದಂತೆ ಆಗುತ್ತವೆ. ಅನೇಕ ಪ್ರಾಣಿಗಳಲ್ಲಿ ಶುಕ್ಲ ಶೋಣಿತಗಳ ಸಂಯೋಗವು ಗಂಡು ಹೆಣ್ಣು ಒಂದಕ್ಕೊಂದು ಗೊತ್ತಿಲ್ಲದಂತೆ ನೀರಿನಲ್ಲಿ ಎರಡೂ ಎಲ್ಲೋ ತೇಲಿಬರುತ್ತಿರುವಾಗ ಆಕಸ್ಮಾತ್ ಆಗಬಹುದು. ಗಂಡು ಹೆಣ್ಣುಗಳು ಇಂಥ ಸಂದರ್ಭದಲ್ಲಿ ಒಂದನ್ನೊಂದು ಕಂಡೇ ಕಾಣವು. ಆದರೆ ಈ ಸಣ್ಣಪುಟ್ಟ ಪ್ರಾಣಿಗಳಲ್ಲಿ ಕಾಮೋತ್ಕರ್ಷದ ಬಾಹ್ಯಾಡಂಬರವಿಲ್ಲದಿದ್ದರೂ ಇಂದ್ರಿಯಗಳಲ್ಲಿ ಅದರ ಸೂಚನೆಗಳು ಕಂಡುಬರದೇ ಇಲ್ಲ. ಆಗ ಈ ಕಾಮೋತ್ಕರ್ಷವು ಉಲ್ಲಾಸಕ್ಕೆ ಕಾರಣವಾಗಿ, ಹಾಗೆಯೇ ಆವೇಶದ ಚಿಹ್ನೆಗಳೂ ಶಾರೀರಕ ಕೋಮಲತೆಯ ಕುರುಹುಗಳೂ ಕಂಡುಬಂದು, ಉಲ್ಲಾಸದ ಕಾಯಿಮೊಗ್ಗುಗಳು ಒಲುಮೆಯ ಹೂವಾಗಿ, ಫಲಕ್ಕೆ ಬರುವ ಸಂಭವವುಂಟು.

ಏಡಿ ಅಥವಾ ನಳ್ಳಿಗಳಲ್ಲಿ ಈ ಕಾಮಜೀವನವು ಹೆಚ್ಚು ಮುಂದುವರಿದಿದೆ. ಒಬ್ಬ ಪ್ರಾಣಿಶಾಸ್ತ್ರಜ್ಞನು ಅದನ್ನು ಹೀಗೆ ವಿವರಿಸಿರುವನು. “ಗೋದಾವರೀ ಕೃಷ್ಣಾನದಿಗಳ ಮರಳು ಮೈದಾನದಲ್ಲಿ ಈ ಪ್ರಾಣಿಗಳ ಪ್ರಣಯ ಜೀವನವು ಯಾರಿಗಾದರೂ ಆಶ್ಚರ್ಯವನ್ನುಂಟುಮಾಡದೆ ಇರದು. ಹೆಣ್ಣಿನ ಇಕ್ಕಳದಂತಿರುವ ಕೈಗಳು ಗಂಡಿನವಕ್ಕಿಂತಲೂ ಸಣ್ಣವಾಗಿರುವುವು. ಗಂಡಿನ ಪಾಟಲವರ್ಣದ ಒಂದು ಕೈ ಸ್ವಲ್ಪ ದೃಢಗಾತ್ರವಾಗಿ, ಆಯುಧದಂತೆಯೂ ಅಲಂಕಾರವಾಗಿಯೂ ಇರುವುದು. (ಚಿತ್ರ ೨.) ಆ ಮನೋಹರ ಗೋದಾವರೀ ಬಯಲಿನಲ್ಲಿ ಹೊಂಬಿಸಿಲಿನ ಕಾಂತಿಯಿಂದ ಥಳಥಳನೆ ಹೊಳೆಯುತ್ತಿರುವ ಈ ಪಾಟಲವರ್ಣದ ಅಗಣಿತ ಸಣ್ಣಪುಟ್ಟ ಕೈಗಳು ಹತ್ತಿರ ಹೋದಕೂಡಲೇ ಮಂಗಮಾಯವಾಗಿ, ಪುನಃ ಸ್ವಲ್ಪ ದೂರದಲ್ಲಿ ವಿಶ್ವವ್ಯಾಪಿಯಾಗಿ ಝುಳಝುಳಿಸುವ ದೃಶ್ಯವು ನಿಜವಾಗಿಯೂ ದಿಗ್ಭ್ರಮೆಯನ್ನುಂಟುಮಾಡುತ್ತದೆ. ಹಾಗೆ ಮಿನುಗುವ ಮಣಿಗಳು ಅಗಣಿತ ಗಂಡು ಏಡಿಗಳ ಇಕ್ಕಳದಂತಿರುವ ಜಳಪಿಸುವ ಕೈಗಳು. ಅವುಗಳು ಪ್ರಸಂಗಬಿದ್ದು ಅಪರೂಪವಾಗಿ ಬರುವ ಹೆಣ್ಣುಗಳನ್ನು ಆಕರ್ಷಿಸಿ ಬುಟ್ಟಿಗೆ ಹಾಕಿಕೊಳ್ಳುವುದಕ್ಕೋಸ್ಕರ ತಮ್ಮ ಕೈಗಳನ್ನು ಹಾಗೆ ಬೀಸುತ್ತಿರುತ್ತವೆ. ಯಾವುದಾದರೊಂದು ನಳ್ಳಿಯು ಈ ರೀತಿ ಬುಟ್ಟಿಗೆ ಬಿದ್ದ ಪಕ್ಷದಲ್ಲಿ ಆ ದಿವ್ಯ ಅನುಗ್ರಹವನ್ನು ಪಡೆದ ವ್ಯಕ್ತಿಯು ಆವೇಶದಿಂದ ಹುಚ್ಚೆದ್ದು ಹೋಗಿ ತನ್ನ ಕೆಂಪು ಕೈಯನ್ನು ಜಳಪಿಸುತ್ತಾ ತುದಿಗಾಲಿನಿಂದ ನಾಟ್ಯವಾಡುವುದಕ್ಕೆ ಮೊದಲು ಮಾಡುವುದು. ಇನ್ನು ಕೆಲವು ಇದೇ ಜಾತಿಯ ಪ್ರಾಣಿಗಳು ತಮ್ಮ ಕಾಮಾತುರವನ್ನು ವಿಧವಿಧವಾದ ಧ್ವನಿಗಳಿಂದ ಸೂಚಿಸುವುವು. ಅಂಥವುಗಳ ಬೇಟದ ರೀತಿನೀತಿಗಳು ಅತ್ಯಂತ ಮನೋರಂಜಕವಾಗಿರುವುದರಲ್ಲಿ ಸಂದೇಹವಿಲ್ಲ.” ಅಕಶೇರುಕಗಳಲ್ಲಿ ಇಷ್ಟು ಸ್ಪಷ್ಟವಾಗಿ ಬೇಟದ ಚಮತ್ಕಾರವು ಕಂಡುಬರುವುದು ನಳ್ಳಿಗಳಲ್ಲೇ ಮೊದಲು ಎಂಬುದು ಈ ಮೇಲೆ ಹೇಳಿದ ಅಂಶದಿಂದ ತಿಳಿಯಬರುತ್ತದೆ.







ಚಿತ್ರ ೨. ಗಂಡು ಮತ್ತು ಹೆಣ್ಣು ನಳ್ಳಿಗಳು

ಮೇಲಿನ ಚಿತ್ರದಲ್ಲಿ ಗಂಡಿನ ಒಂದು ಕೈ ಗಾತ್ರವಾಗಿದ್ದು ಆಯುಧದಂತೆಯೂ ಅಲಂಕಾರದಂತೆಯೂ ಇರುವುದನ್ನು ನೋಡಬಹುದು

ನಳ್ಳಿಗಳನ್ನು ಬಿಟ್ಟರೆ ನಮಗೆ ಕುತೂಹಲವನ್ನುಂಟುಮಾಡುವುದು ಬಸವನ ಹುಳುಗಳು, ಹೊನ್ನೆಯ ಹುಳುಗಳು, ಮಿಡತೆಗಳು, ಜೇಡರ ಹುಳುಗಳು, ಇವೇ ಮೊದಲಾದುವು. ಸಾಮಾನ್ಯವಾಗಿ ತೋಟದಲ್ಲಿರತಕ್ಕ ಬಸವನ ಹುಳುಗಳಲ್ಲಿ ಈ ಬೇಟವು ಸ್ವಲ್ಪ ವಿಚಿತ್ರವಾಗಿದೆ. ಅದು ತನ್ನ ಸಮೀಪದಲ್ಲಿರುವ ವ್ಯಕ್ತಿಯ ಮೇಲೆ ಒಂದು ಬಗೆಯ ದ್ರವವನ್ನು ಅಂಬೆಸದಂತೆ ಎಸೆಯುತ್ತದೆ. ಇಟಲಿ ದೇಶದ ಹೊನ್ನೆಯ ಹುಳುಗಳಲ್ಲಿ ಹೆಣ್ಣು ಹುಲ್ಲಿನ ಮೇಲೆ ದಿಮಾಕುಮಾಡುತ್ತಾ ಕುಳಿತಿರುವುದು; ಗಂಡು






ಚಿತ್ರ ೩. ಹೊನ್ನೆಯ ಹುಳುಗಳ ಪ್ರಣಯಜೀವನ

ಹೆಣ್ಣುಹುಳುವು ಹುಲ್ಲಿನಮೇಲೆ ದಿಮಾಕುಮಾಡುತ್ತ ಕುಳಿತುಕೊಂಡು ತನ್ನ ಹೊಟ್ಟೆಯ ಆಚೆ ಈಚೆ ಪಕ್ಕಗಳಲ್ಲಿ ಹೊಳೆಯುವ ಬೆಳಕಿನ ಮೂಲಕ, ಗಾಳಿಯಲ್ಲಿ ಹಾರಾಡುತ್ತಿರುವ ಗಂಡನ್ನು ಮೋಹಗೊಳಿಸುತ್ತಿರುವುದು.

ಗಾಳಿಯಲ್ಲಿ ನಾಟ್ಯವಾಡುವುದು. (ಚಿತ್ರ ೩.) ಇವೆರಡಕ್ಕೂ ವಿವಿಧ ರೀತಿಯಲ್ಲಿ ಕಾಮ ವ್ಯವಹಾರವು ನಡೆಯುತ್ತದೆ. ಮಿಡತೆಗಳು ಉಲ್ಲಾಸದಿಂದ ಧ್ವನಿಗೈಯುವುವು, ಇನ್ನು ಕೆಲವು ಜೀರುದುಂಬಿಗಳು ತಮ್ಮ ನಲ್ಲೆಯರಿಗೆ ಕೇಳಿಸದೇ ಇದ್ದರೂ ಕೂಡ




ಚಿತ್ರ ೪. ಜೇಡರ ಹುಳು

ಹೆಣ್ಣು ಜೇಡರ ಹುಳುವಿಗೆ ಹೋಲಿಸಿದರೆ ಗಂಡು ಆಕಾರದಲ್ಲಿ ಅತಿ ಚಿಕ್ಕದು, ಇಷ್ಟು ಸಣ್ಣ ವ್ಯಕ್ತಿಯನ್ನು ರಾಕ್ಷಸಿಯು 'ಸ್ವಾಹಾ' ಮಾಡುವುದು ಏನೂ ಹೆಚ್ಚಲ್ಲ

ಗಂಟಲು ಒಡೆದುಹೋಗುವವರೆಗೂ ಕಿರಿಚಿಕೊಳ್ಳುವುವು. ಹೀಗೆ ಇನ್ನೂ ವಿಧವಿಧವಾದ ಸಂಗೀತಗಳು ಹೆಣ್ಣಾಗಲಿ, ಗಂಡಾಗಲಿ, ತಮ್ಮ ನಲ್ಲ ನಲ್ಲೆಯರನ್ನು ಒಲಿಸಿಕೊಳ್ಳಲು ಸಾಧನವಾಗಿರುವುವು.

ಜೇಡರ ಹುಳುಗಳಲ್ಲಿ ಸಾಮಾನ್ಯವಾಗಿ ಹೆಣ್ಣು ಹುಳುಗಳು ಗಂಡಿಗಿಂತಲೂ ಮಿಂಡಾಗಿರುವುವು. ಆಗಾಗ್ಗೆ ಅವು ಗಂಡನ್ನು 'ಸ್ವಾಹಾ' ಮಾಡುವುದೂ ಉಂಟು. ಅನೇಕ ಜೇಡರ ಹುಳುಗಳಲ್ಲಿ ಹೆಣ್ಣು ಮನಸ್ಸು ಬಂದಂತೆ ಯಾವ ಗಂಡು ಸಿಕ್ಕಿದರೆ ಅದರ ಜೊತೆ ವಿಹರಿಸುವುದಿಲ್ಲ. ಕೆಲವು ವೇಳೆ ಅವು ಬಹು ಕ್ರೂರವಾಗಿ ವರ್ತಿಸುತ್ತವೆ. ವಿಲಕ್ಷಣವಾಗಿ ತೋರುವ ವಿಜಾತೀಯ ಕುರುಹುಗಳನ್ನೂ ವಿವಿಧ ಶೃಂಗಾರಗಳನ್ನೂ ಪಡೆದ ಗಂಡುಗಳು ಹೆಣ್ಣಿನ ಮುಂದೆ ಮೋಹಗೊಳ್ಳುವಂತೆ ತೋರ್ಪಡಿಸಿಕೊಳ್ಳುತ್ತವೆ. ಹೆಣ್ಣಿನ ಪ್ರಣಯ ನೋಟಗಳು ಗಂಡನ್ನು ಪ್ರೇರೇಪಿಸಿದಾಗ ಅದು ಹೆಣ್ಣಿನ ಬಳಿಗೆ




ಚಿತ್ರ ೫. ಜೇಡರ ಹುಳುಗಳು ತಮ್ಮ ಇನಿಯರ ಮುಂದೆ ನಾಟ್ಯವಾಡುತ್ತಿರುವುದು

ಬಂದು ವಿಜಾತೀಯವಾಗಿ ನಾಟ್ಯವಾಡುವುದು. ಹೆಣ್ಣು ಉತ್ಸಾಹದಾಯಕವಾದ ನೋಟ ಬೀರಿ ತಾನಿದ್ದ ಸ್ಥಳವನ್ನು ಪದೇ ಪದೇ ಬದಲಾಯಿಸುತ್ತಾ ಗಂಡನ್ನು ರೇಗಿಸುವುದು. ಆಗ ಗಂಡು ತನ್ನ ಕಾಲುಗಳನ್ನು ನೇರವಾಡಿಕೊಂಡು ಇಡೀ ದೇಹದ ಭಾರವನ್ನೆಲ್ಲಾ ಒಂದು ಪಕ್ಕಕ್ಕೆ ಎತ್ತಿ, ತಾನು ಇನ್ನೇನು ಒಂದು ಕಡೆಗೆ ಉರುಳಿಕೊಳ್ಳುವ ಸ್ಥಿತಿಯಲ್ಲಿರುತ್ತದೆ. ಗಂಡಿನ ಈ ಕುಣಿತಗಳಿಂದ ಹೆಣ್ಣು ತೃಪ್ತಿಪಟ್ಟದ್ದೇ ಆದರೆ ಗಂಡಿನ ಕಡೆಗೆ ಆಗ ಅದು ರಭಸದಿಂದ ನುಗ್ಗಿ ಅದಕ್ಕೆ ಢಿಕ್ಕಿ ಹೊಡೆಯುವುದು. ಆಗ ಗಂಡು ತನ್ನ ಕಾಲುಗಳನ್ನು ಮುಂದಕ್ಕೆ ಚಾಚಿ ಹೆಣ್ಣನ್ನು

ಇನ್ನೇನು ತಪ್ಪಿಸಿಕೊಳ್ಳುತ್ತದೆ ಎನ್ನುವಾಗ ಒಡನೆಯೇ ಹೆಣ್ಣು ಕೈಗೆ ಸಿಕ್ಕದೆ ಓಡಿ ಹೋಗುತ್ತದೆ. ಮತ್ತೆ ಮತ್ತೆ ಗಂಡು ಪಕ್ಕದಿಂದ ಪಕ್ಕಕ್ಕೆ ನೂರಹತ್ತು ಪ್ರದಕ್ಷಿಣೆಯನ್ನು ಸುತ್ತಿ, ಹೆಣ್ಣಿನ ಹತ್ತಿರಕ್ಕೆ ಬರಬರುತ್ತಾ ಅದು ಇನ್ನೇನು ಸಿಕ್ಕಿತು ಎನ್ನುವಾಗ ಬವಳಿಯಿಂದ ಗಿರ್ರನೆ ಅದರ ಸುತ್ತ ಸುತ್ತುವುದು. ಹೆಣ್ಣು ಈ ಬಿಂಕದ ಠೀವಿಯನ್ನೆಲ್ಲಾ ಆದರದಿಂದ ಮನದಣಿಯ ದಿಟ್ಟಿಸಿ, ಗಂಡನ್ನು ಬಾಚಿ ಆಲಿಂಗಿಸಿಕೊಂಡು ಅದರ ಜೊತೆ ತಾನೂ ಗಿರಗಿರನೆ ಸುತ್ತಿ ನಿರಂತರ ಸುಖವನ್ನು ಅನುಭವಿಸುತ್ತದೆ. ಈ ಬಗೆಯ ನಾಟ್ಯಗಳು ಪ್ರೇಕ್ಷಕರಿಗೆ ಬಹಳ ಆಶ್ಚರ್ಯವನ್ನುಂಟುಮಾಡುವುವು.

ಕೆಲವು ಜಾತಿಯ ಜೇಡರ ಹುಳುಗಳಲ್ಲಿ ಅನೇಕ ಗಂಡುಗಳು ಒಂದೇ ಒಂದು ಹೆಣ್ಣಿನ ಒಲುಮೆ ಪಡೆಯಲು ಹುರುಡಿನಿಂದ ಸ್ಪರ್ಧೆ ಹೂಡುತ್ತವೆ. ಅಂಥ ಸಂದರ್ಭಗಳಲ್ಲಿ ಹೆಣ್ಣು ಸ್ವಲ್ಪ ಸಾವಧಾನವಾಗಿ ತನ್ನ ಒಪ್ಪಿಗೆಯನ್ನು ಸೂಚಿಸುತ್ತದೆ.



ಚಿತ್ರ ೬. ಎರಡು ಜೇಡರ ಹುಳುಗಳು ಕಾದಾಡುತ್ತಿರುವುದು

ಹುರುಡಿನಿಂದ ಸ್ಪರ್ಧೆ ಹೂಡಿರುವ ಗಂಡುಗಳು ಒಂದಕ್ಕೊಂದು ಕಾದಾಡುವುದು ಸ್ವಭಾವ. ಯಾವುದು ಧೈರ್ಯದಿಂದ ಎಡೆಬಿಡದೆ ಕಾದಾಡುವುದೋ ಅದು ಗೆಲ್ಲುವುದು. ಕಡೆಗೆ ಅದೇ ಹೆಣ್ಣಿನ ಪ್ರೀತಿಗೆ ಪಾತ್ರವಾಗುವುದು. ಒಂದು ಜಾತಿಯಲ್ಲಿ ಗಂಡು ಹೆಣ್ಣಿನ ಮುಂದೆ ತನ್ನ ಸೌಂದರ್ಯದ ಬೆಡಗನ್ನು ಬೀರುತ್ತಾ ಅದರ ಸುತ್ತಲೂ ಬೇಸರವಿಲ್ಲದೆ ಘಂಟೆಗಟ್ಟಲೆ ಕುಣಿಯುತ್ತಿರುತ್ತದೆ. ಕಡೆಗೆ ಹೆಣ್ಣು ಅದರ ಸೌಂದರ್ಯಕ್ಕೆ ಮನ ಸೋತೋ ಅಥವಾ ಅದರ ಛಲಕ್ಕೆ ಬೇಸತ್ತೋ ತನ್ನ ಸಮ್ಮತಿಯನ್ನು ಸೂಚಿಸುತ್ತದೆ. ಹೆಣ್ಣು ಈ ವಿಧವಾದ ಛಲಕ್ಕೆ ತನ್ನ ಅಸಮಾಧಾನವನ್ನು ಸೂಚಿಸಿ

ದರೂ ಬಿಡದೆ ಗಂಡು ಇನ್ನೂ ಅದನ್ನು ಪೀಡಿಸುತ್ತಿದ್ದರೆ, ಹೆಣ್ಣು ಅದರ ತಲೆಯನ್ನು ಭದ್ರವಾಗಿ ಹಿಡಿದುಕೊಳ್ಳುವುದು. ಗಂಡು ಸ್ವಲ್ಪಹೊತ್ತು ವಿಲವಿಲನೆ ಒದ್ದಾಡುತ್ತಿದ್ದು ಕಡೆಗೆ ಹೆಣ್ಣು ಬಿಟ್ಟುಬಿಟ್ಟಾಗ ಪಲಾಯನಸೂಕ್ತವನ್ನು ಹಿಡಿಯುವುದು.

ಕೆಲವು ಜೇಡರ ಹುಳುಗಳಲ್ಲಿ ಹೆಣ್ಣು ಕೆಂಪಗಿರುವುದು. ಗಂಡು ಕೆಂಪು ಮತ್ತು ಕಪ್ಪು ಎರಡು ಜಾತಿಯುಂಟು. ಕೆಂಪು ಜೇಡರಹುಳುವು ಬೇಟದಲ್ಲಿ ಕಪ್ಪು ಜೇಡ ನನ್ನೇ ಪ್ರೀತಿಸುತ್ತದೆ. ಮಾನವನಲ್ಲಿ ಸಗೋತ್ರವು ನಿಷಿದ್ಧವಾಗಿರುವಂತೆ ಈ ಜೇಡರ ಹುಳುಗಳಲ್ಲಿ ಒಂದೇ ಬಣ್ಣವು ನಿಷಿದ್ಧವೋ ಏನೋ! ಜೇಡರ ಹುಳುಗಳಲ್ಲಿ ಹೆಣ್ಣು ದೊಡ್ಡದಾಗಿದ್ದು ಗಂಡು ಸಣ್ಣಗಿರುತ್ತದೆಂದು ಮೇಲೆ ಹೇಳಿದೆ. ಒಂದು ಭಾಗಕ್ಕೆ ಗಂಡಿಗೆ ಇದು ಅನುಕೂಲವೆಂದೇ ಹೇಳಬೇಕು. ಏಕೆಂದರೆ ರಾಕ್ಷಸಿಯ ತುತ್ತಿನಿಂದ ಪಾರಾಗಲು ಗಂಡಿನ ಸಣ್ಣ ಆಕೃತಿಯೂ ಅದರ ಚುರುಕೂ ಸಹಾಯಕವಾಗುವುವು.

ಅಕಶೇರುಕಗಳಲ್ಲೆಲ್ಲಾ ಜೀವನಪಥದಲ್ಲಿ ಹಿರಿಮೆಯನ್ನು ಪಡೆದಿರುವುದು 'ಕೀಟ ಗಳು.' ಕಶೇರುಕಗಳಲ್ಲಿ ಹಕ್ಕಿಗಳು ಹೇಗೋ, ಅಕಶೇರುಕಗಳಲ್ಲಿ ಕೀಟಗಳು ಹಾಗೆ. ಇವುಗಳಲ್ಲಿ ಹುರುಡಿನ ದೆಸೆಯಿಂದ ಸ್ಪರ್ಧೆಗಾರರಿಗೆ ಒಂದು ದೊಡ್ಡ ಕದನವೇ ಆಗುವುದು. ಆದ್ದರಿಂದ ಪರಾಕ್ರಮವು ಆವಶ್ಯಕವಾಗಿ ಬೇಕು. ಹಾಗೆಯೇ ಸೌಂದರ್ಯವೂ ಕೀಟಗಳಲ್ಲಿ ಚೆನ್ನಾಗಿ ಸ್ಥಾಪಿಸಲ್ಪಟ್ಟಿದೆ. ಗಂಡುಚಿಟ್ಟೆಯ ಕಣ್ಣು ಕೋರೈಸುವಂತಿರುವ ಬಣ್ಣವು ನೋಡುವುದಕ್ಕೆ ಬಹಳ ಸುಂದರವಾಗಿರುವುದು. ಅನೇಕ ಕೀಟಗಳು ವ್ಯಕ್ತಿಗಳ ವಿವಿಧ ಬಣ್ಣ ವಿಕಾರಗಳನ್ನು ಗುರುತಿಸುವ ಶಕ್ತಿಯನ್ನೂ ವಿಶೇಷವಾಗಿ ಪಡೆದಿರುತ್ತವೆ. ಅನೇಕ ಸ್ಥಳೀಯ ಚಿಟ್ಟೆಗಳ ರೆಕ್ಕೆಗಳಲ್ಲಿ ಕಿತ್ತಲೆ ಬಣ್ಣದ ಪಟ್ಟೆಪಟ್ಟೆ ಇರುವುದನ್ನು ನಾವು ನೋಡಬಹುದು. ಆ ಪಟ್ಟೆಪಟ್ಟೆಯು ತನ್ನ ಜೊತೆ ಯನ್ನು ಬೇಟದಲ್ಲಿ ಆಕರ್ಷಿಸುವುದಕ್ಕೆ ಸಹಾಯಕವಾದ ಅಲಂಕಾರ. "ಕೋಸುಗೆಡ್ಡೆಯ ಚಿಟ್ಟೆ"ಗಳಲ್ಲಿ ಹೆಣ್ಣು ಹೆಚ್ಚು ಸುಂದರವಾಗಿರುವುದು. ಇಂಥ ಸಂದರ್ಭಗಳಲ್ಲಿ ಹೆಣ್ಣಿಗೇ ಪ್ರಾಮುಖ್ಯತೆ ಹೆಚ್ಚು. ಮಿಡತೆಯ ಜಾತಿಗೆ ಸೇರಿದ ಕೀಟಗಳು ತಮ್ಮ ಅಪೇಕ್ಷೆಯನ್ನು ಹೆಣ್ಣುಗಳಿಗೆ ಕೇಳುವ ಹಾಗೆ ಸಾರುತ್ತವೆ. ಕೆಲವು ಗಂಡು ಕೀಟಗಳು ಕಸ್ತೂರಿಯ ಪರಿಮಳಕ್ಕೆ ಸಮಾನವಾದ ದ್ರವವನ್ನು ಸೂಸುವುದೂ ಉಂಟು.

ಪತಂಗಗಳಲ್ಲಿ ಅಷ್ಟೊಂದು ಗಂಡುಗಳು ತನ್ನ ಸುತ್ತಲೂ ನಿಂತಿದ್ದರೂ ಕೂಡ, ಹೆಣ್ಣು ಒಂದು ನಿರ್ದಿಷ್ಟ ಪ್ರೀತಿಪಾತ್ರನಿಗೇ ತನ್ನ ಮೆಚ್ಚುಗೆಯನ್ನು ವಿಾಸಲಾಗಿಟ್ಟಿರು ತ್ತದೆ. ಹೆಣ್ಣು ಅಲ್ಲಾಡದೆ ಇದ್ದ ಸ್ಥಳದಲ್ಲಿಯೇ ಕುಳಿತಿರುವುದು. ವಿಟಗಾರರ ಗುಂಪು ಅದರ ಸುತ್ತಲೂ ಬಹಳ ಹೊತ್ತು ಝೇಂಕರಿಸುತ್ತಿರುತ್ತವೆ. ಇದ್ದಕ್ಕಿದ್ದ ಹಾಗೆಯೇ ಯಾವುದೋ ಒಂದು ಗಂಡು ಅದರ ಜೊತೆ ಸೇರುತ್ತದೆ. ಒಡನೆಯೇ ಅಲ್ಲಿ ನೆರೆದಿದ್ದ

ಮಿಕ್ಕ ಎಲ್ಲಾ ಗಂಡುಗಳೂ ಹಾರಿಹೋಗುವುವು. ಇವುಗಳಲ್ಲಿ ಸ್ಪರ್ಧೆಗಾಗಲಿ ಜಗಳವಾಡದೇ ಇರುವುದು ಅತ್ಯಾಶ್ಚರ್ಯಕರವಾದ ಸಂಗತಿ. ಮತ್ತು ಒಬ್ಬ ಗೊತ್ತಾದ ಪ್ರೀತಿಪಾತ್ರನ ಜೊತೆಗೇ ಕೂಡುವ ಘಳಿಗೆಯು ಹೇಗೆ ನಿರ್ಧರವಾಗುತ್ತ ಎನ್ನುವುದೂ ಬಹಳ ಸೋಜಿಗವಾಗಿದೆ. ಎಲ್ಲಾ ಗಂಡುಗಳೂ ಸಹಜವಾಗಿ ಆ ಹೆಣ್ಣಿನ ಒಲುಮೆ ಪಡೆಯಲೇ ಬಂದಿರುತ್ತವೆ. ಆದರೂ ಯಾವುದಾದರೊಂದು ಜನ್ತು ಹೊಂದಿದರೆ ಅದಕ್ಕೆ ಮಿಕ್ಕವು ಯಾವ ಅಡ್ಡಿಯನ್ನೂ ತರುವುದಿಲ್ಲ. ಕೆಲವು ಶಾಸ್ತ್ರಜ್ಞರು 'ನಮಗೆ ತಿಳಿಯದ ಯಾವುದೋ ಒಂದು ರೀತಿಯಲ್ಲಿ ಹೆಣ್ಣು ಕಣ್ಣುಸನ್ನೆಯನ್ನು ಮಾಡುತ್ತದೆ. ಆಗ ಮಿಕ್ಕ ಎಲ್ಲಾ ಗಂಡುಗಳೂ ಆ ಹೆಣ್ಣಿನ ಇಚ್ಛೆಗೆ ಗೌರವ ಕೊಡುವುದು ತಮ್ಮ ಮರ್ಯಾದೆಯ ಕರ್ತವ್ಯವೆಂದು ತಿಳಿಯುತ್ತವೆ' ಎಂಬುದಾಗಿ ಊಹಿಸುತ್ತಾರೆ.


ಅನೇಕ ಪತಂಗಗಳು ವಾಸನೆಯ ಸಹಾಯದಿಂದ ತಮ್ಮ ಜೊತೆಯನ್ನು ಸಂಪಾದಿಸಿಕೊಳ್ಳುತ್ತವೆ. ಅಂಥ ಕೀಟಗಳ ಬಾಯಿ ಮತ್ತು ಆದರ ಸುತ್ತುಮುತ್ತಿನ ಅಂಗಗಳು ಬಹಳ ಕ್ಷಯಹೊಂದಿರುತ್ತವೆ. ಅವು ತಮ್ಮ ಕಟ್ಟಕಡೆಯ ಆಹಾರವನ್ನು ತಮ್ಮ ಬೆಳವಣಿಗೆಯ ಕಾಲದಲ್ಲಿ ತೆಗೆದುಕೊಂಡಿದ್ದು ಇಲ್ಲಿಯವರೆಗೂ ಉಪವಾಸವೇ ಇರುತ್ತವೆ. ಬೇಟ ಕೂಟಗಳೊಡನೆ ಅವುಗಳ ತಾರುಣ್ಯ ಜೀವನವು ಲಯ ಹೊಂದುವುದು. ಜಾಗ್ರತೆಯಾಗಿ ಜೊತೆಯು ಸಿಕ್ಕದೇ ಇದ್ದ ಪಕ್ಷದಲ್ಲಿ ವಂಶಾಭಿವೃದ್ಧಿಯ ಘನ ಉದ್ದೇಶವು ವಿಫಲವಾಗುವ ಸಂಭವವುಂಟು. ಆದುದರಿಂದ ವಾಸನೆಯನ್ನು ಕಂಡುಹಿಡಿಯುವ ಇಂದ್ರಿಯಗಳು ಇವುಗಳಲ್ಲಿ ವಿಶೇಷವಾಗಿ ವೃದ್ಧಿ ಹೊಂದಿರುವ ದನ್ನು ನಾವು ನೋಡುತ್ತೇವೆ. ಇವುಗಳ ಸಹಾಯದಿಂದ ಅವು ತಮ್ಮ ತಮ್ಮ ಜೊತೆಯನ್ನು ಹೊಂದಿಸಿಕೊಳ್ಳುತ್ತವೆ.


ದೃಷ್ಟಿ ಸಂಬಂಧವಾದ ಇಂದ್ರಿಯಗಳು ಹೆಚ್ಚು ಬೆಳವಣಿಗೆಯನ್ನು ಹೊಂದಿರುವ ಇನ್ನು ಕೆಲವು ಕೀಟಗಳಲ್ಲಿ ಪಕ್ಕದ ಎರಡು ಕಣ್ಣುಗಳ ಜೊತೆಗೆ ನಡುಹಣೆಯ ಮೇಲೆ ಇನ್ನೊಂದು ಕಣ್ಣಿರುತ್ತದೆ. ಈ ಮೂರನೆಯ ಕಣ್ಣೇ ಬೇಟಕೂಟಗಳಲ್ಲಿ ಹೆಚ್ಚು ಸಹಾಯಮಾಡುವುದು. ಮಿಣುಕು ಹುಳುಗಳು ಇದಕ್ಕೆ ಉದಾಹರಣೆ. ಪರಗ್ವೆಯಲ್ಲಿ ಕೆಲವು ಹುಳುಗಳು "ರೈಲ್ವೆ ದುಂಬಿ"ಗಳೆಂದು ಹೆಸರು ಪಡೆದಿವೆ. ಏಕೆಂದರೆ ಅವುಗಳಲ್ಲಿ ದೇಹದ ಎರಡು ತುದಿಗಳು ಅಪಾಯದ ಕುರುಹನ್ನು ಸೂಚಿಸುವುದಾಗಿಯೂ ಆಚೆಈಚೆಯ ಪಕ್ಕಗಳು ಎಚ್ಚರಿಕೆಯ ಕುರುಹನ್ನು ಸೂಚಿಸುವುದಾಗಿಯೂ ಇರುತ್ತವೆ. ಅಂದರೆ ಮೇಲೆ ಹೇಳಿದ ಆಯಾ ಜಾಗಗಳಲ್ಲಿ ಕೆಂಪು ಮತ್ತು ಹಸುರು ಬಣ್ಣದ ದೀಪವು ಪ್ರಜ್ವಲಿಸುತ್ತಿರುತ್ತದೆ. ಮಿಣುಕು ಹುಳುಗಳ ಜಾತಿಗೆ

ಸೇರಿದ ದಕ್ಷಿಣ ಯೂರೋಪಿನ 'ಜಿಂಕಿ ಸೊಣ'ಗಳಲ್ಲಿ ಈ ಬಗೆಯ ಬೆಳಕಿಗೆ ಸಂಬಂಧಪಟ್ಟ ಅವಯವಗಳು ಪೂರ್ಣ ಬೆಳೆಪಣಿಗೆಯನ್ನು ಹೊಂದಿರುತ್ತವೆ. ಇದಿಷ್ಟೂ ಅಕಶೇರುಕ ಪಂಗಡಕ್ಕೆ ಸೇರಿದ ಪ್ರಾಣಿಗಳ ಬೇಟಕೂಟಗಳ ರೀತಿಯಾಯಿತು.

ಕಶೇರುಕಗಳು ಅಕಶೇರುಕಗಳಿಗಿಂತಲೂ ಎಲ್ಲ ವಿಧದಲ್ಲೂ ಬಹಳ ಮುಂದು ವರಿದಿವೆಯೆಂದು ಹಿಂದೆಯೇ ತಿಳಿಸಿದೆ. ಆದ್ದರಿಂದ ಬೇಟಕೂಟಗಳ ರೀತಿನೀತಿಯೂ ಇವುಗಳಲ್ಲಿ ಹೆಚ್ಚು ಮುಂದುವರಿದಿರುವುದರಲ್ಲಿ ಸಂದೇಹವಿಲ್ಲ. ಈ ಕಶೇರುಕಗಳಲ್ಲಿ ಬೇಟಕೂಟಗಳ ಆಸಕ್ತಿಯ ಉಗಮವು ಮೊದಲು ಮೀನುಗಳಲ್ಲಿ ತಲೆದೋರಿತೆಂದು ಹೇಳಬಹುದು. ಇವುಗಳಲ್ಲಿ ಸ್ಪರ್ಧೆಗಾರರು ಒಂದಕ್ಕೊಂದು ಹೊಡೆದಾಡುವ ಪದ್ಧತಿಯುಂಟು. 'ಸಾಲ್ಮನ್' ಮತ್ತು 'ಸ್ಟಿಕಲ್‌ಬ್ಯಾಕ್' ಎಂಬ ಜಾತಿಯ ಮೀನುಗಳು ಇದಕ್ಕೆ ಉದಾಹರಣೆಯಾಗಿವೆ. ಸ್ಟಿಕಲ್‌ಬ್ಯಾಕ್ ಎಂಬ ಮೀನು ಬೇಟದ ಕಾಲದಲ್ಲಿ ಶೋಭಾಯಮಾನವಾದ ಕೆಂಪು ಬಣ್ಣದಿಂದ ಕೂಡಿರುವುದು. ತನ್ನ ಎದುರಾಳಿಯೊಡನೆ ಇದು ಭೀಕರ ಕದನವನ್ನೇ ಕಾಯುತ್ತದೆ. ಇದರಲ್ಲಿ ಬಲಿಷ್ಠವಾದದ್ದು ಗೆಲ್ಲುವುದು ಸ್ವಭಾವ. ಗೆದ್ದಮೇಲೆ ಮೊದಲಿನಂತೆಯೇ ಆ ಶೋಭಾಯಮಾನವಾದ ಬಣ್ಣವನ್ನು ಪಡೆಯುತ್ತದೆ. ಹೆಣ್ಣುಗಳೂ ಸಹ ಮದುವಣಗಿತ್ತಿಯರಂತೆ ಅಲಂಕಾರಭೂಷಿತವಾಗಿರುವುವು. ಗಂಡು ಸ್ಟಿಕಲ್‌ಬ್ಯಾಕ್‌ಗಳು ಕಾಳಗಕ್ಕೆ ಕಾಲು ಕೆರೆದುಕೊಂಡೇ ನಿಂತಿರುತ್ತವೆ. ಅವುಗಳ ಕದನವು ನೋಡುವುದಕ್ಕೆ ಅತ್ಯಂತ ಭೀಕರವಾಗಿರುವುದು. ಅತ್ತಕಡೆ ಗಂಡುಗಳ ಗುಂಪು ಒಂದಕ್ಕೊಂದು ಯುದ್ಧಮಾಡುತ್ತಿರುವಾಗ ಹೆಣ್ಣುಗಳ ಗುಂಪು ತಮಾಷೆ ನೋಡುತ್ತಿರುತ್ತದೆ. ಆಗಾಗ್ಗೆ ಜಯಹೊಂದಿದ ಗಂಡುಗಳು ಹೆಣ್ಣುಗಳ ಗುಂಪಿಗೆ ಬಂದು ಹಂಗಾಮಿಯಾಗಿ ಒಂದು ಜೊತೆಯನ್ನು ಚುನಾಯಿಸಿ ಅದನ್ನು ತನ್ನ ಮನೆಗೆ ಆಹ್ವಾನಿಸುತ್ತದೆ. ಗಂಡಿಗೆ ತನ್ನ ನಲ್ಲೆಯು ತನ್ನನ್ನು ಹುಡುಕಿಕೊಂಡು ಬರುತ್ತಿದೆ ಎಂದು ಗೊತ್ತಾದರೆ ಅದು ಅವಳನ್ನು ಉಪಚರಿಸಲು ತನ್ನ ಗೂಡನ್ನು ಸಿದ್ಧಗೊಳಿಸುವುದು. ಹೆಣ್ಣುಗಳೇನು ಸುಮ್ಮನಿರುವುದಿಲ್ಲ. ಹೆಣ್ಣುಗಳ ಗುಂಪಿಗೆ ಮುಖ್ಯಸ್ಥಳಾದ ಒಂದು ಮೀನು ಬಹು ವೇಗವಾಗಿ ಮುಂದಕ್ಕೆ ಈಜಿಕೊಂಡು ಹೋಗುವುದು. ಮಿಕ್ಕವು ಅದನ್ನು ಹಿಂಬಾಲಿಸುವುವು. ಹಾಗೆಯೇ ಹೋಗುತ್ತಿರುವಾಗ ಗುಂಪಿನ ನಾಯಕಿಯು ಇದ್ದಕ್ಕಿದ್ದ ಹಾಗೆ ತಟಸ್ಥಳಾಗಿ ತಲೆ ಕೆಳಗಾಗಿ ನಿಂತುಕೊಳ್ಳುತ್ತದೆ. ಉಳಿದವುಗಳೆಲ್ಲಾ ಈ ಕವಾತನ್ನೇ ಅನುಸರಿಸುತ್ತವೆ. ಆಗ ಗುಂಪಿನ ಮುಖ್ಯಸ್ಥಳು ಸರ್‍ರನೆ ಮುನ್ನುಗ್ಗಿ ಗುಂಪನ್ನು ಚದರಿಸುತ್ತದೆ. ಆದರೆ ಕೆಲವು ನಿಮಿಷಗಳೊಳಗಾಗಿಯೇ ಪುನಃ ಅವು ಗುಂಪನ್ನು ಕಟ್ಟಿಕೊಳ್ಳುತ್ತವೆ. ಇದರ ಅರ್ಥವು ಶಾಸ್ತ್ರಜ್ಞರಿಗೆ ಇನ್ನೂ ಸ್ಪಷ್ಟವಾಗಿಲ್ಲ.

ಡ್ರ್ಯಾಗೊನೆಟ್ ಎಂಬ ಸಣ್ಣ ಮೀನುಗಳಲ್ಲಿ ಗಂಡು ಹಳದಿಯ ಬಣ್ಣದ ಮೇಲೆ ನೀಲಿ ಬಣ್ಣದ ಚುಕ್ಕಿಗಳನ್ನೂ ಪಟ್ಟೆಪಟ್ಟೆಯನ್ನೂ ಪಡೆದಿರುತ್ತದೆ. ಅದರ ಬೆನ್ನಿನ ರೆಕ್ಕೆಯು ದೊಡ್ಡದಾಗಿ ಒಂದು ಆಭರಣದಂತಿರುತ್ತದೆ. (ಚಿತ್ರ ೭.) ಮಿಕ್ಕ ರೆಕ್ಕೆಗಳು ವಿವಿಧ ಬಣ್ಣದಿಂದ ಕೂಡಿ ನೋಡುವುದಕ್ಕೆ ಮನೋಹರವಾಗಿರುವುವು. ಈ ಬಣ್ಣಗಳು





ಚಿತ್ರ ೭. ಡ್ರ್ಯಾಗೊನೆಟ್ ಮೀನುಗಳು

ಗಂಡಿನ ಬೆನ್ನುರೆಕ್ಕೆಯು ದೊಡ್ಡದಾಗಿ ಆಭರಣದಂತಿರುವುದನ್ನು ನೋಡಬಹುದು

ಸ್ತ್ರೀಜಾತಿಯನ್ನು ಅತಿಶಯವಾಗಿ ಆಕರ್ಷಿಸುವುವು. ಇದೇ ಡ್ರ್ಯಾಗೊನೆಟ್‌ಗಳ ಇನ್ನೊಂದು ಜಾತಿಯಲ್ಲಿ ಹೆಣ್ಣು ಗಂಡಿಗಿಂತಲೂ ಹೆಚ್ಚು ಸುಂದರವಾಗಿದ್ದು ಬೇಟ ಕೂಟಗಳಲ್ಲಿ ಹೆಚ್ಚು ಭಾಗ ವಹಿಸುತ್ತದೆ.

ಮೀನುಗಳಿಗೂ ದ್ವಿಚರಪ್ರಾಣಿಗಳಿಗೂ ಬಹಳ ಹತ್ತಿರ ಸಂಬಂಧವಿರುತ್ತದೆ. ಆದರೂ ದ್ವಿಚರಪ್ರಾಣಿಗಳು ಜೀವನ ಪಥದಲ್ಲಿ ಮೀನುಗಳಿಗಿಂತಲೂ ಮುಂದು ವರಿದಿವೆ. ಇವುಗಳೂ ಬೇಟದ ಕಾಲದಲ್ಲಿ ಕಾದಾಡುವುವು. ಆದರೆ ಸ್ಟಿಕಲ್‌ಬ್ಯಾಕ್ ಮೀನುಗಳಲ್ಲಿರುವಷ್ಟು ಭೀಕರ ಕದನವು ಇಲ್ಲಿ ಕಾಣಬರುವುದಿಲ್ಲ. ಕೆಲವು ಕಪ್ಪೆಗಳು

ಜಗಳವಾಡಿ ಕುಸ್ತಿಕಾಯುವುವು ಅಷ್ಟೆ. ಅಲ್ಲದೆ ಅಂಥ ತೀವ್ರವಾದ ಸ್ಪರ್ಧೆಯೂ ಇವುಗಳಲ್ಲಿ ಕಂಡುಬರುವುದಿಲ್ಲ. ಸಾಮಾನ್ಯವಾಗಿ, ತಿನ್ನತಕ್ಕ ಕಪ್ಪೆಗಳಲ್ಲಿ ಗಂಡಿಗೆ ಬಾಯಿಯ ಎರಡು ಮೂಲೆಗಳಲ್ಲೂ ವಟಗುಟ್ಟುವ ಚೀಲ ಒಂದಿರುವುದು. ಮಳೆ ಬಿದ್ದ ಕೂಡಲೆ ಈ ಕಪ್ಪೆಗಳು ಕಿವಿ ಕಿವುಡಾಗುವಂತೆ ವಟಗುಟ್ಟುವುದನ್ನು ನಾವು ಕೇಳಿದ್ದೇವೆ. ಕಪ್ಪೆಗಳಿಗೆ ಇದೇ ಬೇಟದ ಕಾಲ. ಹಾಗೆ ಅವು ವಟಗುಟ್ಟುವುದು ಗಂಡು ತನ್ನ ಕಾಮತೃಷ್ಣೆಯನ್ನು ಅಡಗಿಸಿಕೊಳ್ಳಲು ಹೆಣ್ಣನ್ನು ಒರಮಾಡಿಕೊಳ್ಳುವುದಕ್ಕೇ. ಮಳೆ ಬಿದ್ದನಂತರವೇ, ಜೂನ್ ಜುಲೈ ತಿಂಗಳಲ್ಲಿ, ಇವು ಎಲ್ಲಿ ನೀರು ನಿಂತಿದ್ದರೆ ಅಲ್ಲಿ ಲಕ್ಷಾಂತರ ಮೊಟ್ಟೆಗಳನ್ನಿಡುತ್ತವೆ.

ಸರೀಸೃಪಗಳಲ್ಲಿ ಗಂಡುಮೊಸಳೆಗಳೂ, ಕೆಲವು ಆಮೆಗಳೂ, ಮತ್ತು ಹಲ್ಲಿಗಳೂ ಬೇಟದ ಕಾಲದಲ್ಲಿ ಜಗಳವಾಡುತ್ತಿರುತ್ತವೆ. ಕೆಲವು ಗಂಡುಜಾತಿಯ ಹಲ್ಲಿಗಳು ಅಲಂಕಾರ ಭೂಷಿತವಾಗಿಯೂ ಇರುವುವು. ಇಂಡಿಯಾ ದೇಶದ 'ಸಿತಾನ' ಎಂಬ ಒಂದು ಜಾತಿಯ ಹಲ್ಲಿಯಲ್ಲಿ ಗಂಡಿಗೆ ಗಂಟಲ ಬಳಿ ವಿವಿಧ ಬಣ್ಣದಿಂದ ಜಾಜ್ವಲ್ಯಮಾನವಾಗಿ ಪ್ರಕಾಶಿಸುವ ಒಂದು ಚೀಲವಿರುವುದು. ಅದು ವಿಹಾರಕಾಲದಲ್ಲಿ ಪಸರಿಸುವುದು. ಮಿಕ್ಕ ಕಾಲಗಳಲ್ಲಿ ಮಡಿಸಿರುವುದು. ಕೆಲವು ಹಲ್ಲಿಗಳು ಬಿಂಕದಿಂದ ಮೋಹಕರವಾಗಿ ನಾಟ್ಯವಾಡುವುದೂ ಉಂಟು.


ಅಮೇರಿಕಾದೇಶದ ಒಂದು ಜಾತಿಯ ಮೊಸಳೆಯು ಸ್ವಭಾವತಃ ಅಸೂಯಾಪರವಾಗಿದ್ದು ಬೇಟದ ಕಾಲದಲ್ಲಿ ನೋಡುವುದಕ್ಕೆ ಭಯಂಕರವಾಗಿರುವುದು. ಸೋಮಾರಿಯಾಗಿಯೂ ಜಡವಾಗಿಯೂ ಇರುವ ಅದು ಒಂದು ಕೊಳದ ಮಧ್ಯದಲ್ಲಿರುವ ಸಣ್ಣ ರೊಚ್ಚಿನ ದಿಣ್ಣೆಯ ಮೇಲೆ ಹೊಂಚು ಹಾಕಿಕೊಂಡು ಕಾಯುತ್ತಿರುವುದು. ಸಮೀಪದಲ್ಲಿಯೇ ಒಂದು ಹೆಣ್ಣು ಗೂಡುಕಟ್ಟಿಕೊಳ್ಳುವುದಕ್ಕೋಸ್ಕರ ಕಸ ಕಡ್ಡಿಗಳನ್ನು ಕೂಡಿಸುತ್ತಾ ಇರುವುದು. ಆಗ ಗಂಡು ಅದನ್ನು ಮೋಹಿಸುವಂತೆ ಪ್ರೇಮದ ಕುಡಿನೋಟಗಳನ್ನು ಬೀರುವುದು. ಅಲ್ಲಿ ಇನ್ನು ಕೆಲವು ಗಂಡುಮೊಸಳೆಗಳೇನಾದರೂ ಇದ್ದರೆ ಅವು ಈ ವಿಟನನ್ನು ಸುಮ್ಮನೇ ಬೇರೆ ಬಿಡುವುದಿಲ್ಲ. ಕಾದಾಟದಲ್ಲಿ ಕಾಲುಮುರಿದು ಬೀಳುವುದು ಸರ್ವಸಾಮಾನ್ಯ. ನಮ್ಮ ಇಂಡಿಯಾ ದೇಶದ ಮೊಸಳೆಗಳು ಬೇಟದ ಕಾಲದಲ್ಲಿ ನೀರಲ್ಲೆಲ್ಲಾ ಒಂದು ಬಗೆಯ ಪರಿಮಳದ್ರವವನ್ನು ಪ್ರಚುರವಾಗಿ ಸುರಿಸುತ್ತಾ, ಗರ್ಜನೆ ಘೋಷಣೆಗಳಿಂದ ಮುನ್ನುಗ್ಗುತ್ತಿರುತ್ತವೆ.


ಇಡೀ ಪ್ರಾಣಿವರ್ಗದಲ್ಲೆಲ್ಲಾ ಹಕ್ಕಿಗಳಲ್ಲಿ ಪ್ರಣಯ ಚರಿತ್ರೆಯು ಅತ್ಯಂತ ಮನೋರಂಜಕವಾಗಿದೆ. ಹಕ್ಕಿಗಳು ಬುದ್ಧಿ ತಿಳಿದ ಪ್ರಾಣಿಗಳು. ಯಾವ ರೀತಿಯಲ್ಲಿ ನೋಡಿದರೂ ಹಕ್ಕಿಗಳ ನಡೆವಳಿಕೆಗಳು ಬಹಳ ಸಂಸ್ಕೃತಿ ಪೂರ್ಣವಾಗಿರುತ್ತವೆ.

ಪ್ರಾಣಿವರ್ಗದಲ್ಲಿ ಸಸ್ತನಿಗಳನ್ನು ಬಿಟ್ಟರೆ ನಾಗರಿಕತೆಯೂ ಕುಶಲವಿದ್ಯೆಯೂ ಕಲೆಯೂ ಕಂಡುಬರುವುದು ಹಕ್ಕಿಗಳಲ್ಲೇ. ಇವುಗಳಲ್ಲೂ ಸಹ ಕದನವೂ ಸೌಂದರ್ಯವೂ ಸ್ಪಷ್ಟವಾಗಿ ಮನೆಮಾಡಿಕೊಂಡಿವೆ. ಒಂದು ಹೆಣ್ಣನ್ನು ಸಂಪಾದಿಸಲು ಅನೇಕ ಗಂಡುಗಳು ಹೊಡೆದಾಡುವುವು. ಉಷ್ಟ್ರಪಕ್ಷಿಗಳು ಎದುರಾಳಿಯ ಪೆ ದೇಹ ಕಾಲುಗಳ ಮೇಲೆ ತಮ್ಮ ಬಲವಾದ ಕಾಲಿನ ಉಗುರುಗಳಿಂದ ಗಾಯ ಮಾಡುವುವು. ಹೊಟ್ಟೆಕಿಚ್ಚಿನಿಂದ ಕೂಡಿದ 'ಬಸ್ಟರ್ಡ್' ಎಂಬ ಹಕ್ಕಿಗಳು ತಮ್ಮ ಕತ್ತನ್ನು ಆಕಾಶಕ್ಕೆ ಎತ್ತಿ, ರೆಕ್ಕೆ ಪುಕ್ಕಗಳನ್ನೆಲ್ಲಾ ಕೆದರಿಕೊಂಡು ಗುರುಗುಟ್ಟುತ್ತಾ ಬುಸುಗುಟ್ಟುತ್ತಾ ಬಹು ಜಂಭದಿಂದ ಕಾಲುಕೆರೆದುಕೊಂಡು ಜಗಳಕ್ಕೆ ಬರುವುವು. ಜಗಳದಲ್ಲಿ ತಮ್ಮ ಕೊಕ್ಕುಗಳನ್ನು ಬಹು ಚಾಕಚಕ್ಯದಿಂದ ಉಪಯೋಗಿಸುತ್ತವೆ. ಕಾಳಕ್ರೌಂಚ ಪಕ್ಷಿಗಳಲ್ಲಿ ಎದೆಯ ರೆಕ್ಕೆಗಳು ಖೇಡದಂತೆ ಗಟ್ಟಿಯಾಗಿರುವುವು. ಅವು ಒಂದಕ್ಕೊಂದು ಕಾದಾಡುವಾಗ ಎದುರಾಳಿಯಿಂದ ಬಿಸುವ ಒದೆತಗಳಿಗೆ ತಮ್ಮ ಎದೆಯನ್ನು ಒಡ್ಡುತ್ತವೆ. ಹಂಸಗಳು, ಬಾತುಗಳು, ನೀರುಕೋಳಿಗಳು ಒಂದನ್ನೊಂದು ಅಟ್ಟಿಸಿಕೊಂಡು ಹೋಗಿ ಎದುರಾಳಿಯ ಕತ್ತನ್ನು ಹಿಡಿದು ನೀರಿನಲ್ಲಿ ಅದ್ದುವುವು. ಸಣ್ಣಸಣ್ಣ ಹಕ್ಕಿಗಳಲ್ಲಿ ಹೆಣ್ಣನ್ನು ಪಡೆಯಲು ನಡೆಯತಕ್ಕ ಕದನಗಳು ಬಹು ಕಡಮೆ. ಏಕೆಂದರೆ ಅವುಗಳಲ್ಲಿ ಪ್ರಾಂತವಿಭಾಗವಿರುವುದು. ಒಂದು ಪ್ರಾಂತದ ಪ್ರಜೆಯು ಇನ್ನೊಂದು ಪ್ರಾಂತಕ್ಕೆ ಹೋಗುವುದೇ ಇಲ್ಲ.

ನೀರುಕೋಳಿಗಳು ಬೇಟದ ಕಾಲದಲ್ಲಿ ಒಂದರೊಡನೊಂದು ಜೊಂಡಿನಿಂದ ಆಟವಾಡುವ ಪದ್ಧತಿಯನ್ನು ಹಿಂದೆಯೇ ಸೂಚಿಸಿದೆ. (ಚಿತ್ರ ೮.) ಎರಡು ಹಕ್ಕಿಗಳೂ ಎದುರುಬದುರಾಗಿ ತಮ್ಮ ಕತ್ತುಗಳನ್ನು ಲೀಲೆಯಿಂದ ತಾಳಹಾಕಿದಂತೆ ಕುಣಿಸುತ್ತಾ ಹತ್ತಿರಹತ್ತಿರಕ್ಕೆ ಬಂದು ಕೊಕ್ಕಿನಿಂದ ಒಂದನ್ನೊಂದು ಮಾತನಾಡಿಸುವುವು. ಈ ರೀತಿ ಹನ್ನೆರಡುಸಾರಿ ಮಾಡಿದ ಮೇಲೆ ತಮ್ಮ ನೀಳವಾದ ಕತ್ತುಗಳನ್ನು ಪಕ್ಕಪಕ್ಕದಲ್ಲಿ ಸೇರಿಸುವುವು. ಆಗ ಅವು ಜೋಡುನಳಿಗೆ ಕೋವಿಯ ಎರಡು ಕೊಳವೆಗಳಂತೆ ಕಾಣುತ್ತವೆ. ಕೊರಕೊಂಚೆಯ ಪಕ್ಷಿಗಳು ತಮ್ಮ ಕೊಕ್ಕುಗಳಿಂದ ಒಂದನ್ನೊಂದು ಚುಂಬಿಸುವುವು.

ಬಾತುಗಳಲ್ಲಿ ಗಂಡು ಹೆಣ್ಣುಗಳು ಎದುರು ಬದುರಾಗಿ ನಿಂತು ತಮ್ಮ ಕತ್ತುಗಳನ್ನು ನೀರಿನಲ್ಲಿ ಅನೇಕಾವರ್ತಿ ಅದ್ದಿ ಎತ್ತಿ ಮಾಡುವುವು. ಹೀಗೆ ಮಾಡುತ್ತಾ, ಮಾಡುತ್ತಾ ಕಾಮೋದ್ರೇಕವು ಕ್ರಮೇಣ ಹೆಚ್ಚಿದಂತಾಗಿ ಅದು ವಿಷಯಾಸಕ್ತಿಯ ಚರಮಸೀಮೆಯನ್ನು ಮುಟ್ಟಿದಾಗ ಹೆಣ್ಣು ತನ್ನ ಕತ್ತನ್ನು ನೀರಿನ ಮೇಲೆ ಚಪ್ಪಟೆಯಾಗಿಡುತ್ತದೆ. ಈ ಆಹ್ವಾನವಾದ ನಂತರವೇ ಗಂಡು ಬಂದು ಹೆಣ್ಣನ್ನು ಆಲಿಂಗಿಸಿ ರಮಿಸುವುದು.






ಚಿತ್ರ ೮. ನೀರುಕೋಳಿಗಳ ಬೇಟದ ರೀತಿ

ಗಂಡು ಹೆಣ್ಣುಗಳು ಜೊಂಡುಕಡ್ಡಿಯನ್ನು ಬಾಯಲ್ಲಿ ಕಚ್ಚಿಕೊಂಡು, ವಧೂವರರು ಹೂವಿನ ಚೆಂಡಾಡುವಂತೆ ಎಸೆದಾಡುತ್ತಿರುವುದು

ಸೌಂದರ್ಯದಲ್ಲಿ ಗಂಡು ಹಕ್ಕಿಗಳು ಹೆಣ್ಣಿಗಿಂತಲೂ ಹೆಚ್ಚು ಅಲಂಕೃತ ವಾಗಿದ್ದು ಒಳ್ಳೆಯ ಮಂಜುಳಕಂಠವನ್ನೂ ಪಡೆದಿರುತ್ತವೆ. ಈ ಸೊಗಸುಗಳು



ಚಿತ್ರ ೯. ಬೇಟದ ಕಾಲದಲ್ಲಿ ಗಂಡುಹಕ್ಕಿಗಳು ಪ್ರದರ್ಶಿಸುವ ಅಲಂಕಾರಶೃಂಗಾರಗಳು—i

ಬೇಟದ ಕಾಲದಲ್ಲಿ ಇನ್ನೂ ಸ್ಪಷ್ಟವಾಗಿ ಕಾಣಬರುವುವು. (ಚಿತ್ರ ೯-೧೦.) ಮನೆಯ ಮುಂದೆ ಓಡಾಡುವ ಹೆಣ್ಣು ಮತ್ತು ಗಂಡು ಕೋಳಿಗಳನ್ನು ನೋಡಿದರೆ ತಲೆಯ




ಚಿತ್ರ ೧೦. ಬೇಟದ ಕಾಲದಲ್ಲಿ ಗಂಡುಹಕ್ಕಿಗಳು ಪ್ರದರ್ಶಿಸುವ ಅಲಂಕಾರಶೃಂಗಾರಗಳು—ii

ಮೇಲೆ ಒಂದು ಬಗೆಯ ಮಕುಟವನ್ನೂ ಕತ್ತಿನ ಕೆಳಗೆ ನೇತಾಡುವ ಕೆಂಪು ಬಣ್ಣದ ಚೀಲವನ್ನೂ ಪಡೆದಿರುವ ಹುಂಜವು ಹೆಣ್ಣು ಕೋಳಿಗಿಂತಲೂ ಅಡ್ಡಿಯಿಲ್ಲದೆ ಹೆಚ್ಚು ಸುಂದರವಾಗಿರುವುದು ಕಂಡುಬರುತ್ತದೆ. ಮಯೂರಪಕ್ಷಿಗಳ ಸೌಂದರ್ಯ ಠೀವಿಯನ್ನು ಬರಿಯ ಬಾಯಿಮಾತಿನಿಂದ ವರ್ಣಿಸಲು ಅಸಾಧ್ಯ. ದಕ್ಷಿಣ ಏಷಿಯಾದಲ್ಲಿ



ಚಿತ್ರ ೧೧. **ದಕ್ಷಿಣ ಏಷಿಯದ ಕಾಡುಕೋಳಿ—ಗಂಡು**

ಸಿಕ್ಕುವ ಕಾಡುಕೋಳಿಗಳು ನೋಡುವುದಕ್ಕೆ ಬಹು ಮುದ್ದಾಗಿರುವುವು. (ಚಿತ್ರ ೧೧.) ಇವುಗಳಲ್ಲಿ ಹುಂಜವು ಹೆಣ್ಣಿನ ಅರಿವಿಲ್ಲದಂತೆ ಮೆಲ್ಲಗೆ ಅದರ ಸುತ್ತ ಹಲವು ಬಾರಿ ಸುತ್ತಿ ಇದ್ದಕ್ಕಿದ್ದ ಹಾಗೆಯೇ ಒಂದು ಸ್ಥಳದಲ್ಲಿ ತಟಸ್ಥವಾಗಿ ನಿಂತು ತಲೆಬಾಗಿ ನಮಸ್ಕರಿಸುವುದು. ಅದರ ತಲೆಯ ಮೇಲೆ ಕೊಂಬಿನಂತೆ ಇರುವ ಮಾಂಸದ ಡುಬ್ಬಗಳು ಉಬ್ಬಿ ಬಳುಕುವುವು. ಆಗ ಹುಂಜವು ತನ್ನ ರೆಕ್ಕೆ ಪುಕ್ಕಗಳನ್ನೆಲ್ಲಾ ಕೆದರಿ, ಕಾಲನ್ನು ಮಡಿಸಿ, ಉಗುಳುತ್ತಲೂ, ಬುಸುಗುಟ್ಟುತ್ತಲೂ ತನ್ನ ಪುಕ್ಕಗಳನ್ನು ನೆಲಕ್ಕೆ ಸವರಿ ಕೊಂಡು ಸ್ವಲ್ಪ ದೂರಹೋಗಿ ಇದ್ದಕ್ಕಿದ್ದಂತೆಯೇ ಅತ್ಯಾದರಪರವಶವಾಗಿ ಸ್ವಲ್ಪ ಕಾಲ ತಟಸ್ಥವಾಗಿ ನಿಂತುಕೊಳ್ಳುವುದು. ಆಗ ಅದರ ಸಂಪೂರ್ಣವಾಗಿ ಪಸರಿಸಲ್ಪಟ್ಟಿರುವ ರೆಕ್ಕೆಗಳು ಕಣ್ಣು ಕೋರೈಸುವಂತೆ ಪ್ರಕಾಶಿಸುತ್ತಿರುತ್ತವೆ. (ಚಿತ್ರ ೧೨.) ಹಾಗೆಯೇ ಸ್ವಲ್ಪ ಹೊತ್ತು ನಿಂತಿದ್ದು ಕಡೆಗೆ ಒಂದು ಬಗೆಯ ಗರ್ವದ ಬಿಂಕದಿಂದ ಹೆಣ್ಣಿನ ಮುಂದೆ ತನ್ನ ಅಪೇಕ್ಷೆಯನ್ನು ವಿನಯದಿಂದ ಅರಿಕೆಮಾಡಿಕೊಳ್ಳುತ್ತದೆ.



ಚಿತ್ರ ೧೨. ಗಂಡು ಕಾಡುಕೋಳಿಯು ಬೇಟದ ಕಾಲದಲ್ಲಿ ತನ್ನ ಗರಿಗಳನ್ನು ಚಾಮರದಂತೆ ಕೆದರಿರುವುದು

ಇನ್ನು ಕೆಲವು ಹಕ್ಕಿಗಳಲ್ಲಿ ಬರಿಯ ನಾಟ್ಯ ಬಣ್ಣ ವಿಕಾಸಗಳಿಗಿಂತಲೂ ಪ್ರಣಯ ಗೀತೆಗಳು ಹೆಚ್ಚು ವಾಡಿಕೆಯಲ್ಲಿವೆ. ಹೀಗೆ ಗಾನಮಾಡುವ ಹಕ್ಕಿಗಳಲ್ಲ ಒಂದನ್ನೊಂದು ಹುಡುಕಿಕೊಂಡು ಹೋಗುವ ಆವಶ್ಯಕತೆಯೇ ಇಲ್ಲ. ಅದಕ್ಕೆ ಬದಲಾಗಿ ವಸಂತ ಋತುವಿನಲ್ಲಿ ಅವು ಬಹಳ ಮನೋಹರವಾಗಿ ಮಂಜುಳಧ್ವನಿಯಿಂದ ಗಾನಮಾಡುವುವು. ಹೆಣ್ಣುಹಕ್ಕಿಗಳು ಇದನ್ನು ಕೇಳಿದೊಡನೆಯೇ ಓಡಿಬರುವುವು. ಈ ಪದ್ಧತಿಯು ಬುಲ್‌ಬುಲ್ ಪಕ್ಷಿಗಳಲ್ಲಿ ಬಹಳ ವಾಡಿಕೆ.

ಸಾಮಾನ್ಯವಾಗಿ ಎಲ್ಲೆಲ್ಲಿಯೂ ವಾಸವಾಗಿರುವ ಕೋಯಪ್ಪಿಕ ಅಥವಾ ದೇವಸಹಕ್ಕಿಗಳಲ್ಲಿ ಗಂಡು ನಾಟ್ಯವಾಡುವುದು, ವಿವಿಧರೀತಿಯಲ್ಲಿ ಪಲ್ಟಿ ಹೊಡೆಯು ವುದು, ಹಂಬಲದಿಂದ ಕೂಗಿಕೊಳ್ಳುವುದು, ರೆಕ್ಕೆ ಬಡಿದುಕೊಳ್ಳುವುದು ಇವೇ ಮೊದಲಾದ ಅಂಗಭಂಗಿಗಳಿಂದ ತನ್ನ ಕಾಮತೃಷ್ಣೆಯನ್ನು ವ್ಯಕ್ತಪಡಿಸುತ್ತದೆ.

ಮೆಕ್ಸಿಕೋ ದೇಶದಿಂದ ಅರ್ಜೆಂಟೈನಾ ದೇಶದ ವರೆಗೆ ಸಿಕ್ಕುವ ಒಂದು ಜಾತಿಯ ಬಾತುಗಳು ಬಗೆಬಗೆಯ ಪರಿಮಳವನ್ನು ಸೂಸುವುವು. ಇವುಗಳಲ್ಲಿ ವಾಸನೆಯೇ ಪ್ರಾಮುಖ್ಯ. ವಾಡಿಕೆಯಾಗಿ ಇವುಗಳನ್ನು 'ಮಸ್ಕಾವಿ ಡಕ್ಸ್' ಎಂದು ಕರೆಯುವರು.

ಹಕ್ಕಿಗಳಲ್ಲೆಲ್ಲಾ ಬೇಟದ ನಾಜೂಕು ಪಾರಿವಾಳಗಳಲ್ಲಿ ವಿಶೇಷ ಉಚಿತವಾಗಿದೆ. ಇವುಗಳಲ್ಲಿ ಪ್ರಣಯ ಚರಿತ್ರೆಯು ಅತಿ ವಿಳಂಬವಾಗಿ ನಡೆಯುತ್ತದೆ. ಮೊದಲು ತಮ್ಮ ರೆಕ್ಕೆ ಪುಕ್ಕಗಳನ್ನು ತಾವೇ ಕುಕ್ಕಿಕೊಳ್ಳುವುದು, ಗರಿಗಳನ್ನು ನಡುಗಿಸುವುದು, ವಿಪರೀತವಾಗಿ ತಲೆಬಾಗುವುದು, ವಿಜಾತೀಯವಾಗಿ ಕೂಗುವುದು, ಪ್ರಣಯ ನೋಟ ವನ್ನು ಬೀರುವುದು, ಇವೇ ಮೊದಲಾದ ಚಿಹ್ನೆಗಳು ಕಾಣಬರುವುವು. ಗಂಡು, ಬೇಟದ ಕಾಲದಲ್ಲಿ ಹೆಣ್ಣಿನ ಬಳಿಗೆ ಬಂದು ಕತ್ತನ್ನು ಎತ್ತರವಾಗಿ ಎತ್ತಿ, ರೆಕ್ಕೆ ಪುಕ್ಕಗಳನ್ನು ತಗ್ಗಿಸಿ 'ಕೂ, ಊ,' ಎಂದು ಕೂಗಿ ತನ್ನ ಅಪೇಕ್ಷೆಯನ್ನು ಅರಿಕೆಮಾಡಿಕೊಳ್ಳುತ್ತದೆ. ಕಾಮದ ಪ್ರೇರಣೆಯು ಹೆಚ್ಚಾದಂತೆಲ್ಲಾ ವಿಜಾತೀಯ ನಡೆವಳಿಕೆಗಳು ಕಂಡು ಬರುವುವು. ತಲೆಬಾಗುವುದರ ಜೊತೆಗೆ ಕೊಕ್ಕಿನಿಂದ ಕುಕ್ಕುವುದು, ಬೇಡಿಕೊಳ್ಳುವುದರ ಜೊತೆಗೆ ಚಿಮ್ಮುವುದು, ಹೆಣ್ಣಿನ ಕತ್ತನ್ನು ಕುಟುಕುವುದು, ಗಂಡಿನ ಬಾಯಿಯೊಳಕ್ಕೆ ಹೆಣ್ಣು ತನ್ನ ಕೊಕ್ಕನ್ನು ದೂಡುವುದು ಇವೇ ಮೊದಲಾದ ಕುರುಹುಗಳು ಕಾಣ ಬರುವುವು. ಈ ಚಿಹ್ನೆಗಳು ಒಂದು ವಾರವಿರುತ್ತವೆ. ಆದರೆ ಮೂರನೆಯ ದಿನವೇ ಗೂಡು ಕಟ್ಟುವ ಕೆಲಸವು ಆರಂಭವಾಗಿರುವುದು. ಕೆಲವು ವೇಳೆ ಗಂಡೂ ಇನ್ನು ಕೆಲವು ವೇಳೆ ಹೆಣ್ಣೂ ಗೂಡು ಕಟ್ಟುವುದರಲ್ಲಿ ಭಾಗವಹಿಸುತ್ತದೆ. ಮೊಟ್ಟೆಗಳಿಗೆ ಶಾಖಕೊಟ್ಟು ಮರಿಮಾಡುವ ಕಾಲದಲ್ಲಿ ತಾಯಿತಂದೆಗಳು ತಮ್ಮ ಕಾಮದ ವೇಗವನ್ನು ತಡೆಗಟ್ಟುತ್ತವೆ. ಇದರಿಂದ ಎರಡು ಹಕ್ಕಿಗಳೂ ಆ ಕಾಲ ಕಳೆಯುವ ವರೆಗೆ ಒಂದನ್ನೊಂದು ಎಡೆಬಿಡದೆ ಅನ್ಯೋನ್ಯ ಸುಖದಿಂದ ಇರಲು ಸಹಾಯ ವಾಗಿರುವುದು.

ಹಕ್ಕಿಗಳಲ್ಲಿ ಗಂಡು ಹೆಚ್ಚು ಅಲಂಕಾರಭೂಷಿತವಾಗಿದ್ದರೆ ಸ್ವಲ್ಪವೂ ಹಿಂಜರಿ ಯದೆ ಅವು ತಮ್ಮ ಬಾಹ್ಯಾಡಂಬರವನ್ನು ಪುಷ್ಟೀಕರಿಸಿಕೊಳ್ಳುತ್ತವೆ. ನವಿಲು ಇದಕ್ಕೆ ಒಳ್ಳೆಯ ಉದಾಹರಣೆ. ಅದು ಜಾಗರವಾಡುವುದು ಹೆಣ್ಣಿಗೆ ಕಾಮೋದ್ರೇಕವನ್ನುಂಟು ಮಾಡುವುದಕ್ಕೋಸ್ಕರ. ಈ ರೀತಿಯಾಗಿ ಗಂಡು ಎಷ್ಟು ಹೆಚ್ಚು ಹೆಚ್ಚು ತನ್ನ

ಬಾಹ್ಯಾಡಂಬರವನ್ನು ವ್ಯಕ್ತಪಡಿಸುವುದೋ ಅಷ್ಟೂ ಅಷ್ಟು ಹೆಣ್ಣನ್ನು ಅದು ಉದ್ರೇಕಗೊಳಿಸಿದಂತಾಗುತ್ತದೆ.

ಸಸ್ತನಿಗಳಲ್ಲಿ ಈ ಬೇಟದ ರೀತಿನೀತಿಗಳು ಅತ್ಯಂತ ಒರಟಾಗಿ ಕಾಣುತ್ತವೆ. ಏಕೆಂದರೆ ಇವುಗಳಲ್ಲಿ ಹೆಂಡತಿಯನ್ನು ಸಂಪಾದಿಸಲು ಹೊಡೆದಾಟವೇ ಹೆಚ್ಚು. ಸೌಂದರ್ಯವನ್ನು ಪರಿಗಣಿಸುವುದು ಎರಡನೆಯ ಪ್ರಶ್ನೆ. ಕಲೆಗಿಂತಲೂ ಬಲಕ್ಕೇ ಹೆಚ್ಚು ಪ್ರಾಶಸ್ತ್ಯ. ಬೆಕ್ಕುಗಳು ಮಾಳಿಗೆಯ ಮೇಲೆ ಕೂಗಿಕೊಳ್ಳುವಂತೆ ಕೆಲವು ಸಸ್ತನಿಗಳಲ್ಲಿ ಪ್ರಣಯದ ಕೂಗುಗಳಿರುವುದೇನೋ ನಿಜ. ಆದರೆ ಹಕ್ಕಿಗಳ ಇಂಪಾದ ಗಾನವನ್ನು ಕೇಳಿದ ಮೇಲೆ ಸಸ್ತನಿಗಳ ಕೂಗು ಗಾರ್ದಭ ಸ್ವರವಾಗುವುದು.

ತರುಣ ಗಂಡು ಸಸ್ತನಿಗಳು, ಸಿಂಹ ಆಡು ಇವುಗಳಿಗಿರುವಂತೆ ಕೇಸರ, ಗಡ್ಡ, ಇವೇ ಮೊದಲಾದ ಅಲಂಕಾರಗಳನ್ನು ಪಡೆದಿರುವುವು. ಪಶ್ಚಿಮ ಆಫ್ರಿಕಾದಲ್ಲಿ ಸಿಕ್ಕುವ 'ಮ್ಯಾಂಡ್ರಿಲ್' ಎಂಬ ಜಾತಿಯ ಮಂಗಗಳಲ್ಲಿ ಮುಖದ ಎರಡು ಕಡೆಯಲ್ಲಿಯೂ ನೀಲಿಬಣ್ಣದ ಉಬ್ಬು ಇರುವುದು. ಎರಡು ಉಬ್ಬುಗಳ ನಡುವೆ ಒಂದು ಧೂಮ್ರಬಣ್ಣದ ಗೆರೆಯಿರುತ್ತದೆ. ಈ ಅಲಂಕಾರಗಳ ಮಧ್ಯೆ ಮೂಗಿನ ತುದಿಯ ವರೆಗೂ ಎಳೆಯಲ್ಪಟ್ಟ ತೇಜಃಪುಂಜವಾದ ಕೆಂಪು ಪಟ್ಟೆಯೊಂದಿರುವುದು. ಕೆಂಪು ಕಿತ್ತಲೆ ಬಣ್ಣದ ಗಡ್ಡವು ಅದರ ಸೌಂದರ್ಯವನ್ನು ಪೂರ್ತಿಮಾಡುತ್ತದೆ. ಹೆಣ್ಣು ಮ್ಯಾಂಡ್ರಿಲ್ ಕಪಿಯನ್ನು ಗಂಡಿನೊಡನೆ ಹೋಲಿಸಿ ನೋಡಿದಲ್ಲಿ ಅದರ ಬಣ್ಣವೂ ಅಲಂಕಾರವೂ ಅತ್ಯಂತ ಶೋಚನೀಯವಾಗಿರುವುದು.

ಬೇಟದ ಕಾಲದಲ್ಲಿ ಧ್ವನಿಯೂ ಒಂದು ಆಕರ್ಷಿಸುವ ಸಾಧನ. ಕೆಂಪು ಹುಲ್ಲೆಗಳು ಆ ಕಾಲ ಬಂದಾಗ ವಿಜಾತೀಯವಾಗಿ ಗುಟುರು ಹಾಕುತ್ತವೆ. ಕೋತಿಗಳು ಗರ್ಜಿಸುತ್ತವೆ. ಆದರೆ ಅದೇನು ಕೇಳುವುದಕ್ಕೆ ಅಷ್ಟು ಇಂಪಾಗಿರುವುದಿಲ್ಲ. (ಚಿತ್ರ ೧೩.) ಆನೆಯೇ ಮೊದಲಾದ ಬುದ್ಧಿ ತಿಳಿದ ಪ್ರಾಣಿಗಳಲ್ಲಿ ಮುದ್ದಾಡುವುದೂ ಚುಂಬಿಸುವುದೂ ವಾಡಿಕೆಯಲ್ಲಿದೆ. ಸ್ಪರ್ಧೆಗಾರರಿಗೆ ಆಗುತ್ತಿರುವ ಭಯಂಕರ ಕದನವೂ ಕೂಡ ಒಂದೊಂದು ಸಾರಿ ನೋಡುವುದಕ್ಕೆಂದು ಬಂದು ನಿಂತಿರುವ ಹೆಣ್ಣನ್ನು ಉದ್ರೇಕಗೊಳಿಸಬಹುದು. ಹೀಗೆಯೇ ಕಾಮವಿಕಾರವು ಸಸ್ತನಿಗಳಲ್ಲಿ ವಿಧವಿಧವಾಗಿ ಕಂಡು ಬರುತ್ತದೆ.

ಬುದ್ಧಿಶಕ್ತಿಯು ವಿಶೇಷ ಬೆಳೆವಣಿಗೆಯನ್ನು ಹೊಂದಿರತಕ್ಕ ಪ್ರಾಣಿಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು: ಏಕಪತ್ನೀವ್ರತವನ್ನು ಆಚರಿಸುವವು, ಬಹು ಪತ್ನೀತ್ವವನ್ನು ಆಚರಿಸುವವು ಎಂದು. ಈ ಬುದ್ಧಿ ಶಕ್ತಿಗೆ ಸಂಬಂಧಪಟ್ಟ ಅವಯವಗಳ ಪೂರ್ಣ ಬೆಳೆವಣಿಗೆಯು ಪ್ರಾಣಿವರ್ಗದಲ್ಲಿ ಹಕ್ಕಿಗಳಿಂದ ಈಚೆಗೆ ಕಂಡುಬರುವುದೇ ಹೊರತು ಅದಕ್ಕೆ ಹಿಂದಿನ ಪ್ರಾಣಿವರ್ಗಗಳಲ್ಲಿ ಅಷ್ಟೇನು ಕಂಡುಬರುವುದಿಲ್ಲ.



ಚಿತ್ರ ೧೩. ಬ್ರೆಜಿಲಿಯರ್ನ ಕೋತಿ

ಇದರ ಗಂಟಲು ಎಲ್ಲ ಪ್ರಾಣಿಗಳ ಗಂಟಲನ್ನೂ ಮೀರಿಸಿರುತ್ತದೆ.
ಸಸ್ತನಿಗಳ ಪ್ರಣಯಜೀವನದಲ್ಲಿ ಧ್ವನಿಯು ಅತಿ ಮುಖ್ಯ

ಸಾಮಾನ್ಯವಾಗಿ ಹಕ್ಕಿಗಳು ಏಕಪತ್ನೀವ್ರತವನ್ನೇ ಕೈಕೊಂಡಿರುತ್ತವೆ ಈ ಏಕಪತ್ನೀವ್ರತವು ಸದಾ ಗಂಡು ಹೆಣ್ಣುಗಳು ಒಂದನ್ನೊಂದು ಎಡೆಬಿಡದೆ ವಾಸಿಸುವ ಹಕ್ಕಿಗಳಲ್ಲೂ ಕೆಲವು ಅಪರೂಪ ಪ್ರಾಣಿಗಳಲ್ಲೂ ತುತ್ತತುದಿಯನ್ನು ಮುಟ್ಟಿರುತ್ತದೆ. ಹಾಗೆಯೇ ಕೊಕ್ಕರೆಗಳೂ ಹಂಸಗಳೂ ಕೆಲವು ಬಾತುಗಳೂ ಗಂಡು ಹೆಣ್ಣು ಎರಡರಲ್ಲಿ ಒಂದು ಸಾಯುವವರೆಗೂ ಏಕಪತ್ನೀವ್ರತವನ್ನೇ ಸಾಧಿಸುವುವು. ಜೀವಮಾನವನ್ನೆಲ್ಲಾ ಕಡ್ಡಾಯವಾಗಿ ಏಕಪತ್ನೀವ್ರತದಲ್ಲೇ ಕಳೆಯುವುದು ಕೆಲವು ಸುಸಂಸ್ಕೃತಿಹೊಂದಿದ ಅಪರೂಪ ಪ್ರಾಣಿಗಳಲ್ಲಿ ಮಾತ್ರವೇ ಕಂಡುಬರುತ್ತದೆ.

ಖಡ್ಗಮೃಗ ಅಥವಾ ಗೇಂಡಾಮೃಗಗಳಲ್ಲಿಯೂ ಕಾಡುಪಾಪಸಂತಿರುವ ಬಾಲವಿಲ್ಲದ ಕೆಲವು ಮಂಗಗಳಲ್ಲಿಯೂ ಆಜೀವ ಏಕಪತ್ನೀವ್ರತವು ಸ್ಥಾಪಿಸಲ್ಪಟ್ಟಿದೆ ಎಂಬ ಊಹೆಯುಂಟು. ಕೆಲವು ಕಪಿಗಳೂ ಕೂಡ ಏಕಪತ್ನೀವ್ರತವನ್ನೇ ಸಾಧಿಸುವುವು. ಮೊಟ್ಟೆ ಇಡುವ ಅಥವಾ ಮರಿಗಳನ್ನು ಸಲಹುವ ಕಾಲವು ಕಳೆದ ಮೇಲೆ ಗಂಡು ಹೆಣ್ಣುಗಳಲ್ಲಿ ಆಹಾರಾನ್ವೇಷಣೆಗೇ ಆಗಲಿ, ಇನ್ನು ಯಾವ ಕೆಲಸಕ್ಕೇ ಆಗಲಿ, ಒಂದನ್ನೊಂದು ಬಿಟ್ಟು ಹೋಗದೆ ಸರ್ವದಾ ಒಟ್ಟಿಗೆ ಇರುವ ಸಂದರ್ಭಗಳಲ್ಲಿ ಮಾತ್ರವೇ ಈ ದಿವ್ಯ ಏಕಪತ್ನೀವ್ರತವು ಸಾಧ್ಯವೆನಿಸುವುದು. ಆದರೆ ಕೆಲವು ಪ್ರಾಣಿಗಳಲ್ಲಿ ಈ ಮೊಟ್ಟೆ ಇಡುವ ಅಥವಾ ಮರಿಗಳನ್ನು ಸಲಹುವ ಕಾಲವು ಎಂದೆಂದಿಗೂ ಮುಗಿಯುವುದಿಲ್ಲ. ಹೀಗಿದ್ದ ಮಾತ್ರಕ್ಕೇ ಅವುಗಳಲ್ಲಿ ಏಕಪತ್ನೀವ್ರತವು ಸ್ಥಾಪಿಸಲ್ಪಟ್ಟಿರುವುದೆಂದು ಹೇಳಲಾಗುವುದಿಲ್ಲ. ಏಕೆಂದರೆ ಮೊಟ್ಟೆ ಇಡುವ ಅಥವಾ ಮರಿಗಳನ್ನು ಪಾಲಿಸುವ ಕಾಲವು ಇಲ್ಲಿಂದ ಇಲ್ಲಿಯವರೆಗೇ ಎಂಬ ನಿಬಂಧನೆ ಗೊತ್ತುಗುರಿ ಇವುಗಳನ್ನು ಆಚರಣೆಗೆ ತಂದಿರುವ ಹಕ್ಕಿಗಳಲ್ಲಿ ಮಾತ್ರವೇ ಈ 'ಏಕಪತ್ನೀವ್ರತ'ವೆಂಬುದು ಸುವರ್ಣಾಕ್ಷರಗಳಿಂದ ಕೆತ್ತಿಸಿಕೊಳ್ಳುವ ಯೋಗ್ಯತೆಯನ್ನು ಪಡೆದಿರುವುದು. ಅಂಥ ಜಾತಿಗಳಲ್ಲಿ ಗಂಡ ಅಥವಾ ಹೆಂಡತಿ ಯಾವುದಾದರೊಂದು ಸತ್ತರೂ ಕೂಡ ಅದರ ಜೊತೆಗೆ ಇನ್ನೊಂದೂ ಪ್ರಾಣಬಿಡುವುದು. ಹಾಗೆ ಪ್ರಾಣಬಿಡುವುದು ಬರಿಯ ಚಿಂತೆಯಿಂದಲೇ ಎಂದು ನಾವು ಹೇಳಲಾರೆವು. ಏನೇ ಆಗಲಿ, ಗಂಡ ಸತ್ತ ಅಥವಾ ಹೆಂಡತಿ ಸತ್ತ ಹಕ್ಕಿಯು ತನ್ನ ಜೊತೆಯು ಸತ್ತದ್ದಕ್ಕೆ ತನ್ನೊಳಗೆ ತಾನೇ ಚಿಂತೆಯನ್ನು ನುಂಗಿಕೊಂಡು ಎಂದಿಗೂ ಸುಮ್ಮನಿರುವುದಿಲ್ಲ.

ಮನುಷ್ಯನ ದಾಯಾದಿಯಾದ 'ಗೋರಿಲ್ಲಾ'ದಲ್ಲಿ ಬಹಳ ವಿಚಿತ್ರ ವರ್ತನೆಯು ಕಾಣಬರುತ್ತದೆ. ಏಕೆಂದರೆ ಈ ಕಪಿಗಳು ಹತ್ತು ಇಪ್ಪತ್ತು ಗುಂಪುಗಳನ್ನು ನಿರ್ಮಿಸಿಕೊಂಡಿರುವುವು. ಒಂದೊಂದು ಗುಂಪಿನಲ್ಲೂ ಒಬ್ಬ ತಂದೆ ತಾಯಿ ಹಲವು ಮಕ್ಕಳು ಇವುಗಳನ್ನೊಳಗೊಂಡ ಅನೇಕ ಸಂಸಾರಗಳಿರುವುವು. 'ರಿಪಿನೋ' ಎಂಬ ವಿಜ್ಞಾನಶಾಸ್ತ್ರಜ್ಞನ ಮತಕ್ಕೆ ಸೇರಿದ ಅನೇಕರು ಇವುಗಳಲ್ಲಿ ಕಡ್ಡಾಯವಾಗಿ ಏಕಪತ್ನೀವ್ರತವು ಸ್ಥಾಪಿಸಲ್ಪಟ್ಟಿದೆ ಎಂದು ಹೇಳುವರು. ಆದರೆ ಅತಿಮುಪ್ಪಾಗಿ ಜೀವಮಾನದಿಂದ ನಿವೃತ್ತಿಹೊಂದಿದ ಗಂಡುಗಳು ತಮ್ಮ ದಾರಿಯನ್ನು ತಾವು ಹಿಡಿದು ಹೊರಟು ಹೋಗಿ ಒಂಟಿಯಾಗಿಯೇ ಜೀವಿಸುವುವು.

ಅನೇಕ ಪ್ರಾಣಿಗಳು ತಮಗೆ ಕಾಮದ ಪ್ರೇರಣೆಯು ಬಂದಾಗ ಮಾತ್ರ ಏಕಪತ್ನೀವ್ರತವನ್ನು ಸಾಧಿಸುತ್ತವೆ. ಆವೇಶವು ಇಳಿದುಹೋದ ಮೇಲೆ ಯಥಾಪ್ರಕಾರ ತಮ್ಮ ದಾರಿಯನ್ನು ಹಿಡಿಯುತ್ತವೆ. ಮುಂದಿನ ವರ್ಷ ಇನ್ನೊಂದರ

ಜೊತೆ ಕೂಡಬಹುದು. ಈ ಪದ್ಧತಿಯು ಅನೇಕ ಬೆಕ್ಕುಗಳಲ್ಲೂ ಸಿಂಹಗಳಲ್ಲೂ ಕಾಣಬರುತ್ತದೆ. ಹೀಗೆ ಮಾಡುವುದು ಬೇಟೆಯಾಡುವ ಪ್ರಾಣಿಗಳಿಗೆ ಸ್ವಭಾವತಃ ಅನುಕೂಲ. ಏಕೆಂದರೆ ಒಂಟಿಯಾಗಿ ಬೇಟೆಗೆ ಹೋದರೆ, ಹೆಂಡತಿ ಮಕ್ಕಳಿಗೆ ಒಂದಕ್ಕೂ ಕೊಡದೆ, ಹೊಟ್ಟೆತುಂಬ ತಾನೇ ಆಹಾರ ಸಂಪಾದಿಸಿಕೊಳ್ಳಬಹುದು. ಆದರೆ ಗುಂಪನ್ನು ಕಟ್ಟಿಕೊಂಡು ಚಳಿಗಾಲದಲ್ಲಿ ಬೇಟೆಯಾಡುವ ತೋಳಗಳಲ್ಲಿ ಮಾತ್ರ ವಸಂತ ಮತ್ತು ಬೇಸಗೆಯ ಕಾಲಗಳಲ್ಲಿ ಏಕಪತ್ನೀವ್ರತವೇ ಕಂಡುಬರುವುದು ಅತ್ಯಾಶ್ಚರ್ಯಕರವಾದ ಸಂಗತಿ.

ಎಲ್ಲಿ ಹೆಣ್ಣುಗಳ ಸಂಖ್ಯೆಯು ಹೆಚ್ಚಾಗಿ ಗಂಡುಗಳ ಸಂಖ್ಯೆಯು ಕಡಮೆಯಾಗಿರುತ್ತದೋ ಅಲ್ಲಿ ಬಹುಪತ್ನೀತ್ವವು ವಾಡಿಕೆ. ಆದರೆ ಈ ನಿಬಂಧನೆಯಿಲ್ಲದೆ ಶೇಕಡ ತೊಂಬತ್ತು ಬಹುಪತ್ನೀತ್ವವನ್ನೇ ಆಚರಿಸುತ್ತವೆ. ಎಲ್ಲಿ ಹೆಣ್ಣು ಜಾತಿಯು ಸಂಖ್ಯೆಯಲ್ಲಿ ಕಡಮೆಯಾಗಿರುತ್ತದೆಯೋ ಅಲ್ಲಿ ಗಂಡು ಜಾತಿಯು ಒಂದಕ್ಕೊಂದು ಹೊಡೆದಾಡುವುದು ಸಾಧಾರಣ. ಅದರಲ್ಲೂ ಗಂಡು ಬಹುಪತ್ನೀವ್ರತವನ್ನು ಆಚರಿಸುವ ಅಭ್ಯಾಸವುಳ್ಳದ್ದಾದರೆ ದಾಂಧಲೆಯು ಇನ್ನೂ ಹೆಚ್ಚು. ಜಿಂಕೆ ಮೊದಲಾದ ಗೊರಸುಳ್ಳ ಪ್ರಾಣಿಗಳಲ್ಲಿ ಇದು ವಾಡಿಕೆ. ಆದರೆ ಸಿಕ್ಕಿದ ಕಡೆ ಇವು ಯಾವಾಗಲೂ ಅಲೆಯುತ್ತಿರುವುದರಿಂದ ಅವುಗಳು ಗುಂಪಿನಿಂದಲೇ ಸಂಚರಿಸುವುವು. ಇಂಥ ಸಂದರ್ಭಗಳಲ್ಲಿ ಬಹುಪತ್ನೀತ್ವವು ಗುಂಪನ್ನು ಕಟ್ಟಿಕೊಳ್ಳಲು ಹೆಚ್ಚು ಸಹಾಯಕವಾಗಿರುತ್ತದೆ. ಈ ಗುಂಪಿದ್ದರೆ ಶತ್ರುಗಳ ಪೀಡೆಯು ಸ್ವಲ್ಪ ಕಡಮೆ. ಈ ವಿಚಾರದಲ್ಲಿ ಬಹುಪತ್ನೀತ್ವವು ಏಕಪತ್ನೀವ್ರತಕ್ಕಿಂತಲೂ ಹೆಚ್ಚು ಸಹಾಯಕವಾಗಿರುವುದು.

ಹೀಗೆ, ಪ್ರಾಣಿವರ್ಗದಲ್ಲಿ ಕೀಟಗಳು ಮೀನುಗಳು ದ್ವಿಚರಪ್ರಾಣಿಗಳು ಸರೀಸೃಪಗಳು ಸಸ್ತನಿಗಳು ಇವೇ ಮೊದಲಾದ ಬೇರೆ ಬೇರೆ ಮಟ್ಟದ ಪಂಗಡಗಳಲ್ಲಿ ಗಂಡಿಗೂ ಹೆಣ್ಣಿಗೂ ಸ್ವಲ್ಪ ಗುರುತು ಪರಿಚಯವಿದ್ದರೇ ಸಾಕು, ಆಗಲೇ ಎರಡರಲ್ಲೂ ಪ್ರೀತಿಯು ಅಂಕುರಿಸಿ, ಒಂದನ್ನೊಂದು ಸೇರಲು ಅಪೇಕ್ಷಿಸುವುದನ್ನು ನಾವು ಕಾಣುತ್ತೇವೆ. ಇನ್ನು ಕೆಲವು ಪ್ರಾಣಿಗಳಲ್ಲಿ ಪರಿಚಯವಿಲ್ಲದೆಯೇ ಎರಡಕ್ಕೂ ಸಂಬಂಧವುಂಟಾಗುವುದನ್ನೂ ನೋಡುತ್ತೇವೆ. ಕಾಮತೃಷ್ಣೆಯುಳ್ಳ ಎರಡು ಜಾತಿಯೂ ಒಂದನ್ನೊಂದು ಬಯಸಿ ಕೂಡುವುವು. ಅನಂತರ ಅದೊಂದು ದಾರಿ ಇದೊಂದು ದಾರಿ ಹಿಡಿಯಬಹುದು. ಮೊಲದಂಥ ದೊಡ್ಡ ಪ್ರಾಣಿಯೂ ಕೂಡ ಮನಸ್ಸಿಗೆ ಬಂದಂತೆ ವಿಹರಿಸುತ್ತದೆ. ಆದರೆ ಅದರ ಶತ್ರುವಾದ ನರಿಯು ಕಡ್ಡಾಯವಾಗಿ ಏಕಪತ್ನೀವ್ರತವನ್ನೇ ಕೈಕೊಂಡಿರುತ್ತದೆ.

ಎಲ್ಲರಿಗೂ ತಿಳಿದಂತೆ, ಪ್ರಾಣಿವರ್ಗದಲ್ಲಿ ಬಹುಪತ್ನೀತ್ವವು ಹೆಚ್ಚು ರೂಢಿಯಲ್ಲಿದೆ

ಏಕಪತ್ನೀವ್ರತವು ಎಲ್ಲೋ ಕೆಲವು ಹಕ್ಕಿಗಳಲ್ಲೂ ಅಪರೂಪ ಪ್ರಾಣಿಗಳಲ್ಲೂ ಕಂಡುಬರುವುದರಿಂದ ಅತಿ ವಿರಳ. ಇದು ಆಯಾ ಪ್ರಾಣಿಯ ಗಂಡು ಮತ್ತು ಹೆಣ್ಣುಗಳ ಸಂಖ್ಯೆಯನ್ನು ಅನುಸರಿಸಿ ಹೋಗಬಹುದು, ಅಥವಾ ಪ್ರಾಣಿಯ ಇಚ್ಛಾನುಸಾರ ನಡೆಯಬಹುದು. ಅದು ಏನೇ ಇರಲಿ, ನಾವು ಸದ್ಯಕ್ಕೆ ಗಣನೆಗೆ ತೆಗೆದುಕೊಳ್ಳಬೇಕಾದ ಅಂಶ ಯಾವುದೆಂದರೆ, 'ಪಶುಪ್ರಾಣಿಗಳಲ್ಲೂ ಕೂಡ ಅಚಂಚಲ ವಾದ ಏಕಪತ್ನೀವ್ರತಕ್ಕೆ ಅಭಾವವಿಲ್ಲ'ವೆಂಬುದನ್ನು ಮಾತ್ರ.*

ಕೆ. ಶ್ರೀಕಂಠಯ್ಯ.

---

* ಈ ಲೇಖನಕ್ಕೆ ಬೇಕಾದ ಚಿತ್ರಗಳನ್ನು ಇಷ್ಟು ಚೆನ್ನಾಗಿ ಬರೆದುಕೊಟ್ಟದ್ದಕ್ಕಾಗಿ ನನ್ನ ಸ್ನೇಹಿತರಾದ ಶ್ರೀಮಾನ್ ಎಚ್. ಡಿ. ಪುಟ್ಟನಂಜರಾಜ ಅರಸರವರಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ.

ಪ್ರಮಾಣಲೇಖನಗಳು

1. *How Birds Live.*—By E. M. Nicholson.
2. *The Natural History of Animals*, Vol. VII.—By J. R. Ainsworth Davis.
3. *The Minds of Animals.*—By J. Arthur Thomson.
4. *Science, Old and New.*

ಪ್ರಾಚೀನ ಚಿತ್ರಕಲೆ

ಕಲಾಸ್ವರೂಪ


ಮಾನವನು ಆದಿಯಿಂದಲೂ ತನ್ನ ಸುತ್ತಲಿನ ಪ್ರಕೃತಿಯನ್ನು ನೋಡಿ ಉಂಟಾದ ಆನಂದವನ್ನು ವಿವಿಧ ಕಲೆಗಳಲ್ಲಿ ವ್ಯಕ್ತಪಡಿಸುತ್ತಿರುವನು. ನಾಟ್ಯ, ಸಂಗೀತ, ಚಿತ್ರ, ಶಿಲ್ಪ, ಮುಂತಾದ ಕಲೆಗಳೆಲ್ಲವೂ ಈ ಆನಂದದ ಪ್ರತಿಬಿಂಬಗಳು. ಭೂಮಿಯ ಮೇಲೆ ಮನುಷ್ಯನ ಜನನವಾಗಿ ಸುಮಾರು ಹತ್ತು ಇಪ್ಪತ್ತು ಲಕ್ಷ ವರ್ಷಗಳಾಗಿವೆಯೆಂಬುದು ಮಾನವ ಶಾಸ್ತ್ರಜ್ಞರ ಮತ. ಇದರಲ್ಲಿ ಮನುಷ್ಯನು ನಾಗರಿಕತೆಯ ಹಂತವನ್ನು ಏರಿದುದು ಇಂದಿಗೆ ಸುಮಾರು ಐದಾರುಸಾವಿರ ವರ್ಷಗಳಿಂದೀಚೆಗೆ. ಈ ಐದಾರು ಸಾವಿರ ವರ್ಷಗಳ ನಾಗರಿಕ ಇತಿಹಾಸಾನಂತರದಲ್ಲಿಯೂ ಇನ್ನೂ "ಕಲೆ" ಎಂದರೇನೆಂಬುದು ಚರ್ಚಾಸ್ಪದವಾಗಿಯೇ ಉಳಿದಿದೆ. ಸ್ಥೂಲವಾಗಿ ನೋಡಿದಲ್ಲಿ ಕಲೆಯು ಮನುಷ್ಯನ ಸೌಂದರ್ಯಾನುಭವದ ಪ್ರತಿಬಿಂಬ. ಈ ಆನಂದವನ್ನು ಕವಿಯು ಅಕ್ಷರಗಳಲ್ಲಿ, ಸಂಗೀತಗಾರನು ಇಂಪಾದ ಗೀತದಲ್ಲಿ, ಶಿಲ್ಪಿಯು ಉತ್ತಮವಾದ ಶಿಲ್ಪದಲ್ಲಿ, ಚಿತ್ರಗಾರನು ರಮ್ಯವಾದ ಚಿತ್ರದಲ್ಲಿ, ಪ್ರತಿಬಿಂಬಿಸುವರು. ಸೌಂದರ್ಯವು ಅವರವರ ಅಭಿರುಚಿಗನುಸಾರವಾಗಿ ಕಾಣುವುದು. "ಒಬ್ಬನ ಅನ್ನ ಇನ್ನೊಬ್ಬನ ವಿಷ!" ನವೀನ ಪಾಶ್ಚಿಮಾತ್ಯ ಯುವತಿಯು ತೆಳ್ಳನೆಯ ಶರೀರವು ಸುಂದರವೆಂದು ಭಾವಿಸಿದಲ್ಲಿ ಆಫ್ರಿಕದ ಹಾಟೆಂಟಾಟ್ ಮುಂತಾದ ಜನಾಂಗಗಳವರು ಶರೀರವು ಸ್ಥೂಲವಾದಷ್ಟೂ ಸುಂದರವೆಂದು ಭಾವಿಸುವರು. ಅವರಲ್ಲೊಬ್ಬ ಅಭಿನವರಂಭೆಯಂತೂ ಮಲಗಿದವಳೇಳಲಾರದೆ ತೆವಳಿಕೊಂಡು ಒಂದು ತಿಟ್ಟಿನ ಪ್ರದೇಶಕ್ಕೆ ಬಂದನಂತರ ಒರಗಿಕೊಂಡು ಎದ್ದು ನಿಲ್ಲಬೇಕಾಯಿತಂತೆ! ಸಾಲಾಗಿ ಬೆಳ್ಳಗಿರುವ ಹಲ್ಲುಗಳು ಸೌಂದರ್ಯಸೂಚಕವೆಂದು ಸಾಮಾನ್ಯವಾಗಿ ಭಾವಿಸಲ್ಪಟ್ಟಿರುವಾಗ ಕೆಲವರು ಕಾಚಿನ ಪುಡಿ ತಿಕ್ಕಿದ ಕಪ್ಪು ಹಲ್ಲುಗಳು ಸುಂದರವೆಂದು ಭಾವಿಸಿರುವರು. ಹಚ್ಚೆ ಹುಯಿಸಿಕೊಳ್ಳುವುದೂ ಒಂದು ಸೌಂದರ್ಯವರ್ಧಕ ಪದ್ಧತಿಯೆಂದು ಭಾವಿಸಲ್ಪಟ್ಟಿದೆ. ಕಳೆದ ಶತಮಾನದ ಅಂತ್ಯದವರೆಗೂ ಕಾಲುಗಳು ಚಿಕ್ಕದಾದಷ್ಟೂ ಸೌಂದರ್ಯವರ್ಧಕವೆಂದು ಚೀಣೀ ಹೆಂಗಸರು ಭಾವಿಸುತ್ತಿದ್ದರು. ಅವರಲ್ಲೊಬ್ಬ ಸುರಸುಂದರಿಯ ಕಾಲುಗಳು ಮೇಕೆಯ ಕಾಲುಗಳಷ್ಟು ಚಿಕ್ಕವಾಗಿದ್ದುವಂತೆ! ಹೀಗೆಯೇ ಆಯಾ ದೇಶದ ಸೌಂದರ್ಯಾಭಿರುಚಿಗನುಸಾರವಾಗಿ ಅಲ್ಲಲ್ಲಿಯ ಕಲಾವಿದರೂ ತಮ್ಮ ತಮ್ಮ ಕೃತಿಗಳನ್ನು ರಚಿಸಿರುತ್ತಾರೆ.


ಕಲೆಯ ಪ್ರಾರಂಭದೆಸೆ


ಮನುಷ್ಯನು ತೃತೀಯ ಜೀವಯುಗದ ಅಂತ್ಯದಲ್ಲಿ ಜನಿಸಿದನೆಂಬುದು ಶಾಸ್ತ್ರಜ್ಞರ ಮತ. ಆದರೆ ಅವನ ಪಾಶವ ಅವಸ್ಥೆಯು ಕಳೆದು, ಅವನು ಕಲಾವಿದನಾಗ ಬೇಕಾದಷ್ಟು ನಾಗರಿಕನಾಗಬೇಕಾದರೆ ಚತುರ್ಥಜೀವಯುಗದ ಮಧ್ಯಭಾಗದ ವರೆಗೂ ಸಾಧ್ಯವಾಗಲಿಲ್ಲ. ಮನುಷ್ಯನ ಅತಿಪ್ರಾಚೀನ ಕಲಾಕೃತಿಗಳು ದೊರೆಯ ಬೇಕಾದರೆ ಚತುರ್ಥಜೀವಯುಗದ "ಆರಿನೇಷಿಯರ್ಕ್" ನಾಗರಿಕತೆಯ ಕಾಲದಲ್ಲಿ; ಅಂದರೆ ಈಗ್ಗೆ ಸುಮಾರು ೨೭,೦೦೦ ವರ್ಷಗಳ ಹಿಂದೆ. ಇವನ ಕಲಾಜೀವನವು ಈ "ಆರಿನೇಷಿಯರ್ಕ್" ನಾಗರಿಕತೆಯ ಕಾಲದಿಂದ ಮುಂದಿನ "ಮೇಡಲೀನಿಯರ್ಕ್" ನಾಗರಿಕತೆಯ ಅಂತ್ಯಭಾಗದಲ್ಲಿ ಅತ್ಯುನ್ನತಸ್ಥಿತಿಯನ್ನು ಮುಟ್ಟಿ ಮುಂದಿನ "ಅಜಿ ಯರ್ಕ್" ನಾಗರಕತೆಯ ಕಾಲದವೇಳೆಗೆ ಬಹಳ ಕಡಮೆಯ ದರ್ಜೆಗೆ ಇಳಿದು ಹೋಯಿತು. ಇದರ ಮುಂದಿನ ಹಂತವಾದ ನವೀನಶಿಲಾಯುಗದಲ್ಲಿ ಈ ದರ್ಜೆಗೆ ಸೇರಿದ ಉತ್ತಮ ಕಲಾಕೃತಿಗಳಾವುವೂ ದೊರೆಯುವುದಿಲ್ಲ. ಕಾಡುಗಳಲ್ಲಿಯೂ ಗವಿಗಳಲ್ಲಿಯೂ ವಾಸಿಸುತ್ತಿದ್ದು ಕಲ್ಲಿನ ಆಯುಧಗಳಿಂದ ಬೇಟೆಯಾಡಿದ ಮೃಗಗಳ ಹಸಿಯ ಮಾಂಸವನ್ನು ಸೇವನೆಮಾಡುತ್ತಾ ಕೇವಲ ಪಶುಜೀವನದಂತಹ ಜೀವನ ವನ್ನು ನಡೆಸುತ್ತಿದ್ದ ಆದಿಮಾನವರಿಗೆ ಈ ಕಲಾಭಿರುಚಿಯು ಹೇಗುಂಟಾಯಿತೆಂದು ಊಹಿಸುವುದು ಕಷ್ಟ. ಮಾನವಶಾಸ್ತ್ರಜ್ಞರು ಒಬ್ಬೊಬ್ಬರೊಂದೊಂದು ವಿಧವಾಗಿ ಊಹಿಸುತ್ತಾರೆ. ಇದರ ವಿಮರ್ಶೆಯನ್ನು ಮುಂದೆ ಮಾಡಲಾಗುವುದು.

ಪ್ರಾಚೀನ ಶಿಲಾಯುಗದ ಚಿತ್ರಕಲೆ

ಮಾನವನ ಅತಿಪ್ರಾಚೀನ ಕಲಾಕೃತಿಗಳು ಸ್ಪೇನಿನ ಕೆಲವು ಗವಿಗಳಲ್ಲಿಯೂ ಫ್ರಾನ್ಸಿನ ಡೋರ್‌ಡೋರ್ಕ್ ಪ್ರಾಂತದ "ಲಾ ಗ್ರೇಜ್" ಗವಿಗಳಲ್ಲಿಯೂ ದೊರೆತಿವೆ. ಇವು ಬರಿಯ ಕಲ್ಲಿನ ಆಯುಧಗಳಿಂದ ಗಟ್ಟಿಯಾದ ಕಲ್ಲಿನ ಗೋಡೆಗಳ ಮೇಲೆ ಕೊರೆದಿರುವ ಆಕೃತಿಗಳು. ಆಧುನಿಕ ದೃಷ್ಟಿಯಿಂದ ನೋಡಿದಲ್ಲಿ ಇವು ಅತಿಕೀಳ್ತರ ಗತಿಯ ಚಿತ್ರಗಳೆನ್ನಬಹುದು. ಕಾಡುಕೋಣ, ಕುದುರೆ, ಕರಡಿ ಮುಂತಾದ ಪ್ರಾಣಿಗಳ ಆಕೃತಿಗಳು ಬಹುಶ್ರಮದಿಂದ ಕೊರೆಯಲ್ಪಟ್ಟಿವೆ. ಇದರಲ್ಲಿ ಪ್ರಾಣಿಗಳ ಮುಂಭಾಗದ ಎರಡು ಕಾಲುಗಳು ವಿನಾ ಹಿಂದಿನ ಎರಡು ಕಾಲುಗಳು ಸಾಮಾನ್ಯವಾಗಿ ಚಿತ್ರಿಸಲ್ಪಟ್ಟಿಲ್ಲ. ಬಹುಶಃ ಮುಂದಿನ ಕಾಲುಗಳಿಗೂ ಹಿಂದಿನ ಕಾಲುಗಳಿಗೂ ಉಂಟಾಗುವ ಪರಿಮಾಣ ವ್ಯತ್ಯಾಸಗಳನ್ನೂ ಚಿತ್ರಿಸಲು ತಿಳಿಯದೆ ಹೀಗೆ ಬಿಟ್ಟಿರ ಬಹುದೆಂದು ಹೇಳಲಾಗಿದೆ.








ಚಿತ್ರ ೧. ಅತಿಪ್ರಾಚೀನ ಚಿತ್ರಗಳು


೧. ಲಾ ಗ್ರೀಜ್ ಗವಿಯ ಒಂದು ಕಾಡುಕೋಣದ ಚಿತ್ರ.
೨. ಲಾ ಪಸೇಗಾ ಗವಿಯ ಒಂದು ಕಾಡುಹೋತನ ಚಿತ್ರ.
೩. ಅದೇ ಗವಿಯ ಒಂದು ಕುದುರೆಯ ಚಿತ್ರ.


ಈ ರೇಖಾಚಿತ್ರಗಳು ಚಿತ್ರಿತವಾದ ಕಾಲದಲ್ಲಿಯೇ, ವರ್ಣಚಿತ್ರಗಳನ್ನೂ ಚಿತ್ರಿಸಲು ಆದಿಮಾನವನು ಆರಂಭಮಾಡಿದ ಹಾಗೆ ಕಂಡುಬರುತ್ತದೆ. ಆದರೆ, ಈ ಪ್ರಾಚೀನ ರೇಖಾ ಮತ್ತು ವರ್ಣಚಿತ್ರಗಳನ್ನು ಒಂದಕ್ಕೊಂದು ಹೋಲಿಸಿ

ನೋಡಿದಲ್ಲಿ ಈ ವರ್ಣಚಿತ್ರಗಳ ರೂಪವು ರೇಖಾಚಿತ್ರಗಳ ರೂಪಕ್ಕಿಂತ ಸ್ಪಷ್ಟ ಪರಿಮಾಣಗಳಿಂದ ಕೂಡಿದೆ; ಮತ್ತು ರೇಖಾಚಿತ್ರಗಳ ಹಾಗೆ ಮೊದ್ದುಮೊದ್ದಾಗಿದ್ದು ಸ್ವಲ್ಪ ಜೀವಕಳೆಯಿಂದ ಕೂಡಿದೆ. ಅತಿ ಪ್ರಾಚೀನ ವರ್ಣಚಿತ್ರಗಳು ಫ್ರಾನ್ಸಿನ ಗಾರ್‌ಗಾಸ್ ಮತ್ತು ಸ್ಪೇನಿನ ಲಾ ಪಸೇಗ ಪ್ರದೇಶಗಳ ಗವಿಗಳಲ್ಲಿವೆ. ಇದರಲ್ಲಿ ಗಾರ್‌ಗಾಸ್ ಗವಿಗಳಲ್ಲಿನ ಗೋಡೆಯ ಮೇಲಿರುವ "ಕೈಯಚ್ಚುಗಳು" ಅತಿ ಪ್ರಾಚೀನವಾದವುಗಳೆಂದು ಭಾವಿಸಲ್ಪಟ್ಟಿವೆ. ಪಸೇಗಾ ಗವಿಯಲ್ಲಿ ಪ್ರಾಕ್ತನ ಮಾನವನು ಕುದುರೆ ಮತ್ತು ದನಗಳ ಚಿತ್ರಗಳನ್ನು ಒಂದೇ ಬಣ್ಣದ ಸಮವಾದ ಹಚ್ಚುವಿಕೆಯಿಂದ ಪೂರೈಸಿದ್ದಾನೆ. ಈ ಚಿತ್ರಗಳಲ್ಲಿ ಗಾರ್‌ಗಾಸ್ ಗವಿಗಳಲ್ಲಿನ ಹಸ್ತದ ಚಿತ್ರಗಳು ಬಹು ಸುಲಭವಾಗಿ ಪೂರೈಸಲ್ಪಟ್ಟಿರುವಂತಹವು. ಬರಿಯ ಕೈಗಳನ್ನು ಗೋಡೆಗಳ ಮೇಲಿರಿಸಿ ಸುತ್ತಲೂ ಬಣ್ಣಹಚ್ಚಿ ಅಚ್ಚುಗಳನ್ನು ಹಾಗೆಯೇ ಬಿಟ್ಟಿದ್ದಾರೆ. ಇನ್ನೂ ಕೆಲವು ಕೈಗಳು ಬಣ್ಣ ಹಚ್ಚಿಕೊಂಡು ಗೋಡೆಯ ಮೇಲೆ ತಟ್ಟಿರುವಂತಹ ಗುರುತುಗಳು.

ಆರಿನೇಷಿಯರ್ನ ನಾಗರಿಕತೆಯ ಕಾಲವು ಮುಗಿಯುತ್ತಾ ಮೇಡಲೀನಿಯನ್ ನಾಗರಿಕತೆಯ ಕಾಲವು ಬಂದಂತೆಲ್ಲಾ ಮಾನವನ ಕಲೆಯ ಅಭಿರುಚಿಯು ಉತ್ತಮಗೊಂಡು ಅವನ ಕಲಾಕೃತಿಗಳೂ ಉತ್ತಮವಾಗ ತೊಡಗಿದವು. ಬರಿಯ ವಕ್ರವಕ್ರವಾದ ರೇಖಾಚಿತ್ರಗಳನ್ನೂ ಮತ್ತು ಬಣ್ಣವನ್ನು ಸಮನಾಗಿ ಹಚ್ಚುವ ಪದ್ಧತಿಯನ್ನೂ ತ್ಯಜಿಸಿ ಪರಿಮಾಣವನ್ನೂ ವರ್ಣದಲ್ಲಿ ತಕ್ಕಮಟ್ಟಿಗೆ ಬೆಳಕು ಮತ್ತು ನೆರಳು ಭಾಗಗಳನ್ನೂ ಒಟ್ಟಿನಲ್ಲಿ ತನ್ನ ಚಿತ್ರಗಳಲ್ಲಿ ಪ್ರಕೃತಿಯ ವಸ್ತುಗಳ ಸ್ವಾಭಾವಿಕತೆಯು ಕಂಡುಬರುವಂತೆ ಚಿತ್ರಿಸಲಾರಂಭಿಸಿದನು. ಈ ಕಾಲದಲ್ಲಿ ಮಾನವನು ಪೂರೈಸಿದ ಚಿತ್ರಗಳು ಫ್ರಾನ್ಸಿನ, ಟೇಯಾಟ್, ಫಾಂಟ್-ಡಿ-ಗಾಮ್ ಮುಂತಾದ ಗವಿಗಳಲ್ಲಿಯೂ ಸ್ಪೇನಿನ ಆಲ್‌ಟಮ್ಮೆರ ಮುಂತಾದ ಕ್ಯಾಂಟಾಬ್ರಿಯಾ ಪ್ರಾಂತದ ಗವಿಗಳಲ್ಲಿಯೂ ದಕ್ಷಿಣ ಆಫ್ರಿಕದ ರೊಡೇಷಿಯದ ಬಾಂಬಾಟಾ ಗವಿಯಲ್ಲಿಯೂ ದೊರೆತಿವೆ. ಇವಲ್ಲದೆ ಉತ್ತರ ಆಫ್ರಿಕಾ, ಸ್ಪೇನಿನ ಪೂರ್ವಭಾಗ, ರಷ್ಯದಲ್ಲಿನ ಒನೀಗಾ ಸರೋವರಪ್ರದೇಶ ಮುಂತಾದೆಡೆಗಳಲ್ಲಿ ಈ ಕ್ರೋ ಮಾನ್ಯೋನ್ (ಆಧುನಿಕ ಮಾನವನ ಮೂಲ ಪುರುಷರು) ಬುಡಕಟ್ಟಿನ ಚಿತ್ರಗಾರರು ತಮ್ಮ ಚಿತ್ರಕಲೆಯನ್ನು ಪ್ರದರ್ಶಿಸಿದ್ದಾರೆ. ಆದರೆ ಇವು ಅಷ್ಟು ಉತ್ತಮದರ್ಜೆಗೆ ಸೇರಿರುವುದಿಲ್ಲ. ಈ ಕಾಲದ ರೇಖಾಚಿತ್ರಗಳಲ್ಲಿ ಬರಿಯ ರೂಪವೇ ಅಲ್ಲದೆ ಸಾಧ್ಯವಾದಷ್ಟು ವಿವರಗಳನ್ನೂ ಚಿತ್ರಿಸಲಾರಂಭಿಸಿದರು. ಇದಲ್ಲದೆ ಈ ಕಾಲದ ಕೆಲವು ಚಿತ್ರಗಳನ್ನು ನೋಡಿದಲ್ಲಿ ಇವರ ಗ್ರಹಣಶಕ್ತಿಯು ಅದ್ಭುತವಾಗಿದ್ದಿತೆಂದು ಕಾಣಬರುತ್ತದೆ. ಫ್ರಾನ್ಸಿನ ಲಾಮೆಡಲೀನ್







ಚಿತ್ರ ೨. ಪ್ರಾಚೀನ ವರ್ಣಚಿತ್ರಗಳು


೧. ಲಾ ಗ್ರೀಜ್ ಗವಿಯ ಒಂದು ಹೆಣ್ಣು ಜಿಂಕೆಯ ಚಿತ್ರ.


೨. ಆಲ್ಟಮ್ಯೆರಾ ಗವಿಯ ಒಂದು ಓಡುವ ಕುದುರೆಯ ಚಿತ್ರ.

೩. ಲಾ ಮೆಡಲೀನ್ ಗವಿಯ ಒಂದು ಮೂಳೆಯಲ್ಲಿ ಕೊರೆದ ಯುದ್ಧೋನ್ಮುಖವಾಗಿರುವ ಮ್ಯಾಮತ್ ಪ್ರಾಣಿಯ ಚಿತ್ರ.


ಗವಿಯ ಯುದ್ಧೋನ್ಮುಖವಾಗಿರುವ ಮ್ಯಾಮತ್‌ಪ್ರಾಣಿ, (ಚಿತ್ರ ೨ರಲ್ಲಿ ಸಂಖ್ಯೆ ೩ನ್ನು ನೋಡಿ.) ಟೇಯಾಟ್ ಗವಿಯ ಮೊದ್ದು ಮೊದ್ದಾಗಿರುವ ಕರಡಿ ಇವುಗಳನ್ನು ನೋಡಿದಲ್ಲಿ ಎಂತಹವರಿಗಾದರೂ ಇವರು ಪ್ರಾಣಿಗಳ ಮುಖ್ಯ ಗುಣ ವಿಶೇಷಗಳನ್ನು ಅರಿತಿದ್ದರೆಂಬುದು ವಿದಿತವಾಗದಿರದು. ಈ ಚಿತ್ರಗಳು ಆಧುನಿಕದೃಷ್ಟಿಯಿಂದ

೧





೨



೩

ಚಿತ್ರ ೩. ಪ್ರಾಚೀನ ರೇಖಾಚಿತ್ರಗಳು

೧. ಟೇಯಾಟ್ ಗವಿಯ ಒಂದು "ಗವಿಕರಡಿ"ಯ ಚಿತ್ರ.
೨. ಅದೇ ಗವಿಯ ಒಂದು ಹುಲ್ಲುಮೇಯುವ ಕುದುರೆಯ ಚಿತ್ರ.
೩. ಅದೇ ಗವಿಯ ಒಂದು ಗೂಳಿಯ ಚಿತ್ರ.

ಪರೀಕ್ಷಿಸಲ್ಪಟ್ಟಲ್ಲಿ ಎಷ್ಟೋ ನ್ಯೂನಾತಿರಿಕ್ತಗಳು ಕಂಡುಬಂದರೂ ಕೂಡ, ಅನೇಕ ಆಧುನಿಕ ಭಾವನಾಪ್ರಧಾನವಾದದ ಪದ್ಧತಿಯ ಚಿತ್ರಗಳೂ ಹೀಗೆಯೇ ಇರುತ್ತವೆಂಬುದನ್ನು ಮರೆಯಲಾಗದು.

ಪ್ರಾಚೀನ ಚಿತ್ರಕಲಾಕೃತಿಗಳಿರುವ ಪ್ರದೇಶಗಳು

ಈ ಕಾಲದಲ್ಲಿ ಚಿತ್ರಿಸಲ್ಪಟ್ಟ ಚಿತ್ರಗಳು ಫ್ರಾನ್ಸಿನ ಲಾಮೌತ್, ಫಾಂಟ್-ಡಿ-ಗಾಮ್, ಬರ್‌ನಿಫಾಲ್, ಲಾ-ಗ್ರೀಜ್, ಕ್ಯಾಪ್-ಬ್ಲಾಂಕ್, ಸಯೂ, ಪೋರ್‌ಟೆಲ್ ಮುಂತಾದ ಕಡೆಗಳಲ್ಲಿಯೂ ಸ್ಪೇನಿನ ಪಸೇಗಾ, ಅಲ್ಟಮೈರಾ ಮುಂತಾದೆಡೆಗಳಲ್ಲಿಯೂ ದೊರೆತಿದ್ದಾಗ್ಯೂ ಇವುಗಳಲ್ಲೆಲ್ಲಾ ಉತ್ತಮವಾದ ಕೃತಿಗಳು ಅಲ್ಟಮೈರಾ ಮತ್ತು ಫಾಂಟ್-ಡಿ-ಗಾಮ್ ಗವಿಗಳಲ್ಲಿವೆ. ಮಿಕ್ಕ ಗವಿಗಳ ಕೃತಿಗಳು ಅಷ್ಟು ಉತ್ತಮತರಗತಿಯವಲ್ಲ.

ಫ್ರಾನ್ಸ್

ಫಾಂಟ್-ಡಿ-ಗಾಮ್ ಗವಿಯು ಫ್ರಾನ್ಸಿನ ಬ್ಯೂನ್ ನದಿಯ ದಡದ ಮೇಲಿದೆ. ಗವಿಯೊಳಗೆ ಸ್ವಲ್ಪದೂರ ಪ್ರವೇಶಮಾಡಿದನಂತರ ಗೋಡೆಗಳ ಮೇಲೆಯೂ ಒಳ ಛಾವಣಿಯ ಮೇಲೆಯೂ ರೇಖಾ ಮತ್ತು ವರ್ಣಚಿತ್ರಗಳು ಕಾಣಬರುತ್ತವೆ. ಪ್ರಾಕ್ತನ ಚಿತ್ರಕಲೆಯಲ್ಲಿ ಸಾಮಾನ್ಯವಾಗಿ ಚಿತ್ರಿತವಾಗಿರುವ ಎಲ್ಲಾ ಬಗೆಯ ಪ್ರಾಣಿಗಳ ಚಿತ್ರಗಳೂ ಈ ಗವಿಯಲ್ಲಿವೆ. ಕುದುರೆಗಳ ರೇಖಾಚಿತ್ರಗಳನ್ನು ಬರೆದು, ಆ ರೇಖೆಗಳ ಮೇಲೆ ಬರಿಯ ಕೆಂಪು ಬಣ್ಣದ ಪಟ್ಟೆಗಳನ್ನು ಎಳೆಯಲಾಗಿದೆ. ಇದಲ್ಲದೆ ಕಾಡುಕೋಣ, ಜಿಂಕೆಗಳು, ಮತ್ತು ರೇನ್‌ಡೀರ್ ಪ್ರಾಣಿಗಳ ಚಿತ್ರಗಳು, ಕೆಂಪು ಕಪ್ಪು ಕಂದು ಮುಂತಾದ ಬಣ್ಣಗಳಲ್ಲಿಯೂ ಮತ್ತು ಅವುಗಳ ಮಿಶ್ರವರ್ಣಗಳಲ್ಲಿಯೂ ಬರಿಯ ಸಮನಾದ ಹಚ್ಚುವ ಪದ್ಧತಿಯೊಂದರಲ್ಲಿಯೇ ಅಲ್ಲದೆ, ಬೆಳಕು ಮತ್ತು ಛಾಯೆಗಳನ್ನು ವಿಂಗಡಿಸುವ ಪದ್ಧತಿಯಲ್ಲಿಯೂ ಚಿತ್ರಿಸಿದ್ದಾರೆ. (ಚಿತ್ರ ೪-೧) ಎಡಪಾರ್ಶ್ವದಲ್ಲಿ ಗೋಡೆಗಳ ಮೇಲೆ ಬಹು ಸೂಕ್ಷ್ಮವಾದ ರೇಖೆಗಳಿಂದ ಮ್ಯಾಮತ್ ಪ್ರಾಣಿಗಳ ಚಿತ್ರಗಳನ್ನು ಬರೆದು ಅವುಗಳ ಕೂದಲು ಮುಂತಾದ ವಿವರಗಳನ್ನೂ ರೇಖೆಗಳಲ್ಲಿಯೇ ಚಿತ್ರಿಸಿದ್ದಾರೆ.


ಸ್ಪೇನ್

ಅಲ್ಟಮೈರಾ ಗವಿಯು ಸ್ಪೇನಿನ ಉತ್ತರ ಭಾಗದಲ್ಲಿದೆ. ಈ ಗವಿಯಲ್ಲಿ ಫಾಂಟ್-ಡಿ-ಗಾಮ್ ಗವಿಗಿಂತಲೂ ಪ್ರಾಕ್ತನ ಮಾನವರ ಚಿತ್ರಗಳು ಹೇರಳವಾಗಿ ದೊರೆಯುತ್ತವೆ. ಈ ಗವಿಯು ಬಹು ಪುರಾತನ ಕಾಲದಿಂದಲೂ ಮುಚ್ಚಿಹೋಗಿದ್ದು ಕ್ರಿ.ಶ. ೧೮೬೮ನೆಯ ಇಸವಿಯಲ್ಲಿ ಅತಿ ವಿಚಿತ್ರ ರೀತಿಯಲ್ಲಿ ಪತ್ತೆಯಾಯಿತು. ಡಾನ್ ಸಾಟೋಲನೆಂಬ ಜಮೀನ್ದಾರನು ತನ್ನ ಜಮೀನಿನಲ್ಲಿ ನರಿಯ ಬೇಟೆಯಾಡುತ್ತಾ, ಆ ನರಿಯು ಒಂದು ಬಿಲವನ್ನು ಹೊಗಲು, ಅದನ್ನು ಅಗೆಸಲಾರಂಭಿಸಿದನು. ಬಿಲವನ್ನು


ಆಗೆದಂತೆಲ್ಲಾ ಅದು ಬಹಳ ದಿನಗಳಿಂದಲೂ ಮುಚ್ಚಿಹೋಗಿದ್ದ ಗವಿಯೆಂದು ಕಂಡು ಬಂದಿತು. ಸ್ವಲ್ಪ ದಿನಗಳನಂತರ, ಈ ಗವಿಯೊಳಗೇನಿರಬಹುದೆಂಬುದನ್ನು ಪರೀಕ್ಷಿಸಲು ತನ್ನ ಐದು ವರ್ಷದ ಮಗಳನ್ನೂ ಕರೆದುಕೊಂಡು ಪ್ರವೇಶಿಸಿದನು. ಒಳಗೆ ಸ್ವಲ್ಪದೂರ ಹೋದ ಮೇಲೆ, ಅಲ್ಲಲ್ಲಿ ಕೆತ್ತಿದ್ದ ಮತ್ತು ಬರೆದಿದ್ದ ಚಿತ್ರಗಳನ್ನು ನೋಡಿ ಇನ್ನೂ ಮುಂದೆ ಹೋಗಲು, ಗವಿಯು ಬಹು ತಗ್ಗಿದ್ದುದರಿಂದ, ನಡೆಯಲಾಗದೆ ಕುಳಿತು ತೆವಳುವಂತಾಯಿತು. ಆದರೆ ಇವನ ಜತೆಯಲ್ಲಿದ್ದ ಮಗುವು ಇನ್ನೂ ಚಿಕ್ಕದಾಗಿದ್ದುದರಿಂದ ತೆವಳಬೇಕಾದ ಪ್ರಮೇಯವಿಲ್ಲದೆ, ನಿಂತು ನಿಂತು ಬೇಜಾರಾಗಿ ಕತ್ತೆತ್ತಿ ನೋಡಲು, ಮೇಲೆ ವರ್ಣಚಿತ್ರಗಳನ್ನು ಕಂಡು ತಂದೆಗೆ ತಿಳಿಸಿತು. ಡಾನ್ ಸಾಟೋಲನು ಅಂಗತ್ತನಾಗಿ ಮಲಗಿಕೊಂಡು ಆ ಚಿತ್ರಗಳನ್ನು ಪರೀಕ್ಷಿಸಿ ಅವು ಬಹು ಪ್ರಾಚೀನ ಜನಾಂಗದವರ ಚಿತ್ರಗಳಿರಬಹುದೆಂದು ನಿಷ್ಕರ್ಷಿಸಿ ಐದು ವರ್ಷಗಳನಂತರ ತನ್ನ ವರದಿಯನ್ನು ಪ್ರಕಟಿಸಿದನು. ಆಗಿನ ಕಾಲದ ಅನೇಕ ಪ್ರಾಕ್ತನ ಇತಿಹಾಸ ಶೋಧಕರು ಈ ವರದಿಯ ಸತ್ಯತೆಯನ್ನು ಸಂದೇಹಿಸಿದರು. ಇನ್ನು ಕೆಲವರು ಒಂದು ಹೆಜ್ಜೆ ಗವಿಯ ವರೆಗೂ ಹೋಗಿದ್ದು ಇದೆಲ್ಲಾ ಶುದ್ಧ ಸುಳ್ಳಿನ ಕಂತೆಯೆಂದು ಅಲ್ಲಗಳೆದರು. ಕೊನೆಗೆ ಫ್ರಾನ್ಸಿನ "ಲಾಮೌತ್" ಗವಿಯಲ್ಲಿ ಪ್ರಾಕ್ತನ ಇತಿಹಾಸಜ್ಞರು ಮೇಡಲೀನಿಯನ್ ನಾಗರಿಕತೆಯ ಚಿತ್ರಗಳನ್ನೂ ಮತ್ತು ಆಯುಧಗಳನ್ನೂ ಕಂಡು ಅವುಗಳ ಕಾಲನಿರ್ಣಯ ಮಾಡುವವರೆಗೂ ಈ ಸಾಟೋಲನ ವರದಿಯೆಲ್ಲಾ ಶುದ್ಧ ಬೊಗಳೆಯೆಂದು ನಿಶ್ಚಯಿಸಿದ್ದರು. ಇವನ ವರದಿಯು ಸತ್ಯವಾದುದೆಂದು ಇತ್ಯರ್ಥವಾಗುವ ವೇಳೆಗೆ ಈ ಚಿತ್ರಗಳನ್ನು ನೋಡಿದ್ದ ಮಗುವು ಇಪ್ಪತ್ತು ವರ್ಷಗಳ ಯುವತಿಯೂ ಡಾನ್ ಸಾಟೋಲನು ಕಾಲಾಧೀನನೂ ಆಗಿದ್ದರು.

ಈ ಗವಿಯಲ್ಲಿ ಫಾಂಟ್-ಡಿ-ಗಾಮ್ ಗವಿಯಂತೆಯೇ ಮೇಡಲೀನಿಯನ್ ನಾಗರಿಕತೆಯ ಕಾಲದಲ್ಲಿ ಚಿತ್ರಿಸಲ್ಪಡುತ್ತಿದ್ದ ಪ್ರಾಣಿಗಳ ಚಿತ್ರಗಳು ರೇಖೆಗಳಿಂದಲೂ ವಿವಿಧ ವರ್ಣಗಳಿಂದಲೂ ಚಿತ್ರಿಸಲ್ಪಟ್ಟಿವೆ. ಇಲ್ಲಿ ಚಿತ್ರಿಸಲ್ಪಟ್ಟಿರುವ ಕೆಲವು ಕಾಡೆಮ್ಮೆ ಮತ್ತು ಕಾಡುಹಂದಿಯ ಚಿತ್ರಗಳು ಈಗಿನ ಆಧುನಿಕ ಚಿತ್ರಗಳ ಮಾದರಿಯಲ್ಲಿ ಇವೆ. ಈ ಗವಿಯಲ್ಲಿನ ಚಿತ್ರಕಲೆಯು ಮೇಡಲೀನಿಯನ್ ಕಾಲದ ಕಲೆಯು ಅತ್ಯುಚ್ಚಾವಸ್ಥೆಯಲ್ಲಿದ್ದಾಗ ಬರೆದುದು. ಇಲ್ಲಿನ ಚಿತ್ರಗಳನ್ನು ನೋಡುತ್ತಿದ್ದರೆ ಇನ್ನೂ ಪಶು ಜೀವನದ ಕಲೆಗಳು ಅಳಿಸಿಹೋಗದ ಕಾಲದ ಮಾನವನು ಎಷ್ಟು ಸಾಹಸದಿಂದ ಈ ಬಗೆಯ ಚಿತ್ರಗಳನ್ನು ಅಸಹಾಯನಾಗಿ ರಚಿಸಿದನೆಂದು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಡುವ ಹಾಗಾಗುವುದು. ಪ್ರಾಕ್ತನ ಮಾನವನ ಬಹು ಕೀಳ್ತರಗತಿಯಿಂದ ಅತ್ಯುತ್ತಮಶ್ರೇಣಿಯ ಚಿತ್ರಕಲೆಯ ಕೃತಿಗಳು ಈ ಗವಿಯಲ್ಲಿ ದೊರೆಯುತ್ತವೆ

೧



೨



ಚಿತ್ರ ೪. ವರ್ಣಚಿತ್ರಗಳು (ಅತ್ಯುಚ್ಚಸ್ಥಿತಿ)

೧. ಫಾಂಟ್ ಡಿ ಗಾಮ್ ಗವಿಯ ರೇನ್‌ಡಿಯರ್ ಪ್ರಾಣಿಯ ಚಿತ್ರ


೨. ಆಲ್ಟಮೈರಾ ಗವಿಯ ಕಾಡುಕೋಣದ ಚಿತ್ರ

ಈ ಗವಿಯಲ್ಲಿ ಬಹು ಕೀಳ್ತರಗತಿಯ ಮನುಷ್ಯರ ಚಿತ್ರಗಳೂ ಇವೆ. ಉತ್ತಮದರ್ಜೆಗೆ ಸೇರಿದ ಕೆಲವು ಚಿತ್ರಗಳು ಬಹು ಅಪರೂಪವಾದ ಚಮತ್ಕಾರದಿಂದ ಆಯಾ ಪ್ರಾಣಿಗಳ ಸ್ವಾಭಾವಿಕತೆಗಳು ಪೂರ್ಣವಾಗಿ ಕಾಣುವಷ್ಟು ರಮ್ಯವಾಗಿ ಮಿಶ್ರ ವರ್ಣಗಳಿಂದ ಚಿತ್ರಿಸಲ್ಪಟ್ಟಿವೆ. ಇವುಗಳಲ್ಲಿ ಅನೇಕ ಚಿತ್ರಗಳು ಸುಮಾರು ಐದು ಅಡಿ ಮತ್ತು ಅದಕ್ಕೂ ಮೇಲ್ಪಟ್ಟ ವಿಸ್ತಾರದಿಂದ ಕೂಡಿವೆ. ಇಲ್ಲಿ ಸಾಮಾನ್ಯವಾಗಿ ಕಾಡೆಮ್ಮೆ, ಜಿಂಕೆ, ಕುದುರೆ, ಕಾಡುಹಂದಿ, ತೋಳ, ಕಾಡುಮೇಕೆ, ಮಾಮಾಯ್— ಈ ಪ್ರಾಣಿಗಳೇ ಹೆಚ್ಚಾಗಿ ಚಿತ್ರಿಸಲ್ಪಟ್ಟಿವೆ. (ಚಿತ್ರ ೪-೨) ಇಲ್ಲಿ ಒಟ್ಟು ಪ್ರಾಕ್ತನ ಮಾನವನ ಕಲಾಕೃತಿಗಳು ಸುಮಾರು ೧೫೦ ದೊರೆಯುತ್ತವೆ.

ಕ್ಯಾಪ್ಸಿಯರ್ಸ ನಾಗರಿಕತೆಯ ಚಿತ್ರಗಳು

ಪ್ರಾಚೀನ ಮಾನವರು ಪ್ರಾಣಿವರ್ಗಗಳನ್ನು ಇಷ್ಟು ಜೀವಸದೃಶವಾದ ರೀತಿಯಲ್ಲಿ ಬರೆಯುತ್ತಿದ್ದರೂ ಮನುಷ್ಯಾಕೃತಿಗಳನ್ನು ಮಾತ್ರ ಬರೆಯಲು ಅಸಮರ್ಥರಾಗಿದ್ದರೆಂಬುದು ಆಶ್ಚರ್ಯಕರವಾದ ಸಂಗತಿಯೇ ಸರಿ. ಆದಿಮಾನವರ ಚಿತ್ರಕಲೆಯು ಅತಿ ಕೆಳಗಿನ ಅವಸ್ಥೆಯಿಂದ ಅತ್ಯುಚ್ಚಾವಸ್ಥೆಗೆ ಏರಿದ ಕಾಲದಲ್ಲಿ ಅವರು ಯಾವ ಮಾನವರ ಚಿತ್ರಗಳನ್ನೂ ಹೆಚ್ಚಾಗಿ ಬರೆದಿಲ್ಲ; ಅಥವಾ ಆ ಕಾಲದಲ್ಲಿ ಇವರು ಚಿತ್ರಕಲೆಯ ಕೃತಿಗಳನ್ನು ಮಾಡಿದ ಗವಿಗಳಲ್ಲಿ ಇದರ ನಿದರ್ಶನಗಳಾವುವೂ ದೊರೆಯುವುದಿಲ್ಲ. ಈಗ ದೊರೆತಿರುವ ಪ್ರಾಚೀನ ಚಿತ್ರಕಲೆಯ ಮಾನವಾಕೃತಿಗಳು ಮಿಕ್ಕ ಅವರ ಚಿತ್ರಕಲಾಕೃತಿಗಳ ಜತೆಗೆ ಹೋಲಿಸಲು ಕೂಡ ಯೋಗ್ಯವಿಲ್ಲದಷ್ಟು ಕೀಳ್ತರದವು. ಈ ಚಿತ್ರಗಳನ್ನು ಸಾಮಾನ್ಯವಾಗಿ ವ್ಯಂಗ್ಯಚಿತ್ರಗಳ ಸಾಲಿಗೆ ಸೇರಿಸಬಹುದು. ಇಷ್ಟಾದರೂ ಇವುಗಳಲ್ಲಿ ಇವಕ್ಕೆ ಹಿಂದಿನ ಚಿತ್ರಗಳಲ್ಲಿಲ್ಲದಿದ್ದ ಒಂದು ನವೀನ ಪದ್ಧತಿಯೂ ಮತ್ತು ಜೀವಕಳೆಯೂ ಇವೆ. ಈ ಮನುಷ್ಯಾಕೃತಿಗಳು ಕ್ಯಾಪ್ಸಿಯರ್ಸ ಎಂಬ ನಾಗರಿಕತೆಯ ಕಾಲಕ್ಕೆ ಸಂಬಂಧಿಸಿದುವೆಂದು ಹೇಳುತ್ತಾರೆ. ಇವು ಸ್ಪೇನಿನ ಪೂರ್ವಭಾಗದ ಅನೇಕ ಶಿಲಾಶ್ರಯ ಸ್ಥಾನಗಳಲ್ಲಿ ದೊರೆತಿವೆ. ಇವುಗಳಲ್ಲಿ ಮನುಷ್ಯಾಕೃತಿಗಳಾಗಲಿ ಅಥವಾ ಪ್ರಾಣಿಗಳ ಆಕೃತಿಗಳಾಗಲಿ ಇತರ ಗವಿಗಳ ಚಿತ್ರಗಳಂತೆ ಸಾಮಾನ್ಯವಾದ ಸ್ವಾಭಾವಿಕತೆಯಿಂದ ಕೂಡಿಲ್ಲ. ಅದರ ಬದಲು ವ್ಯಂಗ್ಯಚಿತ್ರಗಳಂತಿವೆ. ಇಷ್ಟು ವಕ್ರವಕ್ರವಾಗಿದ್ದರೂ ಈ ಚಿತ್ರಗಳಲ್ಲಿ ಇತರ ಗವಿಚಿತ್ರಕಲೆಯಲ್ಲಿಲ್ಲದ ಒಂದು ವೈಶಿಷ್ಟ್ಯವಿದೆ. ಇತರ ಗುಹಾಚಿತ್ರಗಳಲ್ಲಿ ಸಾಮಾನ್ಯವಾಗಿ ಯಾವುದೋ ಒಂದೊಂದು ಚಿತ್ರವನ್ನುಳಿದು, ಒಟ್ಟಿಗೆ ಗುಂಪು ಕೂಡಿಸಿ ಚಿತ್ರರಚನೆ ಮಾಡಿರುವ ನಿದರ್ಶನಗಳಾವುವೂ ದೊರೆಯುವುದಿಲ್ಲ. ಆದರೆ





೧





೨ ೩

ಚಿತ್ರ ೫. ಕ್ಯಾಪ್ಸಿಯನ್ ಚಿತ್ರಗಳು

೧. ಸ್ಪೇನಿನ ಶಿಲಾಶ್ರಯಗಳ ಒಂದು ಕುಣಿತದ ಮತ್ತು ಬೇಟೆಯ ಚಿತ್ರ.
೨. ಶಿಲಾಶ್ರಯಗಳ ಒಂದು ಜೇನು ತೆಗೆಯುವ ಚಿತ್ರ.
೩. ಆಫ್ರಿಕಾದ ಬಾಂಬಾಟಾ ಗವಿಯ ಓಡುವ ಮನುಷ್ಯನ ಚಿತ್ರ.

ಈ ಚಿತ್ರಗಳಲ್ಲಿ ಸಾಮಾನ್ಯವಾಗಿ ಬೇಟೆ, ಕುಣಿತ ಮುಂತಾದ ಆಗಿನ ಜನಜೀವನದ ದೃಶ್ಯಗಳು ಹೇರಳವಾಗಿ ದೊರೆಯುತ್ತವೆ. ಚಿತ್ರಗಳು ಎಷ್ಟೇ ವಕ್ರವಾಗಿದ್ದರೂ ಅವುಗಳಲ್ಲಿ ಒಂದು ಜೀವಕಳೆಯೂ ಸತ್ವವೂ ಇವೆ. ಇವುಗಳು ಇತರ ಚಿತ್ರಗಳಂತೆಯೇ ಸಾಮಾನ್ಯವಾಗಿ ಒಂದೊಂದೇ ವರ್ಣದಲ್ಲಿ ಪೂರೈಸಲ್ಪಟ್ಟಿದ್ದು, ಮಿಶ್ರವರ್ಣಗಳ ಚಿತ್ರಗಳು ಅಪರೂಪವಾಗಿವೆ. ಇವುಗಳ ಕಾಲವು ಪ್ರಾಚೀನ ಶಿಲಾಯುಗವೋ ಅಥವಾ ನವೀನ ಶಿಲಾಯುಗವೋ ಎಂಬುದು ಇನ್ನೂ ಇತ್ಯರ್ಥವಾಗಿಲ್ಲ.

ಆಫ್ರಿಕದಲ್ಲಿ

ಬಾಂಬಾಟಾ ಗವಿಯು ದಕ್ಷಿಣ ಆಫ್ರಿಕದ ರೊಡೇಷಿಯಾ ಪ್ರಾಂತದಲ್ಲಿದೆ. ಈ ಗವಿಯಲ್ಲಿ ದಕ್ಷಿಣ ಆಫ್ರಿಕದ ಪ್ರಾಕ್ತನ ಮಾನವ ಜನಾಂಗದವರ ಚಿತ್ರಕಲಾ ನಿದರ್ಶನಗಳು ದೊರೆಯುತ್ತವೆ. ಇವುಗಳು ದರ್ಜೆಯಲ್ಲಿ ಫ್ರಾನ್ಸ್ ಮತ್ತು ಸ್ಪೇನಿನ ಗವಿಗಳಷ್ಟು ಉತ್ತಮವಾಗಿಲ್ಲ. ಇಲ್ಲಿಯ ಚಿತ್ರಗಳು ಸಾಮಾನ್ಯವಾಗಿ ಹಳದಿ ಮತ್ತು ಬಿಳಿಯ ಬಣ್ಣಗಳಿಂದ ಚಿತ್ರಿಸಲ್ಪಟ್ಟಿವೆ. ಅವುಗಳಿಗಿಂತ ಸ್ವಲ್ಪ ಈಚಿನ ಚಿತ್ರಗಳು ಸ್ಪೇನಿನ ಪೂರ್ವಭಾಗದ ಕ್ಯಾಪ್ಸಿಯನ್ ನಾಗರಿಕತೆಯ ಚಿತ್ರಗಳೋಪಾದಿಯಲ್ಲಿವೆ. (ಚಿತ್ರ ೬ ಸಂಖ್ಯೆ ೨ ನ್ನು ನೋಡಿ.) ಆದರೆ ಅಲ್ಲಿ ಮನುಷ್ಯಾಕೃತಿಗಳನ್ನು ಕಪ್ಪು ಮತ್ತು ಕಂದುಬಣ್ಣಗಳಲ್ಲಿ ಚಿತ್ರಿಸಿದ್ದರೆ, ಇಲ್ಲಿ ಕೆಂಪು ಕಂದುಬಣ್ಣದಲ್ಲಿ ಚಿತ್ರಿಸಿದ್ದಾರೆ. ಚಿತ್ರಗಳೂ ಹಾಗೆಯೇ ವಕ್ರವಾಗಿವೆ. ಆದರೆ ಕೆಲವು ಪ್ರಾಣಿಗಳ ಚಿತ್ರಗಳು ಸ್ವಾಭಾವಿಕತೆಯಿಂದ ಕೂಡಿವೆ. ಈ ಬಾಂಬಾಟಾಗವಿಯಲ್ಲದೆ ಟಾಂಗನೀಕಾಪ್ರಾಂತದ ಕೆಲವು ಶಿಲಾಶ್ರಯಗಳಲ್ಲಿಯೂ ಹೀಗೆಯೇ ಜಿರಾಫೆ ಮುಂತಾದ ಪ್ರಾಣಿಗಳ ಆಕೃತಿಗಳು ಸಿಕ್ಕಿವೆ. ಇವುಗಳ ಕತ್ತು, ಶರೀರ ಮುಂತಾದುವು ಸಮಪರಿಮಾಣದಿಂದ ಕೂಡಿದ್ದರೂ ಕಾಲುಗಳು ಮಾತ್ರ ಬಹು ಕೀಳಾಗಿ ಚಿತ್ರಿಸಲ್ಪಟ್ಟಿವೆ.


ಆಫ್ರಿಕಾ ಖಂಡದಲ್ಲಿ ಈ ವರ್ಣಚಿತ್ರಗಳೇ ಅಲ್ಲದೆ ರೇಖಾಚಿತ್ರಗಳೂ ಇವೆ. ಟ್ರಾನ್ಸ್‌ವಾಲ್ ಪ್ರಾಂತದ ಅನೇಕ ಶಿಲಾಶ್ರಯಗಳಲ್ಲಿ ಈಗ್ಗೆ ಸಹಸ್ರಾರು ವರ್ಷಗಳ ಹಿಂದೆಯೇ ಭೂಮಿಯ ಮೇಲಿನಿಂದ ನಾಮಾವಶೇಷವಾದ ಮ್ಯಾಸ್ಟೋಡನ್ ಮುಂತಾದ ಪ್ರಾಣಿಗಳ ಚಿತ್ರಗಳನ್ನು ಪ್ರಾಕ್ತನಮಾನವನು ಬಹು ಶ್ರಮದಿಂದ ಬಂಡೆಗಳ ಮೇಲೆ ಕೊರೆದಿದ್ದಾನೆ. ಪ್ರಾಕ್ತನ ಇತಿಹಾಸ ಶೋಧಕರು ಈ ಚಿತ್ರಗಳಲ್ಲಿ ಹತ್ತಕ್ಕೆ ಕಡಮೆಯಿಲ್ಲದೆ ನಾಮಾವಶೇಷವಾಗಿರುವ ಪುರಾತನ ಜೀವಿಗಳನ್ನು ಕಂಡು ವಿಸ್ಮಿತರಾದರು. ಭೂಮಿಯ ಮೇಲೆ ಮನುಷ್ಯನ ಪ್ರವೇಶವಾಗುವುದಕ್ಕೆ ಪೂರ್ವದಲ್ಲಿಯೇ ಭೂಮಿಯ ಮೇಲಿನಿಂದ ನಿರ್ನಾಮವಾದುವೆಂದು ತಿಳಿದಿದ್ದ ಮ್ಯಾಸ್ಟೋಡನ್

ಮುಂತಾದ ಮೃಗಗಳ ಚಿತ್ರಗಳನ್ನು ನೋಡಿ ಅವರು ವಿಸ್ಮಿತರಾದದ್ದೇನೂ ಹೆಚ್ಚಲ್ಲ. ಬಹುಶಃ ಈ ಪ್ರಾಣಿಗಳು ಮಿಕ್ಕ ಕಡೆಗಳಲ್ಲೆಲ್ಲಾ ನಿರ್ನಾಮವಾಗಿದ್ದರೂ ಆಫ್ರಿಕಾ ಗೊಂಡಾರಣ್ಯಗಳಲ್ಲಿ ಮನುಷ್ಯ ಪ್ರವೇಶವಾಗುವ ವರೆಗೂ ಜೀವಿಸಿದ್ದುವೆಂದು ಊಹಿಸಬಹುದಾಗಿದೆ. ಟ್ರಾನ್ಸ್‌ವಾಲ್ ಪ್ರಾಂತದ ಶಿಲೆಯು ಬಹು ಕಠಿಣ ಮತ್ತು ಒರಟು. ಇಂತಹ ಶಿಲೆಯಲ್ಲಿ ಬರಿಯ ಒರಟೊರಟಾದ ಶಿಲಾಯುಧ ಹೊರತು ಬೇರಾವ ಉಪಕರಣವೂ ಇಲ್ಲದೆ ಈ ಚಿತ್ರಗಳನ್ನು ಕೊರೆದ ಜನರ ಸಾಹಸವು ಆಶ್ಚರ್ಯಕಾರಿ ವಾದುದೇ ಸರಿ. ಈ ಚಿತ್ರಗಳ ಕಾಲನಿರ್ಣಯವು ಇನ್ನೂ ಸಂದಿಗ್ಧವಾಗಿಯೇ ಇದೆ.

ಉತ್ತರ ಆಫ್ರಿಕದಲ್ಲಿಯೂ ಸಹರಾ ಮರುಭೂಮಿಯ ಕೆಲವು ಸರೋವರಗಳ ತೀರದ ಶಿಲಾಶ್ರಯಗಳಲ್ಲಿಯೂ ಜಿರಾಫೆ ಸಿಂಹ ಮುಂತಾದ ಪ್ರಾಣಿಗಳು ಚಿತ್ರಿಸಲ್ಪಟ್ಟಿವೆ. ಇವು ಕ್ಯಾಪ್ಸಿಯರ್ ಚಿತ್ರಗಳ ಮಾದರಿಯಲ್ಲಿಯೇ ಇವೆ. ಈ ಚಿತ್ರಗಳು ತಯಾರಾದ ಕಾಲದಲ್ಲಿ ಯೂರೋಪ್ ಮತ್ತು ಆಫ್ರಿಕಾ ಖಂಡಗಳು ಇನ್ನೂ ಒಂದಕ್ಕೊಂದಕ್ಕೆ ಸೇರಿಕೊಂಡಿದ್ದು ಸಹರಾಪ್ರಾಂತವು ಆಗ ಮರುಭೂಮಿಯಾಗಿರದೆ ಫಲವತ್ತಾದ ಪ್ರದೇಶವಾಗಿದ್ದಿತೆಂದು ಊಹಿಸಲ್ಪಟ್ಟಿದೆ. ಕ್ರೋಮಾನ್ಯೋನ್ ಬುಡಕಟ್ಟಿನವರ ಚಿತ್ರಕಲೆಯು ಸ್ಪೇನಿನ ಮುಖಾಂತರ ಆಫ್ರಿಕಾಖಂಡಕ್ಕೆ ಹೋಗಿ ಸಹರಾ ಮುಂತಾದೆಡೆಗಳಲ್ಲಿ ಹರಡಿ ದಕ್ಷಿಣ ಆಫ್ರಿಕಕ್ಕೂ ಹೋಗಿರಬಹುದು. ಈ ಸಹರಾ ಚಿತ್ರಕಲೆಯಲ್ಲಿ ಸಾಮಾನ್ಯವಾಗಿ ಪ್ರಾಣಿಗಳ ಚಿತ್ರಗಳೆಲ್ಲವೂ ಅವವುಗಳ ಸ್ವಾಭಾವಿಕ ಪ್ರಮಾಣಗಳಿಗನುಸಾರವಾಗಿ ಚಿತ್ರಿಸಲ್ಪಟ್ಟಿವೆ. ಜಿರಾಫೆಯು ೧೯ ಅಡಿಯೂ ಘೇಂಡಾಮೃಗ ಮೊಸಳೆ ಮುಂತಾದವು ಅವವುಗಳ ಸ್ವಾಭಾವಿಕ ಅಳತೆಗಳಿಗೆ ಸರಿಯಾಗಿಯೂ ಚಿತ್ರಿಸಲ್ಪಟ್ಟಿವೆ. ಇಲ್ಲಿಯೂ ಮೊದಲು ಬರೆಯಲ್ಪಟ್ಟಿರುವ ಚಿತ್ರಗಳು ಅನಂತರ ಬರೆದವುಗಳಿಗಿಂತ ಉತ್ತಮವಾಗಿದೆ. ಇಲ್ಲಿ ಚಿತ್ರಿಸಲ್ಪಟ್ಟಿರುವ ಪ್ರಾಣಿಗಳಲ್ಲಿ ಗೂಳಿಗಳ ಚಿತ್ರಗಳು ಅಷ್ಟು ಚನ್ನಾಗಿಲ್ಲ. ಗೂಳಿಗಳು ಒಂದು ಪಕ್ಕದಲ್ಲಿ ನೋಡುತ್ತಿದ್ದರೆ ಅವುಗಳ ಕೊಂಬುಗಳು ಮುಂಭಾಗದಿಂದ ಕಾಣುವ ರೀತಿಯಲ್ಲಿ ಚಿತ್ರಿಸಲ್ಪಟ್ಟಿವೆ. ಇಲ್ಲಿಯ ಚಿತ್ರಕಲೆಯು ಯೂರೋಪ್ ಮತ್ತು ದಕ್ಷಿಣ ಆಫ್ರಿಕದ ಚಿತ್ರಕಲೆಗೆ ಸರಿತೂಗುವ ಹಾಗೆ ಅವುಗಳ ಉಲ್ಲಾಸ ಜೀವಕಳೆ ಮುಂತಾದುವಾವುದೂ ಇಲ್ಲದೆ ಮೊದ್ದು ಮೊದ್ದಾಗಿದೆ.


ಭರತಖಂಡದಲ್ಲಿ

ಭರತಖಂಡದಲ್ಲಿಯೂ ಪ್ರಾಚೀನ ಚಿತ್ರಕಲಾಕೃತಿಗಳು ದೊರೆತಿವೆ. ಸುಮಾರು ಕ್ರಿ.ಶ. ೧೮೮೦ ನೆಯ ಇಸವಿಯಿಂದಲೂ ಭರತಖಂಡದಲ್ಲಿ ಈ ವಿಷಯದಲ್ಲಿ ಶೋಧನೆ



ಚಿತ್ರ ೬. ಭರತಖಂಡದ ಪ್ರಾಚೀನ ಚಿತ್ರಗಳು

೧. ಸಿಂಗನ್‌ಪುರದ ಗವಿಯ ಬೇಟೆಯ ದೃಶ್ಯದ ಚಿತ್ರ



ಭರತಖಂಡದ ಪ್ರಾಚೀನ ಚಿತ್ರಗಳು

೧. ಸಿಂಗನ್‌ಪುರದ ಗವಿಯಲ್ಲಿರುವ ಓಡುವ ಕುದುರೆಯ ದೃಶ್ಯದ ಚಿತ್ರ

(ಚಿತ್ರ ೧ ಸಂಖ್ಯೆ ೧ರೊಡನೆ ಹೋಲಿಸಿ)

ಗಳು ನಡೆಯುತ್ತಿವೆ. ಸಿಂಗನ್‌ಪುರ್, ಕಾಪಗಲ್ಲು, ಎಡಕಲ್ ಮುಂತಾದ ನಾನಾ ಕಡೆಗಳಲ್ಲಿಯ ಗವಿಗಳಲ್ಲಿಯೂ ಮತ್ತು ಶಿಲಾಶ್ರಯಗಳಲ್ಲಿಯೂ ಪ್ರಾಚೀನಮಾನವರ ಚಿತ್ರಕಲಾನಿದರ್ಶನಗಳು ದೊರೆತಿವೆ. ಆದರೆ ಇಷ್ಟು ಹೇರಳವಾದ ನಿದರ್ಶನಗಳು ದೊರೆತಿದ್ದಾಗ್ಯೂ ಇವುಗಳಲ್ಲೆಲ್ಲಾ ಉತ್ತಮವಾದ ನಿದರ್ಶನಗಳು ಸಿಂಗನ್‌ಪುರದ ಗವಿಗಳಲ್ಲಿ ಮಾತ್ರ ದೊರೆಯುತ್ತವೆ.

ಸಿಂಗನ್‌ಪುರದ ಗವಿಗಳು ಮಧ್ಯಪ್ರಾಂತಗಳ ರಾಯಘರ್ ಸಂಸ್ಥಾನದಲ್ಲಿ ಬಂಗಾಳ ನಾಗಪುರ ರೇಲ್ವೆಯ ಸಹರ್‌ಪಾಲಿ ಸ್ಟೇಷನ್ನಿನ ಸಮೀಪದಲ್ಲಿವೆ. ಇವು ಮೊಟ್ಟಮೊದಲು ೧೯೧೦ ರಲ್ಲಿ ಬಂಗಾಳ ನಾಗಪುರ ರೇಲ್ವೆಯ ಒಬ್ಬ ಅಧಿಕಾರಿಯಿಂದ ಕಂಡು ಹಿಡಿಯಲ್ಪಟ್ಟು ಆತನು ಈ ಚಿತ್ರಗಳನ್ನು ಪರಿಶೀಲಿಸಿ ಇವುಗಳು ಬಹು ಪುರಾತನಕಾಲದ ಮಾನವರ ಕೆಲಸವೆಂದು ಯೋಚಿಸಿ ಪ್ರಾಚೀನ ಇತಿಹಾಸ ಶೋಧಕರಿಗೆ ತಿಳಿಸಿದನು. ಸ್ವಲ್ಪ ಕಾಲದಲ್ಲಿಯೇ ಕಲಕತ್ತೆಯ ಕಲಾಶಾಲೆಯ ಮುಖ್ಯಾಧಿಕಾರಿಗಳಾದ ಪರ್ಸಿ ಬ್ರೌನ್‌ರವರು ಈ ಸ್ಥಳವನ್ನು ಸಂದರ್ಶಿಸಿ ಇವು ಪ್ರಾಕ್ತನ ಮಾನವರ ಕಲಾನಿದರ್ಶನಗಳೆಂದು ನಿರ್ಧರ ಮಾಡಿದರು.

ಈ ಗವಿಯಲ್ಲಿ ಮುಂಭಾಗವೆಲ್ಲವೂ ಸಾಮಾನ್ಯವಾಗಿ ಬಿದ್ದುಹೋಗಿರುವುದರಿಂದ ಕೇವಲ ಒಳಭಾಗದಲ್ಲಿರುವ ಚಿತ್ರಗಳಲ್ಲದೆ ಮಿಕ್ಕವುಗಳು ನಶಿಸಿಹೋಗಿವೆ. ಇಲ್ಲಿ ಚಿತ್ರಿಸಲ್ಪಟ್ಟಿರುವ ಚಿತ್ರಗಳೆಲ್ಲವೂ ಸಾಮಾನ್ಯವಾಗಿ ಸ್ಪೇನಿನ ಶಿಲಾಶ್ರಯ ಚಿತ್ರಗಳ ಗುಂಪಿಗೆ ಸೇರಿದಂತಹವು. ಕೇವಲ ಒಂಟಿ ಪ್ರಾಣಿಗಳೇ ಅಲ್ಲದೆ, ಬೇಟೆ ಕುಣಿತ ಮುಂತಾದ ದೃಶ್ಯಗಳನ್ನೂ ಚಿತ್ರಿಸಿದ್ದಾರೆ (ಚಿತ್ರ ೬). ಓಡುತ್ತಿರುವ ಕುದುರೆಯ ಚಿತ್ರವು ಸಾಮಾನ್ಯವಾಗಿ ಅಲ್ಟಮೈರದ ಓಡುವ ಕುದುರೆಯ ಚಿತ್ರವನ್ನು ಹೋಲುತ್ತದೆ. (ಚಿತ್ರ ೨ ರಲ್ಲಿ ಸಂಖ್ಯೆ ೨ ನ್ನು ನೋಡಿ) ಇಲ್ಲಿಯ ಚಿತ್ರಗಳು ಅಲ್ಟಮೈರದ ಚಿತ್ರಗಳಷ್ಟು ಸ್ವಾಭಾವಿಕತೆಯಿಂದ ಕೂಡಿರದಿದ್ದರೂ ಸಹರಾ ಪ್ರಾಂತದ ಚಿತ್ರಗಳಂತೆ ಮೊದ್ದುಮೊದ್ದಾಗಿರದೆ ಜೀವಕಳೆಯಿಂದ ಕೂಡಿವೆ. ಬೇಟೆಯ ದೃಶ್ಯಗಳಲ್ಲಿ ನೈಜವಾದ ಸಾಹಸಿಕತೆಯನ್ನು ಚನ್ನಾಗಿ ಚಿತ್ರಿಸಿದ್ದಾರೆ. ಈ ದೃಶ್ಯಗಳೇ ಅಲ್ಲದೆ ಈ ಗವಿಯಲ್ಲಿ ಇತರ ಕೀಳ್ತರಗತಿಯ ಮತ್ತು ಸಾಂಪ್ರದಾಯಿಕ ಚಿತ್ರಗಳೂ ಇವೆ. ಚಿತ್ರಗಳ ಅಂಚುಗಳು ಸಾಮಾನ್ಯವಾಗಿ ಹವಾಮಾನ ವ್ಯತ್ಯಾಸಗಳಿಂದ ಕಲಸಿಹೋಗಿವೆ.

ಕಾಪಗಲ್ಲು ಬಳ್ಳಾರಿಯ ಜಿಲ್ಲೆಯಲ್ಲಿದೆ. ಇಲ್ಲಿಯ ಗವಿಯಲ್ಲಿಯೂ ಸುಮಾರು ೨೦ಕ್ಕೆ ಮೇಲ್ಪಟ್ಟು ಪಕ್ಷಿಗಳ ಮತ್ತು ಪ್ರಾಣಿಗಳ ಚಿತ್ರಸಮುದಾಯಗಳಿವೆ. ರಚನೆಯಲ್ಲಿ ಇವು ಸಿಂಗನ್‌ಪುರದವುಗಳಷ್ಟು ಉತ್ತಮವಾಗಿಲ್ಲ. ಇದಲ್ಲದೆ ಎಡಕಲ್

ಮೌಭಂಡಾರ ಮುಂತಾದ ಭರತಖಂಡದ ಇತರ ಪ್ರದೇಶಗಳಲ್ಲಿಯೂ ಪ್ರಾಕ್ತನ ಮಾನವರ ಚಿತ್ರಕಲಾನಿದರ್ಶನಗಳು ದೊರಕಿವೆ. ಆದರೆ ಇವು ಸಿಂಗನ್‌ಪುರದ ಚಿತ್ರಗಳಷ್ಟು ಉತ್ತಮವಾಗಿಲ್ಲ.

ನವೀನ ಶಿಲಾಯುಗದ ಚಿತ್ರಕಲೆ

ಪ್ರಾಚೀನ ಶಿಲಾಯುಗವು ಕಳೆದು, ನವೀನ ಶಿಲಾಯುಗವು ಬಂದಂತೆಲ್ಲಾ ಮಾನವನ ಚಿತ್ರಕಲೆಯು ಹಿಂದಿನ ಯುಗದ ಸತ್ವ ಮತ್ತು ಶ್ರೇಣಿಯು ಇಳಿಯುತ್ತಾ ಅವನತಿಗೆ ಬಂದಿತು. ಹಿಂದಿನ ಯುಗದವರು ಬರೆದ ರೀತಿಯ ಮತ್ತು ಅವುಗಳಿ ಸಮನಾದ ಚಿತ್ರಕಲಾಕೃತಿಗಳಾವುವೂ ಈ ಯುಗದಲ್ಲಿ ದೊರೆಯುವುದಿಲ್ಲ. ಚಿತ್ರಗಳೆಲ್ಲಾ ಏನೋ ಸಾಂಪ್ರದಾಯಿಕವಾದ ಪದ್ಧತಿಯಿಂದ ಬರೆಯಲ್ಪಟ್ಟಿವೆ. ಪ್ರಾಣಿಗಳ ರೂಪಸಾದೃಶ್ಯಗಳನ್ನು ಪೂರ್ತಿಯಾಗಿಯೂ ವಿವರವಾಗಿಯೂ ಚಿತ್ರಿಸ ಆಯಾ ಪ್ರಾಣಿಗಳ ಗುರುತು ಸಿಗುವಂತೆ ಕೆಲವು ಮುಖ್ಯವಾದ ಅಂಗಗಳನ್ನು ಬಿಡಿ ಕೆಲವು ರೇಖೆಗಳಿಂದ ಶರೀರದ ರೂಪವು ಕಾಣುವಂತೆ ಬರೆಯಲಾರಂಭಿಸಿದ. ಮಾನವನು ಬರುಬರುತ್ತಾ ಸೋಮಾರಿಯಾಗಿ ಹಿಂದಿನವರ ಕಲಾಸಾಮರ್ಥ್ಯವನ್ನು ಸಂಪಾದಿಸಲಾಗಲಿಲ್ಲವೆಂದು ಹೇಳಲಾಗಿದೆ. ಇದಲ್ಲದೆ ಋತುವ್ಯತ್ಯಾಸಗಳಿ ಮಾನವನು ಸ್ಥಳದಿಂದ ಸ್ಥಳಕ್ಕೆ ವಲಸೆಹೋಗಬೇಕಾದ ಸಂದರ್ಭವು ಬಿದ್ದು ತನ್ನ ಕಲಾಪ್ರೌಢಿಮೆಯನ್ನು ಉತ್ತಮಪಡಿಸಿಕೊಳ್ಳಲು ಅಸಮರ್ಥನಾದನೆಂದು ಊಹಿಸಲಾಗಿದೆ. ಏನೇ ಆಗಲಿ, ಸಾವಿರಾರು ವರ್ಷಗಳಿಂದ ಈ ಕಲಾಪದ್ಧತಿಯ ಸೂತ್ರಸ ಪರಿಚಯವೇನೂ ಇಲ್ಲದೆ ಬರಿಯ ಪ್ರಕೃತಿಯಲ್ಲಿನ ಪ್ರಾಣಿಗಳ ಅವಲೋಕನ ಮಾತ್ರದಿಂದ ಅವುಗಳ ರೂಪಸಾದೃಶ್ಯವನ್ನು ಪೂರ್ಣವಾಗಿ ಇಳಿಸಬಲ್ಲ ಪ್ರೌಢಿಮೆಯನ್ನು ಸಂಪಾದಿಸಿದ ಆದಿಮಾನವನ ಚಿತ್ರಕಲೆಯು ಬರುಬರುತ್ತಾ ಹೀಗೆ ಅವನತಿಯನ್ನು ಹೊಂದಿದುದು ಆಶ್ಚರ್ಯವೇ ಸರಿ.

ಕಾಲನಿರ್ಣಯ

ಪ್ರಾಚೀನ ಚಿತ್ರಕಲೆಯ ಪರಿಚಯವು ಇಷ್ಟಾದ ಮೇಲೆ ಅವು ಪ್ರಾಕ್ತನ ಜನಾಂಗದವರದೋ ಅಥವಾ ಒಂದು ಆಧುನಿಕ ಜನಾಂಗದವರದೋ? ಇವು ಎಂತಹ ಪದಾರ್ಥಗಳನ್ನು ಉಪಯೋಗಿಸಿ ಈ ಚಿತ್ರಗಳನ್ನು ರಚಿಸಿದರು? ಅಷ್ಟು ಶ್ರಮವಹಿಸಿಯಾದರೂ ಆ ಚಿತ್ರಗಳನ್ನು ರಚಿಸುವ ಉದ್ದೇಶ್ಯವೇನಿತ್ತು? ಎಂಬ ಪ್ರಶ್ನೆಗಳು ಮೂಡುವುದು ಸ್ವಾಭಾವಿಕ. ಇವುಗಳ ಪ್ರಾಚೀನತೆಗೆ ಮುಖ್ಯವಾಗಿ ಎರಡು ಕಾರಣಗಳನ್ನು ಕೊಡಬಹುದು. ಈ ಪ್ರಾಚೀನ ಚಿತ್ರಕಲಾಕೃತಿಗಳೂ ಮತ್ತು

ಅವುಗಳನ್ನು ರಚಿಸಿದ್ದ ಗವಿಗಳೂ ಬಹಳ ಹಿಂದಿನಿಂದಲೂ ಪಾಚಿ ಮತ್ತು ಮಣ್ಣುಗಳಿಂದ ಮುಚ್ಚಲ್ಪಟ್ಟಿದ್ದು, ಅವುಗಳನ್ನೆಲ್ಲಾ ಅಗೆದು ಶೋಧಿಸಿದ ಮೇಲೆ ಅವುಗಳಲ್ಲಿಯೂ ಮತ್ತು ಗವಿಗಳಲ್ಲಿಯೂ ಚಿತ್ರಗಳು ಬರೆಯಲ್ಪಟ್ಟ ಕಾಲದ ನಾಗರಿಕತೆಯ ಆಯುಧಗಳು ಸಿಕ್ಕಿವೆ. ಇದರಿಂದ ಇವು ಈ ಆಯುಧಗಳ ಅಥವಾ ಅದಕ್ಕಿಂತ ಪೂರ್ವದಲ್ಲಿ ಚಿತ್ರಿಸಲ್ಪಟ್ಟ ಚಿತ್ರಗಳೆಂದು ಧಾರಾಳವಾಗಿ ಹೇಳಬಹುದು. ಕ್ಯಾಪ್‌ಬ್ಲಾಂಕ್, ಲಾಗ್ರೇಜ್, ಟೀಯಾಟ್, ಆಲ್ಟಮೈರ ಮುಂತಾದ ಗವಿಗಳಲ್ಲೆಲ್ಲಾ ಈ ಬಗೆಯ ನಿದರ್ಶನಗಳು ಸಿಕ್ಕಿ ಈ ಚಿತ್ರಗಳ ಕಾಲನಿರ್ಣಯವು ಮಾಡಲ್ಪಟ್ಟಿದೆ.

ಈ ಗವಿಗಳಲ್ಲಿ ಚಿತ್ರಿಸಲ್ಪಟ್ಟಿರುವ ಅನೇಕ ಪ್ರಾಣಿಗಳು ಭೂಮಿಯ ಮೇಲೆ ಬಹು ಕಾಲದಿಂದ ನಿರ್ನಾಮವಾಗಿವೆ. ಫ್ರಾನ್ಸಿನ ಫಾಂಟ್-ಡಿ-ಗಾಮ್ ಗವಿಯಲ್ಲಿ ಮ್ಯಾಮತ್ ಪ್ರಾಣಿಗಳು ಚಿತ್ರಿಸಲ್ಪಟ್ಟಿವೆ. ನವೀನ ಶಿಲಾಯುಗದ ವೇಳೆಗೆ ಮ್ಯಾಮತ್ ಪ್ರಾಣಿಗಳು ಭೂಮಿಯ ಮೇಲಿನಿಂದ ಅಳಿದುಹೋಗಿದ್ದವು. ಈಗ ಒಂದು ಶತಮಾನದ ಹಿಂದೆ ಇಂತಹ ಪ್ರಾಣಿಗಳಿದ್ದುವೆಂಬುದೇ ಪ್ರಪಂಚದಲ್ಲಾರಿಗೂ ಅರಿವಿರಲಿಲ್ಲ. ಇವಲ್ಲದೆ ಆಲ್ಟಮೈರಾ ಗವಿಯಲ್ಲಿ ಚಿತ್ರಿಸಲ್ಪಟ್ಟಿರುವ ಎಲ್ಕ್ ಮುಂತಾದ ಪ್ರಾಣಿಗಳೂ ಆಫ್ರಿಕಾದ ಕೆಲವು ಕಡೆಗಳಲ್ಲಿ ಚಿತ್ರಿಸಲ್ಪಟ್ಟಿರುವ ಮಾಸ್ಟೋಡಾನ್ ಮುಂತಾದ ಪ್ರಾಣಿಗಳೂ ಮನುಷ್ಯನು ಭೂಮಿಯ ಮೇಲೆ ಉದ್ಭವ ವಾಗುವುದಕ್ಕೆ ಪೂರ್ವದಲ್ಲಿಯೇ ಪ್ರಪಂಚದಿಂದ ನಿರ್ನಾಮವಾದುವೆಂದು ಭಾವಿಸಲ್ಪಟ್ಟಿದ್ದುವು. ಇದರಿಂದ ಈ ಚಿತ್ರಗಳು ಈ ಪ್ರಾಣಿಗಳ ಸಮಕಾಲೀನವಾಗಿರಬಹುದೆಂದು ಭಾವಿಸಬಹುದಾಗಿದೆ. ಇವಲ್ಲದೆ ಈ ಗವಿಗಳಲ್ಲಿನ ಕೆಲವು ಗೋಡೆಗಳ ಮೇಲೆಯೂ ಚಿತ್ರಗಳ ಮೇಲೆಯೂ ಬಹು ಪುರಾತನಕಾಲದ ಅಂದರೆ ಈ ಮಾನವರ ಅಥವಾ ಅದಕ್ಕೂ ಪೂರ್ವಕಾಲದಲ್ಲಿ ಭೂಮಿಯ ಮೇಲೆ ಜೀವಿಸಿದ್ದು ಈಗ ನಿಶ್ಶೇಷವಾಗಿರುವ "ಗುಹೆಯ ಕರಡಿ" ಮುಂತಾದ ಪ್ರಾಣಿಗಳು ತಮ್ಮ ನಖಗಳನ್ನು ಹರಿತಮಾಡಿಕೊಳ್ಳಲು ಉಜ್ಜಿದ ಗೀರುಗಳೂ ಗುರುತುಗಳೂ ಇವೆ. ನವೀನ ಶಿಲಾಯುಗದ ವೇಳೆಗಾಗಲೇ ಸಾಮಾನ್ಯವಾಗಿ ಈ ಗುಹೆಗಳಲ್ಲಿ ಬಹುಭಾಗದವುಗಳ ಮುಖಗಳು ಭೂವ್ಯತ್ಯಾಸಗಳಿಂದ ಮುಚ್ಚಿಹೋಗಿದ್ದು ಈಚೆಗೆ ಇವುಗಳ ಅರಿವು ಸಿಕ್ಕಿ ಶೋಧನೆಮಾಡಲ್ಪಟ್ಟಿರುವುದರಿಂದ ಈ ಚಿತ್ರಗಳು ಈ "ಗುಹೆ ಕರಡಿ" ಇತ್ಯಾದಿ ಪ್ರಾಣಿಗಳ ಅಥವಾ ಅವಕ್ಕೂ ಪೂರ್ವಕಾಲದವುಗಳಾಗಿರಬಹುದೆಂದು ಭಾವಿಸಬಹುದಾಗಿದೆ. ಇವಲ್ಲದೆ ಈ ಚಿತ್ರಗಳಿಗೆ ಉಪಯೋಗಿಸಲ್ಪಟ್ಟಿರುವ ಉಪಕರಣಗಳು ಅವುಗಳನ್ನು ಚಿತ್ರಿಸಿರುವ ರೀತಿ ಇವುಗಳಿಂದಲೂ ಪ್ರಾಚೀನ ಇತಿಹಾಸಜ್ಞರು ಅವುಗಳ ಕಾಲನಿರ್ಣಯ ಮಾಡಿರುತ್ತಾರೆ.

ಉಪಕರಣಗಳು


ಪ್ರಾಚೀನ ಚಿತ್ರಕಲೆಯಲ್ಲಿ ಉಪಯೋಗಿಸಿರುವ ಬಣ್ಣಗಳಲ್ಲಿ ಕಬ್ಬಿಣದ ಅದಿರು ಗಳು ಇಂಗಾಲಪೂರಿತವಾದ ಧಾತುಗಳು ಮತ್ತು ಸುದ್ದೆಮಣ್ಣು ಎಂದು ಕರೆಯ ಲ್ಪಡುವ ಬಿಳಿಯ ನಾಮ ಇವುಗಳು ಹೆಚ್ಚಾಗಿ ಉಪಯೋಗಿಸಲ್ಪಟ್ಟಿವೆ. ಇದರಲ್ಲಿ ಕಬ್ಬಿಣದ ಅದಿರಿನಿಂದ ಕೆಂಪು, ಅಚ್ಚಕೆಂಪು, ಚಂದ್ರಕಾವಿ, ಚಾಕೊಲೇಟ್ ಅಥವಾ ಕೆಂಪುಕಂದು ಮತ್ತು ಹಳದಿ ಈ ಬಣ್ಣಗಳು ದೊರೆತವು. ಇಂಗಾಲದ ಧಾತುಗಳಿಂದ ಕಪ್ಪು, ಸುದ್ದೆಮಣ್ಣಿನಿಂದ ಬಿಳುಪೂ ದೊರೆತವು. ಈ ಅದಿರುಗಳನ್ನಾಗಲಿ ಅಥವಾ ಧಾತುಗಳನ್ನಾಗಲಿ ಕುಟ್ಟಿ ಪುಡಿಮಾಡಿ, ಪ್ರಾಣಿಗಳ ಕೊಬ್ಬಿನಲ್ಲಿ ಕಲೆಸಿ ಉಪಯೋಗಿಸು ತ್ತಿದ್ದರು. ಈ ಬಣ್ಣಗಳನ್ನು ಹಚ್ಚಲು ಅವರು ಬಹಳ ಕೀಳ್ತರನಾದ ಅವರ ಸ್ವಂತ ತಯಾರಿಕೆಯ ಕುಂಚಗಳನ್ನು ಉಪಯೋಗಿಸುತ್ತಿದ್ದರೆಂದು ಊಹಿಸಲಾಗಿದೆ. ಬರಿಯ ಕೈಯಿಂದಲೂ ಮತ್ತು ಕೆಲವು ವೇಳೆ ಒಂದು ಕೋಲಿನ ತುದಿಗೆ ಚರ್ಮವನ್ನು ಸುತ್ತಿ ಅದನ್ನು ಬಣ್ಣದಲ್ಲಿ ಅದ್ದಿಕೊಂಡು ಅದರಿಂದಲೂ ಈ ಚಿತ್ರಗಳನ್ನು ಬರೆದಿರ ಬಹುದೆಂಬುದು ಇನ್ನು ಕೆಲವರ ಮತ. ನಮ್ಮಲ್ಲಿ ಹೆಂಗಸರು ಬಿದಿರಿನ ತುಂಡುಗಳ ಕೊನೆಯನ್ನು ಜಜ್ಜಿ ಅದರಿಂದ ಒರಟೊರಟಾದ ಕುಂಚವನ್ನು ಮಾಡಿಕೊಂಡು ಗೋಡೆಯ ಮೇಲೆ ಪಟ್ಟೆಗಳನ್ನೆಳೆಯುವುದನ್ನು ನೋಡಿದ್ದೇವೆ. ಹಾಗೆಯೇ ಪ್ರಾಕ್ತನ ಮಾನವರೂ ಯಾವುದೋ ಒಂದು ಬಗೆಯ ಒರಟು ಸಾಧನದಿಂದ ಈ ಚಿತ್ರಗಳನ್ನು ಬರೆದಿರಬಹುದೆಂದು ಊಹಿಸಲಾಗಿದೆ. ಇವರು ಉಪಯೋಗಿಸುತ್ತಿದ್ದ ಬಣ್ಣಗಳಿಗೆ ನಿದರ್ಶನವಾಗಿ ಇವರು ಬಣ್ಣಗಳನ್ನು ಕಲಸುತ್ತಿದ್ದ ಬಟ್ಟಲುಗಳೂ ಅವುಗಳನ್ನು ತುಂಬಿದ್ದ ಟೊಳ್ಳುಮೂಳೆಯ ತುಂಡುಗಳೂ ದೊರೆತಿವೆ. ಈ ಪ್ರಕೃತಿ ಸಂಬಂಧವಾದ ಬಣ್ಣಗಳೇ ಅಲ್ಲದೆ ಇವರು ಸಸ್ಯಸಂಬಂಧವಾದ ವರ್ಣಗಳನ್ನೂ ಉಪಯೋಗಿಸುತ್ತಿದ್ದಿರ ಬಹುದು. ಆದರೆ ಅವು ಬಹುಕಾಲ ನಿಲ್ಲಲು ಅಸಮರ್ಥವಾದ್ದರಿಂದ ನಶಿಸಿಹೋಗಿರ ಬಹುದು. ಇವರು ಈ ವರ್ಣಗಳನ್ನು ಬರಿಯ ಚಿತ್ರಕಲೆಗೇ ಅಲ್ಲದೆ, ಈಗಲೂ ಅನೇಕ ಅನಾಗರಿಕ ಕಾಡುಜನರು ಕೆಲವು ವಿಶೇಷ ಸಂದರ್ಭಗಳಲ್ಲಿ ಹಚ್ಚಿಕೊಳ್ಳುವಂತೆ ಮೈಗೆಲ್ಲಾ ಹಚ್ಚಿಕೊಳ್ಳುತ್ತಿದ್ದಿರಬಹುದು. ಇವರು ಚಿತ್ರಗಳನ್ನು ಪ್ರಾಣಿಸಂಬಂಧವಾದ ಕೊಬ್ಬು ಮುಂತಾದ ಪದಾರ್ಥಗಳನ್ನು ಉಪಯೋಗಿಸಿ ಬರೆದಿರುವುದರಿಂದ ಅವು ಸಾವಿರಾರು ವರ್ಷಗಳಿಂದಲೂ ಗುಹೆಗಳಲ್ಲಿ ಜಿನುಗುವ ನೀರು ಮತ್ತು ಅಲ್ಲಿಯ ಜೌಗು ಮುಂತಾದ ಪ್ರಾಕೃತಿಕ ಅಡಚಣೆಗಳನ್ನೆಲ್ಲಾ ಜಯಿಸಿ ಈಗಿನ ವರೆಗೂ ಬಾಳಿಕೊಂಡು ಬಂದಿವೆ.


ಪ್ರಾಚೀನ ಚಿತ್ರಕಲೆಯ ಉದ್ದೇಶ

ಮೊದಲೇ ಹೇಳಿದಂತೆ ಕಲೆಯು ಮನುಷ್ಯನ ಸೌಂದರ್ಯಾನುಭವದ ಪ್ರತಿಬಿಂಬ. ಈ ಮನುಷ್ಯರೂ ಅಂತೆಯೇ ಈ ಚಿತ್ರಗಳನ್ನು ರಚಿಸಿರಬಹುದೇ ಎಂಬುದನ್ನು ಈಗ ನೋಡಬೇಕಾಗಿದೆ. ಈ ಚಿತ್ರಕಲೆಯು ಮೇಲೆ ಹೇಳಿದಂತೆ ಇವರ ಸೌಂದರ್ಯಾನುಭವದ ಫಲವಾಗಿರಬಹುದು; ಅಥವಾ ನಾವು ಮನೆಗಳಲ್ಲಿ ಪಟಗಳನ್ನು ತಗಲುಹಾಕುವಂತೆ ತಮ್ಮ ನಿವಾಸಗಳನ್ನು ಅಲಂಕರಿಸುವ ದೃಷ್ಟಿಯಿಂದಲಾದರೂ ಇರಬಹುದು; ಅಥವಾ ಅವು ಮಾಯಾ ಮಂತ್ರ ತಂತ್ರ ಇತ್ಯಾದಿಗಳಿಗೆ ಸಂಬಂಧಿಸಿದ್ದರೂ ಇರಬಹುದು; ಅಥವಾ ಆಯಾ ಬುಡಕಟ್ಟಿನವರ ಹೆಗ್ಗುರುತಾಗಿ ಇದ್ದರೂ ಇರಬಹುದು. ಇವುಗಳನ್ನು ಹೀಗೆಯೇ ಸರಿ ಎಂದು ನಿರ್ಧರಿಸುವುದು ಕಷ್ಟ. ಮೊದಲನೆಯದಾಗಿ, ಇನ್ನೂ ಅಪಕ್ವ ಸ್ಥಿತಿಯಲ್ಲಿಯೇ ಇದ್ದ ಮಾನವನಲ್ಲಿ ಸೌಂದರ್ಯಾನುಭವದ ಶಕ್ತಿ ಇತ್ತೆ? ಆದರೆ ಆಗಲೇ ತನ್ನ ಹೆಂಡಿರು, ಮಕ್ಕಳು, ಬಂಧುಗಳು, ತನ್ನ ಆಯುಧಗಳು ಇತ್ಯಾದಿಗಳನ್ನು ನಿರ್ದೇಶಿಸಿ ಒಂದು ಸಮಾಜಜೀವನವನ್ನು ನಡೆಸಬಲ್ಲಷ್ಟು ಪ್ರಗತಿಹೊಂದಿದ್ದ ಮಾನವನು ಸೌಂದರ್ಯಾನುಭವವೆಂಬ ದೊಡ್ಡ ತತ್ವದೃಷ್ಟಿಯಿಂದಿಲ್ಲದಿದ್ದರೂ ವಿನೋದಕ್ಕಾದರೂ ತನ್ನ ಸುತ್ತಮುತ್ತಲೂ ಓಡಾಡುತ್ತಿದ್ದ ಪ್ರಾಣಿಗಳನ್ನು ಬಿಡುವೇಳೆಯಲ್ಲಿ ಅವುಗಳಂತೆ ಚಿತ್ರಿಸಲು ಪ್ರಯತ್ನಪಟ್ಟು ಅಂತೆಯೇ ಕಲೆಯಲ್ಲಿ ಮುಂದುವರೆದಿರಬಹುದು. ಈ ಸಂದೇಹವನ್ನು ಹೋಗಲಾಡಿಸಲು ಈ ಚಿತ್ರಕಲಾಕೃತಿಗಳಿರುವ ಗವಿಗಳು ಮತ್ತು ಚಿತ್ರಗಳು ಬರೆಯಲ್ಪಟ್ಟಿರುವ ರೀತಿ ಇವುಗಳನ್ನು ಅರ್ಥಮಾಡಿಕೊಂಡರೆ ಅನುಕೂಲವಾಗುವುದು.

ಪ್ರಾಚೀನ ಚಿತ್ರಗಳೆಲ್ಲವೂ ಸಾಮಾನ್ಯವಾಗಿ ಗವಿಗಳ ಒಳ ಹಿಂಪಾರ್ಶ್ವಗಳಲ್ಲಿಯೂ ಒಳಛಾವಣಿಗಳ ಮೇಲೆಯೂ ಬರೆಯಲ್ಪಟ್ಟಿವೆ. ಮನುಷ್ಯರು ಮಾತ್ರ ಒಳಗೆ ವಾಸಿಸದೆ ಗವಿಯ ಮುಂದಿನ ಭಾಗಗಳಲ್ಲಿ ವಾಸಿಸುತ್ತಿದ್ದಂತೆ ನಿದರ್ಶನಗಳು ದೊರೆತಿವೆ. ಇವರ ಚಿತ್ರಕಲೆಯು ಸಾಮಾನ್ಯವಾಗಿ ಹೀಗೆ ಭೂಗರ್ಭದಲ್ಲಿ ಹುದುಗಿದುದು ಮಾತ್ರವೇ ಅಲ್ಲದೆ ಮನುಷ್ಯನಿವಾಸಕ್ಕೂ ಪ್ರವೇಶಕ್ಕೂ ಅಸಾಧ್ಯವಾದ ಅನೇಕ ಕಡೆಗಳಲ್ಲಿದೆ. ಫಾಂಟ್-ಡಿ-ಗಾಮ್‌ನಂತಹ ದೊಡ್ಡ ಗವಿಯಲ್ಲಿ ಸುಮಾರು ಅರ್ಧದಾರಿಯು ಕಳೆಯುವವರೆಗೂ ಈ ಚಿತ್ರಗಳು ಪ್ರಾರಂಭವಾಗುವುದೇ ಇಲ್ಲ. ಕೊಬರೆಲ್ ಎಂಬ ಫ್ರಾನ್ಸಿನ ಗವಿಯು ಸುಮಾರು ೭೨೦ ಅಡಿಗಳ ಉದ್ದವಿದ್ದರೂ ಚಿತ್ರಗಳು ಪ್ರಾರಂಭವಾಗುವುದು ಮಾತ್ರ ಗವಿಯ ಮುಖವನ್ನು ಕಳೆದು ೩೬೦ ಅಡಿಗಳು ಹೋದನಂತರವೇ. ಸ್ಪೇನಿನ ಪಸೇಗಾ ಗವಿಗೆ ಪ್ರವೇಶಮಾಡಬೇಕಾದರೆ ನದಿಯ ದಡದಮೇಲೆ ೫೯೦ ಅಡಿಗಳು ಹತ್ತಿ ಅಲ್ಲಿ ಒಬ್ಬ ಮನುಷ್ಯನು ಮಾತ್ರ

ಹಿಡಿಸುವ ಕಿಂಡಿಯಿಂದ ಒಳಕ್ಕೆ ಜಾರಿ ಅನಂತರ ಗುಹೆಯ ತಳ ಸೇರಬೇಕು. ಟುಕ್-ಡ-ಆಡುಬ ಗವಿಗೆ ಪ್ರವೇಶಮಾಡಬೇಕಾದರೆ ಸುಮಾರು ೨೮೦ ಅಡಿಗಳಷ್ಟು ದೋಣಿಯಲ್ಲಿ ನೀರಿನ ಮೇಲೆ ಹೋಗಿ ಗುಹಾಪ್ರವೇಶಮಾಡಿ ಅನಂತರ ಅಂಬೆ ಗಾಲಿಟ್ಟುಕೊಂಡು ಹತ್ತಿ ಚಿತ್ರಗಳಿರುವೆಡೆಗೆ ಹೋಗಬೇಕಾಗುವುದು. ಫ್ರಾನ್ಸಿನ ನೋವೋ ಗವಿಯಲ್ಲಿ ಬಹು ಪ್ರಾಚೀನಕಾಲದಲ್ಲಿ ಒಂದು ಸರೋವರವಿದ್ದ ಕುರುಹು ಗಳಿವೆ. ಈಗಲೂ ೧೧೧೪ ಗಜಗಳಿಂದಾಚೆಗೆ ಆ ಗವಿಯಲ್ಲಿ ಹೋಗಬೇಕಾದಲ್ಲಿ ನೀರನ್ನು ಹಾಯಬೇಕಾಗುವುದು. ಗವಿಯ ಮುಖದಿಂದ ೬೦೦ ಗಜಗಳು ಕಳೆದ ನಂತರ ಚಿತ್ರಗಳು ಪ್ರಾರಂಭವಾಗುತ್ತವೆ. ಅಲ್ಟಮೈರಾ ಗವಿಯಲ್ಲಿ ಬೆನ್ನುಮೇಲೆ ಮಲಗಿಕೊಂಡು ಚಿತ್ರಗಳನ್ನು ನೋಡಬೇಕಾಗುವುದು. ಕೆಲವು ಗವಿಗಳಲ್ಲಿ ಚಿತ್ರಗಳು ಬಹಳ ಎತ್ತರದಲ್ಲಿ ಬರೆಯಲ್ಪಟ್ಟಿವೆ. ಕೆಲವು ಗವಿಗಳಿಗೆ ಪ್ರವೇಶಿಸಬೇಕಾದರೆ ಬಹಳ ಭಯಂಕರವಾದ ಕಮರಿಗಳಿಗೆ ಪ್ರವೇಶಿಸಬೇಕು. ಕೆಲವು ಗವಿಗಳಲ್ಲಿ ಚಿತ್ರಗಳನ್ನು ನೋಡಬೇಕಾದರೆ ಅಡ್ಡಡ್ಡಲಾಗಿ ನುಸಿಯಬೇಕು. ಕೆಲವು ಗವಿಗಳಲ್ಲಿ ತೆವಳಿಕೊಂಡು ಮತ್ತು ಶ್ರಮದಿಂದ ನುಸಿದುಕೊಂಡು ಹೋಗಿ ಚಿತ್ರಗಳನ್ನು ನೋಡಬೇಕು. ಫ್ರಾನ್ಸಿನ ಕೆಲವು ಗವಿಗಳಲ್ಲಿ ತಲೆಗೆ ಎಂತಹುದೋ ಒಂದು ಮುಖವಾಡವನ್ನು ಧರಿಸಿದ ಮತ್ತು ಬಾಲವನ್ನುಳ್ಳ ಒಂದು ವಿಚಿತ್ರ ಮನುಷ್ಯಾಕೃತಿಯ ಚಿತ್ರವಿದೆ. ಕೆಲವು ಗವಿಗಳಲ್ಲಿ [ನೋವೋ] ಬರೆಯಲ್ಪಟ್ಟ ಚಿತ್ರಗಳ ಮೇಲೆ, ವಿಚಿತ್ರವಾದ ಬಾಣದ ಮತ್ತು ಅದು ಹೊಡೆತದ ಕಲೆಗಳೂ ಇವೆ. ಮನುಷ್ಯನು ಇಷ್ಟು ಸಾಹಸದಿಂದಲೂ ತೊಂದರೆ ಗಳಿಂದಲೂ ಏಕೆ ಇಂತಹ ದುಸ್ಸಾಧ್ಯವಾದ ಜಾಗಗಳನ್ನಾರಿಸಿ ತನ್ನ ಚಿತ್ರಕಲೆಯನ್ನು ಪ್ರದರ್ಶಿಸಿದನು? ಈ ಮನುಷ್ಯರು ಇಂತಹ ದುಸ್ಸಾಧ್ಯವಾದ ಗವಿಗಳನ್ನು ಮೊಟ್ಟ ಮೊದಲು ಕಂಡು ಹಿಡಿದು ಪ್ರವೇಶಮಾಡಿದಾಗ ಎಷ್ಟು ಉತ್ಸಾಹ ವಿಸ್ಮಯ ಮತ್ತು ಭೀತಿಯಿಂದ ಕೂಡಿರಬಹುದು! ಲಾಪಸೇಗಾ ಗವಿಯಂತಹ ಗವಿಯಲ್ಲಿ ತೂರಲು ಒಂದು ಸಣ್ಣ ಕಿಂಡಿ; ಆಳವೆಷ್ಟೋ ಅರಿವಿಲ್ಲ. ಇಂತಹುದರಲ್ಲಿಯೂ ಧೈರ್ಯದಿಂದಾ ವನೋ ಕೈಯಲ್ಲಿ ಒರಟಾದ ದೀಪವನ್ನು ಹಿಡಿದು ಮುಂದೆ ನುಗ್ಗಿದುದು, ಅವನ ಸಂಗಡಿಗರು ದ್ವಾರದಲ್ಲಿ ಮಂಕಾದ ದೀಪಗಳನ್ನು ಮುಂದೆ ಹಿಡಿದುದು, ಸ್ವಸ್ಥವಾಗಿ ತಳವನ್ನು ಸೇರಿದನೋ ಇಲ್ಲವೋ ಎಂಬ ಚಿಂತೆ, ಇದಕ್ಕಾಗಿ ಏನಾದರೂ ಸದ್ದಾದೀತೇ ಎಂದು ಘಳಿಗೆಘಳಿಗೆಗೂ ಆಲೈಸುವುದು, ಗುಹಾಂತರದಲ್ಲಿ ಯಾವ ಪ್ರಾಣಿಯೋ ಏನು ಸೇರಿದೆಯೋ ಎಂಬ ಅರಿವಿಲ್ಲದ ಭೀತಿ, ತಳವನ್ನು ಸೇರಿದ ಸಂಗಡಿಗನ ಸ್ವಸ್ಥತೆಯು ಖಂಡಿತವಾದನಂತರ ತಾವು ಒಬ್ಬೊಬ್ಬರಾಗಿ ಒಳಗಿಳಿಯುವುದು, ಈ ಪರಿಶ್ರಮಗಳ ಸಾಹಸವನ್ನು ಅನುಭವಿಸಿದ ವಿನಾ ವರ್ಣಿಸಲಸಾಧ್ಯ.





ಚಿತ್ರ ೭. ಪ್ರಾಚೀನ ಚಿತ್ರಕಲೆಯಲ್ಲಿ ತಾಂತ್ರಿಕವಿದ್ಯೆಯ ಕುರುಹುಗಳು

೧. ನೋವೋ ಗವಿಯ ಬಾಣದ ಗುರುತಿರುವ ಕಾಡುಕೋಣದ ಚಿತ್ರ.

೨. ಅದೇ ಗವಿಯ ಇನ್ನೊಂದು ಕಾಡುಕೋಣದ ಚಿತ್ರ.

ಪ್ರಾಚೀನಮಾನವರು ಸೌಂದರ್ಯಾನುಭವವನ್ನು ಪ್ರದರ್ಶಿಸಲು ಚಿತ್ರಗಳನ್ನು ಬರೆಯಲಾರಂಭಿಸಿದ್ದಿದ್ದರೆ ತಾವು ವಾಸಿಸುವ ಭಾಗಗಳನ್ನು ಬಿಡು, ಎಲ್ಲಿಯೋ ಗುಹಾಂತರಗಳಲ್ಲಿಯೋ ಅಥವಾ ಹಾಗೆ ಶ್ರಮವನ್ನೂ ಲೆಕ್ಕಿಸದೆ ದುರ್ಗಮ ಪ್ರದೇಶಗಳಲ್ಲಿಯೋ ಪ್ರದರ್ಶಿಸಬೇಕೆ? ಸೌಂದರ್ಯಾನುಭವವನ್ನು ವ್ಯಕ್ತಪಡಿಸುವವರು ಇತರ ಚಿತ್ರಗಳ ಮೇಲೇಕೆ ಬರೆಯಬೇಕು? ಅಥವಾ ಬರೆದ ಚಿತ್ರದ ಮೇಲೆ ಏಕೆ ಬಾಣ

ಮುಂತಾದವುಗಳನ್ನು ಹಾಕಿ ಅವುಗಳ ಸೌಂದರ್ಯಕ್ಕೆ ಕುಂದು ತರಬೇಕು? ಅಲಂಕರಿಸುವ ಉದ್ದೇಶ್ಯವಿದ್ದಿದ್ದರೆ ತಾವು ವಾಸಿಸುವ ಭಾಗವನ್ನು ಬಿಟ್ಟು ಎಲ್ಲಿಯೋ ಮೂಲೆಗಳಲ್ಲಿ ಗುಹಾಂತರಗಳಲ್ಲಿಯೂ ಮತ್ತು ದುರ್ಗಮ ಪ್ರದೇಶಗಳಲ್ಲಿಯೂ ಚಿತ್ರಿಸಬೇಕೆ? ಇದರಿಂದ ಇವರ ಚಿತ್ರಕಲಾರಚನೆಗೆ ಮೇಲಿನ ಕಾರಣಗಳನ್ನು ಬಿಟ್ಟು ಬೇರಾವುದೋ ಕಾರಣಗಳಿರಬಹುದೆಂಬುದು ವ್ಯಕ್ತಪಡುತ್ತದೆ.

ಪ್ರಾಚೀನ ಮಾನವನು ಸಾಮಾನ್ಯವಾಗಿ ಮಾಡಿರುವ ಕಾರ್ಯಗಳೆಲ್ಲವೂ ಸ್ವಪ್ರಯೋಜನಕ್ಕೆ ಮಾಡಿರುವಂತಹವು. ಅವನ ಶಿಲಾಯುಧಗಳೆಲ್ಲವೂ ಅವನ ಆತ್ಮರಕ್ಷಣೆಗೂ ಪೋಷಣೆಗೂ ಮಾಡಿಕೊಂಡವುಗಳು. ಹಾಗೆಯೇ ಅವನ ಸಂಸ್ಕಾರ ಪದ್ಧತಿ ಇತ್ಯಾದಿಯೆಲ್ಲಾ ಆತ್ಮಸಂರಕ್ಷಣೆಗೇ ಮಾಡಿಕೊಂಡವುಗಳೆಂದು ಹೇಳಲಾಗಿದೆ. ಇವನು ಬರೆದಿರುವ ಚಿತ್ರಗಳೆಲ್ಲವೂ ಸಾಮಾನ್ಯವಾಗಿ ತಾನು ತಿನ್ನುತ್ತಿದ್ದ ಪ್ರಾಣಿಗಳವೇ ಆಗಿದೆ. ಇವನು ಬರೆದಿರುವ ಚಿತ್ರಗಳಲ್ಲಿ ಸಾಮಾನ್ಯವಾಗಿ ಒಂದು ಸ್ಥಳದಲ್ಲಿ ಒಂದೊಂದೇ ಪ್ರಾಣಿಯು ಬರೆಯಲ್ಪಟ್ಟಿದೆಯೇ ವಿನಾ ಅದರ ಜತೆಯಲ್ಲಿ ವಿವಿಧ ಭಾವಭಂಗಿಗಳಲ್ಲಿ ಇತರ ಪ್ರಾಣಿಗಳನ್ನಾಗಲಿ ಮನುಷ್ಯರನ್ನಾಗಲಿ ಸೇರಿಸಿ ಚಿತ್ರರಚನೆ ಮಾಡಿಲ್ಲ. ಇದಲ್ಲದೆ ಇವನು ಇನ್ನೊಬ್ಬ ಚಿತ್ರಗಾರನು ಬರೆದಿದ್ದ ಚಿತ್ರವು ಎಷ್ಟೇ ಸುಂದರವಾಗಿರಲಿ ತಾನು ಮಾಡುವ ಕಾರ್ಯದಿಂದ ಅದರ ಸೌಂದರ್ಯವು ಕೆಡಬಹುದೆಂದು ಲೆಕ್ಕಿಸದೆ ಗುಹೆಯಲ್ಲಿ ಸರಿಯಾದ ಪ್ರದೇಶವು ದೊರಕದಿದ್ದಲ್ಲಿ ಆ ಹಿಂದಿನ ಚಿತ್ರದ ಮೇಲೆಯೇ ಬರೆದಿದ್ದಾನೆ. ಇಷ್ಟು ಹಟದಿಂದಲಾದರೂ ಅವನು ಏಕೆ ಚಿತ್ರಗಳನ್ನು ಬರೆಯಬೇಕಾಗಿದ್ದಿತು? ಅದರಲ್ಲಿ ಏನೋ ಸ್ವಾರ್ಥ ಉದ್ದೇಶ್ಯವನ್ನು ಇಟ್ಟುಕೊಂಡು ಬರೆದಿದ್ದಾನೆ. ಇದಲ್ಲದೆ ಈ ಆದಿಮಾನವರು ಬರೆದಿರುವ ಕೆಲವೆಡೆಗಳಲ್ಲಿ ಪೂರೈಸಲ್ಪಟ್ಟ ಚಿತ್ರಗಳ ಮೇಲೆ ಬಾಣದ ಗುರುತುಗಳೂ ಅವುಗಳಿಂದ ಮಾಡಲ್ಪಟ್ಟ ಘಾತಗಳೂ ಇವೆ. ಎರಡನೆಯದಾಗಿ ಇವರ ಚಿತ್ರಕಲಾಕೃತಿಗಳು ಸಾಮಾನ್ಯವಾಗಿ ಕೆಲವುಕಡೆ ಇವರ ನಿವಾಸಸ್ಥಾನದಿಂದ ದೂರವಾಗಿ ಬಹು ದುರ್ಗಮವಾದ ಸ್ಥಾನಗಳಲ್ಲಿ ಚಿತ್ರಿಸಲ್ಪಟ್ಟಿವೆ. ಇದಲ್ಲದೆ ಕೆಲವು ಗವಿಗಳಲ್ಲಿ ಆಫ್ರಿಕದ ಮಂತ್ರವಾದಿಯಂತಹ ಚಿತ್ರಗಳೂ ಚಿತ್ರಿಸಲ್ಪಟ್ಟಿವೆ.

ಅನಾದಿಕಾಲದಿಂದಲೂ ಮಾನವನಲ್ಲಿ ಮೂಢನಂಬಿಕೆಯೂ ಶಕುನಸಾಲಾವಳಿಗಳೂ ಮಾಟಕೂಟಗಳೂ, ಆಚರಣೆಯಲ್ಲಿವೆ. ಅರಬ್ಬಿಯವರು ತಮ್ಮ ಕತ್ತರಿಸಿದ ಉಗುರುಗಳು ತಮ್ಮ ಶತ್ರುಗಳಿಗೆ ದೊರಕಿ ಅವರು ತಮಗೆ ಕೇಡುಮಾಡದಿರಲೆಂದು ಅವನ್ನು ಹೂಳುತ್ತಾರೆ. ನಮ್ಮಲ್ಲೂ ಮಾಟಕೂಟಗಳು ಮಾಡಬೇಕಾದವರು ತಾವು ಮಾಟ ಮಾಡಬೇಕಾದವನ ಒಂದು ಹಳೆಯ ಬಟ್ಟೆಯೋ ಪಾದರಕ್ಷೆಯೋ ಕೂದಲೋ ಅಥವಾ

ಅವನಂತಹದೇ ಒಂದು ಆಕೃತಿಯೋ ಯಾವುದನ್ನಾದರೂ ಪಡೆದು ಅವನಿಗೆ ಕೇಡುಂಟು ಮಾಡುವರೆಂದು ಪ್ರತೀತಿ. ಈಗಲೂ ಕೆಲವು ಅನಾಗರಿಕ ಕಾಡುಜನರು ಅವರ ಭಾವ ಚಿತ್ರವನ್ನು ತೆಗೆಯಲೊಪ್ಪುವುದಿಲ್ಲವಂತೆ. ಕಾರಣ, ಆ ಚಿತ್ರವನ್ನು ತೆಗೆದವನು ತಮ್ಮ ಜೀವಕಳೆಯನ್ನು ಎಳೆದುಬಿಟ್ಟಂತೆಯೂ ಅದು ತಮ್ಮ ಶತ್ರುಗಳಿಗೆ ಸಿಕ್ಕಿ ತಮಗೆ ಕೇಡುಂಟಾಗುವುದೆಂದೂ ಅವರ ಭೀತಿ. ಇದೇ ಅಭಿಪ್ರಾಯವನ್ನು ನಮ್ಮ ದೇಶದ ಪೂರ್ವಿಕರು ವ್ಯಕ್ತಪಡಿಸುತ್ತಿದ್ದರು. ಆಫ್ರಿಕದ ಮೂಲವಾಸಿಗಳ ಮಂತ್ರವಾದಿಯು ಯಾರಿಗೆ ಕೇಡೆಣಿಸಬೇಕಾದರೂ ಅವನ ಜೀವಕಳೆಯನ್ನು ಪೂರ್ತಿಯಾಗಿ ಆಕರ್ಷಿಸ ಬಲ್ಲನೆಂದು ಪ್ರತೀತಿ. ಹಾಗೆಯೇ ಈ ಪ್ರಾಕ್ತನ ಮಾನವರೂ ಈ ಚಿತ್ರಗಳನ್ನು ತಮ್ಮ ತಾಂತ್ರಿಕ ವಿದ್ಯಾಸಾಧನವನ್ನಾಗಿ ಉಪಯೋಗಿಸಿಕೊಂಡಿರಬಹುದು.

ಬೇಟೆಯಾಡುವ ಪೂರ್ವದಲ್ಲಿ ತಾವು ಬೇಟೆಯಾಡುವ ಪ್ರಾಣಿಯ ಜೀವಸದೃಶ ವಾದ ಆಕೃತಿಯನ್ನು ಬರೆದು ತಮ್ಮ ಮಂತ್ರವಾದಿಗಳಿಂದ ಅದರ ಜೀವಕಳೆಯ ನ್ನಾಕರ್ಷಿಸಿ, ತಾವು ಬೇಟೆಯಾಡುವಾಗ ಮೃಗಸಂಹಾರಮಾಡುವ ರೀತಿಯಲ್ಲಿ ಈ ಚಿತ್ರವನ್ನೂ ಬೇಟೆಯಾಡಿ ತನ್ಮೂಲಕ ತಮ್ಮ ಉದ್ದೇಶವನ್ನು ಸುಲಭರೀತಿಯಲ್ಲಿ ಸಾಧಿಸಿಕೊಳ್ಳಬಹುದೆಂದು ಅವರು ಬಗೆದಿರಬಹುದು. ಅದರಂತೆಯೇ ಚಿತ್ರಗಳಮೇಲಿನ ಘಾತಗಳೂ ಈ ಬಾಲವುಳ್ಳ ಮುಖವಾಡಪೂರಿತವಾದ ಮಾನವಾಕೃತಿಯೂ ಇದನ್ನೇ ಸಮರ್ಥಿಸುತ್ತವೆ. ಈ ಮಾನವರು ಈ ಚಿತ್ರಗಳನ್ನು ಬರೆದಿರುವ ರೀತಿ ಸ್ಥಳ ಮುಂತಾದವುಗಳನ್ನು ವಿವರವಾಗಿ ಪರಿಶೀಲಿಸಿದವನಾವನೇ ಆಗಲಿ ಇವರ ಕಲೆಯು ಇವರ ತಾಂತ್ರಿಕವಿದ್ಯಾಸಾಧನವೇ ವಿನಾ ಇವರ ಸೌಂದರ್ಯಾನುಭವದ ಫಲವಲ್ಲ ವೆಂಬುದನ್ನು ನಿರ್ಧರಿಸಬಹುದು.

ಕ್ಯಾಪ್ಸಿಯರ್ ನಾಗರಿಕತೆಯ ಚಿತ್ರಗಳು ಮೇಲೆ ಹೇಳಿದ ವಿಷಯಗಳಿಂದ ತೀರ ಭಿನ್ನವಾಗಿವೆ. ಈ ಕಾಲದ ಚಿತ್ರಗಳು ಶಿಲಾಶ್ರಯಗಳಲ್ಲಿ ಸಾಮಾನ್ಯವಾಗಿ ಮನುಷ್ಯರು ವಾಸಿಸುವ ಕಡೆಗಳಲ್ಲಿಯೇ ಇವೆ. ಒಂದೊಂದೇ ಚಿತ್ರಗಳಿರದೆ ಒಟ್ಟಾಗಿ ವಿವಿಧ ಭಾವಭಂಗಿಗಳಲ್ಲಿ ಬೇಟೆ ಕುಣಿತ ಎಂದು ಮುಂತಾಗಿ ಚಿತ್ರರಚನೆಮಾಡ ಲ್ಪಟ್ಟಿವೆ; ಮತ್ತು ಮೇಲೆ ಹೇಳಿದಂತೆ ಚಿತ್ರಗಳ ಮೇಲೆ ಬಾಣಘಾತಗಳಾಗಲಿ ಅಥವಾ ಇತರ ತಾಂತ್ರಿಕ ಸಾಧನದ ಗುರುತುಗಳಾಗಲಿ ಇಲ್ಲ. ಈ ಚಿತ್ರಗಳನ್ನು ನೋಡಿದರೆ ಪ್ರಾಚೀನ ಮಾನವನು ಬರಿಯ ತಾಂತ್ರಿಕಸಾಧನೆಯೊಂದೇ ಅಲ್ಲದೆ ಪ್ರಕೃತಿ ಸೌಂದರ್ಯಾನುಭವದಿಂದುಂಟಾದ ಕಲಾಭಿರುಚಿಯನ್ನೂ ವ್ಯಕ್ತಪಡಿಸುತ್ತಿದ್ದನೆಂದು ಹೊಳೆಯದಿರದು. ಈ ಚಿತ್ರಗಳ ಕಾಲನಿರ್ಣಯವು ಇನ್ನೂ ಸಂದಿಗ್ಧವಾಗಿರು ವುದರಿಂದ ಇವು ಆರಿನೇಷಿಯರ್ ಕಾಲಕ್ಕೆ ಸೇರಿದವುಗಳೋ ಅಥವಾ ಅವಕ್ಕಿಂತ

ಈಚಿನವುಗಳೋ ಹೇಳುವುದು ಕಷ್ಟ. ಆದರೆ ಕಾಲವಾವುದೇ ಆಗಲಿ, ಈ ಚಿತ್ರಗಳು ಪ್ರಾಕ್ತನ ಮಾನವರಲ್ಲಿ ಸ್ವಲ್ಪ ಪ್ರಗತಿಹೊಂದಿದವರ ಕೈವಾಡವೆಂದು ಧಾರಾಳವಾಗಿ ಹೇಳಬಹುದು. ಒಟ್ಟಿನಲ್ಲಿ ಹೇಳುವುದಾದರೆ ಪ್ರಾಕ್ತನಮಾನವರು ಸಾಮಾನ್ಯವಾಗಿ ಚಿತ್ರಕಲೆಯನ್ನು ತಮ್ಮ ತಾಂತ್ರಿಕ ವಿದ್ಯಾಸಾಧನವನ್ನಾಗಿ ಉಪಯೋಗಿಸುತ್ತಿದ್ದರು. ಅವರಲ್ಲಿ ಪ್ರಗತಿಪರರಾದವರು ತಮ್ಮ ಕಲಾಭಿರುಚಿಯಿಂದಲೂ ಚಿತ್ರಗಳನ್ನು ಬರೆಯುತ್ತಿದ್ದರು.

ಪ್ರಾಚೀನ ಚಿತ್ರಕಲೆಯ ಪರಿಚಯವಾಯಿತು, ಅದನ್ನು ಚಿತ್ರಿಸಿದ ರೀತಿಯೂ ಉದ್ದೇಶ್ಯವೂ ಸಿರ್ಧರವಾಯಿತು. ಇಷ್ಟಾದ ಮೇಲೆಯೂ ಒಂದು ಸಣ್ಣ ಸಂದೇಹವು ಮೂಡುತ್ತದೆ. ಈ ಚಿತ್ರಕಲಾಕೃತಿಗಳನ್ನು ರಚಿಸಿದವರ ಉದ್ದೇಶ್ಯವೇನೇ ಇರಲಿ, ಅವರು ಎಂತಹ ಒರಟಾದ ಉಪಕರಣಗಳನ್ನೇ ಉಪಯೋಗಿಸಿರಲಿ, ಕಲೆಯ ರೀತಿಯಲ್ಲಿಯೂ ಶೈಲಿಯಲ್ಲಿಯೂ ವರ್ಣವಿನ್ಯಾಸ ರೇಖಾವಿನ್ಯಾಸಗಳಲ್ಲಿಯೂ ಮಾನವನ ಇತರ ಕಲೆ, ಕೈಗಾರಿಕೆ, ಉಡುಪು, ವಿದ್ಯೆ, ಮುಂತಾದವುಗಳಲ್ಲಿ ಆಗಿರುವಷ್ಟು ಪ್ರಗತಿಯುಂಟಾಗಿದೆಯೆ? ಚಳಿಗಾಳಿಗಳಲ್ಲಿ ನಡುಗುತ್ತಿದ್ದು, ಗವಿಗಳಲ್ಲಿ ವಾಸಮಾಡುತ್ತಾ ಕಾಲ ನೂಕುತ್ತಿದ್ದವರ ವಂಶಜರು ಇಂದು ಅತ್ಯದ್ಭುತ ಸೌಧಗಳಲ್ಲಿ ವಾಸಮಾಡುತ್ತಿದ್ದಾರೆ. ನಗ್ನಾವಸ್ಥೆಯಿಂದ ಚಳಿಯನ್ನು ತಾಳಲಾರದೆ ಮೃಗಚರ್ಮವನ್ನು ಹೊದೆಯುತ್ತಿದ್ದವನ ವಂಶಜರು ಇಂದು ಉತ್ತಮವಾದ ಸೊಗಸಾದ ಬಟ್ಟೆಬರೆಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಹಸಿವಿನ ಬಾಧೆಯನ್ನು ತಾಳಲಾರದೆ ಬೇಟೆಯಾಡಿ ಹಸಿಮಾಂಸವನ್ನುಣ್ಣುತ್ತಿದ್ದವನ ವಂಶಜರು ಇಂದು ರುಚಿಕರವಾದ ಭಕ್ಷ್ಯಭೋಜ್ಯಗಳನ್ನುಣ್ಣುತ್ತಿದ್ದಾರೆ. ಭಯಂಕರವಾದ ಕಾಡುಮೃಗಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಕಲ್ಲಿನ ಆಯುಧಗಳನ್ನುಪಯೋಗಿಸುತ್ತಿದ್ದವನ ವಂಶಜರು ತಮ್ಮವರಿಂದಲೇ ಆತ್ಮರಕ್ಷಣೆಮಾಡಿಕೊಳ್ಳಲು ಊಹಿಸಲಸಾಧ್ಯವಾದ ಅತ್ಯಾಧುನಿಕ ಶಸ್ತ್ರಸಲಕರಣೆಗಳನ್ನುಪಯೋಗಿಸುತ್ತಿದ್ದಾರೆ. ಮೃಗಧ್ವನಿಯನ್ನನುಕರಿಸಿ ಭಯಂಕರವಾಗಿ ಅರಚುತ್ತಿದ್ದವನ ವಂಶಜರು ಇಂದು ಇಂಪಾದ ಗಾನವನ್ನು ಹಾಡುತ್ತಿದ್ದಾರೆ. ಆದರೆ ಚಿತ್ರಕಲೆಯಲ್ಲಿ? ಅದರ ಉಪಕರಣಗಳಲ್ಲಿ ಬದಲಾವಣೆಯಿರಬಹುದು; ಭಾವ ಮತ್ತು ವಿನ್ಯಾಸ ಕ್ರಮಗಳಲ್ಲಿ ಪ್ರಗತಿಯೆಷ್ಟಾಗಿದೆ? ಇವರ ಕಲೆಯಲ್ಲಿ ಪಾಶ್ಚಾತ್ಯ ಪದ್ಧತಿಯ ಚಿತ್ರಗಳಿಗೆ ಸರಿಸಮನಾದ ಚಿತ್ರಗಳೂ ಪ್ರಾಚ್ಯಪದ್ಧತಿಯ ಚಿತ್ರಗಳೂ ಆಧುನಿಕ ಭಾವನಾಪ್ರಧಾನವಾದ ಪದ್ಧತಿಯ ಚಿತ್ರಗಳೂ ದೊರೆಯುತ್ತವೆ. ಆದರೆ ಈ ಕಲೆಯಲ್ಲಿ ಸಾಕಾದಷ್ಟು ಪ್ರಗತಿಯುಂಟಾಗಿದೆಯೇ? ಎಂಬ ಪ್ರಶ್ನೆಯು ಮಾತ್ರ ನಿಂತಿದೆ.

ಬಿ. ವಿ. ಕೆ. ಶಾಸ್ತ್ರಿ

ನಮ್ಮ ಭೂಮಿ

(ದೀಪಾವಳಿಯ ಸಂಚಿಕೆ, ಪುಟ ೩೩ ರಿಂದ ಮುಂದುವರಿದು ಮುಗಿದಿದೆ)

ಭೂಮಿಯು ವಯಸ್ಸು

ಯಾವ ರೀತಿಯಿಂದಲಾದರೂ ಆಗಲಿ ಭೂಮಿಯು ಹುಟ್ಟಿ ಎಷ್ಟು ಕಾಲವಾಯಿತು? ಇದನ್ನು ಖಚಿತವಾಗಿ ಗೊತ್ತುಮಾಡಲು ಸಾಧ್ಯವೆ? ಎಂಬ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಹೇಳುವುದು ಸ್ವಲ್ಪ ಕಷ್ಟವಾಗುವುದು. ಭೂಮಿಯ ಹುಟ್ಟಿನಂತೆಯೆ ಇದರ ವಯಸ್ಸಿನ ವಿಷಯದಲ್ಲಿಯೂ ಅನೇಕ ಅಭಿಪ್ರಾಯಗಳಿವೆ. ಇವುಗಳಲ್ಲಿ ಒಂದರಿಂದ ಮತ್ತೊಂದಕ್ಕೆ ಹೋದಂತೆಲ್ಲಾ ಭೂಮಿಯ ವಯಸ್ಸು ಹೆಚ್ಚುತ್ತಾ ಹೋಗಿ ಅದರ ಪ್ರಾಚೀನತೆಯನ್ನು ತೋರಿಸುತ್ತದೆ. ಜ್ಯೋತಿರ್ಮಯ ಸೂರ್ಯನಿಂದ ಬೇರೆಯಾದ ಭೂಮಿಗ್ರಹವು ಅನಿಲರೂಪದಿಂದ ಆರಿ ಗಟ್ಟಿಯಾದ ಹೊರಚಿಪ್ಪನ್ನು ಹೊಂದಲು ಬೇಕಾದ ಕಾಲವನ್ನು ಖಂಡಿತವಾಗಿ ಹೇಳುವಷ್ಟು ಸಾಧನಗಳು ದೊರೆತಿಲ್ಲ. ಆದರೂ ಈ ವಿಷಯದಲ್ಲಿ ವಿಜ್ಞಾನಿಗಳು ಪ್ರಯತ್ನಗಳನ್ನು ನಡೆಸಿದ್ದಾರೆ. ಭೂಮಿಯು ಹೊರಗಿನ ಚಿಪ್ಪು ರೂಪಗೊಂಡು, ಈಗಿನಂತೆ ವಾಯುಮಂಡಲ ಮತ್ತು ನೀರಿನ ಭಾಗಗಳು ಏರ್ಪಟ್ಟ ಅನಂತರದ ಕಾಲವನ್ನು ಸುಲಭವಾಗಿ ಗೊತ್ತುಮಾಡಬಹುದಾಗಿದೆ.

೧೭ನೆಯ ಶತಮಾನದಲ್ಲಿ ಅಷರ್ ಎಂಬ ಕ್ರೈಸ್ತ ಪಾದ್ರಿಯು ಬೈಬಲ್ ಗ್ರಂಥದ ಅನುಕ್ರಮಣಿಕೆಯನ್ನು ಬರೆಯುವಾಗ ಪ್ರಪಂಚವು ಕ್ರಿ.ಪೂ. ೪೦೦೪ರಲ್ಲಿ ಜನಿಸಿತೆಂದು ಹೇಳಿದ್ದಾನೆ. ಪ್ರಪಂಚದ ನಾಗರಿಕತೆಯ ಚರಿತ್ರೆಯನ್ನು ಪರಿಶೀಲಿಸಿದರೆ, ಫಲವತ್ತಾದ ಏಷ್ಯಾಖಂಡದ ಪ್ರದೇಶದಲ್ಲಿಯೂ ಮತ್ತು ನೈಲು ನದಿಯು ಹರಿಯುವ ಕಣಿವೆಗಳಲ್ಲಿಯೂ (ಈಜಿಪ್ಟ್ ದೇಶ) ಜನಸಾಂದ್ರತೆಯಿಂದಿದ್ದ ಪಟ್ಟಣಗಳು ಕ್ರಿ.ಪೂ. ೫೦೦೦ ವರ್ಷಗಳಿಗೂ ಹಿಂದಿದ್ದುವೆಂದು ಗೊತ್ತಾಗಿದೆ. ಇನ್ನು ವಿಜ್ಞಾನ ವಿಷಯ ಶೋಧನೆಗಳನ್ನು ತಿಳಿಯಲಪೇಕ್ಷಿಸಿದರೆ ಈ ಸುಮಾರು ೬,೦೦೦ ವರ್ಷಗಳ ಕಾಲವು ಯಾವ ಗಣನೆಗೂ ಬರುವುದಿಲ್ಲ. ಇವುಗಳ ಆಧಾರದ ಮೇಲೆ ಭೂಮಿಯು ಕ್ರಿ.ಪೂ. ೪೦೦೪ರಲ್ಲಿ ಹುಟ್ಟಿತೆಂದರೆ ಹಾಸ್ಯಾಸ್ಪದವಾಗುವುದು.

ಪ್ರಸಿದ್ಧ ವಿಜ್ಞಾನಿಯಾದ ಲಾರ್ಡ್ ಕೆಲ್ವಿನ್ನನು (೧೮೬೨) ಸೂರ್ಯನ ಶಾಖ ಪ್ರಮಾಣಶೋಧನೆಗಳಿಂದ, ಸೂರ್ಯನು ೨ ಕೋಟಿ ವರ್ಷಗಳ ಹಿಂದಿದ್ದಿರಬೇಕೆಂದು

ಹೇಳಿ, ಅದೇ ಕಾಲವು ಭೂಮಿಗೂ ಸಲ್ಲುವುದೆಂದು ಅಭಿಪ್ರಾಯಪಟ್ಟನು. ಈ ಸಂಶೋಧನೆಯು ಸೂರ್ಯನ ಹೊರಮೈಯ ಉಷ್ಣತೆಯು ಕಡಿಮೆಯಾಗುತ್ತಿರುವುದರ ಮೂಲಕ ಗೊತ್ತುಮಾಡಲ್ಪಟ್ಟಿತು. ಕೆಲ್ವಿನ್ನನ ಶೋಧನೆಯಿಂದ ಗೊತ್ತಾದ ಮೂರು ಕೋಟಿ ವರ್ಷಗಳ ಕಾಲವು ಮನುಷ್ಯನ ನಿತ್ಯಜೀವನದಲ್ಲಿ ಬಹಳ ಹೆಚ್ಚಾಗಿ ಕಾಣುವುದಾದರೂ ಭೂಶಾಸ್ತ್ರಜ್ಞರಿಗೆ ಇದು ಅತಿ ಕಡಿಮೆಯಾಗಿ ಕಂಡುಬಂದಿತು. ಕೆಲವು ಕಲ್ಲುಗಳ ರಚನೆಗೆ ಇದಕ್ಕಿಂತಲೂ ಹೆಚ್ಚಿನ ಕಾಲ ಹಿಡಿದಿರಬೇಕೆಂದು ಗೊತ್ತಾಗಿದೆ. ಈ ಕಾರಣದಿಂದ ಭೂವಿಜ್ಞಾನಿಗಳು ಬೇರೆ ಪ್ರಮಾಣಗಳಿಂದ ಭೂಮಿಯ ವಯಸ್ಸನ್ನು ಅಳೆಯಲು ಪ್ರಯತ್ನಮಾಡಿದರು. ಫಿಲಿಪ್ಸ್ ಎಂಬಾತನು ಸಾಗರ, ಸಮುದ್ರ, ಸರೋವರ ಮುಂತಾದ ಜಲಾಶಯಗಳಲ್ಲಿ ರೂಪಗೊಳ್ಳತಕ್ಕ ಜಲಶಿಲೆಗಳ ಮಂದವನ್ನು ಕಂಡುಹಿಡಿದು, ಭೂಮಿಯ ವಯಸ್ಸು ಸುಮಾರು ೪ಕೋಟಿ ವರ್ಷಗಳಿರಬೇಕೆಂದು ತಿಳಿಸಿದನು. ಒಂದು ಅಡಿ ದಪ್ಪನಾದ ಜಲಶಿಲೆಯಾಗಲು ೧೦೦ ವರ್ಷಗಳ ಕಾಲವು ಬೇಕೆಂದು ಗೊತ್ತಾಗಿದೆ. ಸರ್ ಆರ್ಕಿಬಾಲ್ಡ್ ಗೀಕಿ ಎಂಬ ಭೂಶಾಸ್ತ್ರಜ್ಞನು (೧೮೭೯) ಪ್ರಪಂಚದಲ್ಲಿನ ಜಲಶಿಲೆಗಳ ಒಟ್ಟು ಮಂದವು ಸುಮಾರು ೮,೦೦,೦೦೦ ಅಡಿಗಳಿರಬೇಕೆಂದು ಕಂಡುಹಿಡಿದು ಭೂಮಿಯ ವಯಸ್ಸು ೧೦ಕೋಟಿ ವರ್ಷಗಳಾದರೂ ಇರಬೇಕೆಂದು ತಿಳಿಸಿದ್ದಾನೆ. ಪೌಲ್ಟನ್ (೧೮೯೬) ಎಂಬ ವಿಜ್ಞಾನಿಯು ತನ್ನ ಶೋಧನೆಯನ್ನು ಪ್ರಾಣಿ ಮತ್ತು ಸಸ್ಯವರ್ಗಗಳ ಬೆಳವಣಿಗೆಯ ಆಧಾರದಮೇಲೆ ಗೊತ್ತುಮಾಡಿ ಭೂಮಿಯು ೫೦ಕೋಟಿ ವರ್ಷಗಳ ಹಿಂದಿನಿಂದಿರಬೇಕೆಂದು ಸೂಚಿಸಿದನು.

೧೯೦೦ರಲ್ಲಿ ಈ ಪ್ರಶ್ನೆಯನ್ನು ಬೇರೊಂದು ದೃಷ್ಟಿಯಿಂದ ಪರಿಶೀಲಿಸಲಾಯಿತು. ಜಾಲಿ ಮತ್ತು ಸೊಲಾಸ್ ಎಂಬ ಭೂವಿಜ್ಞಾನಿಗಳು ಸಮುದ್ರದ ನೀರಿನಲ್ಲಿರುವ ಉಪ್ಪಿನ ಪ್ರಮಾಣದಿಂದ ಭೂಮಿಯು ಯಾವಾಗ ಹುಟ್ಟಿತೆಂದು ತಿಳಿಯಲು ಯತ್ನಿಸಿದರು. ಇವರ ಅಭಿಪ್ರಾಯದಂತೆ ಪ್ರಾರಂಭದಲ್ಲಿನ ಜಲಾಶಯಗಳಲ್ಲಿದ್ದ ನೀರು ಲವಣರಹಿತವಾಗಿದ್ದಿರಬೇಕೆಂದು ತಿಳಿಯುವುದು. ಭೂಮಿಯ ಮೇಲೆ ಹರಿದು ಸಮುದ್ರಕ್ಕೆ ಸೇರುವ ನದಿಗಳು ಸ್ವಲ್ಪಭಾಗ ಉಪ್ಪನ್ನು ಕರಗಿದ ರೂಪದಿಂದ ಸಮುದ್ರದ ನೀರಿಗೆ ಸೇರಿಸುತ್ತವೆ. ಸೂರ್ಯರಶ್ಮಿಯಿಂದ ಸಮುದ್ರದ ನೀರು ಆವಿಯಾಗಿ ರೂಪಾಂತರ ಹೊಂದುವಾಗ ಅದರಲ್ಲಿನ ಉಪ್ಪಿನ ಭಾಗವು ಹಿಂದುಳಿಯುವುದು. ಈ ರೀತಿಯಿಂದ ಸಮುದ್ರದ ನೀರಿನಲ್ಲಿ ಉಪ್ಪಿನ ಭಾಗವು ದಿನದಿನಕ್ಕೂ ಹೆಚ್ಚುತ್ತದೆ. ಉಪ್ಪಿನ ಈ ಆಧಿಕ್ಯವನ್ನು ಕ್ಲ್ಪ್ತಕಾಲದಲ್ಲಿ ಗೊತ್ತುಮಾಡಿ, ಸಮುದ್ರದ ನೀರಿನಲ್ಲಿ ಈಗಿರತಕ್ಕ ಸರಾಸರಿ ಉಪ್ಪಿನ ಭಾಗವು ಕಲೆಯಲು ಬೇಕಾಗಿರತಕ್ಕ ಕಾಲವು ಸುಮಾರು ೧೫ ಕೋಟಿ ವರ್ಷಗಳಿರಬೇಕೆಂದು ಗೊತ್ತುಮಾಡಿದ್ದಾರೆ.

ಮೊದಲನೆಯ ಕ್ರಿ.ಪೂ. ೪೦೦೪ ವರ್ಷಗಳ ನಂಬಿಕೆಯನ್ನು ಗಣನೆಗೆ ತರದೆ ಹೋದರೆ ಕ್ರಿ.ಶ. ೧೮೬೨ರಿಂದ ೫೦ ವರ್ಷಗಳಲ್ಲಿ ನಡೆದ ಶೋಧನೆಗಳಿಂದ ಭೂಮಿಯ ವಯಸ್ಸನ್ನು ೩ ಕೋಟಿ ವರ್ಷಗಳಿಂದ ೫೦ ಕೋಟಿ ವರ್ಷಗಳಿಗೆ ಹೆಚ್ಚಿಸಿದ್ದಾರೆ. ಆದರೆ ಈಚಿನ ಕೆಲವು ಶೋಧನೆಗಳಿಂದ ಈ ೫೦ ಕೋಟಿ ವರ್ಷಗಳ ಕಾಲವೂ ಸಹ ಕಡಿಮೆಯಾಗಿ ಕಂಡುಬಂದಿದೆ. ರೇಡಿಯಂ ಧಾತುವನ್ನು ಹೊಂದಿರುವ ಖನಿಜಗಳಿಂದ ನೂತನವಾದ ಕೆಲವು ಅಂಶಗಳು ಗೊತ್ತಾಗಿವೆ. ರೇಡಿಯಂ ವರ್ಗದ ಮೂಲಧಾತುಗಳು ಸ್ವಭಾವವಾಗಿ ಒಡೆದು ಅನೇಕ ಮೂಲಧಾತುಗಳಾಗುತ್ತವೆ. ಇವುಗಳಲ್ಲಿ ಯುರೇನಿಯಂ ಮತ್ತು ಥೋರಿಯಂ ಧಾತುಗಳು ಮುಖ್ಯವಾದುವು. ಯುರೇನಿಯಂ ಧಾತುವು ರೂಪಾಂತರ ಹೊಂದಿ ಅನೇಕ ಮಾರ್ಪಾಟುಗಳಾದನಂತರ ಕೊನೆಯಲ್ಲಿ ಸೀಸವಾಗುತ್ತದೆ. ಈ ಭೇದ ಹೊಂದಲು ಬೇಕಾಗತಕ್ಕ ಕಾಲವು ಸರ್ವ ಸನ್ನಿವೇಶಗಳಲ್ಲಿಯೂ ಒಂದೇ ರೀತಿಯಿಂದಿರುತ್ತದೆ. ಯುರೇನಿಯಂನಂತೆ ರೇಡಿಯಂ ಧಾತುವು ಸುಮಾರು ೧೬೦೦ ವರ್ಷಗಳಲ್ಲಿ ಪೂರ್ವದ ಅರ್ಧಭಾಗದಷ್ಟು ರೂಪಾಂತರಹೊಂದುವುದು. ಈ ಆಧಾರಗಳಿಂದಲೂ ಮತ್ತು ಯುರೇನಿಯಂನಿಂದಾದ ಸೀಸದ ಪ್ರಮಾಣಗಳಿಂದಲೂ ಭೂಮಿಯ ಮೇಲಿರುವ ಕೆಲವು ಕಲ್ಲುಗಳು ಕಡೆಯಪಕ್ಷ ೧೫೦ ಕೋಟಿ ವರ್ಷಗಳ ಹಿಂದಿದ್ದಿರಬೇಕೆಂದು ಹೇಳಬಹುದು. ಪಿಚ್‌ಬ್ಲೆಂಡ್ (Pitchblende) ಎಂಬ ಯುರೇನಿಯಂ ಸಿಲಿಕದ ಖನಿಜದಿಂದ ರೂಪಗೊಂಡ ಸೀಸದ ನಿಕ್ಷೇಪವನ್ನು ಗೊತ್ತುಮಾಡಿ, ಆ ಖನಿಜವನ್ನು ಹೊಂದಿರತಕ್ಕ ಕಲ್ಲು ೭೦ ಕೋಟಿ ವರ್ಷಗಳ ಹಿಂದೆ ಜನಿಸಿದುದೆಂದು ಹೇಳಿದ್ದಾರೆ. ಹೀಗೆ ರೇಡಿಯಂ ಧಾತುಗಳ ಆಧಾರದಿಂದಾದ ಶೋಧನೆಗಳಿಂದ ಭೂಮಿಯ ವಯಸ್ಸು ಹೆಚ್ಚೆಂದರೆ ೩೨೦ ಕೋಟಿ ವರ್ಷಗಳು, ಕಡಿಮೆಯೆಂದರೆ ೧೫೦ ಕೋಟಿ ವರ್ಷಗಳೆಂದು ಹೇಳಬಹುದು. ರೇಡಿಯಂ ವರ್ಗದ ಧಾತುಗಳನ್ನು ಹೊಂದಿರುವ ಖನಿಜಗಳ ಕಲ್ಲುಗಳು ೭೦ರಿಂದ ೧೫೦ ಕೋಟಿ ವರ್ಷಗಳ ಹಿಂದಿದ್ದಲ್ಲಿ, ಭೂಮಿಯು ನೆಬುಲಸ್ಥಿತಿಯಿಂದ ಆರಿ ಗಟ್ಟಿಯಾಗಲು ೧೮೦ ಅಥವಾ ೨೦೦ ಕೋಟಿ ವರ್ಷಗಳಾದರೂ ಆಗಿರಬೇಕೆಂದು ಸುಪ್ರಸಿದ್ಧ ವಿಜ್ಞಾನಿಗಳಾದ ಲಾರ್ಡ್ ರುದರ್‌ಫರ್ಡ್‌ರವರು ತೀರ್ಮಾನಿಸಿ, ಭೂಮಿಯ ಒಟ್ಟು ವಯಸ್ಸು ಸುಮಾರು ೩೪೦ ಕೋಟಿ ವರ್ಷಗಳಿರಬಹುದೆಂದು ತಿಳಿಸಿದ್ದಾರೆ. ಈ ಅಂದಾಜುಗಳ ಸರಾಸರಿಯೆಂದರೆ ಭೂಮಿಯು ಈಗಿನ ವಯಸ್ಸು ೨೪೦ ಕೋಟಿ ವರ್ಷಗಳೆಂದು ಹೇಳಬಹುದು. ಇದರ ಪ್ರಕಾರ ಭೂಮಿಯು ವಯಸ್ಸನ್ನು ಒಂದು ದಿನಕ್ಕೆ ಹೋಲಿಸಿದರೆ ಪ್ರತಿಯೊಂದು ಗಂಟೆಯು ೧೦ ಕೋಟಿ ವರ್ಷಗಳನ್ನೂ ಒಂದು ಸೆಕೆಂಡು ಕಾಲವು ೨೭,೭೭೭ ವರ್ಷಗಳನ್ನೂ ಸೂಚಿಸುವುದು.

ಭೂಮಿಯ ಸ್ವರೂಪ

ಗಿಡಮರಗಳು ದಟ್ಟವಾಗಿಲ್ಲದ ಯಾವುದಾದರೊಂದು ಪ್ರದೇಶದಲ್ಲಿನ ಎತ್ತರವಾದ ಗುಡ್ಡವನ್ನೇರಿ ಸುತ್ತಲೂ ನೋಡಿದರೆ ಕಾಣಿಸುವ ಬೈಲುಪ್ರದೇಶವು ಸ್ವಲ್ಪ ದೂರ ಚಪ್ಪಟೆಯಾಗಿ ತೋರಿ, ಕೊನೆಯಲ್ಲಿ ಭೂಭಾಗದ ಅಂಚು ಗಗನದೊಂದಿಗೆ ಸೇರಿಕೊಂಡು ಹೋದಂತೆ ಕಾಣಿಸುತ್ತದೆ. ಇದೇ ರೀತಿಯಲ್ಲಿ ಸಮುದ್ರದ ಮಧ್ಯದಲ್ಲಿ ಹಡಗಿನ ಮೇಲೆ ನಿಂತು ಬೇರೊಂದು ಹಡಗು ಚಲಿಸುವುದನ್ನು ನೋಡಿದರೆ ದೂರ ಹೋಗುತ್ತ ಹೋಗುತ್ತ, ಈ ಹಡಗಿನ ಭಾಗಗಳು ಮರೆಯಾಗುತ್ತಾ ಬಂದು, ಕೊನೆಯಲ್ಲಿ ಹಡಗು ಕಾಣಿಸದೆ ಹೋಗುವುದು. ಭೂಮಿಯು ಚಪ್ಪಟೆಯಾಗಿರದೆ ಗೋಳಾಕಾರದಿಂದಿರುವುದೇ ಈ ದೃಶ್ಯಗಳಿಗೆ ಕಾರಣ. ಒಂದು ಮೈಲಿ ಉದ್ದದ ಮರದ ಅಥವಾ ಕಬ್ಬಿಣದ ಪಟ್ಟಿಯನ್ನು ಸಮುದ್ರದ ನೀರಿನ ಮೇಲೆ ತೇಲಲು ಬಿಟ್ಟರೆ, ಅದರ ಎರಡು ಕೊನೆಗಳು ನೀರಿನಿಂದ ನಾಲ್ಕು ಅಂಗುಲಗಳಷ್ಟು ಮೇಲಕ್ಕೆ ನಿಲ್ಲುತ್ತವೆಂದು ಗೊತ್ತುಮಾಡಿದ್ದಾರೆ. ಇದರಿಂದಲೂ ಭೂಮಿಯು ಚಪ್ಪಟೆಯಾಗಿಲ್ಲವೆಂದು ಹೇಳಬಹುದು. ಭೂಮಿಯು ಇತರ ಗ್ರಹಗಳಂತೆ ಗೋಳಾಕಾರದಿಂದಿದ್ದು ಧ್ರುವಗಳ ಬಳಿ ಸ್ವಲ್ಪ ಚಪ್ಪಟೆಯಾಗಿದೆ. ಈ ಕಾರಣದಿಂದ ಪೂರ್ವ ಪಶ್ಚಿಮ ಅಥವಾ ಸಮಭಾಜಕ ವೃತ್ತದ ಬಳಿಯ ವ್ಯಾಸವು, ದಕ್ಷಿಣೋತ್ತರ ಧ್ರುವಗಳ ವ್ಯಾಸಕ್ಕಿಂತ ೨೬ ಮೈಲಿಗಳು ಹೆಚ್ಚಾಗಿವೆ.

ಸಮಭಾಜಕ ವೃತ್ತದ ಬಳಿಯ ವ್ಯಾಸ—೭೯೨೬ ಮೈಲಿಗಳು.
ದಕ್ಷಿಣೋತ್ತರ ಧ್ರುವಗಳ ಬಳಿಯ ವ್ಯಾಸ—೭೯೦೦ ಮೈಲಿಗಳು.


ಭೂಗೋಳದ ಹೊರಮೈಯ ೧೯ಲಕ್ಷ೯೦೦೦೦ ಚದರ ಮೈಲಿಗಳ ಪ್ರದೇಶದಲ್ಲಿ ಹತ್ತರಲ್ಲಿ ಮೂರು ಭಾಗವು ಭೂಮಿಯಿಂದ ಕೂಡಿಯೂ, ಉಳಿದ ಏಳು ಭಾಗಗಳು ನೀರಿನಿಂದ ಆವೃತವಾಗಿಯೂ ಇರುವುವು. ಸಮುದ್ರ ಸಾಗರಗಳ ತಳದಲ್ಲಿ ಗಟ್ಟಿಯಾದ ಭೂಭಾಗಗಳಿವೆ. ಸಮುದ್ರದ ನೀರೆಲ್ಲವೂ ಬತ್ತಿ ಅಥವಾ ಆವಿಯಾಗಿ ಹೋದರೆ ಭೂಗೋಳದ ಹೊರಚಿಪ್ಪು ಈಗ ಕಾಣಿಸುವುದಕ್ಕಿಂತಲೂ, ಹೆಚ್ಚಾದ ಏರುತಗ್ಗುಗಳಿಂದ ಕೂಡಿರುವುದು. ನಮಗೆ ತಿಳಿದಿರುವಂತೆ ಸಮುದ್ರಮಟ್ಟವು ಸ್ಥಿರವಾಗಿದ್ದು, ಇದರ ಮೇಲೆದ್ದು ಕಾಣುವ ಭೂಮಿಯ ಭಾಗಗಳು ಬದಲಾವಣೆಗಳನ್ನು ಹೊಂದುತ್ತಿವೆ. ಪ್ರಪಂಚದಲ್ಲೆಲ್ಲಾ ಅತ್ಯುನ್ನತವಾದ ಗೌರೀಶಂಕರ ಪರ್ವತಶಿಖರವು ಸಮುದ್ರ ಮಟ್ಟಕ್ಕೆ ೨೯೦೦೨ ಅಡಿಗಳ (ಸುಮಾರು ೫½ ಮೈಲಿಗಳು) ಎತ್ತರದಲ್ಲಿದೆ. ಆಳವಾದ ಸಮುದ್ರ ಭಾಗವು ಸುಮಾರು ೬ ಮೈಲಿಗಳಷ್ಟು ಆಳವಾಗಿರುವುದು. ಹೀಗೆ ಭೂಮಿಯ

ಚಿಪ್ಪಿನಲ್ಲಿ ಗೋಚರವಾಗಿರುವ ಭೂಭಾಗಗಳ ಏರುತಗ್ಗುಗಳ ಅಂತರವು ೧೨ ಮೈಲಿಗಳಿಗೆ ಏರಿಲ್ಲ. ಇನ್ನು ಮನುಷ್ಯನ ಪ್ರಯತ್ನದಲ್ಲಿ ಸಾಧ್ಯವಾಗಿರುವುದನ್ನು ನೋಡೋಣ. ಪಾಶ್ಚಾತ್ಯ ಮತ್ತು ಟಿಬೆಟ್ಟಿನ ಪರ್ವತಗಾಮಿಗಳು ಹಿಮಾಲಯಾ ಪರ್ವತದಲ್ಲಿ ಸುಮಾರು ೨೭೦೦೦ ಅಡಿಗಳ ಎತ್ತರದ ವರೆಗೂ ಬಹಳ ಪ್ರಯಾಸಪಟ್ಟು ಹತ್ತಿದ್ದಾರೆ. ಪ್ರಪಂಚದ ಆಳವಾದ ಗಣಿಗಳು ನೆಲಮಟ್ಟದಿಂದ ೯ ಸಾವಿರ ಅಡಿಗಳ ವರೆಗೂ ಇಳಿದಿವೆ. ಇದಕ್ಕೂ ಆಳಕ್ಕೆ ಹೋಗಿರುವುದೆಂದರೆ ಯಂತ್ರಗಳ ಮೂಲಕ ಕೊರೆದು ತೋಡಿರುವ ಪೆಟ್ರೋಲಿಯಂ ಎಣ್ಣೆಯ ಬಾವಿಗಳು. ಇವು ಕೆಲವೆಡೆ ೧೫೦೦೦ ಅಡಿಗಳ ಆಳದ ವರೆಗೂ ಹೋಗಿರುತ್ತವೆ. ಒಟ್ಟಿನಲ್ಲಿ ಭೂಮಿಯ ಮೇಲಿನ ಪದಾರ್ಥಗಳು ಇರತಕ್ಕ ಸ್ಥಿತಿಯನ್ನು ತಿಳಿಯಬೇಕಾದರೆ ಈ ೧೨ ಮೈಲಿಗಳ ಅಂತರದಲ್ಲಿ ಮಾತ್ರವೇ ಸಾಧ್ಯವಾಗಿದೆ. ಆದರೆ ದೊಡ್ಡದಾಗಿರುವ ೪೦೫೦ ಮೈಲಿಗಳ ಭೂಗೋಳದ ತ್ರಿಜ್ಯದಲ್ಲಿ ಮೇಲಿನ ೧೨ ಮೈಲಿಗಳ ಅಂತರವು ಅತ್ಯಲ್ಪವಾದದ್ದು. ಇದರಿಂದ ದೊರೆತ ಸಾಮಗ್ರಿಗಳಿಂದ ಭೂಮಿಯ ಸಕಲ ರಹಸ್ಯವನ್ನೂ ಗೊತ್ತು ಮಾಡಲು ಸಾಧ್ಯವಾಗಿಲ್ಲ. ತಿಳಿದಿರತಕ್ಕ ವಿಷಯಗಳು ಅತ್ಯಲ್ಪವಾಗಿದ್ದು ತಿಳಿಯಬೇಕಾದುವು ಅನೇಕವಿರುತ್ತವೆ. ಆದರೂ ಇತರ ಕೆಲವು ಸಲಕರಣೆಗಳಿಂದ ಭೂಮಿಯ ಒಳಪ್ರದೇಶವು ಇರಬಹುದಾದ ಸ್ಥಿತಿಯನ್ನು ಊಹಿಸಿದ್ದಾರೆ. ಬೇರೆ ಕೆಲವು ವೈಯಕ್ತಿಕ ಸಾಧನಗಳಿಂದಲೂ ಕೆಲವು ವಿಷಯಗಳು ತಿಳಿದುಬಂದಿರುತ್ತವೆ.

ಭೂಗೋಳದ ಸಾಂದ್ರತೆಯು ೫೨ ಎಂದು ಗೊತ್ತಾಗಿದೆ. ಹೇಗೆಂದರೆ ಭೂಗೋಳದ ಮೇಲಿನ ಮತ್ತು ಒಳಗಿನ ಯಾವತ್ತು ವಸ್ತುಗಳ ಸರಾಸರಿ ತೂಕವು ನೀರಿಗಿಂತಲೂ ೫೨ ಯಷ್ಟು ಭಾರವಾದದ್ದು ಎಂದು ತಿಳಿಯಬೇಕು. ಭೂಮಿಯ ಮೇಲ್ಮಯ್ಯಲ್ಲಿರುವ ಕಲ್ಲುಗಳ ಸಾಂದ್ರತೆಯು ೨೭ ಯಿಂದ ೩ ರ ವರೆಗಿದೆ. ಇದರಿಂದ ಭೂಮಿಯ ಹೊರಚಿಪ್ಪಿನೊಳಗಿರತಕ್ಕ ಪದಾರ್ಥಗಳು ಹೆಚ್ಚು ಭಾರವಾಗಿರಬೇಕೆಂದು ಗೊತ್ತಾಗುತ್ತದೆ. ಯಾವುದಾದರೊಂದು ಪದಾರ್ಥವು ಹೆಚ್ಚಿನ ಮೇಲ್ಭಾರಕ್ಕೆ ಅಥವಾ ಒತ್ತಡಕ್ಕೆ ಸಿಕ್ಕಿದಾಗ ಅದರ ಕಣಾಂಶಗಳು ಹತ್ತಿರ ಸರಿದು ಆ ಮೂಲಕ ಪದಾರ್ಥದ ಸಾಂದ್ರತೆಯು ಹೆಚ್ಚುತ್ತದೆ. ಇದರಂತೆ ಭೂಮಿಯೊಳಗಿನ ಪದಾರ್ಥಗಳು ಹೆಚ್ಚಾದ ಒತ್ತಡಕ್ಕೆ ಸಿಕ್ಕಿ ಅದರಿಂದಲೂ ಒಳಗಿರುವ ವಸ್ತುಗಳ ಸಾಂದ್ರತೆಯು ಹೆಚ್ಚಿರಲೇಬೇಕು. ಒತ್ತಡದ ಅಂದಾಜಿನಂತೆ ೧೦೦ ಮೈಲಿಗಳ ಆಳದಲ್ಲಿರುವ ಒಂದು ಚದರ ಅಂಗುಲದ ಪದಾರ್ಥದ ಮೇಲೆ ೩೦೦ ಟನ್ನುಗಳ ತೂಕವಿರಬೇಕು. ಹಾಗೆಯೇ ಭೂಮಧ್ಯದಲ್ಲಿನ ಪದಾರ್ಥದ ಚದರ ಅಂಗುಲವೊಂದರ ಮೇಲೆ ೨೭,೦೦೦ ಟನ್ನುಗಳ ತೂಕವಿರಬಹುದೆಂದು ಅಂದಾಜುಮಾಡಲಾಗಿದೆ.

ನಾವು ೧೦-೧೨ ಆಳುದ್ದದ ಭಾವಿಯಲ್ಲಿಳಿದು ಅಲ್ಲಿ ಸ್ವಲ್ಪಕಾಲವಿದ್ದರೆ ವಿಪರೀತ ಸೆಕೆಯಾಗುವದು. ಜೊತೆಯಲ್ಲಿ ಉಷ್ಣಮಾಪಕವನ್ನು ತೆಗೆದುಕೊಂಡು ಹೋದರೆ, ಅದು ಹೊರಗಿನ ಶಾಖಮಾನಕ್ಕಿಂತ ಒಳಗೆ ಹೆಚ್ಚಿನ ಶಾಖವಿರುವದನ್ನು ತೋರಿಸುತ್ತದೆ. ಈ ಭೇದವನ್ನು ೫೦೦ ಅಡಿಗಳಿಂದ ೧೦೦೦ ಅಡಿಗಳ ಆಳಕ್ಕೆ ಇಳಿದಿರುವ ಗಣಿಗಳಲ್ಲಿ ಕಾಣಬಹುದು. ಶಾಖಮಾನದ ಆಧಿಕ್ಯವು ನೆಲಮಟ್ಟದಿಂದ ಕೆಳಗಿಳಿದಂತೆಲ್ಲಾ ಸುಮಾರು ೬೫ ಅಡಿಗಳ ಆಳಕ್ಕೆ ೧° F. ರಂತೆ ಹೆಚ್ಚುತ್ತದೆ. ಇದರ ಅಂದಾಜಿನಂತೆ ೨ ಮೈಲಿಗಳ ಆಳದಲ್ಲಿ ನೀರು ತಾನಾಗಿಯೇ ಕುದಿಯುವುದು. ಸುಮಾರು ೭ ಮೈಲಿಗಳ ಆಳದಲ್ಲಿ ಕಬ್ಬಿಣವು ಕರಗುವಷ್ಟು ಶಾಖವಿರಬೇಕು. ಭೂಮಿಯ ಒಳಗಡೆ ಕಾವಿರುವುದನ್ನು ಜ್ವಾಲಾಮುಖಿಗಳಿಂದಲೂ ಬಿಸಿನೀರಿನ ಊಟೆಗಳಿಂದಲೂ ತಿಳಿಯಬಹುದು.

ಕೆಲವು ಯಂತ್ರೋಪಕರಣಗಳಿಂದ ಭೂಮಿಯ ಹೊರಗಿನ ಚಿಪ್ಪು ೩೦ ಮೈಲಿಗಳಷ್ಟು ದಪ್ಪವಾಗಿರಬಹುದೆಂದು ಗೊತ್ತಾಗಿದೆ. ಇದರ ಬುಡದಲ್ಲಿ ಕಲ್ಲುಗಳು ಕರಗಿದ ಸ್ಥಿತಿಯಿಂದಿದ್ದು ಹೆಚ್ಚಿನ ಒತ್ತಡಕ್ಕೆ ಸಿಕ್ಕಿರುತ್ತವೆ. ಈ ಒತ್ತಡದ ಕಾರಣದಿಂದ ಕರಗಿದ ಕಲ್ಲು ಮಂದವಾದ ಶಿಲಾಪಾಕದಂತಿರುವುದು. ಶಿಲಾಪಾಕವು ಮೇಲ್ಭಾಗದ ಒತ್ತಡದಿಂದ ಲಗಾಮನ್ನು ಬಿಗಿಯಾಗಿ ಹಿಡಿದ ಕುದುರೆಯಂತೆ ಸ್ತಂಭೀಭೂತವಾಗಿರುವುದು. ಕಾರಣಾಂತರಗಳಿಂದ ಮೇಲ್ಭಾಗದ ಭಾರವು ವ್ಯತ್ಯಾಸವಾದರೆ ಒಳಗಿನ ಶಿಲಾಪಾಕವು ಚಲಿಸಿ, ಅದರ ಫಲವಾಗಿ ಭೂಕಂಪಗಳೂ ಜ್ವಾಲಾಮುಖಿಗಳೂ ಜನಿಸುವುವು. ಶಿಲಾಪಾಕದ ಚಲನೆಗಳನ್ನು ಸೈಸ್ಮೊಗ್ರಾಫ್ ಎಂಬ ಯಂತ್ರದಿಂದ ಗೊತ್ತುಮಾಡಬಹುದು. ಇದರಿಂದ ಭೂಕಂಪಗಳು ಪ್ರಪಂಚದ ಯಾವ ಪ್ರದೇಶದಲ್ಲಿಯೇ ಆಗಲಿ, ಆ ಸ್ಥಲಗಳನ್ನು ಸುಲಭವಾಗಿ ಗೊತ್ತುಮಾಡಬಹುದಲ್ಲದೆ, ಭೂಕಂಪಗಳಾದುದಕ್ಕೆ ಕಾರಣಗಳನ್ನು ಸಹ ತಿಳಿಯಬಹುದು. ೪ ನೆಯ ಚಿತ್ರದಲ್ಲಿಯೂ ಅದರ ಕೆಳಗಿನ ಪಟ್ಟಿಯಲ್ಲಿಯೂ ಭೂಮಿಯ ಮೇಲು ಚಿಪ್ಪಿನಿಂದ ಅಂತರಾಳದ ವರೆಗಿರುವ ಸ್ಥಿತಿಯನ್ನು ತಿಳಿಸಿದೆ.



ಚಿತ್ರ ೪. ಭೂಗೋಳದ ಒಳನಕ್ಷೆ

		ಭೂಗೋಳದ ತ್ರಿಜ್ಯದಲ್ಲಿ
೧. ಸಮುದ್ರ .... } ೨. ಭೂಭಾಗಗಳು .... }	೧೨ ಮೈಲಿಗಳು	
೩. ಭೂಮಿಯ ಹೊರಚಿಪ್ಪು (ದಪ್ಪನೆಯ ಗೆರೆಯಿಂದ ತೋರಿಸಿದೆ)		೩೦ ಮೈಲಿಗಳು
೪. ಬಸಾಲ್ಟಿನ ಕರಗಿದ ಕಲ್ಲು ಮತ್ತು ಮೂಲಶಿಲಾಪಾಕ (Basaltic-Magma) ಬಸಾಲ್ಟೆಂಬುದು ಕಪ್ಪು, ಹಸಿರು ಮತ್ತು ಬೂದುಬಣ್ಣದ ಜ್ವಾಲಾಶಿಲೆ. ಇದರ ಸಾಂದ್ರತೆ. ೩.೦		೭೦೦ ,,
೫. ಭಾರವಾದ ಲೋಹ ಗಂಧಕ ಸಂಯುಕ್ತಗಳು. ಕರಗಿದ ರೂಪದಿಂದಿರುತ್ತವೆ. (Metalic Sulphides)		೩೦೦ ,,
೬. ಆಲಿವೀನ್ (Olivine Rocks) ಅಥವಾ ಭಾರವಾದ ಕಬ್ಬಿಣ, ಮೆಗ್ನೀಷಿಯಾ ಸಿಲಿಕದ ಸಂಯುಕ್ತಗಳು		೫೦೦ ,,
೭. ಆಲಿವೀನ್ ಕಲ್ಲುಗಳು ಮತ್ತು ಕಬ್ಬಿಣ		೩೦೦ ,,
೮. ನಿಕ್ಕಲ್ ಕಬ್ಬಿಣ ಮತ್ತು ಇತರ ಭಾರವಾದ ಲೋಹಗಳು. ಈ ಪ್ರದೇಶದಲ್ಲಿ ಒಂದು ಚದರ ಅಂಗುಲದಷ್ಟು ಪದಾರ್ಥದ ಮೇಲೆ ೨೨,೦೦೦ ಟನ್ನುಗಳ ತೂಕವಿರುವುದು		೨೧೨೦ ,,
ಒಟ್ಟು ಮೈಲಿಗಳು		೩೯೫೦ ಮೈಲಿಗಳು

ಭೂಮಿಯ ಮೇಲೆದ್ದು ಕಾಣುವ ಕಲ್ಲುಗಳಿಂದ ಅಂತರಾಳದ ಪ್ರದೇಶದ ವರೆಗೂ ಇರತಕ್ಕ ವಸ್ತುಸಂಯೋಜನೆಯ ಸಾಂದ್ರತೆಯು ಕ್ರಮವಾಗಿ ಹೆಚ್ಚುತ್ತಾ ಹೋಗುವುದು.

		ಸಾಂದ್ರತೆ
ಮೇಲಿನಿಂದ ೧೦೦೦ ಮೈಲಿಗಳ ವರೆಗೆ	....	೩.೫ ರಿಂದ ೪.೫
೧೦೦೦ ಮೈಲಿಗಳಿಂದ ೧೮೦೦ ಮೈಲಿಗಳ ವರೆಗೆ	....	೪.೫ ರಿಂದ ೯.೦
೧೮೦೦ ಮೈಲಿಗಳಿಂದ ೩೯೫೦ ಮೈಲಿಗಳ ವರೆಗೆ	....	೯.೦ ರಿಂದ ೧೧.೬

ಇದಕ್ಕೆ ಹೋಲಿಸಲು, ನೀರಿನ ಸಾಂದ್ರತೆ ೧, ಕಣಶಿಲೆಗಳು ೨.೬೫, ಬಸಾಲ್ಟಿನ ಸಾಂದ್ರತೆ ೩.೦೦, ಕಬ್ಬಿಣದ ಸಾಂದ್ರತೆ ೭.೮೫ ಎಂಬುದಾಗಿ ತಿಳಿಸಿದೆ. ಭೂಮಿಯ ಮೇಲಿನ ಎಲ್ಲಾ ಬದಲಾವಣೆಯೂ ಮೊದಲನೆಯ ೭೩೦ ಮೈಲಿಗಳ ಅಂತರದಲ್ಲಿರಬೇಕೆಂದು ಭೂಚಲನೆಗಳನ್ನು ಕಂಡುಹಿಡಿಯುವ ಯಂತ್ರಗಳಿಂದ ತಿಳಿದುಬಂದಿದೆ.

ಭೂಮಿಯ ಮೇಲ್ಮಯ್ಯ ೩೦ ಮೈಲಿಗಳ ದಪ್ಪದ ಶಿಲಾಪದರವು ಕರಗಿದ ರೂಪದಿಂದಿದ್ದು, ಹೆಚ್ಚಿನ ಒತ್ತಡಕ್ಕೆ ಸಿಕ್ಕಿರುವ ಶಿಲಾಪಾಕದ ಮೇಲೆ ತೇಲುತ್ತಿದೆಯೆಂದು ಹೇಳಬಹುದು. ಈ ಗಟ್ಟಿಚಿಪ್ಪಿನಲ್ಲಿರುವ ಕಲ್ಲುಗಳಲ್ಲಿಯೂ ಕೂಡ ಒಂದು ವೈವಿಧ್ಯವಿದೆ. ಬೆಟ್ಟಗುಡ್ಡಗಳಲ್ಲಿರುವ ಕಲ್ಲುಗಳ ಸಾಂದ್ರತೆಯು ಕಡಿಮೆಯಾಗಿದೆ. ಸಮುದ್ರದ ತಳದಲ್ಲಿರುವ ಆದಿ ಶಿಲೆಗಳು ಭಾರವಾಗಿರುತ್ತವೆ. ಇವುಗಳ ಆಧಾರದ ಮೇಲೆ ಭೂವಿಜ್ಞಾನಿಗಳು ನಮ್ಮ ಭೂಮಿಗೆ ಒಂದು ವಿಧವಾದ ಸಮತೂಕಪರಿಸ್ಥಿತಿಯಿರುತ್ತದೆಂದು ಗೊತ್ತುಮಾಡಿದ್ದಾರೆ. ಇದರ ನಿಯಮದಂತೆ ಭೂಗೋಳದ ಮಧ್ಯಭಾಗದಿಂದ ಮೇಲಿನ ವಾಯುಮಂಡಲದ ವರೆಗೆ ಯಾವ ಮಾರ್ಗದಲ್ಲಿಯಾದರೂ ಆಗಲಿ ಒಂದು ಡಿಗ್ರಿಯಂತರದಲ್ಲಿನ ಪದಾರ್ಥಗಳ ಒಟ್ಟು ತೂಕವನ್ನು ಗೊತ್ತುಮಾಡಿದರೆ, ಆ ತೂಕವು ಬೇರಾವಕಡೆಯ ಅದೇ ಅಂತರದಲ್ಲಿರತಕ್ಕ ಪದಾರ್ಥಗಳ ತೂಕದಷ್ಟೇ ಇರುತ್ತದೆ. ಭೂಮಿಯು ಈ ಪರಿಸ್ಥಿತಿಯಲ್ಲಿರುವುದು ಬಹಳ ಕ್ಷೇಮ. ಆದರೆ ಆಗಾಗ್ಗೆ ಈ ಸಮತೂಕಸ್ಥಿತಿಯು ವ್ಯತ್ಯಾಸವಾಗಿ ಅದರ ಪರಿಣಾಮದಿಂದ ಭೂಭಾಗಗಳ ಚಲನವಲನಗಳು ಪ್ರಾಪ್ತವಾಗುತ್ತವೆ. ಭೂಮಿಯ ಚರಿತ್ರೆಯಲ್ಲಿ ಭೂಭಾಗಗಳ ವ್ಯತ್ಯಾಸಗಳು ಬಹಳ ಸಾಮಾನ್ಯವಾದ ವಿಷಯವಾಗಿದೆ.

ಭೂಮಿಯ ಮೇಲಿನ ಹೊದಿಕೆಯು ಶಿಲಾಸಂಯೋಜನೆಯಿಂದ ಕೂಡಿರುವುದು. ಕಲ್ಲುಗಳು ಮೂರು ಮುಖ್ಯ ಪಂಗಡಗಳಿಗೆ ಸೇರಿರುತ್ತವೆ. ಅಗ್ನಿಶಿಲೆಗಳು, ಜಲಶಿಲೆಗಳು, ಮತ್ತು ರೂಪಾಂತರ ಶಿಲೆಗಳು.

ಅಗ್ನಿ ಶಿಲೆಗಳು :—ಭೂಮಿಯೊಳಗಿನಿಂದ ಮೇಲಕ್ಕೆ ನುಗ್ಗಿ ಬಂದ ಶಿಲಾಪಾಕವು ಆರಿ ರೂಪಗೊಂಡ ಕಲ್ಲುಗಳಿಗೆ ಅಗ್ನಿ ಶಿಲೆಗಳೆಂದು ಹೆಸರು. ಇವುಗಳಲ್ಲಿ ಬಹಿರ್ಗತ

ಅಥವಾ ಜ್ವಾಲಾಶಿಲೆಗಳೆಂದೂ ಮತ್ತು ಅಂತಸ್ಥಿತ ಅಥವಾ ಗರ್ಭಾಂತ ಶಿಲೆಗಳೆಂದೂ ಎರಡು ಮುಖ್ಯಪಂಗಡಗಳಿವೆ. ಜ್ವಾಲಾಶಿಲೆಗಳು ಹೆಸರೇ ಸೂಚಿಸುವಂತೆ ಜ್ವಾಲಾ ಮುಖಿಗಳ ಕೊಳವಿಗಳ ಮೂಲಕ ಹೊರಹೊರಟ ಶಿಲಾಪಾಕ ಆರಿ ರೂಪಗೊಂಡ ವಾಗಿರುತ್ತವೆ. ಗರ್ಭಾಂತಶಿಲೆಗಳು ಭೂಮಿಯೊಳಗೆ ಆಳದಲ್ಲಿಯೇ ಆರಿ ಹರಳುರೂಪ ದಿಂದಿರುವ ಖನಿಜಗಳಿಂದ ಕೂಡಿರುತ್ತವೆ. ಈ ಶಿಲೆಗಳನ್ನು ಅನೇಕ ಬೆಟ್ಟಗುಡ್ಡಗಳಲ್ಲಿ ನೋಡಬಹುದು. ಅಗ್ನಿಶಿಲೆಗಳಲ್ಲಿ ಬಹುಭಾಗ ಆದಿಕಲ್ಪಕ್ಕೆ ಸೇರಿರುತ್ತದೆ. ಪ್ರಾರಂಭ ದಲ್ಲಿ ಭೂಮಿಯ ಹೊರಮೈಯು ಪ್ರದೇಶವೆಲ್ಲವೂ ಅಗ್ನಿಶಿಲೆಗಳಿಂದ ಕೂಡಿತ್ತು. ಇತ್ತೀಚಿನ ಯುಗಗಳಲ್ಲಿಯೂ ಭೂಮಿಯೊಳಗಿನಿಂದ ಅಗ್ನಿಶಿಲೆಗಳು ಸುಗ್ಗಿಬಂದು ಅನೇಕ ಬೆಟ್ಟಸಾಲುಗಳಾಗಿವೆ. ನಮ್ಮ ಮೈಸೂರು ದೇಶದಲ್ಲಿರುವ ಬೆಟ್ಟಗುಡ್ಡಗಳ ಕಲ್ಲುಗಳೆಲ್ಲವೂ ಆದಿಕಲ್ಪಕ್ಕೆ ಸೇರಿರುತ್ತವೆ.

ಜಲಶಿಲೆಗಳು :—ಮಳೆಗಾಲದಲ್ಲಿ ಬೆಟ್ಟಗುಡ್ಡಗಳಿಂದ ಹರಿದುಬರತಕ್ಕ ಹಳ್ಳಗಳು ಕಲ್ಲುಮಣ್ಣುಗಳನ್ನು ನೀರಿನ ಸಂಗಡ ತಂದು ತಗ್ಗಿನ ಪ್ರದೇಶಗಳಲ್ಲಿ ಒಂದುಗೂಡಿ ಸುತ್ತವೆ. ಈ ಹಳ್ಳಗಳೆಲ್ಲವೂ ನದಿಗಳಿಗೆ ಸೇರಿ ಅವುಗಳ ಮೂಲಕ ಶಿಥಿಲವಾದ ಕಲ್ಲಿನ ಭಾಗಗಳು ನಾನಾ ಆಕಾರರೂಪಗಳಿಂದ ನೀರಿನೊಂದಿಗೆ ಕೊಚ್ಚಿಹೋಗಿ ಸಾಗರ ಸರೋವರ ತಳಗಳಲ್ಲಿ ಶೇಖರವಾಗುತ್ತವೆ. ಸಮುದ್ರತಳದಲ್ಲಿ ಒಟ್ಟುಗೂಡಿ ರೂಪ ಗೊಂಡ ಶಿಲಾ ಸಮುದಾಯಗಳಿಗೆ ಜಲಶಿಲೆಗಳೆಂದು ಹೆಸರು. ಈ ಕಲ್ಲುಗಳು ಪ್ರಾಯಿಕವಾಗಿ ಹಾಸುಬಂಡೆಗಳಂತಿದ್ದು, ತಮ್ಮ ರೂಪ ಗಾತ್ರಗಳಿಗನುಗುಣವಾಗಿ, ನೀರಿನ ತಳದಲ್ಲಿ ರೂಪಗೊಳ್ಳುತ್ತವೆ. ಜಲಶಿಲೆಗಳ ನಿರ್ಮಾಣಕಾರ್ಯವು ಅತ್ಯಂತ ಪ್ರಾಚೀನ ಯುಗಗಳಿಂದ ಪ್ರಾರಂಭವಾಗಿ, ಇಂದಿನವರೆಗೂ ನಡೆದುಬಂದಿರುವುದ ಲ್ಲದೆ, ಈಗಲೂ ಏಕರೀತಿಯಿಂದ ನಡೆಯುತ್ತಿದೆ.

ರೂಪಾಂತರ ಶಿಲೆಗಳು :—ಅಗ್ನಿ ಶಿಲೆಗಳು ಮತ್ತು ಜಲಶಿಲೆಗಳು ಭೂಮಿಯೊಳಗಿನ ಕಾವು ಮತ್ತು ಮೇಲಿನ ಒತ್ತಡಗಳಿಗೆ ಸಿಕ್ಕಿದಾಗ ಹೊಸಮಾದರಿಯ ಕಲ್ಲುಗಳಾಗು ವುವು. ಹೀಗೆ ಜನಿಸಿದ ಕಲ್ಲುಗಳಿಗೆ ರೂಪಾಂತರಶಿಲೆಗಳೆಂದು ಹೆಸರು.

ಮೇಲಿನ ಮೂರು ಪಂಗಡಗಳ ಕಲ್ಲುಗಳು ಕೆಲವುಕಡೆ ಒಟ್ಟಾಗಿಯೂ, ಕೆಲವು ಕಡೆ ಬೇರೆಬೇರೆಯಾಗಿಯೂ ಸೇರಿಕೊಂಡು ಭೂಮಿಯ ಹೊರಮೈಯನ್ನು ಆವರಿಸಿ ಕೊಂಡಿರುತ್ತವೆ. ಅನೇಕ ಕಡೆ ಸಮುದ್ರಮಟ್ಟದ ಮೇಲೆದ್ದಿರತಕ್ಕ ಈ ಕಲ್ಲುಗಳು ಗಾಳಿ ಮಳೆಗಳ ಪ್ರಭಾವದಿಂದ ಚೂರುಚೂರಾಗಿ ಒಡೆದು, ಮಣ್ಣು ಮರಳು ರೂಪ ಗಳಿಂದ ಗಟ್ಟಿಕಲ್ಲಿನ ಮೇಲೆ ಕೆಲವು ಅಡಿಗಳ ಮಂದದವರೆಗೂ ಮುಚ್ಚಿಕೊಂಡಿರು ತ್ತವೆ. ಈ ಮಣ್ಣಿನಲ್ಲಿಯೆ ಸಸ್ಯಗಳ ಬೆಳವಣಿಗೆಗೆ ಬೇಕಾದ ಸಾರವೆಲ್ಲವೂ ಇರುತ್ತದೆ.

ಮೆಕ್ಕಲು ಮಣ್ಣು ಮರಳುಗಳ ಪದರವು ಸಾಧಾರಣವಾಗಿ ತಗ್ಗಿನ ಪ್ರದೇಶಗಳಲ್ಲಿ ಹೆಚ್ಚು ಮಂದದಿಂದಿರುತ್ತವೆ. ಭೂಗೋಳದ ನೀರಿನ ಕೆಳಗಿರುವ ಭಾಗಗಳು ಇಂತಹ ವ್ಯತ್ಯಾಸಗಳನ್ನು ಹೊಂದಲು ಅವಕಾಶವಿರುವುದಿಲ್ಲ.

ಭೂಮಿಯ ಜೀವನ ಚರಿತ್ರೆ

ಮೂಲ ನೆಬುಲದಿಂದ ಅಥವಾ ಸೂರ್ಯನ ಜ್ಯೋತಿರ್ಮಯವಾದ ಭಾಗದಿಂದ ಬೇರೆಯಾದ ಭೂಮಿಯು ಗೋಳಾಕೃತಿಯನ್ನು ಹೊಂದಿ ಆರಿ, ಹೆಪ್ಪುಗಟ್ಟಿದಂತಿಲ್ಲಾ ಒಣಗಿದ ಕಿತ್ತಲೆ ಹಣ್ಣಿನಂತೆ ಮೇಲಿನ ಭಾಗದಲ್ಲಿ ಮುದುರುಮುದುರಾದ ಎತ್ತರ ತಗ್ಗಿನ ಪ್ರದೇಶಗಳನ್ನು ಹೊಂದಿತು. [ಇದಾಗುವುದಕ್ಕೆ ಪೂರ್ವದಲ್ಲಿ ಭೂಮಿಗ್ರಹವು ಇನ್ನೂ ಅನಿಲರೂಪದಿಂದಿದ್ದು ತಿರುಗುತ್ತಿದ್ದಾಗಲೆ, ಚಂದ್ರನು ಉಪಗ್ರಹವಾಗಿ ಭೂಮಿಯಿಂದ ಜನಿಸಿದನು. ಇತರ ಗ್ರಹಗಳ ಉಪಗ್ರಹಗಳಂತೆ, ಭೂಮಿಯ ಉಪಗ್ರಹವೂ ಭೂಮಿಯ ಸುತ್ತಲೂ ಸುತ್ತುತ್ತಿದೆ. ಭೂಮಿಯಿಂದ ಚಂದ್ರನು ಬೇರೆಯಾಗುವುದಕ್ಕೆ ಮುಂಚೆ, ಈ ಉಪಗ್ರಹದ ಸ್ಥಾನವು ಈಗಿನ ಪೆಸಿಫಿಕ್ ಮಹಾಸಾಗರದಲ್ಲಿದ್ದಿರಬೇಕೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.] ಭೂಭಾಗಗಳ ಮುದುರು ಪ್ರದೇಶಗಳಲ್ಲಿ ಕೆಲವು ಕಡೆ ಬಿರುಕುಬಿಟ್ಟು, ಅದರ ಮೂಲಕ ಕಾದು ಕರಗಿದ ಕಲ್ಲುಗಳು ಜ್ವಾಲಾಶಿಲೆಗಳಾಗಿ ಹೊರಸೂಸಿದುವು. ಕ್ರಮೇಣ ವಾಯುಮಂಡಲವೇರ್ಪಟ್ಟು ಅದರಲ್ಲಿ ನೀರಿನ ಆವಿಭಾಗವು ಹೆಚ್ಚಿ, ಮಳೆ ಬಂದು, ತಗ್ಗಿನ ಪ್ರದೇಶಗಳಲ್ಲಿ ನೀರು ತುಂಬಿಕೊಂಡು, ಜಲಾಶಯಗಳಾದುವು. ಪ್ರಾರಂಭದಲ್ಲಿನ ಜಲಾಶಯಗಳು ಹೆಚ್ಚಿನ ವಿಸ್ತಾರವಿಲ್ಲದೆ ಇದ್ದಿರಬೇಕು. ಎಲ್ಲೆಲ್ಲಿಯೂ ಬೆಂಗಾಡಿನಂತೆ ಜೀವದ ಸೆಲೆಯೆ ಇಲ್ಲದೆ ಭೂಮಿಯು ಬಹಳ ಕಾಲದ ವರೆಗೆ ಇದ್ದಿತೆಂದು ಹೇಳಬಹುದು. ಜಲಾಶಯಗಳಾದ ಕೂಡಲೆ ವಾಯುಮಂಡಲದ ಗಾಳಿ ಮಳೆಗಳ ಪ್ರಭಾವಗಳಿಂದ ಕಲ್ಲುಗಳು ಚೂರಾಗಿ ಮೆಕ್ಕಲು ಮಣ್ಣು ಮರಳುಗಳ ರೂಪದಿಂದ ಕೊಚ್ಚಿಬಂದು ನೀರಿನ ತಳದಲ್ಲಿ ಒಂದುಗೂಡಿದುವು. ಪ್ರಾರಂಭದಲ್ಲಿನ ಎಂದರೆ, ಆದಿಕಲ್ಪದಲ್ಲಿನ ಹೆಚ್ಚಿನ ವಿಸ್ತಾರವಿಲ್ಲದ ಜಲಾಶಯಗಳಲ್ಲಿ ರೂಪಗೊಂಡ, ಜಲಶಿಲಾಸಮುದಾಯಗಳನ್ನು ಆದಿಕಲ್ಪದ ಅಗ್ನಿಶಿಲೆಗಳೊಂದಿಗೆ ಪ್ರಪಂಚದ ಕೆಲವು ಭಾಗಗಳಲ್ಲಿ ನೋಡಬಹುದು. ಹೀಗೆ ಲಕ್ಷಾಂತರ ವರ್ಷಗಳು ಕಳೆದ ಮೇಲೆ ಈ ಜಲಾಶಯಗಳು ಹೆಚ್ಚಿನ ವಿಸ್ತಾರಹೊಂದಿ ವಿಶಾಲವಾದ ಸಮುದ್ರ ಸಾಗರಗಳ ತಳದಲ್ಲಿ ಜಲಶಿಲೆಗಳು ಹೆಚ್ಚಿನ ಆಕಾರಗಳಿಂದ ರೂಪಗೊಳ್ಳಲು ಪ್ರಾರಂಭ ವಾಯಿತು. ಹೀಗೆ ಆದಿಜಲಶಿಲೆಗಳು ರೂಪಗೊಳ್ಳಲು ಪ್ರಾರಂಭವಾದ ಕಾಲವು ಸುಮಾರು ೧೫೦ ಕೋಟಿ ವರ್ಷಗಳ ಹಿಂದಿನದೆಂದು ಹೇಳಿದ್ದಾರೆ. ಈ ಕಾಲಕ್ಕೆ ಆದಿಜಲಶಿಲಾಕಲ್ಪವೆಂದು ಹೆಸರಿದೆ.

ಜಲಶಿಲೆಗಳ ನಿರ್ಮಾಣದ ದೈನಂದಿನ ಕಾರ್ಯದಲ್ಲಿ ನೀರಿನ ಮಟ್ಟದ ಮೇಲಿರತಕ್ಕ ಭೂಭಾಗಗಳಲ್ಲಿನ ಕಲ್ಲುಗಳು ಕಡಿಮೆಯಾಗಿ, ಅವುಗಳು ನೀರಿನ ತಳದಲ್ಲಿ ರೂಪಾಂತರದಿಂದ ಶೇಖರವಾದಂತೆಲ್ಲಾ, ಭೂಮಿಯ ಹೊರಚಿಪ್ಪಿನಲ್ಲಿರತಕ್ಕ ಸಮತೂಕವು ವ್ಯತ್ಯಾಸವಾಗಿ, ಒಳಗಿನ ಶಿಲಾಪಾಕದ ಚಲನೆಗೆ ಅವಕಾಶವಾಯಿತು. ಜಲಶಿಲೆಗಳು ಹೆಚ್ಚಿನ ಘಂದದಿಂದ ಒಂದುಗೂಡಿದಂತೆಲ್ಲಾ ಸಮುದ್ರದ ತಳವು ಕುಗ್ಗುತ್ತಾ ಬಂದು, ಆ ತಗ್ಗಿನ ಪ್ರದೇಶದಲ್ಲಿ ಹೆಚ್ಚಾದ ಜಲಶಿಲಾಸಂಯೋಜನೆಯಾಯಿತು. ಇದರಿಂದ ಒಳಗಿನ ಶಿಲಾಪಾಕದ ಮೇಲೆ ಒತ್ತಡವೂ ಕ್ರಮೇಣ ಹೆಚ್ಚಾಯಿತು. ಹೀಗೆ ಒತ್ತಲ್ಪಟ್ಟ ಶಿಲಾಪಾಕವು ಸ್ಥಳಾಂತರಕ್ಕೆ ಚಲಿಸಿದಾಗ, ಭೂಮಿಯ ಮೃದು ಮತ್ತು ಮುದುರು ಪ್ರದೇಶಗಳಲ್ಲಿ ಭೂಕಂಪಗಳೂ ಜ್ವಾಲಾಮುಖಿಗಳೂ ಜನಿಸಿದುವು. ಪ್ರಾರಂಭದಲ್ಲಿ ಶಿಲಾಪಾಕವು ವಿಶೇಷವಾಗಿ ಮೇಲೆ ನುಗ್ಗಿಬಂದು, ಕೆಲವುಕಡೆ ಜ್ವಾಲಾಶಿಲೆಗಳೂ ಇನ್ನು ಕೆಲವುಕಡೆ ಗರ್ಭಾಂತಶಿಲೆಗಳೂ ನೆಲಮಟ್ಟದಿಂದ ಸಾವಿರಾರು ಅಡಿಗಳ ಎತ್ತರದಲ್ಲೆದ್ದು ನಿಂತುವು.

ಒಳಗಿನ ಶಿಲಾಪಾಕದ ಚಲನೆಯಿಂದ ಅನೇಕ ಪರ್ವತಗಳು ರೂಪಗೊಂಡಿರುತ್ತವೆ. ಜಲಶಿಲಾಪದರಗಳ ಭಾರದಿಂದ ಸಮುದ್ರದ ತಳವು ಕುಗ್ಗಿದಾಗ ಹೆಚ್ಚಿನ ಜಲಶಿಲೆಗಳಾಗಲು ಸ್ಥಳವಾಗುವುದು. ಇವುಗಳ ಒತ್ತಡದಿಂದ ಚಲಿಸಿದ ಶಿಲಾಪಾಕದ ಚಲನೆಯಾದಾಗ ಮಾರ್ಗದಲ್ಲಿ ಗಟ್ಟಿಯಾದ ಭೂಭಾಗಗಳೇನಾದರೂ ತಡೆಯಾದಲ್ಲಿ ಅವುಗಳ ಒತ್ತಡವು ಅಲ್ಲಿನ ಜಲಶಿಲೆಗಳ ಮೇಲೆಯೆ ಪ್ರಸರಿಸಿ ಅವುಗಳನ್ನು ಬಿಲ್ಲಿನಂತೆ ಬಗ್ಗಿಸುತ್ತದೆ. ಹೀಗೆ ಬಗ್ಗಿದಾಗ ಜಲಶಿಲೆಗಳ ಪದರಗಳು ಅನೇಕ ತಿರುವುಮುರಿವುಗಳಾಗಿ ಬಗ್ಗಿ ಸಮುದ್ರ ತಳದಿಂದೆದ್ದು, ನೀರಿನ ಮಟ್ಟದಿಂದ ಸಾವಿರಾರು ಅಡಿಗಳ ಮೇಲೆದ್ದು ನಿಲ್ಲುವುದು. ಅಗ್ನಿಶಿಲೆಗಳಿಗಿಂತಲೂ ಜಲಶಿಲೆಗಳು ಮೃದುವಾಗಿರುವ ಕಾರಣ ಒತ್ತಡಕ್ಕೆ ತಡೆಯದೆ ಬಗ್ಗುತ್ತವೆ. ವಿಶಾಲ ಪ್ರದೇಶದಲ್ಲಿ ರೂಪಗೊಂಡ ಜಲಶಿಲೆಗಳು ಸ್ವಲ್ಪ ಸ್ಥಳಗಳ ಅಂತರದಲ್ಲಿ ಒತ್ತಲ್ಪಟ್ಟಾಗ, ಅವು ಬಗ್ಗಿ ಎತ್ತರದಲ್ಲಿ ನಿಲ್ಲುತ್ತವೆ. ಹೀಗೆಯೇ ಪ್ರಪಂಚದ ಅತ್ಯುನ್ನತ ಪರ್ವತಶ್ರೇಣಿಗಳಲ್ಲಿ ಹಲವು ಒಂದಾನೊಂದು ಕಾಲದಲ್ಲಿ ಸಮುದ್ರತಳದಲ್ಲಿದ್ದು ಭೂಮಿಚರಿತ್ರೆಯ ಯುಗ ಮತ್ತು ಅಂಕಗಳಲ್ಲಿ (Epochs and Periods) ಸನ್ನಿವೇಶಗಳು ಅನುಕೂಲವಾಗಿ ಬಂದಾಗ ನೀರಿನ ಮಟ್ಟದಿಂದ ಮೇಲೆದ್ದು ಬಂದು ನಿಂತಿರುತ್ತವೆ. ಭೂಮಿಯ ಜೀವನ ಚರಿತ್ರೆಯಲ್ಲಿ ಅನೇಕಬಾರಿ ಭೂಭಾಗಗಳು ಕುಸಿದು ಹೊಸಪ್ರದೇಶಗಳೂ ಪರ್ವತಶ್ರೇಣಿಗಳೂ ನೀರಿನ ತಳದಿಂದ ಮೇಲೆದ್ದು ಬಂದು ನಿಂತಿರುತ್ತವೆ. ಈಗಿನ ಹಿಮಾಲಯಾ ಆಲ್ಪ್ಸ್ ಪರ್ವತಗಳ ಬಳಿ ಹಿಂದೆ ಉತ್ತರಾರ್ಧ ದಕ್ಷಿಣಾರ್ಧ

ಗೋಳಗಳನ್ನು ಪ್ರತ್ಯೇಕಿಸಿದ್ದ ದೊಡ್ಡ ಮಹಾಸಾಗರವಿದ್ದಿತು. "ಟೆಥಿಸ್" ಸಾಗರವೆಂದು ಇದನ್ನು ಕರೆದಿದ್ದಾರೆ. ಈಗಿನ ಈ ಪರ್ವತಶಿಖರಗಳಲ್ಲಿರುವ ಕಲ್ಲುಗಳು, ಆ ಸಾಗರದ ತಳದಲ್ಲಿ ರೂಪಗೊಂಡ ಜಲಶಿಲೆಗಳಾಗಿರುತ್ತವೆ. ಹಾಗೆಯೆ ಕಡಪ ಕರ್ನೂಲು ಮತ್ತು ವಿಂಧ್ಯಪರ್ವತಗಳ ಪ್ರದೇಶಗಳಲ್ಲಿನ ಅನೇಕ ಬೆಟ್ಟ ಸಾಲುಗಳು ಪ್ರಾಚೀನಯುಗಗಳ ಜಲಶಿಲಾ ಸಮುದಾಯದಿಂದ ಕೂಡಿವೆ. ಇದೇ ರೀತಿಯಲ್ಲಿ ಭೂಗೋಳದ ಎಲ್ಲಾ ಪ್ರದೇಶಗಳಲ್ಲಿಯೂ ಜಲಶಿಲಾ ಸಮುದಾಯಗಳು ನೀರಿನ ಮಟ್ಟದಿಂದ ಮೇಲೆದ್ದು ನಿಂತಿರುತ್ತವೆ.

ಸಾಧಾರಣವಾಗಿ ವಿಶಾಲವಾದ ಯಾವುದಾದರೊಂದು ಪ್ರದೇಶವು ಕುಸಿದಲ್ಲಿ, ಬೇರೊಂದು ಸ್ಥಲದಲ್ಲಿ ಹೊಸ ಭೂಭಾಗಗಳಾಗುತ್ತವೆ. ಇದಕ್ಕೆ ನಿದರ್ಶನವೇನೆಂದರೆ, ಹಿಮಾಲಯಾ ಆಲ್ಪ್ಸ್ ಪರ್ವತಗಳು ರೂಪಗೊಳ್ಳುವ ಮೊದಲು ಇಂಡಿಯಾ, ಆಫ್ರಿಕಾ, ಆಸ್ಟ್ರೇಲಿಯಾ ಖಂಡಗಳು ಒಟ್ಟಿಗಿದ್ದುವು ; ಟೆಥಿಸ್ ಸಾಗರದ ತಳವು ಮೇಲೆದ್ದು ಉನ್ನತವಾದ ಪರ್ವತಶ್ರೇಣಿಗಳು ಜನಿಸಿದಾಗ, ಈಗಿನ ಈ ಭೂಖಂಡಗಳ ಮಧ್ಯೆ ಇದ್ದ ವಿಶಾಲವಾದ ಭೂಭಾಗಗಳು ಕುಸಿದು, ಈಗಿನ ಅರಬ್ಬೀ ಸಮುದ್ರ ಹಿಂದೂ ಸಾಗರಗಳಾದುವೆಂದು ಗೊತ್ತಾಗಿದೆ. ಇದೇ ಮಾದರಿಯಲ್ಲಿ ಅನೇಕ ಭೂಭಾಗಗಳ ಏರುತಗ್ಗುಗಳು ನೀರಿನ ತಳದಲ್ಲಿ ಆಗುವುದರಿಂದ ನಮಗೆ ಅವು ಗೋಚರವಾಗುತ್ತಿಲ್ಲ.

ಜಲಶಿಲೆಗಳಿಂದ ಪರ್ವತಗಳು ರೂಪಗೊಂಡಿರುವುದಕ್ಕೆ ಬೇರೊಂದು ಕಾರಣವನ್ನು ಹೇಳುತ್ತಾರೆ. ಒಟ್ಟಿಗೆ ಅಥವಾ ಸ್ವಲ್ಪ ದೂರಗಳಲ್ಲಿದ್ದ ಭೂಭಾಗಗಳು ಒಳಗಿನ ಶಿಲಾಪಾಕದ ಮೇಲೆ ಜಾರಿದಂತಾಗಿ ದೂರದಲ್ಲಿನ ಪ್ರದೇಶಗಳು ಹತ್ತಿರಕ್ಕೂ ಹತ್ತಿರದಲ್ಲಿರುವ ಪ್ರದೇಶಗಳು ದೂರಕ್ಕೂ ಸರಿಯುತ್ತವೆಂದು ಅಭಿಪ್ರಾಯವಿದೆ. ಭೂಭಾಗಗಳು ಹತ್ತಿರಕ್ಕೆ ಸರಿದಾಗ ಸಾಗರದ ತಳದಲ್ಲಿನ ಶಿಲಾಪದರಗಳು ಎರಡು ಕಡೆಗಳಿಂದಲೂ ಒತ್ತಲ್ಪಟ್ಟು ನೀರಿನ ಮಟ್ಟದಿಂದ ಹೆಚ್ಚಿನ ಎತ್ತರದಲ್ಲಿ ಮೇಲಕ್ಕೇಳುವುವು. ಈ ವಿಧವಾದ ಭೂಭಾಗಗಳ ಚಲನೆಯು ದ್ವಿತೀಯ ಅಥವಾ ಮಧ್ಯಮ ಜೀವಕಲ್ಪದ ಕೊನೆಯಲ್ಲಿಯೂ ಮತ್ತು ತೃತೀಯ ಅಥವಾ ನವೀನ ಜೀವಕಲ್ಪದಲ್ಲಿಯೂ ಹೆಚ್ಚಾಗಿದ್ದಿತೆಂದು ತಿಳಿದುಬಂದಿದೆ. ಇದೇ ಕಾಲದಲ್ಲಿ ಈ ಭೂಭಾಗಗಳ ಚಲನೆಗಳಿಂದ ಅನೇಕ ಪ್ರದೇಶಗಳಲ್ಲಿ ಜ್ವಾಲಾಮುಖಿಗಳು ಜನಿಸಿ ಬಹಳ ವಿಸ್ತಾರವಾದ ಸ್ಥಲಗಳಲ್ಲಿ ಜ್ವಾಲಾಶಿಲೆಗಳನ್ನು ಹರಡಿದುವು. ನವೀನಯುಗದ ಪ್ರಾರಂಭದಲ್ಲಿ ದಕ್ಷಿಣ ಇಂಡಿಯಾ ದೇಶದ ದಖ್ಖನ ಪ್ರಸ್ಥಭೂಮಿಯಲ್ಲಿ ಹೆಚ್ಚಿನ ಜ್ವಾಲಾಶಿಲಾ ಪ್ರವಾಹವಾಗಿ ಸುಮಾರು ೨೦೦೦೦೦ ಚದರ ಮೈಲಿಗಳವರೆಗೂ ಇದರ ವ್ಯಾಪ್ತಿ ಇದ್ದಿತೆಂದು ನಮ್ಮ ದೇಶದ ಭೂವಿಜ್ಞಾನಿಗಳು ಗೊತ್ತುಮಾಡಿದ್ದಾರೆ.

ಒಟ್ಟಿನಲ್ಲಿ ತಿಳಿಸಬೇಕಾದರೆ ಭೂಭಾಗಗಳ ಮುಖ್ಯ ಬದಲಾವಣೆಗಳಿಗೆ ಅಡಿಯಲ್ಲಿರುವ ಶಿಲಾಪಾಕದ ಮತ್ತು ಭೂಮಿಯ ಹೊರಚಿಪ್ಪಿನ ಭಾಗಗಳ ಚಲನೆಗಳೇ ಕಾರಣವೆಂದು ಹೇಳಬಹುದು. ಜ್ವಾಲಾಮುಖಿಗಳಿಂದ ಕರಗಿದ ಕಲ್ಲು ಹೊರಗೆ ಬಂದು ಸುತ್ತಲಿನ ಪ್ರದೇಶದಲ್ಲಿ ಹರಿದಾಗ ಗಿಡ ಮರಗಳೂ ಊರುಗಳೂ ನಾಶಹೊಂದುತ್ತವೆ. ನಮಗೆ ತಿಳಿದಿರುವಂತೆ ಭೂಮಿಯಮೇಲೆ ೧೦೦೦ ಜ್ವಾಲಾಮುಖಿಗಳಿವೆ. ಇವುಗಳೆಲ್ಲವೂ ಹೆಚ್ಚಾಗಿ ಪೆಸಿಫಿಕ್ ಸಾಗರದ ತೀರಪ್ರದೇಶದಲ್ಲಿಯೂ ಮತ್ತು ನವೀನಯುಗದಲ್ಲಿ ರೂಪಗೊಂಡ ಉನ್ನತ ಪರ್ವತಶ್ರೇಣಿಗಳ ಪ್ರದೇಶದಲ್ಲಿಯೂ ಹೆಚ್ಚಾಗಿವೆ. ಭೂಕಂಪಗಳ ಹಾವಳಿಯೂ ಇಲ್ಲಿಯೇ ಹೆಚ್ಚು. ಸುಮಾರು ೩೫೦ ಜ್ವಾಲಾಮುಖಿಗಳು ಜೀವಂತವಾಗಿವೆಯೆಂದು ಹೇಳುತ್ತಾರೆ. ಚರಿತ್ರೆಯಿಂದ ತಿಳಿದು ಬಂದಿರುವಂತೆ ಕ್ರಿ.ಶ. ೭೯ ರಲ್ಲಿ ವೆಸೂವಿಯಸ್ ಜ್ವಾಲಾಮುಖಿಯಿಂದ ಪಾಂಪೆ ನಗರವು ನಾಶವಾಗಿ ಸುಮಾರು ೨೦೦೦೦೦ ಜನರು ಸತ್ತರು. ಇಲ್ಲಿಯೆ ೧೫೮೮ ರಲ್ಲೂ, ೧೯೦೬ ರಲ್ಲೂ ಜ್ವಾಲಾಶಿಲೆಗಳ ಪ್ರವಾಹವಾಗಿ ಬಹಳ ನಷ್ಟವಾಯಿತು. ಈಗಲೂ ಈ ಜ್ವಾಲಾಮುಖಿಯಿಂದ ಹೊಗೆ ಹೊರಡುತ್ತಿದೆ.

ಈಚೆಗೆ ತಿಳಿದುಬಂದಿರುವ ಘೋರವಾದ ಜ್ವಾಲಾಮುಖಿಯೆಂದರೆ ಸುಂಡಾ ಜಲಸಂಧಿಯಲ್ಲಿರುವ ಕ್ರಾಕಟೋವ ಎಂಬುದು; ೧೮೮೩ ರಲ್ಲಿ ಇದರಿಂದ ಜ್ವಾಲಾಶಿಲಾ ಪ್ರವಾಹವಾಗಿ ದ್ವೀಪದ ಮೂರರಲ್ಲಿ ಎರಡುಪಾಲು ನಾಶವಾಯಿತು. ಸುಮಾರು ಒಂದು ಘನಮೈಲಿಯಷ್ಟುಗಾತ್ರದ ಭೂಭಾಗವೊಂದು ಮೇಲಕ್ಕೆ ಹಾರಿ ನೀರಿನಲ್ಲಿ ಬಿದ್ದಿತು. ಇದರಿಂದ ಹೊರಟ ಸಮುದ್ರದ ಅಲೆಗಳು ಅರ್ಧ ಭೂಖಂಡದ ತೀರಗಳವರೆಗೂ ಪ್ರಸರಿಸಿದುವು. ಈ ಜ್ವಾಲಾಮುಖಿಯಿಂದ ಹೊರಟ ಕಲ್ಲಿನ ಚೂರುಗಳು ೧೬೦೦ ಮೈಲಿಗಳ ದೂರದಲ್ಲಿ ಚಲಿಸುತ್ತಿದ್ದ ಹಡಗಿನ ಮೇಲೆ ಬಿದ್ದುವೆಂದು ಗೊತ್ತಾಗಿದೆ. ಸುಮಾರು ೩೦೦ ಹಳ್ಳಿಗಳು ನಾಶವಾಗಿ ೩೬೦೦೦ ಜನರು ಸತ್ತರು.

ಜ್ವಾಲಾಮುಖಿಯಂತೆ ಬಿಸಿನೀರಿನ ಊಟೆಗಳು ಪ್ರಪಂಚದ ಅನೇಕ ಭಾಗಗಳಲ್ಲಿರುತ್ತವೆ. ಇವುಗಳಲ್ಲಿ ನ್ಯೂಜೀಲೆಂಡ್‌ನಲ್ಲಿ ಇರುವ ವೋಹುಟು ಎಂಬುದು ದೊಡ್ಡದು. ಇದರಿಂದ ಹೊರಟ ನೀರು ೫೦೦ ಅಡಿಗಳಿಂದ ೧೫೦೦ ಅಡಿಗಳ ವರೆಗೆ ಚಿಮ್ಮುವುದು. ಅಮೇರಿಕಾ ಖಂಡದ ಸಂಯುಕ್ತ ಸಂಸ್ಥಾನದಲ್ಲಿನ ಓಲ್ಡ್ ಫೈತ್‌ಫುಲ್ ಎಂಬ ಬಿಸಿನೀರಿನ ಊಟೆಯು ಮುಕ್ಕಾಲುಗಂಟೆಗೊಂದು ಸಲ ನೀರನ್ನು ಹೊರ ಸೂಸುವುದು.

ಸಾಧಾರಣವಾಗಿ ಜ್ವಾಲಾಮುಖಿಯೊಂದಿಗೆ ಭೂಕಂಪವೂ ಸೇರಿಕೊಂಡಿರುತ್ತದೆ. ಭೂಭಾಗಗಳ ಸ್ವಲ್ಪ ಚಲನೆಗಳಿಂದ ಭೂಕಂಪವಾಗುವುದುಂಟು. ಇದಾದಾಗ

ಭೂಮಿಯ ಮೇಲ್ಭಾಗವು ಬಟ್ಟೆಯಹಾಗೆ ಅದುರಿದಂತಾಗಿ ಮನೆಮಠಗಳು ಕುಸಿದು ಬೀಳುತ್ತವೆ. ಭೂಮಿಯಲ್ಲಿ ಬಿರುಕುಬಿಟ್ಟು ಅದರ ಮೂಲಕ ಬಿಸಿಯಾದ ನೀರೂ ಮಣ್ಣೂ ಮರಳೂ ನುಗ್ಗಿಬರುತ್ತವೆ. ಈಚೆಗೆ ನಮ್ಮ ದೇಶದಲ್ಲಿಯೆ ಆದ ಬೀಹಾರ್ ಕ್ವೆಟ್ಟಾ ಭೂಕಂಪಗಳಿಂದಾದ ಕಷ್ಟನಷ್ಟಗಳು ಎಲ್ಲರಿಗೂ ತಿಳಿದಿವೆ.

ಭೂಕಂಪ ಮತ್ತು ಜ್ವಾಲಾಮುಖಿಗಳು ಬೂದಿ ಮುಚ್ಚಿದ ಕೆಂಡದಂತಿರುತ್ತವೆ. ಯಾವ ಕಾಲದಲ್ಲಿ ಇವು ಜನಿಸುವುವೆಂದು ಹೇಳಲು ಸಾಧ್ಯವಿಲ್ಲ. ಇವುಗಳನ್ನು ತಪ್ಪಿಸುವುದಂತೂ ಆಗುವುದೇ ಇಲ್ಲ. ದಟ್ಟವಾದ ಕಾಡುಗಳೂ ಸುಂದರವಾದ ಪಟ್ಟಣಗಳೂ ಮರುಕ್ಷಣದಲ್ಲಿ ಮರುಭೂಮಿಯಂತಾಗಬಹುದು. ಹಲವು ಕಡೆ ನದಿಗಳ ದಿಕ್ಕುಗಳು ಬದಲಾವಣೆಹೊಂದುತ್ತವೆ. ಸಮುದ್ರತೀರದಲ್ಲಿರುವ ಪ್ರದೇಶಗಳು ಕೆಲವೆಡೆ ಮುಳುಗುವುವು. ಹೊಸ ಭೂಭಾಗಗಳು ಮೇಲಕ್ಕೇಳುವುವು. ಭೂಕಂಪ ಜ್ವಾಲಾಮುಖಿಗಳೆರಡೂ ತಮ್ಮ ಪ್ರಭಾವವನ್ನು ಸಂಪೂರ್ಣವಾಗಿ ಬೀರಿದಾಗ ಆಗತಕ್ಕ ಹಾನಿ ಗ್ರಹಿಸಲು ಸಾಧ್ಯವಲ್ಲ.

ಇವಿಷ್ಟು ಭೂಮಿಯ ಬದಲಾವಣೆಗಳು ಅಗೋಚರ ಕರ್ತೃಗಳಿಂದ ಆಗತಕ್ಕ ವಾಗಿರುತ್ತವೆ. ಆದರೆ ಭೂಮಿಯ ಮೇಲಿನ ಇತರ ಸಾಮಾನ್ಯ ವ್ಯತ್ಯಾಸಗಳು ಗಾಳಿಮಳೆಗಳ ಪ್ರಭಾವಗಳಿಂದ ಆಗುತ್ತವೆ. ಇವು ಮಾತ್ರ ಕ್ರಮವಾದ ರೀತಿಯಿಂದ ನಡೆಯುತ್ತಿವೆ. ಗಾಳಿ ಮಳೆಗಳಿಂದ ಭೂಭಾಗಗಳಲ್ಲಿನ ಕಲ್ಲುಗಳು ಶಿಥಿಲಹೊಂದಿ ಮಣ್ಣು ಮರಳಾಗಿ ಕೆಳಗಿನ ಪ್ರದೇಶಗಳಿಗೆ ಕೊಚ್ಚಿಹೋಗುತ್ತವೆ. ಎತ್ತರದಲ್ಲಿರುವ ಬೆಟ್ಟಗುಡ್ಡಗಳು ಕಾಲಾಂತರದಲ್ಲಿ ಕಡಿಮೆಯಾಗುತ್ತಾ ಬಂದು ಸುತ್ತಲಿನ ನೆಲ ಮಟ್ಟಕ್ಕೆ ಬರುವುವು. ನದಿಗಳ ನೀರು, ಹಿಮನದಿಗಳು, ಸಮುದ್ರದ ಅಲೆಗಳು ಮುಂತಾದುವುಗಳಿಂದ ಭೂಮಿಯ ಪ್ರದೇಶಗಳು ರೂಪಭೇದ ಹೊಂದುತ್ತವೆ. ಆದರೆ ಇವುಗಳ ಕಾರ್ಯಕ್ಕೆ ಹೆಚ್ಚಿನ ಕಾಲವ್ಯವಧಾನ ಬೇಕು.

ಸಾಗರ ಸರೋವರ ತಳದಲ್ಲಿ ಜಲಶಿಲೆಗಳು ರೂಪಗೊಂಡ ಅನಂತರದ ಭೂಮಿಯ ಚರಿತ್ರೆಯು ವಿಶದವಾಗಿ ತಿಳಿದುಬಂದಿದೆ. ಭೂಮಿಯ ಜೀವಿತಕಾಲವನ್ನು ೫ ಭಾಗ ಗಳನ್ನಾಗಿ ವಿಭಾಗಿಸಿದ್ದಾರೆ.—

೧. ಆದಿಶಿಲಾಕಲ್ಪ
೨. ಆದಿ ಜಲಶಿಲಾಕಲ್ಪ
೩. ಪ್ರಾಚೀನ ಜೀವಿಕಲ್ಪ
೪. ದ್ವಿತೀಯ ಅಥವಾ ಮಧ್ಯಮ ಜೀವಿಕಲ್ಪ
೫. ತೃತೀಯ ಅಥವಾ ನವೀನ ಜೀವಿಕಲ್ಪ

ಆದಿಜಲಶಿಲೆಗಳು ಪ್ರಾರಂಭವಾದಾಗ ಜೀವದ ಸುಳಿವಿರಲಿಲ್ಲ. ಜೀವವು ಆದಿ ಜಲಶಿಲೆಗಳಲ್ಲಿ ಯಾವುದೊ ಸನ್ನಿವೇಶದಲ್ಲಿ ಜನಿಸಿರಬೇಕು. ಕೇಂಬ್ರಿಯರ್ಕ್ ಎಂಬ ಪ್ರಾಚೀನ ಜೀವಿಕಲ್ಪದ ಮೊದಲನೆಯ ಅಂಕದಲ್ಲಿ ನಿರ್ದಿಷ್ಟವಾದ ಪ್ರಾಣಿಜೀವನವು ಇತ್ತೆಂದು ಗೊತ್ತಾಗಿದೆ. ಮೊದಲನೆಯ ಜೀವದ ಕುರುಹು ಆಂಟೇರಿಯೊ ದೇಶದ ಸುಣ್ಣಕಲ್ಲಿನಲ್ಲಿ ದೊರೆತಿದೆ. ಆಂಟಿಕೊಕೋಸಿಯ ಲಾಸೂನಿ ಎಂಬ ಪ್ರಾಣಿಯ ಪಳೆಯುಳಿಕೆ ಈ ಸುಣ್ಣಕಲ್ಲಿನಲ್ಲಿ ಸಿಕ್ಕಿದೆ. ಪ್ರಾಚೀನ ಜೀವಿಕಲ್ಪದ ಪ್ರಾರಂಭದ ಅಂಕಗಳಲ್ಲಿ ಅನೇಕ ಅಕಶೇರುಕ ವಂಶಗಳಿಗೆ ಸೇರಿದ್ದ ಪ್ರಾಣಿಗಳು ಜನಿಸಿದುವು. ಶೈವಾಲಗಳು, ಹುಳುಗಳು, ಹವಳಗಳು ಮುಂತಾದ ಪ್ರಾಣಿಗಳು ಗುಂಪುಗುಂಪಾಗಿ ಹುಟ್ಟಿ, ಕೆಲವು ಕಾಲ ಬಾಳಿ ಅಳಿದುವು. ಲಕ್ಷಾಂತರ ವರ್ಷಗಳ ವರೆಗೆ ಸಮುದ್ರ ವೊಂದರಲ್ಲಿಯೇ ಜೀವಿಗಳು ವಾಸವಾಗಿದ್ದುವು. ಡೆವೋನಿಯರ್ಕ್ ಎಂಬ ಮೂರನೆಯ ಅಂಕದಲ್ಲಿ ಮೀನುಗಳು ಕಾಣಿಸಿಕೊಂಡು ಇದೇ ಕಾಲದಲ್ಲಿ ಸಸ್ಯವರ್ಗಗಳು ಜನಿಸಿ, ಪ್ರಾಚೀನ ಜೀವಯುಗದ ಕೊನೆಯ ಎರಡು ಅಂಕಗಳಲ್ಲಿ ಸಸ್ಯಜೀವನವು ಪರಿಪಕ್ವಕ್ಕೆ ಬಂದು ಸಮುದ್ರದ ಅಳಿವೆಗಳ ಪ್ರದೇಶದಲ್ಲಿ ದಟ್ಟವಾದ ಕಾಡುಗಳು ಜನಿಸಿದುವು. ಭೂಮಿಯ ಮೇಲೆ ಜೀವನವು ಈ ಯುಗದ ಕೊನೆಯ ಅರ್ಧಭಾಗದಲ್ಲಿ ಪ್ರಾರಂಭ ವಾಯಿತು. ಪ್ರಾಚೀನ ಜೀವಯುಗದ ಕಾಡುಪ್ರದೇಶಗಳು ಕುಸಿದು, ಅವುಗಳು ಆಳದಲ್ಲಿ ಭೂಮಿಯೊಳಗೆ ಹೂಳಿದಂತಾಗಿ ಭೂಮಿಯೊಳಗಿನ ಶಾಖ ಮತ್ತು ಒತ್ತಡ ಗಳಿಂದ ರೂಪಭೇದ ಹೊಂದಿ ಈಗ ನಮಗೆ ಸಿಕ್ಕುತ್ತಿರುವ ಕಲ್ಲಿದ್ದಲ ನಿಕ್ಷೇಪಗಳಾ ದುವು. ಈ ಹೊತ್ತಿಗೆ ಪ್ರಾಣಿ ಮತ್ತು ಸಸ್ಯಗಳು ಅಸಂಖ್ಯಾತವಾಗಿದ್ದುವು. ಮೊದಲಾಗಿ ಜನಿಸಿದ್ದ ಕೆಲವು ಪ್ರಾಣಿಗಳು ಬಹುಕಾಲ ಬಾಳದೆ ನಾಶವಾದುವು. ಪ್ರಾಚೀನ ಜೀವಯುಗದ ಕೊನೆಯಲ್ಲಿ ಕೆಲವು ಭೂಭಾಗಗಳಲ್ಲಿ ಹಿಮಗಾಲವು ಪ್ರಾಪ್ತವಾಗಿ ಬಹಳಕಾಲದ ವರೆಗೆ ಈ ಭೂಭಾಗಗಳ ಮೇಲೆ ದಪ್ಪನಾದ ಮಂಜಿನ ಗಡ್ಡೆಯ ಪದರವಿದ್ದಿತು. ಕಶೇರುಕ ವಂಶದ ಕೆಲವು ಪ್ರಾಣಿಗಳು ಪ್ರಾಚೀನ ಜೀವ ಯುಗದಲ್ಲಿಯೇ ಜನಿಸಿದ್ದುವು.


ದ್ವಿತೀಯ ಅಥವಾ ಮಧ್ಯಮ ಜೀವಕಲ್ಪದಲ್ಲಿ ಅನೇಕ ಕಶೇರುಕ ಅಕಶೇರುಕ ವಂಶದ ಪ್ರಾಣಿಗಳೂ ಅನೇಕ ಸಸ್ಯವರ್ಗಗಳೂ ಹೆಚ್ಚಿನ ಬೆಳವಣಿಗೆಯನ್ನು ಹೊಂದಿ ದ್ದುವು. ಇವುಗಳಲ್ಲಿ ಸರೀಸೃಪಗಳ ಜೀವನವು ಹೆಚ್ಚಿ, ಅವುಗಳಲ್ಲಿ ಭೂತಾಕಾರದ ಪೆಡಂಭೂತಗಳು ಈ ಯುಗದಲ್ಲಿ ಹೆಚ್ಚಾಗಿ ಬಾಳಿದುವು. ಈ ಪೆಡಂಭೂತಗಳಲ್ಲಿ ಕೆಲವು ನೀರಿನಲ್ಲಿಯೂ ಕೆಲವು ನೆಲದ ಮೇಲೂ ವಾಸಿಸುತ್ತಿದ್ದುವಲ್ಲದೆ ಕೆಲವಕ್ಕೆ ರೆಕ್ಕೆಗಳಿದ್ದು ಪಕ್ಷಿಗಳಂತೆ ಹಾರುತ್ತಿದ್ದುವು. ಇವುಗಳ ಜೀವನದಿಂದ ದ್ವಿತೀಯ ಜೀವಿಕಲ್ಪವನ್ನು

"ಸರೀಸೃಪಯುಗ"ವೆಂದು ಕರೆದಿದ್ದಾರೆ. ಈ ಯುಗದಲ್ಲಿ ಮೊದಲು ಪಕ್ಷಿಗಳೂ ಕೆಲವು ಸಸ್ತನಪ್ರಾಣಿವರ್ಗಗಳೂ ಜನಿಸಿದುವು. ಉಳಿದ ಅನೇಕ ಕಶೇರುಕ ಅಕಶೇರುಕ ಪ್ರಾಣಿಗಳು ಮತ್ತು ಮರಗಿಡಗಳು ಹೇರಳವಾಗಿ ಜೀವಿಸಿ, ಕೆಲವು ಕಾಲದ ಮೇಲೆ ಇವುಗಳಲ್ಲಿ ಹಲವು ಅಳಿದುವು. ಪೆಡಂಭೂತಗಳು ದ್ವಿತೀಯ ಜೀವಕಲ್ಪದ ಕೊನೆಯಲ್ಲಿ ಬಹಳವಾಗಿ ಕಡಿಮೆಯಾಗಿ ತೃತೀಯ ಜೀವಿಕಲ್ಪವು ಪ್ರಾರಂಭಿಸುವ ಹೊತ್ತಿಗೆ ಪೂರ್ಣವಾಗಿ ನಾಶವಾಗಿದ್ದುವು.

ತೃತೀಯ ಜೀವಿಕಲ್ಪದಲ್ಲಿ ಇತರ ಪ್ರಾಣಿ ಮತ್ತು ಸಸ್ಯಗಳೊಂದಿಗೆ ಸಸ್ತನಿ ಪ್ರಾಣಿಗಳು ಹೆಚ್ಚಿನ ಬೆಳವಣಿಗೆಯನ್ನು ಹೊಂದಿದುವು. ಆನೆಗಳು, ಕುದುರೆಗಳು, ಕೋತಿಗಳು ಮುಂತಾದುವುಗಳೆಲ್ಲವೂ ಈ ಯುಗದಲ್ಲಿಯೆ ಜನಿಸಿದುವು. ಈ ಯುಗದಲ್ಲಿ ಹುಟ್ಟಿದ ಅನೇಕ ಪ್ರಾಣಿ ಮತ್ತು ಗಿಡಮರಗಳ ವರ್ಗಗಳು ಅಳಿದಿದ್ದರೂ ಅವುಗಳಲ್ಲಿ ಹಲವು ಈಗಲೂ ವಾಸಿಸುತ್ತಿವೆ. ಇವುಗಳಲ್ಲಿ ಮನುಷ್ಯನೂ ಒಬ್ಬನು. ಅನೇಕ ಜೀವಿಗಳು ಕೆಲವುಕಾಲ ಬಾಳಿ ನಾಶವಾದುವು. ಇದಕ್ಕೆ ಆಯಾ ಕಾಲದ ವಾಯು ಗುಣ ಮತ್ತು ಇತರ ಪರಿಸ್ಥಿತಿಗಳು ಕಾರಣವಾಗಿದ್ದುವು. ಅಸಂಖ್ಯಾತವಾದ ಜೀವರಾಶಿಗಳು ಹುಟ್ಟಿ, ಬಾಳಿ, ನಾಶವಾಗಿದ್ದರೂ ಅವುಗಳ ಕಳೇಬರಗಳು ಆಯಾ ಕಾಲದ ಕಲ್ಲುಗಳಲ್ಲಿದ್ದು, ಆ ಪ್ರಾಣಿಗಳ ಜೀವನಚರಿತ್ರೆಯನ್ನು ಗೊತ್ತುಮಾಡಲು ಸಹಾಯಕವಾಗಿದೆ. ಭೂಶಾಸ್ತ್ರದ ಈ ಭಾಗವನ್ನು ಪ್ರಾಚೀನಜೀವಿಶಾಸ್ತ್ರವೆಂದು ಕರೆಯುತ್ತಾರೆ. ಇದರ ಶೋಧನೆಯಲ್ಲಿ ಪಳೆಯುಳಿಕೆಗಳು ಮುಖ್ಯವಾದ ಸ್ಥಾನವನ್ನು ಹೊಂದಿರುತ್ತವೆ. ಪ್ರಪಂಚದ ಅನೇಕ ಭಾಗಗಳಲ್ಲಿನ ಜಲಶಿಲೆಗಳಲ್ಲಿರುವ ಪಳೆಯುಳಿಕೆಗಳಿಂದಲೂ ಮತ್ತು ಇವುಗಳಿರುವ ಕಲ್ಲುಗಳ ಸ್ವರೂಪದಿಂದಲೂ, ಪ್ರಾಚೀನ ಯುಗಗಳಲ್ಲಿನ ಭೂವಿವರಣೆಯನ್ನು ಗೊತ್ತುಮಾಡಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಇಂಡಿಯಾ, ಆಫ್ರಿಕಾ, ಆಸ್ಟ್ರೇಲಿಯಾ ಖಂಡಗಳು ಒಟ್ಟಿಗಿದ್ದುವೆಂಬುದನ್ನು ಗೊಂಡ್ವಾನ ಎಂಬ ಜಲಶಿಲಾ ಸಮುದಾಯದಲ್ಲಿ ದೊರೆತಿರುವ ಗ್ಲಾಸಾಪ್ಟೆರಿಸ್ ಎಂಬ ಸಸ್ಯದ ಪಳೆಯುಳಿಕೆಯಿಂದ ನಿರ್ಧರಿಸಿದ್ದಾರೆ. ಈ ಅವಶೇಷಗಳಿಂದ ಹಿಮಕಾಲಗಳನ್ನೂ ಇತರ ವಾಯುಗುಣ ವ್ಯತ್ಯಾಸಗಳನ್ನೂ ಸುಲಭವಾಗಿ ಗೊತ್ತುಮಾಡಬಹುದು. ಈ ಭಾಗದ ಭೂಮಿಚರಿತ್ರೆಯನ್ನು ಬಹಳ ವಿಸ್ತಾರವಾಗಿ ತಿಳಿಸಿದ್ದಾರೆ. ಪ್ರತಿಯೊಂದು ಕಲ್ಪವನ್ನೂ ಅಂಕ ವರ್ಗ ಉಪವರ್ಗಗಳನ್ನಾಗಿ ವಿಭಾಗಿಸಿ ಪ್ರತಿಯೊಂದು ಭಾಗದ ಕಲ್ಲಿನಲ್ಲಿಯೂ ದೊರೆತಿರುವ ಪಳೆಯುಳಿಕೆಗಳನ್ನು ಪರೀಕ್ಷಿಸಿದ್ದಾರೆ. ಸ್ಥಳಸಂಕೋಚದಿಂದ ಹೆಚ್ಚಿನ ವಿಷಯಗಳನ್ನು ಇಲ್ಲಿ ತಿಳಿಸಲು ಸಾಧ್ಯವಾಗಿಲ್ಲ.

ಜಲಶಿಲೆಗಳ ಮಂದದಿಂದಲೂ ಪ್ರಾಣಿ ಮತ್ತು ಸಸ್ಯವರ್ಗಗಳ ಬೆಳವಣಿಗೆ

ಗಳಿಂದಲೂ ಭೂಮಿಯ ಜೀವನಚರಿತ್ರೆಯ ಕಾಲಗಳ ಅಂತರವನ್ನು ಗೊತ್ತುಮಾಡಿದ್ದಾರೆ. ಹಿಂದೆ ತಿಳಿಸಿದಂತೆ, ಭೂಮಿಯ ಈಗಿನ ವಯಸ್ಸು ೨೪೦ ಕೋಟಿ ವರ್ಷಗಳೆಂದು ಗೊತ್ತುಮಾಡಿ ಅದನ್ನು ೨೪ ಗಂಟೆಗಳ ದಿವಸಕ್ಕೆ ಹೋಲಿಸೋಣ. ಇದರಲ್ಲಿ ಮೊದಲನೆಯ ೯ ಗಂಟೆಗಳ ಕಾಲವು (೯೦ ಕೋಟಿ ವರ್ಷಗಳು) ಆದಿ ಅಗ್ನಿಶಿಲೆಗಳ ಕಲ್ಪಕ್ಕೆ ಸೇರಿರುತ್ತದೆ. ಈ ಕಾಲವು ಭೂಮಿಯು ಗ್ರಹರೂಪದಿಂದ ಬೇರೆಯಾಗಿ, ಆರಿ, ಅಗ್ನಿಶಿಲೆಗಳು ಜನಿಸಿ ಜಲಶಿಲೆಗಳು ದೊಡ್ಡ ಜಲಾಶಯಗಳಲ್ಲಿ ರೂಪಗೊಳ್ಳುವವರೆಗಿನದೆಂದು ಹೇಳಬಹುದು. ಅದರಿಂದೀಚಿನ ಮೂರು ಗಂಟೆಗಳಲ್ಲಿ ಆದಿಜಲಶಿಲೆಗಳಾದುವು. ಇದರಲ್ಲಿಯೆ ಜೀವವು ಭೂಮಿಯಲ್ಲಿ ಹುಟ್ಟಿರಬೇಕು. ಪ್ರಾಚೀನ ಜೀವಕಲ್ಪದ ಕಾಲ ೮ ಗಂಟೆಗಳು, ದ್ವಿತೀಯ ಕಲ್ಪದ ಕಾಲ ೩ ಗಂಟೆಗಳು ಮತ್ತು ತೃತೀಯ ಕಲ್ಪದ ಕಾಲ



ಚಿತ್ರ ೫. ಭೂಕಾಲವಿಭಾಗಗಳನ್ನು ತೋರಿಸುವ ಗಡಿಯಾರ

ಒಂದು ಘಂಟೆಯು ೧೦ ಕೋಟಿ ವರ್ಷಗಳನ್ನು ಸೂಚಿಸುವುದು

೧ ಗಂಟೆ ಮಾತ್ರವೆಂದು ಗೊತ್ತಾಗಿದೆ. ಈ ಕಾಲನಿರ್ಣಯದಂತೆ ಮನುಷ್ಯನು ಭೂಮಿಯ ಮೇಲೆ ಜನಿಸಿ ಸುಮಾರು ೩ ಸೆಕೆಂಡುಗಳಾಗಿರಬಹುದು. ಕೆಳಗಿನ ಚಿತ್ರದಲ್ಲಿ ಈ ಕಾಲವಿಭಾಗಗಳನ್ನು ಗಡಿಯಾರಕ್ಕೆ ಹೋಲಿಸಿ ತೋರಿಸಿದೆ.

ಭೂಮಿಚರಿತ್ರೆಯನ್ನು ತಿಳಿಯಲು ಕಲ್ಲುಚೂರುಗಳೇ ಸಾಕು. ಇವುಗಳ ಪರೀಕ್ಷೆಯಿಂದ ಅವುಗಳು ರೂಪಗೊಂಡ ಕಾಲ ಮತ್ತು ಸನ್ನಿವೇಶಗಳನ್ನು ಗೊತ್ತುಮಾಡಬಹುದು. ನಿರ್ಜೀವವಾದ ವಸ್ತುಗಳಾಗಿದ್ದರೂ ಈ ಕಲ್ಲುಗಳು ತಿಳಿಸತಕ್ಕ ವಿಷಯಗಳು ಆಶ್ಚರ್ಯಕರವಾದುವು. ಜ್ವಾಲಾಶಿಲೆಗಳನ್ನೂ ಗರ್ಭಾಂತಶಿಲೆಗಳನ್ನೂ ಅವುಗಳಲ್ಲಿರುವ ಖನಿಜಗಳಿಂದ ಗೊತ್ತುಮಾಡಬಹುದು. ಸುತ್ತಲಿನ ಶಿಲಾಸಂಯೋಜನೆಯಿಂದ ಈ ಕಲ್ಲುಗಳು ಹುಟ್ಟಿದ ಕಾಲವನ್ನು ತಿಳಿಯಬಹುದು. ಅದರಂತೆಯೆ ಜಲಶಿಲೆಗಳು ಯಾವ ಯಾವ ಕಾಲಗಳಲ್ಲಿ ಜನಿಸಿದವೆಂಬುದನ್ನು ಅವುಗಳ ರಚನೆಯಿಂದಲೂ ಮತ್ತು ಅವುಗಳಲ್ಲಿ ದೊರೆಯುವ ಜೀವಾವಶೇಷಗಳಿಂದಲೂ ತಿಳಿಯಬಹುದು. ಈ ಪಳಿಯುಳಿಕೆಗಳಿಂದ ಮುದ್ರಿಸಲ್ಪಟ್ಟ ಶಿಲಾಪದರಗಳು ಭೂಮಿಚರಿತ್ರೆಯ ಹಾಳೆಗಳಂತಿವೆ. ಆದಿ ಅಗ್ನಿಶಿಲೆಗಳಿಂದ ಪ್ರಾರಂಭವಾಗಿ ಜಲಶಿಲೆಗಳ ಮತ್ತು ರೂಪಾಂತರ ಶಿಲೆಗಳ ವರೆಗೂ ಪ್ರತಿಯೊಂದು ಕಲ್ಲೂ ತನ್ನ ಚರಿತ್ರೆಯನ್ನು ತಿಳಿಸುವುದು.

ಹೀಗೆ ಕೆಲಸಕ್ಕೆ ಬಾರದಂತಿರುವ ಚೂರುಕಲ್ಲುಗಳ ಜೋಡಣೆಯಿಂದ ಭೂಶಾಸ್ತ್ರಜ್ಞನು ಭೂಮಿಯ ಚರಿತ್ರೆಯನ್ನು ಗೊತ್ತುಮಾಡುತ್ತಾನೆ. ಇವನ ಕಾರ್ಯದಲ್ಲಿ ಬೇಕಾಗತಕ್ಕ ಸಲಕರಣೆಗಳಾದರೂ ಬಹಳ ಕಡಿಮೆ. ಒಂದೆರಡು ಸುತ್ತಿಗೆಗಳು, ಉತ್ತರಮುಖಿ, ಸ್ಥಳದ ನಕಾಶೆ, ಭೂತಗನ್ನಡಿ, ಕೆಲವು ದ್ರಾವಕಗಳು, ಒಂದು ಸೂಕ್ಷ್ಮದರ್ಶಕಯಂತ್ರ, ಕಲ್ಲನ್ನು ತೆಳ್ಳಗೆ ತಿಕ್ಕಲು ಬೇಕಾದ ಕಾವಲಿ ಮರಳು ಮುಂತಾದುವು, ಇವಿಷ್ಟರ ಸಹಾಯದಿಂದ ಒಂದು ಪ್ರದೇಶದ ಭೂಚರಿತ್ರೆಯನ್ನು ನಕಾಶೆಯ ರೂಪದಲ್ಲಿ ಚಿತ್ರಿಸಬಹುದು. ಈ ಶೋಧನೆಯ ಕಾರ್ಯದಲ್ಲಿ ಹಲವು ಹೊಸ ವಿಷಯಗಳು ತಿಳಿದುಬಂದು ಅನೇಕ ಮುಖ್ಯ ನಿರ್ಣಯಗಳಾಗುತ್ತವೆ. ಭೂಶೋಧನೆಯ ಸಮಾಧಾನವೊಂದೇ ಅಲ್ಲದೆ ಭೂವಿಜ್ಞಾನಿಗೆ ಪ್ರಕೃತಿ ಸೌಂದರ್ಯವಂತೂ ನಿತ್ಯದ ಹಬ್ಬದೂಟದಂತಿರುವುದು. ಬೆಟ್ಟಗುಡ್ಡಗಳು, ಕಾಡುಮೇಡುಗಳು, ಎಲ್ಲವೂ ಇವನ ಪಾಲೇ! ಎಲ್ಲಿ, ಎಷ್ಟು ಅಲೆದರೂ ಇವನನ್ನು ಕೇಳುವವರಿಲ್ಲ. ಪ್ರಕೃತಿ ಸೌಂದರ್ಯವನ್ನು ನೋಡಿ, ಆನಂದಿಸಿ, ಅಲ್ಲಲ್ಲಿ ಬಿದ್ದ ಎದ್ದಿರುವ ಕಲ್ಲುಗಳನ್ನು ಒಡೆದು ಪರೀಕ್ಷಿಸಿ ತನ್ಮೂಲಕ ಶಿಲಾರೂಪಿಯಾದ ಪರಮಾತ್ಮನಿಗೆ ತನ್ನ ಸೇವೆಯನ್ನು ಅರ್ಪಿಸಲು ಭೂವಿಜ್ಞಾನಿಗಿರುವಷ್ಟು ಅವಕಾಶವು ಇನ್ನು ಯಾರಿಗೂ ಇರುವುದಿಲ್ಲ.

ಟಿ. ಪಿ. ಕೃಷ್ಣಾಚಾರ್.

ಬೆಂಗಳೂರಿಗೆ ನೀರಿನ ಸರಬರಾಯಿ

(ದೀಪಾವಳಿಯ ಸಂಚಿಕೆಯ ೮೧ನೆಯ ಪುಟದಿಂದ ಮುಂದುವರಿದು ಮುಗಿದಿದೆ)

ಹೇಸರಘಟ್ಟದ ಕೆರೆಯ ಏರಿಯನ್ನು ಹದವಾದ ಮಣ್ಣಿನಿಂದ ಕಟ್ಟಿದೆಯೆಂದು, ನೋಡಿದ್ದೇವೆ. ನೀರಿನ ಆಳ ನಲವತ್ತು ಅಡಿಗೆ ಮೀರದೆ ಇದ್ದು ಪಾಯದಲ್ಲಿ ಕಲ್ಲು ಸಿಕ್ಕದೆ ಇದ್ದರೆ ಮಣ್ಣಿನ ಏರಿಯನ್ನು ಕಟ್ಟುವುದು ಸುಲಭ. ಈ ಕೆಲಸವನ್ನು ನಮ್ಮ ಹಳ್ಳಿಯ ಜನರೇ ಮಾಡಬಲ್ಲರು. ಇಂಥ ಕೆರೆಗಳು ನಮ್ಮ ಸೀಮೆಯಲ್ಲಿ ಸುಮಾರು ಒಂದು ಚದರಮೈಲಿಗೆ ಒಂದರಂತೆ ಇವೆ. ಚನ್ನಗಿರಿಯ ಸೂಳೆಕೆರೆ, ಕುಣಿಗಲುಕೆರೆ, ಶಿಕಾರಿಪುರದಲ್ಲಿ ಅಂಜನಾಪುರದಕೆರೆ, ಬೌರಿಂಗ್‌ಪೇಟೆಯ ರಾಮಸಾಗರ, ಇವೆಲ್ಲಾ ಈ ನಮೂನೆಯ ಕೆರೆಗಳು.

ನೀರಿನ ಆಳವು ನಲವತ್ತು ಅಡಿಗೆ ಮೀರಿದರೆ ಮಣ್ಣಿನ ಏರಿ ಸಾಧಾರಣವಾಗಿ ತಡೆಯಲಾರದು. ಏರಿಯ ಅಗಲವು ಬಹಳ ಹೆಚ್ಚಾಗುತ್ತದೆ. ಮಣ್ಣು ವಿಶೇಷವಾಗಿ ಒದಗಬೇಕು. ಕೆಲಸ ಸಾವಕಾಶ, ಮುಜುಗರ. ಅದಕ್ಕಾಗಿ ಮತ್ತೊಂದು ರೀತಿಯ ಕಟ್ಟಡದ ವಿಜ್ಞಾನವು ಪಾಶ್ಚಾತ್ಯರಿಂದ ತಿಳಿಯುವವರೆಗೂ ಇದಕ್ಕಿಂತ ದೊಡ್ಡ ಜಲಾಶಯಗಳ ನಿರ್ಮಾಣ ಸಾಧ್ಯವಾಗಿರಲಿಲ್ಲ. ನೀರೇನೋ ಹೊಳೆಯಲ್ಲಿ ಬೇಕಾದ ಹಾಗಿದೆ. ಶೇಖರಿಸಿ ಕೊಟ್ಟರೆ ಉಪಯೋಗಿಸುವುದಕ್ಕೂ ಜನ ಆತುರವಾಗಿದ್ದಾರೆ. ಈ ಸಂದರ್ಭದಲ್ಲಿ ಕಲ್ಲುಗಾರೆಯ ಕಟ್ಟೆಗಳಿಂದ ಜೀವನದಿಗಳನ್ನು ತಡೆಗಟ್ಟುವುದು ತಿಳಿದದ್ದು ಅನುಕೂಲವಾಯಿತು. ಬೋರನಕಣಿವೆ, ಮಾರೀಕಣಿವೆ, ಕನ್ನಂಬಾಡಿ ಕಟ್ಟೆಗಳಂತೆ ತಿಪ್ಪಗೊಂಡನಹಳ್ಳಿ ಕಟ್ಟೆಯನ್ನೂ ಕಲ್ಲುಗಾರೆಯಲ್ಲಿ ಕಟ್ಟಿದೆ. ನದಿಯ ತಳದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೂ ಕಲ್ಲಿನ ಪಾಯ ಮಾತ್ರ ಸಿಕ್ಕಿದರೆ ಎಷ್ಟು ಎತ್ತರ ಬೇಕಾದರೂ ಕಟ್ಟೆ ಕಟ್ಟಬಹುದು. ಹೊಳೆಯ ನೀರು ಒದೆಯುತ್ತಿರುವಾಗ ಕಲ್ಲಿಗೆ ಕಚ್ಚಿ ಹಿಡಿದು ನಿಂತ ಕಟ್ಟೆಯ ಭಾರವೊಂದೇ ಅದನ್ನು ಕಾಯುತ್ತದೆ. ಕಟ್ಟೆಯ ತೂಕ ಕೆಳಗೆ ಎಳೆಯುತ್ತದೆ. ನೀರು ಪಕ್ಕಕ್ಕೆ ನೂಕುತ್ತದೆ. ಪರಿಣಾಮದಲ್ಲಿ ಈ ಎರಡು ಶಕ್ತಿಗಳಿಗೂ ಸಂಧಾನವಾಗಿ ತಮ್ಮ ಬಲವನ್ನೆಲ್ಲಾ ಪಾಯದ ಮೇಲೆ ತೀರಿಸಿಕೊಳ್ಳುತ್ತವೆ. ಅದಕ್ಕೇ ಈ ಕಟ್ಟೆಗಳಿಗೆ ಗಟ್ಟಿಕಲ್ಲಿನ ಪಾಯ ಆವಶ್ಯಕ.

ತಿಪ್ಪಗೊಂಡನಹಳ್ಳಿಯ ಕಟ್ಟೆಯ ಬಳಿ ಅರ್ಕಾವತೀ ನದೀತಳವು ಸಮುದ್ರ ಮಟ್ಟದ ಮೇಲೆ ೨,೪೫೫ ಅಡಿ ಎತ್ತರದಲ್ಲಿದೆ. ಇಲ್ಲಿ ನದಿಯ ಪಾತ್ರವು ೯೦ ಅಡಿ

ಯಷ್ಟು ಕಿರಿದಾಗಿದ್ದು ಎರಡು ಕಡೆಯಲ್ಲಿಯೂ ದಡಗಳು ಕಡಿದಾಗಿವೆ. ಸದ್ಯಕ್ಕೆ ಬೆಂಗಳೂರಿಗೆ ಬೇಕಾಗಿರುವ ೬೨೫ ಲಕ್ಷ ಗ್ಯಾಲನ್ ಅಥವಾ ೧೦ ಲಕ್ಷ ಸಲೆ ಅಡಿ ನೀರನ್ನು ಒಂದೇ ಸಮನಾಗಿ ಒದಗಿಸುವುದಕ್ಕೆ ಕಟ್ಟೆಯಲ್ಲಿ ೨೩೭.೪ ಕೋಟಿ ಸಲೆ ಅಡಿ ನೀರು ನಿಲ್ಲಬೇಕು. ಈ ಜಾಗದಲ್ಲಿ ಇಷ್ಟು ನೀರು ನಿಲ್ಲಬೇಕಾದರೆ ಕೆರೆಯಲ್ಲಿ ನೀರಿನ ಆಳ ೧೦೫ ಅಡಿ ಇರಬೇಕು. ಆಗ ನೀರು ೧.೮ ಚದರ ಮೈಲಿಯಷ್ಟು ಆವರಿಸಿ ನಿಲ್ಲುತ್ತದೆ. ಇನ್ನು ಮುಂದೆ ದಿನಂಪ್ರತಿ ೧ ಕೋಟಿ ಗ್ಯಾಲನ್ ಅಥವಾ ೧೬ ಲಕ್ಷ ಸಲೆ ಅಡಿ ನೀರು ಬೆಂಗಳೂರಿಗೆ ಬೇಕಾದಾಗ ನೀರಿನ ಆಳ ೧೧೫ ಅಡಿ ಇರಬೇಕಾಗುತ್ತದೆ. ಈ ನೀರಿನಲ್ಲಿ ಸರಾಸರಿ ವರ್ಷಕ್ಕೆ ೫ ಅಡಿಯಷ್ಟು ನೀರು ಆವಿಯಾಗಿ ಮೇಲಕ್ಕೆ ಹೋಗುತ್ತದೆ. ನೀರು ವಿಸ್ತಾರವಾಗಿ ಹರಡಿದಷ್ಟೂ ಹೀಗೆ ಹೋಗುವ ನೀರಿನ ಪ್ರಮಾಣ ಹೆಚ್ಚು. ಈ ಕಟ್ಟೆಯ ವಿಶೇಷ ಗುಣವೆಂದರೆ ಕಟ್ಟೆಯ ಉದ್ದ ಕಡಮೆ, ಮತ್ತು ಕೆರೆ ಆಳವಾಗಿದ್ದು ಹೆಚ್ಚು ನೀರು ಹಿಡಿದರೂ ನೀರು ಹರಡಿರುವ ಪ್ರದೇಶ ಕಡಮೆ. ಈ ವಿಚಾರದಲ್ಲಿ ಹೇಸರಘಟ್ಟದ ಕೆರೆಯೊಂದಿಗೆ ಇದನ್ನು ಹೋಲಿಸಿದರೆ ಈ ಅನುಕೂಲತೆಯು ಎದ್ದು ಕಾಣುತ್ತದೆ.

ಕೆರೆ	ಉದ್ದ	ಆಳ	ಹಿಡಿಯುವ ನೀರಿನ ಪ್ರಮಾಣ ಕೋಟಿ ಸಲೆಅಡಿ	ಹರಡಿರುವ ವಿಸ್ತಾರ, ಲಕ್ಷ ಚದರಡಿ
ತಿಪ್ಪಗೊಂಡನಹಳ್ಳಿ	೧,೪೦೦ ಅಡಿ	೧೧೫ ಅಡಿ	೩೦೪	೬೨.೪
ಹೇಸರಘಟ್ಟ	೪,೯೦೦ ಅಡಿ	೩೦ ಅಡಿ	೧೦೦	೬೩.೪೪

ಇದರಿಂದ ನೋಡುವುದಕ್ಕೆ ಸರೋವರವು ದೀರ್ಘವಾಗಿ ವಿಶಾಲವಾಗಿ ಕಾಣದಿದ್ದರೂ ಕೂಡಿಟ್ಟ ನೀರು ಬಿಸಿಲಿನಲ್ಲಿ ಆವಿಯಾಗಿ ಕೈತಪ್ಪಿಹೋಗುವುದು ತುಂಬ ಕಡಮೆ. ಇನ್ನೊಂದು ವಿಧದಲ್ಲಿಯೂ ಪೋಲಾಗುವ ನೀರಿನಲ್ಲಿ ಉಳಿತಾಯವಿದೆ. ಕಲ್ಲಿನ ಕಟ್ಟೆಯ ಕೆಳಗೆ ಜಿನುಗುವ ನೀರು ಮಣ್ಣಿನ ಏರಿಯಲ್ಲಿ ಜಿನುಗುವ ನೀರಿಗಿಂತ ಅರೆವಾಸಿಗೆ ಮೀರಿ ಕಡಮೆಯಾಗುತ್ತದೆ.

ಇಷ್ಟೇ ಅಲ್ಲದೆ ಕೆರೆಗೆ ಬರುವ ನೀರೂ ಹೆಚ್ಚು. ಈ ಪ್ರದೇಶದಲ್ಲಿ ಹೇಸರಘಟ್ಟದ ಪ್ರಾಂತದಲ್ಲಿ ಆಗುವಷ್ಟೇ ಪ್ರಮಾಣ ಮಳೆಯಾದರೂ ಸ್ವಂತ ಜಲಾನಯನ ಭೂಮಿಯು ಕಡಿದಾಗಿ ಗುಡ್ಡಗಾಡುಗಳಿಂದ ಕೂಡಿರುವುದರಿಂದ ಬಿದ್ದ ಮಳೆಯಲ್ಲಿ

ಹೆಚ್ಚುಭಾಗ ನೀರು ಹೊಳೆಗೆ ಸೇರುತ್ತದೆ. ೧೯೩೩ನೆಯ ಆಗಸ್ಟ್ ೨೦ನೆಯ ತೇದಿಯಿಂದ ಅದೇ ಸೆಪ್ಟೆಂಬರ್ ೬ನೆಯ ತೇದಿಯ ವರೆಗೆ ಹೇಸರಘಟ್ಟದ ಕೆರೆಯ ಕೆಳಗಡೆ ತಿಪ್ಪಗೊಂಡನಹಳ್ಳಿಯ ಸರೋವರಕ್ಕೆ ಸೇರಿರುವ ೩೧೫ ಚದರಮೈಲಿಯಷ್ಟು ಜಲಾಸಯನ ಭೂಮಿಯ ಮೇಲೆ ಸುಮಾರು ೬೬೦ಕೋಟಿ ಸಲೆಅಡಿ ಪ್ರಮಾಣ ಮಳೆ ನೀರು ಬಿತ್ತು. ಈ ಅವಧಿಯಲ್ಲಿ ಸರೋವರದ ನೀರು ೨,೫೨೨.೭೫ (ಸಮುದ್ರ ಮಟ್ಟ)ರಿಂದ ೨,೫೫೩.೭೫ಕ್ಕೆ ಏರಿ ಕೆರೆಗೆ ೧೪೩ ಕೋಟಿ ಸಲೆಅಡಿ ನೀರು ಬಂತು. ಎಂದರೆ ನೂರರಲ್ಲಿ ೨೧.೬ ಭಾಗ ಮಳೆಯ ನೀರು ಹೊಳೆಗೆ ಹರಿಯಿತು. ಹೇಸರಘಟ್ಟದ ಕೆರೆಗೆ ಶೇಕಡ ೧೦ರಿಂದ ೧೪ರ ವರೆಗೂ ಮಳೆನೀರು ದೊರಕುವುದೆಂದು ಕಂಡಿದ್ದೇವೆ. ಈ ಗುಣಗಳಿಂದ ಒಂದುಬಾರಿ ತುಂಬಿದ ನೀರನ್ನು ನಾಲ್ಕುಕಾಲ ಬಳಸುವ ವಿಚಾರದಲ್ಲಿ ಈ ಸರೋವರವು ಅಸಮಾನವಾಗಿದೆ.

ಒಂದುಸಾರಿ ಕೆರೆಯು ೧೦೫ ಅಡಿ ಮಟ್ಟಕ್ಕೆ ತುಂಬಿದರೆ ವರ್ಷಂಪ್ರತಿ ಆಗುವ ಮಳೆಯನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಇದ್ದರೂ ಕೆಳಗೆ ಕಂಡಂತೆ ೩ ವರ್ಷ ೮ ತಿಂಗಳ ಕಾಲ ಬೆಂಗಳೂರಿಗೆ ದಿನಂಪ್ರತಿ ೬೨½ ಲಕ್ಷ ಗ್ಯಾಲನ್ ಅಥವಾ ೧೦ ಲಕ್ಷ ಸಲೆಅಡಿ ನೀರನ್ನು ಒದಗಿಸಬಹುದು.

	ಕೆರೆಯ ನೀರಿನ ಮಟ್ಟ	ಇರುವ ನೀರಿನ ಅಳತೆ (ಕೋಟಿ ಸಲೆಅಡಿ)			ಹೋಗುವ ನೀರಿನ ಅಳತೆ (ಕೋಟಿ ಸಲೆಅಡಿ)				ಉಳಿದದ್ದು
		ಇರುವ ನೀರು	ಬರುವ ನೀರು	ಒಟ್ಟು	ಪಂಪಾಗುವದು	ಆವಿಯಾಗಿ ಹೋಗುವದು	ಜಿನುಗಿ ಹೋಗುವದು	ಒಟ್ಟು ಖರ್ಚು	
[illegible]ನೆಯ ವರ್ಷ..	೨೫೬೫	೨೩೭.೪	....	೨೩೭.೪	೩೬.೫	೨೭.೦	೧೩.೩	೭೬.೮	೧೬೦.೬
[illegible]ನೆಯ ವರ್ಷ..	೨೫೪೫	೧೬೦.೬	....	೧೬೦.೬	೩೬.೫	೨೪.೨	೮.೬	೬೮.೩	೯೧.೩
[illegible]ನೆಯ ವರ್ಷ..	೨೫೩೧	೯೧.೫	....	೯೧.೫	೩೬.೫	೧೬.೪	೪.೨	೫೭.೧	೩೦.೨
[illegible]ನೆಯ ವರ್ಷ..	೨೫೧೦	೩೦.೨	....	೩೦.೨	೨೪.೪	೩.೭	೦.೮	೨೮.೯	೧.೩
([illegible] ತಿಂಗಳಿಗೆ ಮಾತ್ರ).									

೭೩ ಚದರಮೈಲಿಯ ಸ್ವತಂತ್ರ ಜಲಾಸಯನ ಭೂಮಿಯಲ್ಲಿ ವರ್ಷಕ್ಕೆ ೧೭ ಅಂಗುಲ ಮಳೆಯಾಗಿ ಅದರಲ್ಲಿ ಹತ್ತರಲ್ಲೊಂದು ಪಾಲು ಹೊಳೆಗೆ ಬಂದರೂ


೨೮.೯ ಕೋಟಿ ಸಲೆಅಡಿ ನೀರು ಕೆರೆಗೆ ಬರುತ್ತದೆ. ಇದನ್ನು ಗಣನೆಗೆ ತೆಗೆದುಕೊಂಡರೆ ಮುಂದೆ ಬೆಂಗಳೂರಿಗೆ ೧ ಕೋಟಿ ಗ್ಯಾಲನ್ ನೀರನ್ನು ಒದಗಿಸುವಾಗಲೂ ಒಂದು ಸಾರಿ ಕೆರೆ ತುಂಬಿದರೆ ಈ ಕೆಳಗೆ ಕಂಡಂತೆ ೩ ವರ್ಷ ೯ ತಿಂಗಳ ಕಾಲ ಭಯವಿಲ್ಲ.

	ಕೆರೆಯ ನೀರಿನ ಮಟ್ಟ	ಇರುವ ನೀರಿನ ಅಳತೆ (ಕೋಟಿ ಸಲೆಅಡಿ)			ಹೋಗುವ ನೀರಿನ ಅಳತೆ (ಕೋಟಿ ಸಲೆಅಡಿ)				ಉಳಿ…
		ಇರುವ ನೀರು	ಬರುವ ನೀರು	ಒಟ್ಟು	ಪಂಪಾಗುವದು	ಆವಿಯಾಗಿ ಹೋಗುವದು	ಜನುಗಿ ಹೋಗುವದು	ಒಟ್ಟು ಖರ್ಚು	
೧ ನೆಯ ವರ್ಷ..	೨೫೬೫	೨೩೭.೪	....	೨೩೭.೪	೫೮.೪	೨೬.೬	೧೨.೭	೯೭.೭	೧೩೯.…
೨ ನೆಯ ವರ್ಷ..	೨೫೬೭	೨೩೮.೭	೨೮.೯	೧೬೭.೬	೫೮.೪	೨೩.೯	೮.೪	೯೦.೭	೭೬.…
೩ ನೆಯ ವರ್ಷ..	೨೫೩೯	೭೬.೯	೨೮.೯	೧೦೫.೮	೫೮.೪	೧೬.೯	೪.೫	೭೯.೮	೨೬.…
೪ ನೆಯ ವರ್ಷ.. (೯ ತಿಂಗಳಿಗೆ ಮಾತ್ರ).	೨೫೨೧	೨೫.೯	೨೮.೯	೫೪.೮	೪೩.೮	೬.೬	೧.೫	೫೧.೯	೨.…

ಕಟ್ಟೆಯನ್ನು ಇನ್ನೂ ಹತ್ತು ಅಡಿ ಎತ್ತಿದ ಮೇಲಂತೂ ಇನ್ನೂ ಸುರಕ್ಷಿತವಾಗುತ್ತದೆ. ಒಟ್ಟಿನಲ್ಲಿ ಬೆಂಗಳೂರಿನಂಥ ಬೆಳವಣಿಗೆಯಲ್ಲಿರುವ ನಗರಕ್ಕೆ ಜೀವನವನ್ನು ಒದಗಿಸುವ ಸಂಕಲ್ಪದಲ್ಲಿ ಮುಂದೆ ಎಂಥ ಕಠಿಣ ಪ್ರಸಂಗ ಬರಲಿ, ಜಗ್ಗದೆ ಇರುವ ಸಾಮರ್ಥ್ಯ ಈ ಕೆರೆಗೆ ಇದೆ.

ಈ ಕೆರೆಯನ್ನು ಕಟ್ಟಿದ್ದರಿಂದ ಸಾಗುವಳಿ ಜಮೀನು ಹೆಚ್ಚಾಗಿ ಮುಳುಗಡೆಗೆ ಬರಲಿಲ್ಲ. ಕೆರೆಯಲ್ಲಿ ನೀರು ವಿಸ್ತಾರವಾಗಿ ಹರಡದೆ ಇರುವುದೊಂದೇ ಅಲ್ಲದೆ ಕೆರೆಯ ಅಂಗಳಕ್ಕೆ ಹೊಸದಾಗಿ ಬಂದ ಪ್ರದೇಶದಲ್ಲಿ ಕಾಡುಮೇಡುಗಳೇ ವಿಶೇಷವಾಗಿರುವುದೂ ಇದಕ್ಕೆ ಬಾದು ಮುಖ್ಯವಾದ ಕಾರಣ. ಕೂಡಲು, ತವಕದಹಳ್ಳಿ ಈ ಗ್ರಾಮಗಳೂ ಸುಮಾರು ೧೦೦ ಎಕರೆ ಜೋಡಿ ಬಂಜರು ಜಮೀನೂ ೭೦೦ ಎಕರೆ ಹಿಡುವಳಿ ಖುಷ್ಕಿ ಜಮೀನೂ ಮುಳುಗಡೆಯಾಗಿವೆ.

ಕೆಲಸ ಪ್ರಾರಂಭವಾದದ್ದು ೧೯೩೦ ನೆಯ ಮಾರ್ಚಿ ತಿಂಗಳಲ್ಲಿ. ನೌಕರರು ಕೆಲಸಗಾರರಿಗೆಲ್ಲಾ ವಸತಿಗಳನ್ನು ಕಲ್ಪಿಸಿ ಸರ್ವೆ ಕೆಲಸವನ್ನು ಪೂರೈಸಿ ಮಳೆಗಾಲ ಮುಗಿದ ನಂತರ ಅದೇ ಅಕ್ಟೋಬರ್ ತಿಂಗಳಲ್ಲಿ ಕಟ್ಟೆಯ ಪಾಯದಲ್ಲಿ ಅಗೆಯಲು ಮೊದಲು



ತಿಪ್ಪಗೊಂಡನಹಳ್ಳಿ—ಕೋಡಿಯ ಕಟ್ಟೆ-ಸರೋವರ



ಮಾಡಿದರು. ಇದಾದ ಒಂದು ತಿಂಗಳಲ್ಲಿಯೇ ಕಾಲರಾ ಉಪದ್ರವವು ತಲೆದೋರಿ ಎರಡು ಮೂರು ತಿಂಗಳು ಬಹಳ ತೊಂದರೆಯಾಯಿತು. ೧೯೩೧ ನೆಯ ಏಪ್ರಿಲ್ ತಿಂಗಳಲ್ಲಿ ಕಲ್ಲುಗಾರೆಯ ಕೆಲಸ ಆರಂಭವಾಯಿತು. ಮತ್ತೆ ಅಕ್ಟೋಬರ್ ತಿಂಗಳಲ್ಲಿ ಮೊದಲು ಪ್ಲೇಗೂ ಆ ಮೇಲೆ ಕಾಲರವೂ ಹಿಂಸೆ ಮಾಡಿದುವು. ಇದೂ ಕಳೆದು ೧೯೩೨ ನೆಯ ಜನವರಿ ತಿಂಗಳಲ್ಲಿ ಜನರನ್ನೆಲ್ಲಾ ಒಟ್ಟುಗೂಡಿಸಿ ಕ್ರಮವಾಗಿ ಕೆಲಸಕ್ಕೆ ಉಪಕ್ರಮವಾಯಿತು.

ಕಟ್ಟೆಯ ಪಾಯದಲ್ಲಿ ಒಳ್ಳೆಯ ಕಲ್ಲು ಸಿಕ್ಕಿದ್ದರೂ ಅಲ್ಲಲ್ಲಿ ಕಲ್ಲಿನ ಮಧ್ಯೆ ಮೆತುವಾದ ಪರೆಗಳು ಅನೇಕವಾಗಿ ಕಾಣಿಸಿಕೊಂಡವು. ಒಂದು ಚದರಡಿ ಅಗಲದ ಮೇಲೆ ಎಂಟು ಟನ್ ಪ್ರಮಾಣದಲ್ಲಿ ಬರುವ ಭಾರವನ್ನು ಹೊರುವ ಶಕ್ತಿ ಈ ಪರೆಗಳಿಗಿರಲಿಲ್ಲ. ಇಂಥ ಕಡೆಗಳಲ್ಲಿ ಹಿಟ್ಟುಕಲ್ಲನ್ನೆಲ್ಲಾ ಗಡಪಾರೆಗಳಿಂದ ತೆಗೆದು ಆ ಸಂದಿಗೆ ಸಿಮೆಂಟ್ ಕಾಂಕ್ರೀಟನ್ನು ತುಂಬಿ ಅದರ ಮೇಲೆ ಕಟ್ಟೆಯನ್ನು ಕಟ್ಟಿದೆ. ಒಂದು ಜಾಗದಲ್ಲಿ ಮಾತ್ರ ಸ್ವಲ್ಪ ತೊಂದರೆಯೇ ಆಯಿತು. ನೆಲಮಟ್ಟದಿಂದ ೩೭ ಅಡಿ ಕೆಳಕ್ಕೆ ಹೋದರೂ ಕಗ್ಗಲ್ಲು ಸಿಕ್ಕಲೇ ಇಲ್ಲ. ಆಗ ಪಾಯದ ಮೇಲೆ ಒಂದು ಚದರಡಿಯಷ್ಟು ಜಾಗದ ಮೇಲೆ ೧೨ ಟನ್ ಹೊರೆಯನ್ನು ೧೯೩೧ ನೆಯ ಏಪ್ರಿಲ್ ೧೩ ನೆಯ ತಾರೀಖಿನ ದಿನ ಹೊರಿಸಿ, ೧೬ ನೆಯ ತಾರೀಖಿನವರೆಗೂ ಪಾಯವು ಸ್ವಲ್ಪವೂ ಕುಗ್ಗದೆ ಇದ್ದುದರಿಂದ ಮುಂದವಾಗಿ ಕಾಂಕ್ರೀಟ್ ಹಾಕಿ ಕಟ್ಟೆಯನ್ನು ಅದರ ಮೇಲೆ ಕಟ್ಟಲಾಯಿತು. ಅದರಲ್ಲೂ ಮುಂಭಾಗದಲ್ಲಿ ಕಲ್ಲು ಹೆಚ್ಚು ಗಟ್ಟಿಯಾಗಿ ಕಾಣಿಸಿದ್ದರಿಂದ ಈ ಜಾಗದಲ್ಲಿ ೬೦ ಅಡಿ ಉದ್ದಕ್ಕೆ ಕಟ್ಟೆಯನ್ನೇ ೧೭ ಅಡಿಯಷ್ಟು ಮುಂದಕ್ಕೆ ಚಾಚಿ ಕಟ್ಟಡವನ್ನು ಮೊದಲು ಮಾಡಲಾಯಿತು.

ನದೀಮಧ್ಯದಲ್ಲಿ ಪಾಯಹಾಕುವುದೇ ಇಂಥ ಕಟ್ಟೆಗಳಲ್ಲಿ ಕಷ್ಟದ ಕೆಲಸ. ಬೇಸಗೆಯಲ್ಲಿ ಕೆಲಸ ಮಾಡುವ ಪ್ರದೇಶದ ಸುತ್ತಲೂ ಕಲ್ಲುಗಾರೆಯ ಅಡ್ಡಗೋಡೆಗಳನ್ನು ಹಾಕಿ ಪ್ರವಾಹವನ್ನು ಬೇರೆಡೆ ತಿರಿಗಿಸಿ ಮಧ್ಯೆ ಇರುವ ನೀರನ್ನು ಪಂಪುಗಳಿಂದ ಎತ್ತಿ ಪಾಯದಲ್ಲಿ ನೀರು ತಪ್ಪಿದಕೂಡಲೆ ಕಲ್ಲಿನಲ್ಲಿ ಸುರಂಗಹೊಡೆದು ಸಿಡಿಮದ್ದಿನಿಂದ ಸೀಳಿ ಪಾಯವನ್ನು ಇಳಿಸಬಹುದು. ಆಗಲೂ ನದೀ ತಳದಲ್ಲಿ ಜಲುಮೆಗಳು ಪ್ರಬಲವಾಗಿ ಏಳುತ್ತಿರುವ ಕಡೆ ಸ್ವಲ್ಪ ಕಷ್ಟಪಡಬೇಕಾಗುತ್ತದೆ. ಆದರೆ ಮಳೆಗಾಲದಲ್ಲಿ ಪ್ರವಾಹವು ಅಡಚಣೆಯಿಲ್ಲದೆ ಹೋಗುವುದಕ್ಕೆ ಅವಕಾಶ ಕಲ್ಪಿಸಿ ಅಕಾಲದಲ್ಲಿ ಬರಬಹುದಾದ ನೀರಿನಿಂದ ಮಾಡಿದ ಕೆಲಸ ನಷ್ಟವಾಗದ ಹಾಗೆ ಸಂತತವಾಗಿ ಏರ್ಪಾಡು ಮಾಡುವುದೇ ನಿಜವಾದ ಕಷ್ಟ. ಈ ಕಟ್ಟೆಯ ಕೆಲಸದಲ್ಲಿ ಅತ್ಯಂತ ಆತಂಕಾಸ್ಪದವಾದ ಕಾಲವೆಂದರೆ ೧೯೩೨ ನೆಯ ಜೂನ್

ತಿಂಗಳಲ್ಲಿ ಬರಲಿರುವ ಮಳೆಯ ಎದುರಿನಲ್ಲಿ ಹುಟ್ಟುಹೊಳೆ ಅನಾದಿಯಾಗಿ ತನಗಾಗಿ ಬಿಡಿಸಿಕೊಂಡಿದ್ದ ಭೂಭಾಗದಲ್ಲಿ ಪಾಯಹಾಕಿ ಕಲ್ಲು ಕೆಲಸವನ್ನು ಸುರಕ್ಷಿತವಾಗಿ ಮೇಲಕ್ಕೆ ತಂದ ಸಮಯ. ಆಮೇಲೆ ಎಂಥ ಪ್ರವಾಹವೇ ಬರಲಿ ಅಂಜಬೇಕಾಗಿರಲಿಲ್ಲ. ಕಲ್ಲಿನ ಕಟ್ಟೆಯ ಮೇಲೆ ಅದನ್ನು ಲೀಲಾಜಾಲವಾಗಿ ಬಿಡಬಹುದಾಗಿತ್ತು.

ಕಟ್ಟೆಯ ಅಗಲ ಮೇಲುಭಾಗದಲ್ಲಿ ೧೨ ಅಡಿ. ಕೆಳಕ್ಕೆ ಇಳಿದ ಹಾಗೆಲ್ಲಾ ಮುಂಭಾಗದಲ್ಲಿ ಎಂದರೆ ಜಲಾಶಯದ ಕಡೆ ಕೊಂಚವೇ ಹೆಚ್ಚಾಗಿ ಹಿಂದುಗಡೆ ಅಗಲವು ಬಹಳ ಹೆಚ್ಚಾಗುತ್ತದೆ. ಕಟ್ಟೆಯ ಕೊನೆಯ ಮೇಲುಮಟ್ಟವು ಸಮುದ್ರದ ಮೇಲೆ ೨,೫೮೦ ಅಡಿ. ಅದಕ್ಕಿಂತ ೧೦ ಅಡಿ ಕೆಳಗೆ ೧೧೫ ಅಡಿ ಆಳವಾಗಿ ನೀರು ನಿಲ್ಲಲು ಅವಕಾಶವಿದೆ. ಪಾಯದಲ್ಲಿ ಆಳವಾಗಿ ಹೋಗಿರುವ ಮಟ್ಟ ೨,೪೧೮ ಅಡಿ. ಕಟ್ಟೆಯ ಪರಮಾವಧಿ ಎತ್ತರ ೧೬೨ ಅಡಿ. ಈ ಕೆಳಮಟ್ಟದಲ್ಲಿ ಕಟ್ಟೆಯ ಅಗಲ ೧೪೦ ಅಡಿ. ದಡದಿಂದ ದಡಕ್ಕೆ ಉದ್ದ ೧,೪೦೦ ಅಡಿ. ಸದ್ಯಕ್ಕೆ ಕಟ್ಟೆಯನ್ನು ೨,೫೭೦ ಕ್ಕೆ ನಿಲ್ಲಿಸಿರುತ್ತಾರೆ. ನೀರು ೨,೫೬೦ ಕ್ಕೆ ೧೦೫ ಅಡಿ ಆಳವಾಗಿ ನಿಂತಿರುತ್ತದೆ. ಮುಂದೆ ಬೆಂಗಳೂರಿಗೆ ಮತ್ತೂ ಹೆಚ್ಚು ನೀರು ಬೇಕಾದಾಗ ಕಟ್ಟೆಯನ್ನು ಇನ್ನೂ ೧೦ ಅಡಿ ಎತ್ತರಿಸಬಹುದು. ಮೊದಲು ೨,೫೪೩ ಕ್ಕೇ ಕಟ್ಟೆಯನ್ನು ನಿಲ್ಲಿಸುವ ಯೋಚನೆಯಿತ್ತು. ಪಾಯವನ್ನು ಮಾತ್ರ ಕೊನೆಯ ಅಂತಸ್ತಿಗೆ ಎಷ್ಟುಬೇಕೋ ಅಷ್ಟು ಅಗಲಕ್ಕೆ ತೆಗೆದು ನೆಲಮಟ್ಟದ ಮೇಲೆ ಕಲ್ಲುಕೆಲಸವನ್ನು ಕಿರಿದಾಗಿ ಕಟ್ಟುವುದೆಂದು ಆಲೋಚಿಸಿದ್ದರು. ಇದರಿಂದ ಸದ್ಯಕ್ಕೆ ಖರ್ಚು ಸ್ವಲ್ಪ ಕಡಮೆಯಾಗುತ್ತಾ ಇತ್ತು. ಆ ಮೇಲೆ ಕಟ್ಟೆಯ ಭದ್ರತೆಯ ಮೇಲೆ ದೃಷ್ಟಿಯಿಟ್ಟು ಕಲ್ಲುಕೆಲಸವನ್ನೂ ಅಗಲವಾಗಿಯೇ ಕಟ್ಟಲಾಯಿತು. ಅಷ್ಟರಲ್ಲಿಯೇ ಬಲಗಡೆಯ ದಡದಲ್ಲಿ ಕೊಂಚದೂರ ಕಲ್ಲುಕೆಲಸವನ್ನು ಕಿರಿದಾಗಿ ಕಟ್ಟಿದ್ದರು. ಆ ಜಾಗದಲ್ಲಿ ಅಗಲವನ್ನು ಹೆಚ್ಚಿಸಬೇಕಾಗಿ ಬಂದಾಗ ಈಜಿಪ್ಟ್ ದೇಶದ ಅಸ್ವಾನ್ ಕಟ್ಟೆಯ ಅಗಲವನ್ನು ೧೯೦೭ರಲ್ಲಿ ಹೆಚ್ಚಿಸಿದಾಗ ಅನುಸರಿಸಿದ ಕ್ರಮವನ್ನು ಉಪಯೋಗಿಸಿಕೊಂಡರು. ಹಳೆಯ ಕಟ್ಟಡದಲ್ಲಿ ಕೊರೆದು ಒಂದು ಮಾರು ದೂರಕ್ಕೊಂದರಂತೆ ಒಂದಂಗುಲದ ಕಬ್ಬಿಣದ ಸಲಾಕೆಗಳನ್ನು ತೂರಿ ಹೊಸ ಕಟ್ಟಡದೊಳಕ್ಕೂ ಒಂದು ಮಾರುದೂರ ಹೋಗುವಂತೆ ಕಟ್ಟಿ ಎರಡು ಕಟ್ಟಡಗಳಿಗೂ ನಡುವೆ ಒಂದು ಮೊಳದಷ್ಟು ಓಣಿಯನ್ನು ಬಿಟ್ಟು ಆ ಓಣಿಯೊಳಕ್ಕೆ ಸುರ್ಕಿ ಕಾಂಕ್ರೀಟನ್ನು (Surki Concrete) ತುಂಬಿದ್ದಾರೆ. ಈ ಕ್ರಮದಿಂದ ಹೊಸ ಕಲ್ಲು ಕೆಲಸವು ಏನಾದರೂ ಕುಸಿದರೆ ಆ ವಕ್ರವಾದ ಹೊರೆಯನ್ನು ಕಬ್ಬಿಣದ ಸಲಾಕೆಗಳು ವಹಿಸಿಕೊಳ್ಳುತ್ತವೆ.

ಕಟ್ಟಡದ ಕೆಲಸವನ್ನು ಅಮಾನಿಯಾಗಿ ಮಾಡಲಾಯಿತು. ಒಳ್ಳೆಯ ಕಲ್ಲು


ಹತ್ತಿರವೇ ಬೇಕಾದ ಹಾಗೆ ಸಿಕ್ಕುತ್ತದೆ. ಕೊಯಮತ್ತೂರು ಕಡೆಯಿಂದ ಬಂದಿರುವ ಪಡ್ಡರು ಮಾಪಾಳಿ (Face-stones) ಮತ್ತು ಭರ್ತಿ (Rubble) ಕಲ್ಲುಗಳನ್ನು ಸೀಳಿ ಕೊಟ್ಟರು. ಕಲ್ಲನ್ನು ಕಟ್ಟೆಯ ಮೇಲಕ್ಕೆ ಒಯ್ಯುವುದಕ್ಕೆ ತಲಕಾಡಿನ ಜವಾಳಿಗಳನ್ನೂ ಕಟ್ಟೆಯ ಕಲ್ಲು ಜೋಡಿಸುವುದಕ್ಕೆ ಕನ್ನಂಬಾಡಿ ಮತ್ತು ಇತರ ಕಡೆ ತಯಾರಾದ ಗಾರೆಯವರನ್ನೂ ನೇಮಿಸಲಾಯಿತು. ಈ ಕಟ್ಟಡಕ್ಕೆ ಉಪಯೋಗಿಸುವ ಗಾರೆಯನ್ನು ಸುಟ್ಟ ಇಟ್ಟಿಗೆಯ ಪುಡಿಯನ್ನೂ ಸುಣ್ಣವನ್ನೂ ಗಾರೆಯ ಚರಕೆಗಳಲ್ಲಿ ಅರೆದು ತಯಾರುಮಾಡುತ್ತಾರೆ. ಈ ಗಾರೆಗೆ ನೀರುಬಿದ್ದಷ್ಟೂ ಕಲ್ಲಾಗುವ ವಿಶೇಷ ಗುಣವಿದೆ. ಪ್ರತಿದಿವಸ ತಯಾರಾದ ಗಾರೆಯ ಬಲವನ್ನೂ ಪರೀಕ್ಷೆಮಾಡಿ ಉಪಯೋಗಿಸುತ್ತಾರೆ. ಕೆಲಸದ ಹತ್ತಿರಕ್ಕೆ ಗಾರೆಯನ್ನು ಹೆಣ್ಣಾಳುಗಳು ತಂದುಕೊಡುತ್ತಾರೆ. ಸಾಮಾನುಗಳೆಲ್ಲಾ ಒದಗುವುದಕ್ಕೆ ಅಣಿಯಾದ ಮೇಲೆ ಆಯಾ ಮಟ್ಟದಲ್ಲಿ ಕಟ್ಟೆಯ ಅಗಲ ಮಧ್ಯರೇಖೆಯಿಂದ ಆ ಕಡೆ ಈ ಕಡೆ ಎಷ್ಟು ಇರಬೇಕು ಎಂದು ಗುರುತುಮಾಡಿ ಕಟ್ಟಡವನ್ನು ಯಥಾಕ್ರಮವಾಗಿ ಏರಿಸುತ್ತ ಹೋಗುತ್ತಾರೆ.

ಕಟ್ಟೆಯ ಕೆಲಸ ಮುಗಿದದ್ದು ೧೯೩೩ನೆಯ ಜುಲೈ ತಿಂಗಳಲ್ಲಿ. ಇದರ ಜೊತೆಗೇ ಉಳಿದ ಕೆಲಸಗಳೂ ಜರಗುತ್ತಾ ಇದ್ದುವು. ಒಟ್ಟು ಕಟ್ಟೆಯಲ್ಲಿ ೫೦ ಲಕ್ಷ ಸಲೆ ಅಡಿ ಕಲ್ಲುಕೆಲಸ ಬಿದ್ದಿದೆ. ಇದಕ್ಕೆ ತಗಲಿದ ಖರ್ಚು ೨೧ ಲಕ್ಷ ರೂಪಾಯಿ.


ಈ ಕಟ್ಟೆಗೆ ಕೋಡಿಯನ್ನು ಪ್ರತ್ಯೇಕವಾದ ಹಳ್ಳದಲ್ಲಿ ಇಟ್ಟಿದೆ. ಮೊದಲು ಕೋಡಿಹಳ್ಳಕ್ಕೆ ತಕ್ಕ ಬಂದೋಬಸ್ತು ಮಾಡದೆ ಒಂದೆರಡು ವರ್ಷ ನೀರು ಹರಿದದ್ದನ್ನು ನೋಡಿ ಆಮೇಲೆ ಶಾಶ್ವತವಾದ ಕೆಲಸ ಮಾಡೋಣವೆಂದು ಎಣಿಸಿ ಕೊಂಚವೇ ಕೆಲಸಮಾಡಿಬಿಟ್ಟಿದ್ದರು. ಕಟ್ಟೆ ಮುಗಿದ ಮೂರು ತಿಂಗಳಲ್ಲಿಯೇ ಕೆರೆ ತುಂಬಿ ೧೯೩೩ನೆಯ ಅಕ್ಟೋಬರಿನಲ್ಲಿ ಕೋಡಿಹಳ್ಳವನ್ನು ಕೊರೆದು ಕೂಡಿಟ್ಟ ನೀರೆಲ್ಲಾ ಸಮುದ್ರದ ಪಾಲಾಯಿತು. ಬೆಂಗಳೂರಿಗೆ ಆಗ ತಿಪ್ಪಗೊಂಡನಹಳ್ಳಿಯಿಂದ ನೀರು ಸರಬರಾಯಿ ಆಗುತ್ತಾ ಇತ್ತು. ಸದ್ಯಃ ಮತ್ತೆ ಮಳೆ ಬಂದು ಕೆರೆ ತುಂಬುವವರೆಗೂ ಬೆಂಗಳೂರಿಗೆ ಬೇಕಾಗುವಷ್ಟು ನೀರನ್ನು ಉಳಿಸುವುದೇ ಮಹಾಪ್ರಯಾಸವಾಯಿತು. ಈ ಘಟನೆಯಾದ ಕೂಡಲೆ ಕೋಡಿಯ ಕಟ್ಟಡ ಮೊದಲಾಯಿತು. ಕೋಡಿ ಕಟ್ಟೆಯ ಉದ್ದ ೧೯೨ ಅಡಿ. ಅದರ ಪಾಯವನ್ನು ನದಿಯ ತಳಕ್ಕೆ ೧೦ ಅಡಿಯ ಮೇಲೆ ಎಂದರೆ ಸಮುದ್ರಮಟ್ಟದ ಮೇಲೆ ೨,೪೭೫ ರಲ್ಲಿ ಹಾಕಿದ್ದಾರೆ. ೨,೫೦೦·ರ ಮಟ್ಟದಲ್ಲಿ ಕಟ್ಟೆಯೊಳಗಡೆ ನಾಲ್ಕು ಕಬ್ಬಿಣದ ಒಳಬಾಗಿಲುಗಳಿವೆ. ಒಂದೊಂದು ಬಾಗಿಲೂ ೧೦ ಅಡಿ ಅಗಲ, ೨೦ ಅಡಿ ಎತ್ತರ ಇದೆ. ಕಟ್ಟೆಯ ಮೇಲುಮಟ್ಟ ೨,೫೪೦. ಈ ಮಟ್ಟದಲ್ಲಿ ಹೂಡಿರುವ ನಾಲ್ಕು ಅಶ್ವಶಕ್ತಿಯ ಮೋಟಾರುಗಳಿಂದ ಬಾಗಿಲು

ಗಳನ್ನು ೧೦ ನಿಮಿಷದಲ್ಲಿ ಮೇಲಕ್ಕೆ ಎತ್ತಬಹುದು. ಒಂದು ವೇಳೆ ಈ ಯಂತ್ರಗಳು ಸಮಯದಲ್ಲಿ ಕೆಟ್ಟುಹೋದರೆ ಜನಸಹಾಯದಿಂದ ೬ ಗಂಟೆಗಳ ಕಾಲದಲ್ಲಿ ಎತ್ತಲು ಅವಕಾಶವಿದೆ. ಕೆರೆ ತುಂಬಿದ್ದಾಗ ಒಳಬಾಗಿಲುಗಳಿಗೆ ಏನಾದರೂ ರಿಪೇರಿಮಾಡ ಬೇಕಾದರೆ ಅನುಕೂಲವಾಗುವಂತೆ ಮುಂಭಾಗದಲ್ಲಿ ೧೪ ಅಡಿ ಅಗಲ ೨೨೧ ಅಡಿ ಎತ್ತರ ಇರುವ ಕಬ್ಬಿಣದ ಹೊರಬಾಗಿಲನ್ನು ಮುಚ್ಚಿ ಒಳಕ್ಕೆ ತೊಟ್ಟು ನೀರೂ ಬರದಂತೆ ನೋಡಿಕೊಳ್ಳಬಹುದು. ಈ ಬಾಗಿಲನ್ನು ಕಟ್ಟೆಯ ಮೇಲುಗಡೆ ಕಂಬಿಗಳ ಮೇಲೆ ತಿರುಗಾಡುವ ಗ್ಯಾಂಟ್ರಿಯಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸಬಹುದು. ಈ ಗ್ಯಾಂಟ್ರಿಯು ೨೫ ಅಶ್ವಶಕ್ತಿಯ ಮೋಟಾರಿನ ಸಹಾಯದಿಂದ ಕೆಲಸ ಮಾಡುತ್ತದೆ. ಕೆರೆಯ ನೀರು ೨,೫೬೬ರಲ್ಲಿದ್ದಾಗ ನಾಲ್ಕು ಒಳಬಾಗಿಲುಗಳನ್ನೂ ಸಂಪೂರ್ಣವಾಗಿ ಎತ್ತಿದರೆ ಒಂದು ಸೆಕಂಡಿಗೆ ೩೬,೦೦೦ ಸಲೆ ಅಡಿ ಪ್ರವಾಹವನ್ನು ಹೊರದೂಡಬಹುದು. ಕೋಡಿ ಕಟ್ಟೆಗೆ ಪಶ್ಚಿಮದಲ್ಲಿರುವ ಕಲ್ಲಿನ ಕೋಡಿಯೊಂದರ ಮೇಲೆ ಇನ್ನೂ ೧೪,೦೦೦ ಸಲೆ ಅಡಿ ಪ್ರವಾಹ ಸೆಕಂಡ್ ಒಂದಕ್ಕೆ ಹೊರಬೀಳು ತ್ತದೆ. ಈ ಕೋಡಿಯು ೨,೫೬೦ ಅಡಿ ಮಟ್ಟದಲ್ಲಿದೆ, ೧೮೦ ಅಡಿ ಉದ್ದವಾಗಿದೆ. ಅಂತೂ ಒಟ್ಟು ಸೆಕಂಡಿಗೆ ೫೦,೦೦೦ ಸಲೆ ಅಡಿಯಷ್ಟು ಪ್ರವಾಹವನ್ನು ಈ ಕೋಡಿಯ ಮೂಲಕ ಸಾಗಿಸಬಹುದು. ಕೋಡಿಯಿಂದ ಹೊರಬಿದ್ದ ನೀರು ನೆಲವನ್ನು ಕೊರೆಯದ ಹಾಗೆ ಮೆಟ್ಟಲು ಮೆಟ್ಟಲಾಗಿರುವ ನಿಂತ ನೀರು ಕೊಳಗಳ ಮೇಲೆ ಧುಮುಕುವ ಹಾಗೆ ಮಾಡಿದೆ. ಪ್ರವಾಹದ ರಭಸ ಇಳಿದ ಮೇಲೆ ಕೋಡಿಹಳ್ಳವನ್ನು ಸೇರಿ ಸಾವಧಾನವಾಗಿ ಮುಂದಕ್ಕೆ ಹರಿಯುತ್ತದೆ. ಕೋಡಿಯ ಕೆಲಸಕ್ಕೆ ೧೭ ಲಕ್ಷ ರೂಪಾಯಿ ಮುಟ್ಟಿತು.


ದೊಡ್ಡಕಟ್ಟೆಯ ತೂಬಿನ ಕೆಳಮಟ್ಟ ೨,೪೭೫. ಈ ಮಟ್ಟದಲ್ಲಿ ಕಟ್ಟೆಯೊಳಗಡೆ ೩೦ ಅಂಗುಲದ ಕೊಳಾಯಿಯಲ್ಲಿ ನೀರು ಹೊರಗೆ ಬರುತ್ತದೆ. ಇನ್ನೂ ಮೇಲೆ ಹೇಸರಘಟ್ಟದ ಕೆರೆಯಲ್ಲಿರುವಂತೆ ತೂಬಿನ ಮುಚ್ಚಳಗಳ ಮೇಲೆ ಒತ್ತಡ ಒಂದೇ ಸಮವಾಗಿರುವ ಹಾಗೂ ತಿಳಿಯಾದ ಮೇಲುಗಡೆಯ ನೀರೇ ಯಾವಾಗಲೂ ಬರುವ ಹಾಗೂ ಮತ್ತೆ ಮೂರು ಕಡೆ ಕಟ್ಟೆಯಿಂದ ನೀರನ್ನು ಎಳೆದುಕೊಳ್ಳಬಹುದು. ಈ ಕಟ್ಟೆಯಲ್ಲಿ ಇನ್ನು ಯಾವ ಬಾಗಿಲೂ ಇಲ್ಲ. ಕಟ್ಟೆಯ ಹಿಂದೆ ನದಿಯು ನಾಮಾವ ಶೇಷವಾಗಿದೆ. ಕಟ್ಟೆಯ ಹೊರಗಡೆ ದಿನ ಒಂದಕ್ಕೆ ೧೧½ ಕೋಟಿ ಗ್ಯಾಲನ್ ಸಾಗಿಸ ಬಲ್ಲ ೨೪ ಅಂಗುಲದ ಕೊಳಾಯಿಗಳಲ್ಲಿ ನೀರನ್ನು ಹಣಿಸುವ ಕೊಳಗಳಿಗೆ ಒಯ್ಯುತ್ತಾರೆ. ಇಷ್ಟೇ ನೀರು ಹೋಯಿತೆಂದು ವೆಂಚುರಿ ಮಾಪಕದಿಂದ ಅಳತೆಮಾಡುತ್ತಾರೆ. ಅಳತೆಯಾದ ಮೇಲೆ ನೆಲಮಟ್ಟದ ಕೆಳಗಿರುವ ನೀರು ಹಣಿಸುವ ಕೊಳ (Coagulation



ಸರ್ ಎಂ. ವಿಶ್ವೇಶ್ವರಯ್ಯನವರು ಕಟ್ಟೆಯ ಪಾಯವನ್ನು ಪರಿಶೀಲಿಸುತ್ತಿರುವುದು



ತಿಪ್ಪಗೊಂಡನಹಳ್ಳಿ—ಪಂಪಿನ ಮನೆಯ ಒಳಗಡೆ



ತಿಪ್ಪಗೊಂಡನಹಳ್ಳಿ—ಫಿಲ್ಟರಿನ ತಳ



ಫಿಲ್ಟರಿನ ಮನೆಯ ಒಳಗಡೆ

tanks)ಗಳಿಗೆ ಹೋಗುತ್ತದೆ. ಇಂಥ ಕೊಳಗಳು ಎರಡಿವೆ. ಒಂದೊಂದೂ ೧೫೦ ಅಡಿ ಉದ್ದ, ೭೫ ಅಡಿ ಅಗಲ, ೧೫ ಅಡಿ ಆಳವಾಗಿದೆ. ಇವನ್ನು ರಿಇನ್‌ಫೋರ್ಸ್ಡ್ ಕಾಂಕ್ರೀಟ್ ನಿಂದ ಕಟ್ಟಿದ್ದಾರೆ. ಸುಮ್ಮನೆ ಹಣಿಸುವುದರಿಂದಲೇ ಎಷ್ಟೋ ಪ್ರಯೋಜನವಿದೆ. ದಪ್ಪವಾದ ಕಸ ಮಣ್ಣು ಕೆಳಗಡೆ ನಿಂತು ನೀರು ತಿಳಿಯಾಗುತ್ತದೆ. ಈ ಕಸದ ಜೊತೆಗೆ ಕೆಲವುಭಾಗ ರೋಗಜನಕವಾದ ಏಕಾಣುಜೀವಿಗಳೂ (Bacteria) ತೊಲಗುತ್ತವೆ. ಆದರೆ ಈ ಕೊಳಗಳಲ್ಲಿ ನೀರು ಹಣಿಯಾಗುವ ರೀತಿಯಲ್ಲಿ ಒಂದು ವಿಶೇಷವಿದೆ. ಇಲ್ಲಿಗೆ ಪ್ರವೇಶಿಸುವುದಕ್ಕೆ ಮುಂಚೆ ಒಂದು ಅಳತೆಯ ಪ್ರಕಾರ ಸುಣ್ಣವನ್ನೂ ಪಟಿಕವನ್ನೂ ಇದಕ್ಕೆ ಬೆರಸುತ್ತಾರೆ. ಸಾಧಾರಣವಾಗಿ ೧ ಗ್ಯಾಲನ್ನಿಗೆ ಎರಡರಿಂದ ಆರು ಗ್ರೈನ್ ಸುಣ್ಣವನ್ನೂ ಒಂದರಿಂದ ನಾಲ್ಕು ಗ್ರೈನ್ ಪಟಿಕವನ್ನೂ ಸೇರಿಸು ತ್ತಾರೆ. (೭೦೦೦ ಗ್ರೈನ್ = ೧ ಪೌಂಡ್) ಮಳೆಗಾಲದಲ್ಲಿ ನೀರು ಬಗ್ಗಡವಾದಾಗ ಪಟಿಕವನ್ನು ಹೆಚ್ಚಾಗಿ ಸೇರಿಸಬೇಕಾಗುತ್ತದೆ. ಕೊಳಗಳಲ್ಲಿ ನೀರು ಅಡ್ಡಗೋಡೆ ಗಳನ್ನು ಬಳಸಿಕೊಂಡು ಗೂಡುಗಳಲ್ಲಿ ಹೊಕ್ಕು ಮತ್ತೊಂದು ಗೋಡೆಯ ಮೇಲೆ ಹಾದು ಕೊನೆಯನ್ನು ಸೇರುವುದಕ್ಕೆ ನಾಲ್ಕು ಗಂಟೆಗಳ ಕಾಲ ಹಿಡಿಯುತ್ತದೆ.

ಸುಣ್ಣದಿಂದ ಕ್ಷಾರವಾದ ನೀರಿಗೆ ಪಟಿಕದ ಸಂಪರ್ಕವಾದಾಗ ಒಂದು ರಾಸಾಯನಿಕ ಮಾರ್ಪಾಡಾಗಿ ಅಲ್ಯೂಮಿನಿಯಂ ಹೈಡ್ರಾಕ್ಸೈಡ್ [$Al_2(OH)_3$] ಎಂಬ ಉಣ್ಣೆಯ ಕೂದಲಿನಂತಿರುವ ಪ್ರೆಸಿಪಿಟೇಟ್ (Flocculent Precipitate) ಉತ್ಪತ್ತಿಯಾಗುತ್ತದೆ. ಕೊಳಗಳಲ್ಲಿ ನೀರು ಬಹು ನಿಧಾನವಾಗಿ ಹರಿಯುವುದರಿಂದ ಈ ಕುಚ್ಚಿನೊಳಕ್ಕೆ ನೀರಿನೊಳಗಿರುವ ಕಸ ಮಣ್ಣು ಮತ್ತು ಕೊಂಚಮಟ್ಟಿಗೆ ಏಕಾ ಣುಜೀವಿಗಳು ಸಿಕ್ಕಿಕೊಂಡು ಕೊಳದ ತಳಕ್ಕೆ ಇಳಿಯುತ್ತವೆ. ಹೀಗೆ ತಿಳಿಯಾದ ನೀರು ಮುಂದೆ ಶೋಧಕಯಂತ್ರಗಳಿಗೆ ಹೋಗುತ್ತದೆ.

ಶೋಧನಯಂತ್ರಗಳು ಆರು ಇವೆ. ಒಂದೊಂದೂ ಸಾಮಾನ್ಯವಾಗಿ ದಿನಂಪ್ರತಿ ೧೦ ಲಕ್ಷ ಗ್ಯಾಲನ್ ನೀರನ್ನು ಶೋಧಿಸಬಲ್ಲದು. ಸಮಯದಲ್ಲಿ ೧೨ ಲಕ್ಷ ಗ್ಯಾಲನ್ನನ್ನೂ ಶೋಧಿಸಬಹುದು. ಈ ಯಂತ್ರಗಳು ಅಮೇರಿಕದ ಜ್ಯೂಯೆಲ್ ಫಿಲ್ಟರ್ ಕಂಪೆನಿಯಿಂದ ಪರಿಷ್ಕರಿಸಲ್ಪಟ್ಟವು. ಫಿಲ್ಟರಿನ ಗೋಡೆಗಳನ್ನು ರಿಇನ್‌ಫೋರ್ಸ್ಡ್ ಕಾಂಕ್ರೀಟಿನಿಂದ ಕಟ್ಟಿದೆ. ಒಂದೊಂದು ಫಿಲ್ಟರೂ ೨೪ ಅಡಿ ಉದ್ದ, ೨೦ ಅಡಿ ಅಗಲ ಇದ್ದು ಒಂದು ಚದರಡಿಯಷ್ಟು ಪ್ರದೇಶದಲ್ಲಿ ೯೦ ಗ್ಯಾಲನ್ ನೀರನ್ನು ಶೋಧಿಸುವ ಹಾಗಿದೆ. ಪ್ರತಿಯೊಂದು ಫಿಲ್ಟರಿನಲ್ಲಿಯೂ ಮೇಲುಗಡೆ ನಾಲ್ಕು ಎರಕದ ಕಬ್ಬಿಣದ ಕಾಲುವೆಗಳಿವೆ. ಶೋಧನೆಗಾಗಿ ಫಿಲ್ಟರಿನೊಳಕ್ಕೆ ಬರುವುದೂ ಫಿಲ್ಟರನ್ನು ತೊಳೆದ ನೀರು ಆಚೆಗೆ ಹೋಗುವುದೂ ಈ ಕಾಲುವೆಗಳ ಮೂಲಕ.

ನೀರನ್ನು ಶೋಧಿಸುವುದಕ್ಕೆ ಮೇಲುಗಡೆ ಒಂದು ಅಂಗುಲಕ್ಕೆ ೨೪ ಕಣ್ಣಿರುವ ಜರಡಿಯಲ್ಲಿ ತೂರುವ, ೪೦ ಕಣ್ಣಿನ ಜರಡಿಯ ಮೇಲೆ ನಿಲ್ಲುವ ಮತ್ತು ನಿಯತವಾದ ಪ್ರಮಾಣವುಳ್ಳ ಮರಳು ೨೭ ಅಂಗುಲ ಮಂದವಾಗಿರುತ್ತದೆ. ಅದರ ಕೆಳಗೆ ೧⅓ ನಿಂದ ೧ ಅಂಗುಲದ ವರೆಗೂ ಕ್ರಮೇಣ ಏರುವ ಗಾತ್ರದ ಸೊರಜುಕಲ್ಲು ೧೫ ಅಂಗುಲದ ವರೆಗೂ ಇದೆ. ಸೊರಜುಕಲ್ಲಿನ ತಳದಲ್ಲಿ ಮಧ್ಯೆ ಒಂದು ಕಬ್ಬಿಣದ ಕೊಳಾಯಿ ಇದ್ದು ಎರಡು ಕಡೆಗಳಲ್ಲಿಯೂ ಪಕ್ಕದಲ್ಲಿ ಚಿಕ್ಕ ಕೊಳವಿಗಳ ಸಾಲು ಗಳಿಗೆ ಜೋಡಿಸಿದೆ. ಈ ಪಕ್ಕದ ಕೊಳವಿಗಳಲ್ಲಿ ೬ ಅಂಗುಲ ಅಂತರಕ್ಕೆ ಹಿತ್ತಾಳೆಯ ಜಲ್ಲಡೆಗಳನ್ನು ಜೋಡಿಸಿದ್ದಾರೆ. ಒಂದು ಶೋಧಕಯಂತ್ರದಲ್ಲಿ ಇಂಥ ಜಲ್ಲಡೆಗಳು ಸುಮಾರು ೨,೦೦೦ ಇವೆ. ನೀರಿನ ಒತ್ತಡದಿಂದಲೂ ಸೊರಜುಕಲ್ಲಿನ ಜಲಸದಿಂದಲೂ ಅಪಾಯವಾಗದ ಹಾಗೆ ಜಲ್ಲಡೆಯ ಮೇಲುಭಾಗದಲ್ಲಿ ಹಿತ್ತಾಳೆಯ ಟೋಪಿಯೊಂದಿದೆ. ಯಾವ ಜಲ್ಲಡೆಯನ್ನು ಬೇಕಾದರೂ ತೊಳೆಯುವುದಕ್ಕಾಗಲಿ ಬದಲಾಯಿಸುವುದ ಕ್ಕಾಗಲಿ ಅಡ್ಡ ಕೊಳವಿಯನ್ನು ಎತ್ತದೆ ಕಳಚಿ ತೆಗೆಯಬಹುದು.

ಹಣಿಸುವ ಕೊಳಗಳಿಂದ ಬಂದ ನೀರು ಮೇಲಿನ ಕಬ್ಬಿಣದ ಕಾಲುವೆಗಳ ಮೂಲಕ ಸಣ್ಣ ಮರಳಿನ ಮೇಲೆ ಒಂದೇ ಸಮನಾಗಿ ಬಿದ್ದು ಶುದ್ಧವಾಗಿ ಸೊರಜು ಕಲ್ಲಿನೊಳಕ್ಕೆ ಇಳಿದು ಜಲ್ಲಡೆಗಳಲ್ಲಿ ಹೊಕ್ಕು ಅಡ್ಡ ಕೊಳವಿಗಳ ಮಾರ್ಗವಾಗಿ ಮಧ್ಯದ ಕೊಳಾಯಿಯಲ್ಲಿ ಫಿಲ್ಟರಿನಿಂದ ಹೊರಕ್ಕೆ ಹೋಗುತ್ತದೆ. ಒಳಕ್ಕೆ ಬರುವ ನೀರು ಮೊದಲು ಸಾವಕಾಶವಾಗಿಯೂ ಶೋಧನಕ್ರಮವು ಮುಂದುವರಿದ ಹಾಗೆಲ್ಲಾ ಕ್ರಮೇಣತನ್ನಷ್ಟಕ್ಕೆ ತಾನೇ ಹೆಚ್ಚಾಗುವಂತೆಯೂ ಮಾಡುವುದಕ್ಕೆ ಒಂದು ಉಪಾಯ ವಿದೆ. ಒಳಕ್ಕೆ ಬರುವ ನೀರೂ ಹೊರಕ್ಕೆ ಹೋಗುವ ನೀರೂ ಒಂದಕ್ಕೊಂದು ಸಮ ವಾಗಿರುವುದಕ್ಕೂ ಏರ್ಪಾಡಿದೆ.

ಈ ರೀತಿಯ ಶೋಧಕಯಂತ್ರಗಳಲ್ಲಿ ನೀರು ಶುದ್ಧಿಯಾಗುವ ಬಗೆ ಹೇಗೆ— ಎಂದು ಕೊಂಚ ವಿಚಾರಿಸಬಹುದು. ಮುಖ್ಯವಾಗಿ ಎರಡು ಬಗೆಯ ಫಿಲ್ಟರುಗಳು ಉಪಯೋಗದಲ್ಲಿವೆ. ಒಂದರಲ್ಲಿ ನೀರು ಮರಳಿನ ಮೂಲಕ ನಿದಾನವಾಗಿ ಶುದ್ಧವಾ ಗುತ್ತದೆ. ಇನ್ನೊಂದರಲ್ಲಿ ಯಂತ್ರಸಹಾಯದಿಂದ ಶೋಧನೆಯು ಚುರುಕಾಗುವ ಹಾಗೆ ಮಾಡಿದ್ದಾರೆ. ಶೋಧಕಯಂತ್ರಗಳಲ್ಲೂ ಎರಡು ವಿಧ—ಒತ್ತಡದ ಶೋಧಕಯಂತ್ರ (Pressure filters) ಮತ್ತು ಭಾರದ ಶೋಧಕಯಂತ್ರ (Gravity filters) ಒತ್ತಡದ ಯಂತ್ರಗಳಲ್ಲಿ ನೀರನ್ನು ಬಾಯಿಮುಚ್ಚಿದ ಉಕ್ಕಿನ ಪಾತ್ರೆಗಳಲ್ಲಿ ಶೋಧಿಸುತ್ತಾರೆ. ಬಹಳ ಹೆಚ್ಚು ನೀರು ಬೇಕಾಗದೆ ಇದ್ದ ಕಡೆ ಈ ಮಾದರಿಯ ಉಪಯೋಗ ಹೆಚ್ಚು. ಭಾರದ ಯಂತ್ರವು ಬಾಯಿ ತೆರೆದ ಕೊಳದ ಹಾಗಿರುತ್ತದೆ. ಕೊಳಗಳನ್ನು ಸೌಕರ್ಯ ಕ್ಕಾಗಿ ಇತ್ತೀಚೆಗೆ ರಿಇನ್‌ಫೋರ್ಸ್ಡ್ ಕಾಂಕ್ರೀಟ್‌ನಿಂದ ಕಟ್ಟುತ್ತಾರೆ.

ನಿಧಾನವಾಗಿ ಮರಳಿನ ಮೂಲಕ ನೀರನ್ನು ಶೋಧಿಸುವ ಪದ್ಧತಿಯು ಲಂಡನ್ನಿನಲ್ಲಿ ವಿಶೇಷವಾಗಿ ಬಳಕೆಯಲ್ಲಿದೆ. ಈ ಕ್ರಮದಲ್ಲಿ ಸುಣ್ಣ ಪಟಿಕ ಮುಂತಾದ ಹೊರಗಣ ಪದಾರ್ಥಗಳನ್ನು ನೀರಿಗೆ ಬೆರೆಸಬೇಕಾಗಿಲ್ಲ. ಫಿಲ್ಟರುಗಳನ್ನು ನೋಡಿಕೊಳ್ಳುವ ದಕ್ಷ ನಿಪುಣರ ಆವಶ್ಯಕತೆ ಇಲ್ಲ. ಆದರೆ ಇವು ಬಹು ಅಗಲವಾಗಿ ಹರಡಿಕೊಳ್ಳುತ್ತವೆ. ದಿನಂಪ್ರತಿ ೧೦ ಲಕ್ಷ ಗ್ಯಾಲನ್ ನೀರನ್ನು ಶೋಧಿಸಬೇಕಾದರೆ ೬೦೦ ಅಡಿ ಉದ್ದ, ೩೩೦ ಅಡಿ ಅಗಲದ ಜಾಗ ಬೇಕು. ಇದೇ ದೊಡ್ಡ ತೊಂದರೆ. ಇಷ್ಟೇ ನೀರನ್ನು ತಿಪ್ಪಗೊಂಡನಹಳ್ಳಿಯಲ್ಲಿ ೨೪ ಅಡಿ ಉದ್ದ, ೨೦ ಅಡಿ ಅಗಲದಲ್ಲಿ ಶೋಧಿಸಬಹುದು. ಎಂದಮೇಲೆ ಈ ಯಂತ್ರಸಾಧನದಿಂದ ಎಷ್ಟು ಉಪಯೋಗವೆಂದು ತಿಳಿಯುತ್ತದೆ.

ನೀರನ್ನು ಶೋಧಿಸುವ ಯಾವ ಸಾಧನದಲ್ಲಿಯೇ ಆಗಲಿ ಮರಳಿನ ಆವಶ್ಯಕತೆ ಇದ್ದೇ ಇದೆ. ಶೋಧಕಯಂತ್ರಗಳಿಗೆ ಬರುವುದಕ್ಕೆ ಮುಂಚೆ ನೀರಿಗೆ ಸುಣ್ಣವನ್ನೂ ಪಟಿಕವನ್ನೂ ಬೆರಸಿ, ಹಣಿಸುವ ಕೊಳಗಳಲ್ಲಿ ತಿಳಿಯಾಗಿ ಮಾಡಿರಲೇಬೇಕು. ಇದರಿಂದ ದಪ್ಪ ಕಸವೆಲ್ಲಾ ಹೋಗಿ ಫಿಲ್ಟರಿನ ಕೆಲಸ ಸುಲಭವೂ ಸಮರ್ಪಕವೂ ಆಗುತ್ತದೆ. ಈ ನೀರು ಫಿಲ್ಟರನ್ನು ಪ್ರವೇಶಿಸಿದಾಗ ಕ್ರಮೇಣ ಮರಳಿನ ಮೇಲುಭಾಗದಲ್ಲಿ ನೀರಿನೊಳಗಿರುವ ಸೂಕ್ಷ್ಮ ಜೀವಾಣುಗಳು ಕಸದೊಂದಿಗೆ ಬೆರೆದು ಒಂದು ಪೊರೆಯು ಉತ್ಪತ್ತಿಯಾಗುತ್ತದೆ. ಈ ಪೊರೆಯಿಂದಲೇ ಹೆಚ್ಚಿನ ಶುದ್ಧಿಕಾರ್ಯವು ನೆರವೇರುತ್ತದೆ. ಏಕೆಂದರೆ ರೋಗಜನಕ ಜೀವಾಣುಗಳು (Pathogenic Bacteria) ಈ ಪೊರೆಯಲ್ಲಿರುವ ಇತರ ಜೀವಾಣುಗಳಿಂದ ನಾಶವಾಗುತ್ತವೆ. ಶೋಧನಕ್ರಮವು ಮುಂದುವರಿದ ಹಾಗೆಲ್ಲಾ ಈ ಪೊರೆಯು ದಪ್ಪವಾಗುವುದರಿಂದ ಮರಳಿನೊಳಕ್ಕೆ ನೀರು ನುಗ್ಗುವುದೇ ಕಷ್ಟವಾಗುತ್ತದೆ. ಇದರಿಂದ ಶೋಧನೆಯ ವೇಗವು ಕಡಮೆಯಾಗುತ್ತದೆ. ಆದರೆ ಪೊರೆಯು ದಪ್ಪವಾದಷ್ಟೂ ಶೋಧನೆಯು ಚೆನ್ನಾಗಿ ಆಗುತ್ತದೆ.

ಇದೇ ಅಲ್ಲದೆ ಈ ಪೊರೆಯ ಕೆಳಗೆ ಸ್ವಲ್ಪ ಆಳದ ವರೆಗೆ ಇರುವ ಮರಳಿನ ಕಣಗಳಿಗೂ ಸುತ್ತ ಜೀವಾಣುಗಳಿಂದ ರಚಿತವಾದ ಒಂದು ಕವಚ ದೊರಕುತ್ತದೆ. ಇದರಿಂದ ದೊಡ್ಡ ಉಪಕಾರವುಂಟು. ಅಕಸ್ಮಾತ್ತಾಗಿ ಮೇಲುಗಡೆಯ ಪೊರೆಯನ್ನು ದಾಟಿ ಬಂದ ಮೊಂಡ ಕ್ರಿಮಿಗಳು ಈ ಕವಚದಲ್ಲಿ ಸಿಕ್ಕಿ ಹತವಾಗುತ್ತವೆ.

ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಈ ಯಂತ್ರಗಳಲ್ಲಿ ನೀರನ್ನು ಶೋಧಿಸುವುದು ಬಿಳಿಯ ಬಟ್ಟೆಯಲ್ಲಿ ಶೋಧಿಸಿದಂತೆ ಅಲ್ಲ. ಅಥವಾ ನೀರು ಕಟ್ಟಿರುವ ಬಾವಿಯೊಳಕ್ಕೆ ಕೆಂಪು ಪುಡಿ (Potassium Permanganate) ಹಾಕಿ ಶುದ್ಧಿ ಮಾಡಿದಂತೆಯೂ ಅಲ್ಲ. ಬರಿಯ ಭೌತಿಕ ಮತ್ತು ರಾಸಾಯನಿಕ ಮಾರ್ಪಾಡುಗಳೇ ಅಲ್ಲದೆ ಜೀವಾಣುಗಳ ಕೈವಾಡದಿಂದ ಮುಖ್ಯವಾದ ಶುದ್ಧಿಕಾರ್ಯ ನೆರವೇರುತ್ತದೆ.

ಈ ಜೀವಾಣುಗಳಿಂದ ಕೂಡಿದ ಕವಚವನ್ನು ಧರಿಸುವುದಕ್ಕೆ ಮಾತ್ರ ಮರಳಿನ ಕಣಗಳು ಸಹಾಯವಾಗುತ್ತವೆ. ಹಾಗಲ್ಲದೆ ಮರಳಿನಿಂದ ಮಾತ್ರವೇ ನೀರು ಶುದ್ಧಿಯಾಗುವುದಕ್ಕೆ ಅವಕಾಶವೇ ಇಲ್ಲ. ಒಂದು ಮರಳಿನ ಕಣಕ್ಕೂ ಇನ್ನೊಂದಕ್ಕೂ ಇರುವ ಅಂತರದಲ್ಲಿ ಎಷ್ಟು ಬೇಕಾದರೂ ಜೀವಾಣುಗಳು ನುಗ್ಗಬಲ್ಲವು. ಫಿಲ್ಟರಿನ ಸಾಮರ್ಥ್ಯವನ್ನು ಒಂದು ರೀತಿಯಲ್ಲಿ ಅಳತೆ ಮಾಡಬಹುದು. ಕೊಟ್ಟ ನೀರಿನಲ್ಲಿ ಎಷ್ಟು ಜೀವಾಣುಗಳು ಇವೆಯೆಂದು ಸೂಕ್ಷ್ಮದರ್ಶಕ ಯಂತ್ರಗಳಿಂದ ಒಂದು ವಿಧಾನದಲ್ಲಿ ನೋಡಿ ಅಳೆಯಲು ಸಾಧ್ಯ. ಒಂದು ಲೋಟ ಕೆರೆಯ ನೀರಿನಲ್ಲಿ ಒಂದು ನೂರು ಜೀವಾಣುಗಳಿದ್ದವೆಂದು ಇಟ್ಟುಕೊಳ್ಳೋಣ. ಆ ನೀರನ್ನು ಶೋಧಿಸಿದ ಮೇಲೆ ಅದರಲ್ಲಿ ನಾಲ್ಕು ಜೀವಾಣುಗಳು ಕಂಡುಬಂದರೆ ಫಿಲ್ಟರಿನ ಸಾಮರ್ಥ್ಯವು ನೂರಕ್ಕೆ ತೊಂಬತ್ತಾರು—ಎನ್ನುತ್ತೇವೆ. ಈ ಸಂಖ್ಯೆಯಿಂದ ಮುಂಚೆ ಕೆರೆಯ ನೀರಿನಲ್ಲಿ ಇದ್ದ ಜೀವಾಣುಗಳ ಪೈಕಿ ಶೋಧಕಯಂತ್ರದಲ್ಲಿ ಎಷ್ಟು ನಾಶವಾದವು ಎಂದು ತಿಳಿಯಲು ಸಾಧ್ಯವಿಲ್ಲ. ಏಕೆಂದರೆ ಶೋಧನಕ್ರಮವೇ ಜೀವಾಣುಗಳ ಕೆಲಸವೆಂದು ಕಂಡಿದ್ದೇವೆ. ಫಿಲ್ಟರಿನಲ್ಲೇ ಇಂಥ ಜೀವಾಣುಗಳು ಹೇರಳವಾಗಿರುತ್ತವೆ. ಅದಕ್ಕಾಗಿ ಮೊದಲು ಇದ್ದ ಜೀವಾಣುಗಳಲ್ಲಿ ಎಷ್ಟೋ ಹೋದವು ಎಂದು ಅಳೆಯುವುದಕ್ಕೆ ಬೇರೆ ಕ್ರಮವಿದೆ. ಇದನ್ನು ತಿಳಿಯಬೇಕಾದರೆ ಜೀವಾಣುಗಳಲ್ಲಿ ಅನೇಕ ಜಾತಿಭೇದಗಳಿವೆಯೆಂಬುದನ್ನು ಗಮನಿಸಬೇಕು. ಕೆರೆಯ ನೀರಲ್ಲಿ ಇಲ್ಲದ, ಶೋಧನಕ್ರಮದಲ್ಲಿ ಉತ್ಪತ್ತಿಯಾಗದ ಅಪೂರ್ವ ಜಾತಿಯ ಕ್ರಿಮಿಗಳನ್ನು ಶೋಧಿಸುವುದಕ್ಕೆ ಮುಂಚೆ ಒಂದು ಪ್ರಮಾಣದಲ್ಲಿ ನೀರಿಗೆ ಬೆರೆಸಬೇಕು. ಮತ್ತೆ ಒಂದು ಚಮಚ ನೀರಿನಲ್ಲಿ ಅಂಥ ಕ್ರಿಮಿಗಳು ನೂರು ಇವೆಯೆನ್ನೋಣ. ಆ ನೀರನ್ನು ಶೋಧಿಸಿದ ಮೇಲೆ ತಿರಿಗಿ ಪರೀಕ್ಷೆ ಮಾಡಿದಾಗ ಮೂರು ಕ್ರಿಮಿಗಳಿದ್ದರೆ ನೂರಕ್ಕೆ ತೊಂಬತ್ತೇಳು ಕ್ರಿಮಿಗಳು ಫಿಲ್ಟರಿನಲ್ಲಿ ಹೋದವು ಎನ್ನಬಹುದು.

ಫಿಲ್ಟರಿನಲ್ಲಿ ನೀರು ಶೋಧನೆಯಾದ ಹಾಗೆಲ್ಲ ನೀರಿನಲ್ಲಿದ್ದ ಕೊಳೆ ಮರಳಿನೊಳಕ್ಕೆ ಸೇರಿಕೊಳ್ಳಲೇಬೇಕು. ಈ ಕೊಳೆಯನ್ನು ಆಗಾಗ ತೆಗೆಯದೆ ಹೋದರೆ ಅದರ ಕೆಲಸವೇ ನಿಂತುಹೋಗುವುದು ಸಹಜ. ಅದಕ್ಕಾಗಿ ಪ್ರತಿಯೊಂದು ಫಿಲ್ಟರನ್ನೂ ದಿನಕ್ಕೊಂದು ಸಾರಿ ತೊಳೆಯುತ್ತಾರೆ. ತೊಳೆಯುವುದಕ್ಕೆ ಮುಂಚೆ ಕಸ ಸೇರಿ ಹೆಪ್ಪುಕಟ್ಟಿರುವ ಮರಳನ್ನು ಕೆದಕಬೇಕು. ಬೆಂಗಳೂರಿನಲ್ಲಿ ಮಲ್ಲೇಶ್ವರದ ಹತ್ತಿರ ಇರುವ ಫಿಲ್ಟರುಗಳಲ್ಲಿ ಕಬ್ಬಿಣದ ಸಲಾಕೆಗಳಿಂದ ಮರಳನ್ನು ಕೆದಕುವರೆಂದು ನೋಡಿದ್ದೇವೆ. ಈ ಫಿಲ್ಟರುಗಳೂ ಅದೇ ಕಂಪೆನಿಯಲ್ಲಿಯೇ ತಯಾರಾದರೂ ಈಚೆಗೆ ಯಂತ್ರನಿರ್ಮಾಣದಲ್ಲಿ ಅನೇಕ ಪರಿಷ್ಕರಣಗಳನ್ನು ಕಾಣಬಹುದು. ಹಿಂದೆ ಮುಚ್ಚಳ

ಗಳನ್ನು ತೆಗೆಯುವುದಕ್ಕಾಗಲಿ ಮುಚ್ಚುವುದಕ್ಕಾಗಲಿ ಆಳುಗಳು ಗುಂಡಾದ ಚಕ್ರವನ್ನು ಸುತ್ತಿಸಿ ಸುತ್ತಿಸಿ ದಣಿಯಬೇಕಾಗಿತ್ತು. ಈಗ ಆ ಕೆಲಸವನ್ನು ವರುಣನಿಂದ ಮಾಡಿಸುತ್ತಾರೆ. ಹೆಪ್ಪುಗಟ್ಟಿದ ಮರಳನ್ನು ಕೆದಕುವ ಕೆಲಸವನ್ನು ವಾಯುವಿಗೆ ಒಪ್ಪಿಸಿದೆ. ಒಟ್ಟಿನಲ್ಲಿ ಯಂತ್ರಯುಗದ ಜೀವಾಳವೇ ಇದು : ಪೂರ್ವದಲ್ಲಿ ಮನುಷ್ಯನು ಕೈಕಾಲು ಉಪಯೋಗಿಸಿ ಕೊಂಚವಟ್ಟಿಗೆ ಇದ್ದ ಬುದ್ಧಿಯನ್ನೂ ಖರ್ಚುಮಾಡಿ ಮತ್ತೊಬ್ಬರಿಗೆ ತೊಂದರೆಯಾಗದಂತೆ ಸಾವಧಾನವಾಗಿ ಮಾಡುತ್ತಾ ಇದ್ದ ಕೆಲಸವನ್ನು ಪಂಚಭೂತಗಳ ಕೈಯಲ್ಲಿ ದಕ್ಷತೆಯಿಂದ ಚುರುಕಾಗಿ ಮಾಡಿಸುವುದು. ಮೊದಲು ನೋಡಿದರೆ ಇದರಿಂದ ಮನುಷ್ಯನಿಗೆ ಎಷ್ಟು ಕಷ್ಟ ನಿವಾರಣೆಯಾಗಿದೆ, ಎಷ್ಟು ಕಾಲಹರಣ ತಪ್ಪಿದೆಯೆಂದು ಸಂತೋಷಿಸಬಹುದು. ಹೋದ ಕಷ್ಟದ ಬದಲು ಮನುಷ್ಯವರ್ಗಕ್ಕೆ ಏನು ಸುಖ ದೊರಕಿದೆ, ಪೋಲಾಗುತ್ತಿದ್ದ ಕಾಲದಲ್ಲಿ ಶಾಶ್ವತವಾಗಿ ಏನು ಸಾಧನೆಯಾಗಿದೆ ಎಂಬ ಪ್ರಶ್ನೆಗೆ ಮಾತ್ರ ಸಮರ್ಪಕವಾದ ಉತ್ತರವನ್ನು ಈ ಯುಗವು ಇನ್ನೂ ಕೊಟ್ಟಿಹಾಗಿಲ್ಲ. ಮುಂದಾದರೂ ಕೊಡಲೆಂದು ಹಾರೈಸೋಣ.

ಫಿಲ್ಟರುಗಳನ್ನು ತೊಳೆಯುವುದಕ್ಕೆ ಮೊದಲು ಗಾಳಿಯನ್ನೂ ಆಮೇಲೆ ನೀರನ್ನೂ ತಳದಿಂದ ಜಲ್ಲಡೆಗಳ ಮಾರ್ಗವಾಗಿ ಮೇಲಕ್ಕೆ ಕಳಿಸುತ್ತಾರೆ. ಈ ಕ್ರಮದಿಂದ ಗಾಳಿಯು ಎಲ್ಲಾ ಭಾಗದಲ್ಲಿಯೂ ಒಂದೇ ಸಮನಾಗಿ ಹರಡಿ ಒಂದೇಕಡೆ ಮರಳನ್ನು ಎತ್ತಿಹಾಕದ ಹಾಗೂ ಮರಳು ಮುದ್ದೆಗಟ್ಟದ ಹಾಗೂ ಆಗುತ್ತದೆ. ಗಾಳಿಯನ್ನು ಒಂದು ಬ್ಲೋಯರಿನ (Roots' Blower) ಮೂಲಕ ಒದಗಿಸುತ್ತಾರೆ. ಅದು ಮರಳಿನ ರಾಶಿಯೊಳಗಡೆ ನಾಡಿ ಹಾರುವ ಹಾಗೆ ನೂಕುವುದರಿಂದ ಮರಳಿನ ಕಣಗಳು ಮೇಲಕ್ಕೆ ಹಾರಿ ಕೆಳಕ್ಕೆ ಬಿದ್ದು ಒಂದಕ್ಕೊಂದು ಉಜ್ಜಿ, ಮಧ್ಯೆ ಸೇರಿದ್ದ ಕೊಳೆಯೆಲ್ಲಾ ಬೇರೆಯಾಗುತ್ತದೆ. ಆ ಮೇಲೆ ಗಾಳಿ ಬಂದ ದಾರಿಯಲ್ಲಿಯೇ ಒತ್ತಡದ ನೀರನ್ನು ಬಿಡುವುದರಿಂದ ಕಸವೆಲ್ಲಾ ನೀರಿನಲ್ಲಿ ಸೇರಿ ಚರಂಡಿಗಳ ಮಾರ್ಗವಾಗಿ ಹೊರಕ್ಕೆ ಹೋಗುತ್ತದೆ. ಫಿಲ್ಟರಿನಲ್ಲಿ ಕೊಳೆ ತಕ್ಕಷ್ಟು ಸೇರಿದಾಗ ತನ್ನಷ್ಟಕ್ಕೆ ತಾನೇ ಬ್ಲೋಯರ್ ಕೆಲಸಮಾಡುವ ಹಾಗೆ ಏರ್ಪಾಡಿಟ್ಟಿದೆ. ಫಿಲ್ಟರಿನ ಮುಂಭಾಗದಲ್ಲಿರುವ ಮೇಜಿನ ಮೇಲಿರುವ ಕೈಪಿಡಿಯನ್ನು ತಿರುಗಿಸುವುದರಿಂದ ಅದನ್ನು ಕೆಲಸ ಮಾಡುವ ಹಾಗೂ ನಿಲ್ಲುವ ಹಾಗೂ ಮಾಡಬಹುದು. ಒಂದು ಫಿಲ್ಟರನ್ನು ತೊಳೆಯುವುದಕ್ಕೆ ದಿನ ಒಂದಕ್ಕೆ ಸುಮಾರು ೨೫,೦೦೦ ಗ್ಯಾಲನ್ ನೀರು ಬೇಕು. ಈ ನೀರನ್ನು ಒಂದು ಪಂಪಿನ ಮೂಲಕ ಎತ್ತರದ ಪ್ರದೇಶದಲ್ಲಿರುವ ಕೊಳಕ್ಕೆ ಎತ್ತುತ್ತಾರೆ. ಅಲ್ಲಿಂದ ಬೇಕಾದಾಗ ಕೆಳಕ್ಕೆ ಬಿಟ್ಟುಕೊಳ್ಳಬಹುದು.

ಆರು ಫಿಲ್ಟರುಗಳನ್ನು ಕಟ್ಟುವುದಕ್ಕೆ ೪೩ ಲಕ್ಷ ರೂಪಾಯಿ ತಗಲಿತು. ೧೦೦ ಅಡಿ ಚದರದ ಪ್ರದೇಶದಲ್ಲಿ ಕಟ್ಟಡವನ್ನು ಎರಡು ಅಂತಸ್ತಿನಲ್ಲಿ ಕಟ್ಟಿದೆ. ಮುಂದಕ್ಕೆ ಇನ್ನು ಆರು ಫಿಲ್ಟರುಗಳನ್ನು ಕಟ್ಟುವುದಕ್ಕೆ ಬೇಕಾದ ಜಾಗವನ್ನು ಪಕ್ಕದಲ್ಲಿಯೇ ಬಿಟ್ಟುಕೊಂಡಿದೆ.

ಫಿಲ್ಟರಿನಲ್ಲಿ ಶುದ್ಧಿಯಾದ ನೀರು ಮತ್ತೆ ವೆಂಚುರಿಮಾಪಕದಲ್ಲಿ ಅಳತೆಯಾಗಿ ಕೊಳವೆಗಳನ್ನು ಜೋಡಿಸಿರುವ ಕಿರುಹಾದಿಯು (Pipe Gallery) ಕೆಳಗೆ ಇರುವ ರಿಇನ್‌ಫೋರ್ಸ್ಡ್ ಕಾಂಕ್ರೀಟಿನ ತೊಟ್ಟಿಯೊಳಕ್ಕೆ ಬೀಳುತ್ತದೆ. ಅಲ್ಲಿಂದ ೩೦ ಅಂಗುಲದ ಕೊಳಾಯಿಯ ಮಾರ್ಗವಾಗಿ ತಿಳಿನೀರಿನ ಕೊಳಕ್ಕೆ ಹೋಗುತ್ತದೆ. ಇಲ್ಲಿ ನೀರಿಗೆ ಸ್ವಲ್ಪ ಕ್ಲೋರೀನ್ ಬೆರೆಸುತ್ತಾರೆ. ಇದರಿಂದ ಮುಂದೆ ಬೆಂಗಳೂರಲ್ಲಿ ಸರಬರಾಯಿಯಾಗುವ ವರೆಗೂ ನೀರಿನ ಶುದ್ಧತೆಯನ್ನು ಕಾಪಾಡಬಹುದು. ಈ ಕೊಳದಲ್ಲಿ ೨೦೦ ಅಡಿ ಉದ್ದ, ೫೦ ಅಡಿ ಅಗಲ, ೮ ಅಡಿ ಆಳವುಳ್ಳ ಎರಡು ಅಂಕಣಗಳಿವೆ. ಕೊಳವೆಲ್ಲಾ ನೆಲದ ಕೆಳಗೇ ಇದ್ದು ಮೇಲೆ ತಾರಸಿಹಾಕಿ ಮುಚ್ಚಿದೆ. ಇದು ಒಟ್ಟು ೧೦ ಲಕ್ಷ ಗ್ಯಾಲನ್ನನ್ನು ಎಂದರೆ ಬೆಂಗಳೂರಿಗೆಲ್ಲಾ ನಾಲ್ಕು ಗಂಟೆಗಳ ಕಾಲ ಆಗುವಷ್ಟು ನೀರನ್ನು ಹಿಡಿಯುತ್ತದೆ. ಇದು ಒಂದು ಕಡೆ ಫಿಲ್ಟರಿಗೂ ಇನ್ನೊಂದು ಕಡೆ ಪಂಪಿಗೂ ಮಧ್ಯವರ್ತಿಯಾಗಿದೆ. ಒಂದು ವೇಳೆ ಫಿಲ್ಟರು ಏನಾದರೂ ಕೆಟ್ಟುಹೋದರೆ ರಿಪೇರಿಯಾಗುವ ವರೆಗೂ ಪಂಪುಗಳು ಈ ಕೊಳದಲ್ಲಿನ ನೀರನ್ನು ಎತ್ತಬಹುದು. ಅಥವಾ ಪಂಪೇ ರಿಪೇರಿಯಾಗುವಾಗ ಫಿಲ್ಟರಿನ ನೀರು ಈ ಕೊಳದಲ್ಲಿ ಶೇಖರವಾಗಬಹುದು. ಈ ಅನುಕೂಲವಿರುವುದರಿಂದ ಫಿಲ್ಟರು ಮತ್ತು ಪಂಪಿನ ಕೆಲಸಗಳು ನಿರಾತಂಕವಾಗಿಯೂ ಸ್ವತಂತ್ರವಾಗಿಯೂ ನಡೆಯುತ್ತವೆ. ಈ ಕೊಳವನ್ನು ಕಟ್ಟುವುದಕ್ಕೆ ೧,೧೦,೦೦೦ ರೂಪಾಯಿ ತಗುಲಿತು.

ತಿಳಿನೀರಿನ ಕೊಳದಿಂದ ನೀರು ಪಂಪಿನ ಸಕ್ಷನ್ ಪಿಟ್ಟಿಗೆ ಬರುತ್ತದೆ. ಕಟ್ಟೆಯ ನೀರು ಇಲ್ಲಿಯ ವರೆಗೂ ಕ್ರಮವಾಗಿ ಇಳಿಯುತ್ತ ಬಂದು ಇಲ್ಲಿಂದ ಪಂಪಿನ ಮೂಲಕ ಬೆಂಗಳೂರಿಗೆ ಹತ್ತುತ್ತದೆ. ೧,೦೦೦ ಅಶ್ವಶಕ್ತಿಯುಳ್ಳ ಮೋಟಾರು (Three-phase Induction Motor) ಗಳಿಗೆ ನೇರವಾಗಿ ಜೋಡಿಸಿದ ಮೂರು ಪಂಪುಗಳಿವೆ. ಪಂಪುಗಳು ಮೂರು ಅಂತಸ್ತಿನಲ್ಲಿ (Plurovane Turbine Three-stage Pump) ಕೆಲಸಮಾಡುತ್ತವೆ. ಈ ಪಂಪುಗಳಿಂದ ನೀರು ಮೇಲಕ್ಕೆ ಹತ್ತುವ ವಿಧಾನವನ್ನು ಕವಣೆಯಿಂದ ಕಲ್ಲನ್ನು ಮೇಲಕ್ಕೆ ಎಸೆಯುವುದಕ್ಕೆ ಸ್ಥೂಲವಾಗಿ ಹೋಲಿಸಬಹುದು. ಕೈಯಲ್ಲಿರುವ ಸಣ್ಣ ಹಗ್ಗದ ಕೊನೆಯಲ್ಲಿರುವ ಕಲ್ಲು ತಿರುಗುತ್ತಾ ತಿರುಗುತ್ತಾ ಒಂದು ಶಕ್ತಿಯನ್ನು (Centrifugal Force) ಸಂಪಾದಿಸುತ್ತದೆ. ವೇಗವಾಗಿ ಸುತ್ತಿಸಿದಷ್ಟೂ ಈ ಶಕ್ತಿಯು ಹೆಚ್ಚಾಗುತ್ತದೆ. ಈ ಸಂದರ್ಭದಲ್ಲಿ ಅದು ಸುತ್ತುತ್ತಿರುವ ಮಾರ್ಗವನ್ನು

ತಪ್ಪಿಸಿ ಬೇರೆ ದಿಕ್ಕಿಗೆ ತಿರುಗುವಂತೆ ಬೀರಿದರೆ ತನ್ನಲ್ಲಿ ಕೂಡಿಟ್ಟ ಶಕ್ತಿಯ ಪ್ರಭಾವದಿಂದ ಕಲ್ಲು ಮೇಲಕ್ಕೆ ಚಿಮ್ಮುತ್ತದೆ. ಅದ್ಭುತವಾದ ಶಕ್ತಿಯುಳ್ಳ ಮೋಟಾರಿನ ಸಹಾಯದಿಂದ ಕೊಂಚ ನೀರನ್ನು ಮಿನಿಟಿಗೆ ೧,೪೫೦ ಸಾರಿ ತಿರಿಗಿಸಿ ಕೈಬಿಟ್ಟರೆ ಪ್ರಚ್ಯುತವಾದ ನೀರು ಕವಣೆಯ ಕಲ್ಲಿನ ಹಾಗೆಯೇ ಮೇಲಕ್ಕೆ ನೆಗೆಯುತ್ತದೆ. ಹೀಗೆ ಮೂರು ಅಂತಸ್ತಿನಲ್ಲಿ ನೂಕುವುದರಿಂದ ಅದು ತಿಪ್ಪಗೊಂಡನಹಳ್ಳಿಯಿಂದ ಬೆಂಗಳೂರಿನ ವರೆಗೂ ಹಾರಿ ಬರುತ್ತದೆ.

ತಿಪ್ಪಗೊಂಡನಹಳ್ಳಿಯಲ್ಲಿನ ಪಂಪಿನ ಮನೆಯು ಬೆಂಗಳೂರಿಗಿಂತ ೬೩೦ ಅಡಿ ತಗ್ಗಿನಲ್ಲಿದೆ. ಅಲ್ಲಿಂದ ಇಲ್ಲಿಗೆ ಏರುವ ಕೊಳಾಯಿ ಪಂಕ್ತಿಯು ೧೬೪ ಮೈಲಿ ಉದ್ದವಾಗಿದೆ. ಇಷ್ಟುದೂರ ಕೊಳಾಯಿಗಳ ಪಕ್ಕದಲ್ಲಿ ಉಜ್ಜುವಾಗ ಪಂಪುಗಳಿಗೆ ಶ್ರಮ ಹೆಚ್ಚಾಗಲೇ ಬೇಕು. ಈ ಶ್ರಮವೇ ೨೫೦ ಅಡಿಗಳ ಎತ್ತರಕ್ಕೆ ನೀರನ್ನು ಎತ್ತುವಷ್ಟು ಆಗುತ್ತದೆ. ಒಟ್ಟಿನಲ್ಲಿ ೮೮೦ ಅಡಿಯ ವರೆಗೂ ನೀರು ಏರಬೇಕಾಗುತ್ತದೆ. ಅದಕ್ಕಾಗಿ ೧,೦೦೦ ಅಡಿಯ ವರೆಗೂ ನೀರನ್ನು ಎಳೆಯುವ ಶಕ್ತಿಯುಳ್ಳ ಪಂಪುಗಳನ್ನು ಜೋಡಿಸಿದೆ. ಮೋಟಾರು ಮತ್ತು ಪಂಪುಗಳು ಮ್ಯಾಂಚೆಸ್ಟರಿನ ಮ್ಯಾದರ್ ಮತ್ತು ಪ್ಲ್ಯಾಟ್ ಕಂಪೆನಿಯವರಿಂದ ತಯಾರಾದವು. ಪಂಪುಗಳ ಸಾಮರ್ಥ್ಯ (Efficiency) ನೂರಕ್ಕೆ ಎಪ್ಪತ್ತೆಂಟರಷ್ಟಿದೆ. ಇವು ಈಗ ಎಂಟೂವರೆ ವರ್ಷಗಳಿಂದಲೂ ಬಹು ಚೆನ್ನಾಗಿ ಕೆಲಸಮಾಡುತ್ತಿವೆ. ಮೋಟಾರು ಮತ್ತು ಪಂಪುಗಳಿಗಾಗಿ ೪.೬ ಲಕ್ಷ ರೂಪಾಯಿ ಖರ್ಚಾಯಿತು.

ಒಂದೇ ಪಂಪು ಕೆಲಸಮಾಡುವಾಗ ೧,೦೦೦ ಅಡಿ ಎತ್ತರಕ್ಕೆ ೪೦ ಲಕ್ಷ ಗ್ಯಾಲನ್ ನೀರನ್ನು ಎತ್ತಬಲ್ಲದು. ಎರಡು ಜೊತೆಯಲ್ಲಿ ಕೆಲಸಮಾಡಿದಾಗ ಒಟ್ಟು ೬೦ ಲಕ್ಷ ಗ್ಯಾಲನ್ ನೀರನ್ನು ಎತ್ತುತ್ತವೆ. ಸಾಮಾನ್ಯವಾಗಿ ಪ್ರತಿ ದಿನವೂ ಎರಡೇ ಪಂಪುಗಳು ಕೆಲಸಮಾಡುತ್ತಿರುತ್ತವೆ. ಯಾವುದಾದರೂ ಮೋಟಾರೋ ಪಂಪೋ ಕೆಟ್ಟುಹೋದಾಗ ಮೂರನೆಯ ಪಂಪಿಗೆ ಕೆಲಸ ಬೀಳುತ್ತದೆ.

ಮೋಟಾರುಗಳನ್ನು ನಡೆಸುವುದಕ್ಕೆ ವಿದ್ಯುಚ್ಛಕ್ತಿಯನ್ನು ಕಾನಕಾನಹಳ್ಳಿಯಿಂದಲೂ ಬೆಂಗಳೂರಿನಿಂದಲೂ ಪ್ರತ್ಯೇಕವಾದ ತಂತಿಯ ಸಾಲುಗಳಲ್ಲಿ ೩೫,೦೦೦ ವೋಲ್ಟಿನಲ್ಲಿ ತಂದಿರುತ್ತಾರೆ. ಇಲ್ಲಿ ಸಿಡಿಲು ಮಿಂಚಿನಿಂದ ಯಾವ ತೊಂದರೆಯೂ ಆಗದ ಹಾಗೆ ತಕ್ಕ ಬಂದೋಬಸ್ತಾದ ಸ್ವಿಚ್ಚುಗಳ ಮುಖಾಂತರ ಟ್ರಾನ್ಸ್‌ಫಾರ್ಮರುಗಳಲ್ಲಿ ೨,೩೦೦ ವೋಲ್ಟಿಗೆ ಇಳಿಸಿ ಮೋಟಾರುಗಳಿಗೆ ಒದಗಿಸುತ್ತಾರೆ.

ಪಂಪಿನ ಮನೆಯಿಂದ ಬೆಂಗಳೂರಿಗೆ ಏರುವ ೨೪ ಅಂಗುಲದ ಕೊಳಾಯಿ ಸಾಲಿನ ಮೊದಲನೆಯ ಮೂರು ಮೈಲಿಗಳಲ್ಲಿ ನೀರಿನ ಒತ್ತಡವು ಹೆಚ್ಚಾಗಿರುವುದ

ರಿಂದಲೂ ಕೊಳಾಯಿ ಸಾಲು ಗುಡ್ಡಗಳ ಮೇಲೆ ಹತ್ತಿ ಇಳಿಯುವುದರಿಂದಲೂ ಇಂಗ್ಲೆಂಡಿನಲ್ಲಿ ತಯಾರಾದ ಉಕ್ಕಿನ ಕೊಳಾಯಿಗಳನ್ನು ಜೋಡಿಸಿದ್ದಾರೆ. ಮುಂದಿನ ೧೩೪ ಮೈಲಿಗಳಲ್ಲಿ ನಮ್ಮ ಭದ್ರಾವತಿಯಲ್ಲಿ ತಯಾರಾದ ಎರಕದ ಕಬ್ಬಿಣದ ಕೊಳಾಯಿಗಳನ್ನು ಉಪಯೋಗಿಸಿದೆ. ಈ ದೂರದಲ್ಲಿ ನೀರಿನ ಒತ್ತಡವು ೬೦೦ ಅಡಿಯಿಂದ ೫೧೦ ಅಡಿಗೆ ಇಳಿಯುತ್ತದೆ. ಅದಕ್ಕೆ ತಕ್ಕಂತೆ ಹೋಗ ಹೋಗುತ್ತಾ ಕೊಳಾಯಿಗಳ ಮಂದ ಕಡಮೆಯಾಗುತ್ತಾನೆ. ಭದ್ರಾವತಿಯ "ಡಿ" ತರಗತಿಯ ಕೊಳಾಯಿಗಳು ೧,೭೦೦ ಅಡಿ ಒತ್ತಡವನ್ನು ತಡೆಯುವುವೆಂದು ಪರೀಕ್ಷಿಸಿ ತಿಳಿದಿದ್ದರೂ ೬೦೦ ಅಡಿಗೆ ಏರದ ಒತ್ತಡವಿರುವ ಕಡೆಯಲ್ಲಿ ಮಾತ್ರ ಇವನ್ನು ಉಪಯೋಗಿಸಿದೆ. ಈ ಕೊಳಾಯಿಗಳು ಭದ್ರಾವತಿಯಲ್ಲಿ ತಯಾರಾದ ತರುಣದಲ್ಲಿ ಇವುಗಳನ್ನು ಇಷ್ಟು ಜವಾಬ್ದಾರಿಯ ಕೆಲಸಗಳಿಗೆ ಉಪಯೋಗಿಸಬಹುದೆ ಎಂಬ ಸಂಶಯ ಹಲವೆಡೆಗಳಲ್ಲಿ ಇತ್ತು. ಈಗ ಅಂಥ ಭಯಗಳಿಗೆ ಎಡೆಯಿಲ್ಲ. ಇಲ್ಲಿಯೇ ಅಲ್ಲದೆ ಇನ್ನೂ ಹತ್ತಾರು ಕಡೆಗಳಲ್ಲಿ ಇನ್ನೂ ಕಠಿಣವಾದ ಸನ್ನಿವೇಶಗಳಲ್ಲಿ ಈ ಕೊಳಾಯಿಗಳು ಲಕ್ಷಣವಾಗಿ ನಿಂತಿವೆ. ಆದರೆ ಮೊದಲು ಧೈರ್ಯಮಾಡಿ ನಮ್ಮಲ್ಲಿ ತಯಾರಾದ ಕೊಳಾಯಿಗಳನ್ನು ಉಪಯೋಗಿಸಿದ ಸಾಹಸವು ನಿಜವಾಗಿಯೂ ಸ್ತುತ್ಯವಾದುದು. ಈ ಕೊಳಾಯಿ ಪಂಕ್ತಿಗೆ ೧೭ ಲಕ್ಷ ರೂಪಾಯಿ ಖರ್ಚಾಯಿತು.

೧೬೪ ಮೈಲಿಯುದ್ದ ಗುಡ್ಡಗಳನ್ನೇರಿ ಹಳ್ಳಗಳನ್ನಿಳಿದು ಎಡಕ್ಕೂ ಬಲಕ್ಕೂ ಸುಳಿದು ಕೆಳಗಡೆ ಪಂಪಿಸ ಹೊಡೆತವನ್ನು ತಡೆದುಕೊಂಡು ಬಿಸಿಲಲ್ಲಿ ಮಳೆಯಲ್ಲಿ ಕಾಳಸರ್ಪದ ಹಾಗೆ ಸಂತತವೂ ಎಚ್ಚರವಾಗಿದ್ದು ಬೆಂಗಳೂರಿನ ಜೀವನದ ಯೋಗ ಕ್ಷೇಮವನ್ನು ಹೊತ್ತ ಕೊಳಾಯಿ ಸಾಲಿನ ಕೆಲಸ ಸಾಮಾನ್ಯವಲ್ಲ. ಅಲ್ಲದೆ ಸದ್ಯದಲ್ಲಿ ಇರುವುದು ಒಂದೇ ಸಾಲು ಎಂಬುದನ್ನೂ ನಾವು ಮರೆಯಬಾರದು. ಉಳಿದ ಎಲ್ಲಾ ಅಂಗಗಳನ್ನೂ ದ್ವಿಗುಣಮಾಡಿ ಇದೊಂದನ್ನೇ ನಂಬಿದ್ದರೂ ಈಗ ಎಂಟೂವರೆ ವರ್ಷ ಗಳಿಂದಲೂ ಒಂದು ದಿನವಾದರೂ ತೊಂದರೆಯಾಗಿಲ್ಲ. ಹೀಗೆ ಸಮರ್ಪಕವಾಗಿ ಕೆಲಸಮಾಡುವುದಕ್ಕೆ ಕೆಲವು ವಿಶೇಷ ಉಪಕರಣಗಳೂ ಸಹಾಯಮಾಡುತ್ತವೆ.

ಯಾವುದಾದರೂ ಒಂದು ಕೊಳಾಯಿ ಒಡೆದುಹೋದರೆ ಅದನ್ನು ರಿಪೇರಿ ಮಾಡುವಾಗ ಇಡೀ ಸಾಲಿನಲ್ಲಿರುವ ನೀರಿನಿಂದ ತೊಂದರೆಯಾಗುತ್ತದೆ. ಅದಕ್ಕಾಗಿ ಅಲ್ಲಲ್ಲಿ ಕೊಳವಿಯೊಳಗಡೆ ಬಾಗಿಲುಗಳನ್ನು (Stop Valves) ಇಟ್ಟು ಕೊಳಾಯಿ ಸಾಲನ್ನು ಅಂಕಣಗಳಾಗಿ ಭಾಗಿಸಿರುತ್ತಾರೆ. ಅದ್ದರಿಂದ ಯಾವ ಅಂಕಣದಲ್ಲಿ ಕೊಳಾಯಿ ಒಡೆದಿದೆಯೋ ಆ ಅಂಕಣದ ನೀರು ಹೊರಕ್ಕೆ ಹೋದ ಕೂಡಲೆ ರಿಪೇರಿ ಮಾಡಬಹುದು.

ಮಧ್ಯದಲ್ಲಿ ಅಲ್ಲದೆ ಪಂಪಿನ ಮನೆಯ ಹತ್ತಿರವಾಗಲಿ ಬೆಂಗಳೂರಿನ ತಿಳಿನೀರಿನ ಕೊಳದ ಹತ್ತಿರವಾಗಲಿ ಕೊಳಾಯಿಯೇನಾದರೂ ಒಡೆದುಹೋದರೆ ತೊಂದರೆ ಇನ್ನೂ ಹೆಚ್ಚು. ಪಂಪಿನ ಕೆಲಸವೇ ನಿಲ್ಲಬಹುದು ಅಥವಾ ಕೊಳದ ನೀರೆಲ್ಲಾ ಸೋರಿ ಹೋಗಬಹುದು. ಇಂಥ ಕಡೆ ಮಾಮೂಲಾದ ದಾರಿಯಲ್ಲಿ ನೀರು ಹರಿಯುತ್ತಿರುವ ವರೆಗೆ ತೆಗೆದಿರುವ ಹಾಗೂ ದಾರಿ ತಿರುಗಿದಾಗ ತಾನಾಗಿಯೇ ಮುಚ್ಚಿಕೊಳ್ಳುವ ಹಾಗೂ ಇರುವ ಬಾಗಿಲನ್ನು (Reflux Valve) ಇಟ್ಟಿರುತ್ತಾರೆ. ಇದ್ದಕ್ಕಿದ್ದ ಹಾಗೆ ಬಾಗಿಲು ಮುಚ್ಚಿದಾಗ ಮುಚ್ಚಳದ ಮೇಲೆ ನೀರಿನ ಹೊಡೆತವನ್ನು ತಪ್ಪಿಸು ವುದಕ್ಕಾಗಿ ನೀರಿಗೆ ಮತ್ತೊಂದು ಅಡ್ಡದಾರಿಯನ್ನು ಕಲ್ಪಿಸಿರುತ್ತಾರೆ.

ಕೊಳಾಯಿ ಸಾಲಿನಲ್ಲಿ ಒತ್ತಡವು ಮೊದಲಿನಿಂದ ಕೊನೆಯ ವರೆಗೂ ಒಂದೇ ಸಮನಾಗಿ ಇಳಿಯುತ್ತದೆ. ಮಧ್ಯೆ ಒಂದು ಬಾಗಿಲನ್ನು ಮುಚ್ಚುವುದರಿಂದಲೋ ಇನ್ನು ಯಾವ ಕಾರಣದಿಂದಲೋ ನೀರಿನ ಒದೆತ ಹೆಚ್ಚಾದರೆ ಆ ಸ್ಥಲದಲ್ಲಿ ಕೊಳಾಯಿ ಒಡೆಯುವ ಸಂಭವವಿದೆ. ಅಂಥ ಕಡೆಗಳಲ್ಲಿ ಒತ್ತಡವು ಒಂದು ಅಳತೆಗೆ ಮೀರಿದರೆ ಸ್ಪ್ರಿಂಗಿನ ಸಹಾಯದಿಂದ ಬಾಗಿಲೊಂದು ಮಿತಿಮೀರಿದ ಒತ್ತಡಕ್ಕೆ ಅನುಗುಣವಾಗಿ ತೆರೆದು ನೀರನ್ನು ಹೊರಗೆ ಉಗುಳುತ್ತದೆ. ಮತ್ತೆ ಒತ್ತಡವು ಮೊದಲಿನ ಮಟ್ಟಕ್ಕೆ ಬಂದ ಕೂಡಲೆ ಬಾಗಿಲೂ ಮುಚ್ಚಿಕೊಳ್ಳುತ್ತದೆ.

ನೀರಿನಲ್ಲಿ ಸಾಮಾನ್ಯವಾಗಿ ಗಾಳಿಯ ಗುಳ್ಳೆಗಳು ಇದ್ದೇ ಇರುತ್ತವೆ. ಕೊಳಾಯಿ ಸಾಲು ಗುಡ್ಡದ ನೆತ್ತಿಯ ಮೇಲಕ್ಕೇರಿ ಕೆಳಕ್ಕೆ ಇಳಿಯುವ ಕಡೆಗಳಲ್ಲಿ ನೆತ್ತಿಯ ಮೇಲೆ ಈ ಗುಳ್ಳೆಗಳೆಲ್ಲಾ ಒಟ್ಟು ಸೇರಿ ನೀರು ಮುಂದಕ್ಕೆ ಹರಿಯುವುದಕ್ಕೇ ಅಡಚಣೆಯಾಗುವ ಪ್ರಸಂಗವನ್ನು ತರಬಹುದು. ಇಂಥ ಕಡೆ ಗಾಳಿಯು ಹೊರಕ್ಕೆ ಹೋಗುವುದಕ್ಕೆ ಅನುಕೂಲವಾಗುವಂತೆ ಅವಕಾಶಗಳನ್ನು (Air Valves) ಕಲ್ಪಿಸ ಬೇಕಾಗುತ್ತದೆ. ಅದೇ ಹಳ್ಳದೊಳಕ್ಕೆ ಇಳಿದು ಮೇಲಕ್ಕೆ ಹತ್ತುವಾಗ ನೀರಿನಲ್ಲಿ ಸೇರಿರಬಹುದಾದ ಕಸಕಡ್ಡಿಗಳನ್ನು ತೆಗೆದುಹಾಕುವುದಕ್ಕೂ ಬೇಕಾದಾಗ ಕೊಳಾಯಿ ಯನ್ನು ಬರಿದುಮಾಡುವುದಕ್ಕೂ ಅವಕಾಶವಾಗುತ್ತದೆ. ತಳದಲ್ಲಿ ತಕ್ಕಂತೆ ಬಾಗಿಲ ನ್ನಿಟ್ಟು ನೀರನ್ನು ಹಳ್ಳಕ್ಕೆ ಬಿಡಬಹುದು.

ಉದ್ದವಾದ ಕಬ್ಬಿಣದ ಕೊಳಾಯಿಯ ಪಂಕ್ತಿ ಬಿಸಿಲಿನಲ್ಲಿ ಕಾದು ಹಿಗ್ಗುತ್ತದೆ. ಚಳಿಗಾಲದಲ್ಲಿ ಕುಗ್ಗುತ್ತದೆ. ಹೀಗೆ ಹಿಗ್ಗಿದಾಗ ಮುಂದಿನ ಕೊಳವಿಗೆ ತಗುಲಿ ಅದನ್ನು ಒಡೆಯದ ಹಾಗೆ ಅಲ್ಲಲ್ಲಿ ಸಡಿಲವಾಗಿ ಜಾಗ ಬಿಡಬೇಕು. ಕೊಳಾಯಿಯೊಳಕ್ಕೆ ಆಳುಗಳು ಇಳಿದು ನೋಡುವ ಸಂದರ್ಭ, ಮುಖ್ಯವಾಗಿ ಬಾಗಿಲುಗಳಿರುವ ಜಾಗದಲ್ಲಿ ಆಗಾಗ ಬರುತ್ತದೆ. ಅದಕ್ಕೆ ಆಳುಕುಳಿಗಳನ್ನು (Manholes) ಒದಗಿಸಬೇಕು.

ಸಣ್ಣ ಉಬ್ಬುಗಳನ್ನು ದಾಟಿ ಕೆಳಗಿಳಿಯುವ ಕಡೆಗಳಲ್ಲಿಯೂ ಕೊಳಾಯಿ ಸಾಲಿನ ದಿಕ್ಕು ಬದಲಾಯಿಸುವಲ್ಲಿಯೂ ಒಂದೇಕಡೆ ಒತ್ತಡ ಬರುವ ಇತರ ಸನ್ನಿವೇಶಗಳಲ್ಲಿಯೂ ಕಲ್ಲುಗಾರೆಯ ದಿಮ್ಮಿಗಳನ್ನು (Anchor Blocks) ಕಟ್ಟಿ ಕೊಳವಿಗಳು ಕದಲದ ಹಾಗೆ ನೋಡಿಕೊಳ್ಳಬೇಕು. ಉಳಿದ ಕಡೆಗಳಲ್ಲಿಯೂ ಕೊಳಾಯಿಗಳು ಕುಸಿಯದ ಹಾಗೆ ತಳದಲ್ಲಿ ಕಲ್ಲಿನ ಕಂಬಗಳನ್ನು ಕಟ್ಟಬೇಕು. ದೊಡ್ಡ ಹಳ್ಳಗಳನ್ನು ದಾಟಬೇಕಾದಾಗ ಸೇತುವೆಗಳನ್ನೇ ಕಟ್ಟಬೇಕಾಗುತ್ತದೆ. ನೌಕರರೂ ಆಳುಗಳೂ ಸುಲಭವಾಗಿ ಚುರುಕಾಗಿ ಯಾವ ಜಾಗಕ್ಕೆಂದರೆ ಅಲ್ಲಿಗೆ ಹೋಗಿ ನೋಡುವುದಕ್ಕೆ ಅನುಕೂಲವಾಗಿ ಕೊಳಾಯಿ ಪಂಕ್ತಿಯುದ್ದಕ್ಕೂ ಮೋಟಾರುಗಳು ಓಡಾಡುವಂಥ ರಸ್ತೆಯಿರಬೇಕು. ಕೊಳಾಯಿಗಳು ಒಡೆಯಬಹುದು. ಆ ಜಾಗಕ್ಕೆ ಹೊಸ ಕೊಳಾಯಿಗಳನ್ನು ಲಾರಿಗಳ ಮೇಲೆ ಹೇರಿಕೊಂಡು ಹೋಗಿ ಆದಷ್ಟು ಹತ್ತಿರ ಇಳಿಸಿಕೊಳ್ಳಬೇಕಾಗುತ್ತದೆ. ಹೀಗೆ ಆಯಾ ಸ್ಥಳದ ವಿದ್ಯಮಾನಕ್ಕನುಸಾರವಾಗಿ ಬೇಕಾದ ಹತ್ತಾರು ಅನುಕೂಲಗಳನ್ನು ಪೂರ್ವಭಾವಿಯಾಗಿ ಯೋಚನೆ ಮಾಡಿ ಅವನ್ನು ಅನುಭವಬಲದಿಂದ ಸುಲಭವಾದ ಮಾರ್ಗದಲ್ಲಿ ಕಲ್ಪಿಸಬೇಕು.

ಬೆಂಗಳೂರಿನಲ್ಲಿ ಮಲ್ಲೇಶ್ವರದ ಹತ್ತಿರ ಕೊಳಾಯಿ ಸಾಲು ಎರಡು ಕವಲಾಗುತ್ತದೆ. ಒಂದು ನಗರಕ್ಕೂ ಇನ್ನೊಂದು ದಂಡಿಗೂ ಹೋಗುತ್ತದೆ. ಈ ಎರಡು ಪ್ರದೇಶಗಳಲ್ಲಿಯೂ ಅನುಕೂಲವಾಗಿ ಎತ್ತರವಾಗಿ ಇರುವ ಜಾಗಗಳಲ್ಲಿ ಕಟ್ಟಿರುವ ದೊಡ್ಡ ತಿಳಿನೀರಿನ ಕೊಳಗಳಿಗೆ ನೀರನ್ನು ಬಿಟ್ಟುಕೊಂಡು ಅಲ್ಲಿಂದ ಚಿಕ್ಕ ಕೊಳವಿಗಳ ಮಾರ್ಗವಾಗಿ ಮನೆಮನೆಗೂ ನಲ್ಲಿಗಳಿಗೆ ಹಾಯಿಸುತ್ತಾರೆ.

ಒಟ್ಟು ಈ ಸನ್ನಾಹಕ್ಕೆ ೬೮ ಲಕ್ಷ ರೂಪಾಯಿ ತಗಲಿದೆ. ಇಷ್ಟು ಹಣವನ್ನೂ ಮೈಸೂರು ಮಹಾರಾಜರ ಸರ್ಕಾರದವರೇ ಪ್ರಜಾಹಿತದೃಷ್ಟಿಯಿಂದ ಒದಗಿಸಿರುತ್ತಾರೆ. ದಂಡಿನವರಿಗೆ ಒಂದು ಮುಚ್ಚಳಿಕೆಯ ಪ್ರಕಾರ ದಿನಕ್ಕೆ ಸುಮಾರು ೨೩ ಲಕ್ಷ ಗ್ಯಾಲನ್ ನೀರನ್ನು ಮಾರುತ್ತಾರೆ. ನಗರದ ಪೌರಸಭೆಗೆ ದಿನಂಪ್ರತಿ ೪೦ ಲಕ್ಷ ಗ್ಯಾಲನ್ ನೀರನ್ನು ಒದಗಿಸುತ್ತಾರೆ. ವರ್ಷಕ್ಕೆ ದಂಡಿನಿಂದ ೪ ಲಕ್ಷ ರೂಪಾಯಿ, ನಗರದಿಂದ ೬ ಲಕ್ಷ ರೂಪಾಯಿ, ಈ ಮೇರೆ ಒಟ್ಟು ೧೦ ಲಕ್ಷ ರೂಪಾಯಿ ವರಮಾನ ಸರ್ಕಾರಕ್ಕೆ ಬರುತ್ತದೆ. ಪೌರ ಸಭೆಯವರಾದರೋ ಒಂದು ಸಂಸಾರಕ್ಕೆ ತಿಂಗಳಿಗೆ ೩,೦೦೦ ಗ್ಯಾಲನ್ನಿನಷ್ಟು ನೀರನ್ನು ಉಚಿತವಾಗಿ ಕೊಟ್ಟು ಹೆಚ್ಚಾಗಿ ಬಳಸಿದ ನೀರಿಗೆ ೧,೦೦೦ ಗ್ಯಾಲನ್ನಿಗೆ ಒಂದು ರೂಪಾಯಿನಂತೆ ಜನಸಾಮಾನ್ಯದಿಂದ ವಸೂಲು ಮಾಡುತ್ತಾರೆ. ಬೆಂಗಳೂರಿಗೆ ಒಂದೇ ಸಮನಾಗಿ ನೀರು ಬರುವಂತೆ ತಿಪ್ಪಗೊಂಡನ ಹಳ್ಳಿಯಲ್ಲಿ ಯಂತ್ರಗಳನ್ನು ನಡೆಸುವುದಕ್ಕೇ

ವರ್ಷ ಒಂದಕ್ಕೆ ೪.೩೫ ಲಕ್ಷ ರೂಪಾಯಿ ತಗಲುತ್ತದೆ. ಈ ಪೈಕಿ ವಿದ್ಯುಚ್ಛಕ್ತಿಯ ಇಲಾಖೆಗೆ, ಪಂಪುಗಳನ್ನು ನಡೆಸುವ ವಿದ್ಯುತ್ತಿನ ಬೆಲೆಗಾಗಿ, ೩.೩೫ ಲಕ್ಷ ರೂಪಾಯಿ ಸಂದಾಯವಾಗುತ್ತದೆ. ಇನ್ನೂ ಹೇಸರಘಟ್ಟದ ಕೆರೆಯ ನೀರು ಬೆಂಗಳೂರಿಗೆ ದಿನಕ್ಕೆ ೭ ಲಕ್ಷ ಗ್ಯಾಲನ್ ವರೆಗೆ ಬರುತ್ತಿದೆ. ಇದಕ್ಕಾಗಿ ಸೋಲದೇವನಹಳ್ಳಿಯ ಯಂತ್ರಗಳನ್ನು ನಡೆಸುವುದಕ್ಕೆ ವರ್ಷಕ್ಕೆ ೧.೭೫ ಲಕ್ಷ ರೂಪಾಯಿ ತಗಲುತ್ತಿದೆ. ಇದಲ್ಲದೆ ಯಂತ್ರಗಳು ಸವೆದುಹೋದ ಹಾಗೆಲ್ಲಾ ಬದಲಾಯಿಸುವುದಕ್ಕೆ ಏರ್ಪಡಿಸಿರುವ ನಿಧಿಗಾಗಿ (Depreciation) ವರ್ಷಕ್ಕೆ ಸುಮಾರು ಒಂದು ಲಕ್ಷ ರೂಪಾಯಿಯ ಮೇಲೆ ಮೀಸಲಾಗುತ್ತದೆ. ಇನ್ನೂ ಚಿಲ್ಲರೆ ಖರ್ಚೆಲ್ಲಾ ಕಳೆದು ಸರ್ಕಾರದವರಿಗೆ ವರ್ಷ ಒಂದಕ್ಕೆ ೨ ಲಕ್ಷ ರೂಪಾಯಿ ಉಳಿಯುತ್ತದೆ. ಎಂದರೆ, ಸರ್ಕಾರದವರು ಖರ್ಚು ಮಾಡಿದ ಹಣದ ಮೇಲೆ ಶೇಕಡ ೩ರಷ್ಟು ಹುಟ್ಟುವಳಿಯಾದ ಹಾಗಾಯಿತು. ಪ್ರಜೆಗಳಿಗೆ ಕುಡಿಯುವುದಕ್ಕೆ ನೀರನ್ನು ಒದಗಿಸಿ ಆ ಮೂಲಕ ದುಡ್ಡು ಮಾಡಬೇಕೆಂಬುದು ಸರ್ಕಾರದ ಆಶಯವಲ್ಲ. ಆದರೂ ಈ ಉದ್ಯಮವು ಲಾಭದಾಯಕ ವರ್ಗಕ್ಕೇ ಸೇರಿದೆ. ಇದು ಒಂದು ದೊಡ್ಡ ವಿಶೇಷ. ಈ ಶುಭ ಸನ್ನಿವೇಶಕ್ಕೆ ಡಾಕ್ಟರ್ ಸರ್ ಎಂ. ವಿಶ್ವೇಶ್ವರಯ್ಯನವರು ಸೂಚಿಸಿದ ಸರ್ವಾಂಗ ಸುಂದರವಾದ ಯೋಜನೆಯೇ ಮುಖ್ಯ ಕಾರಣವೆನ್ನಬಹುದು.

೧೯೩೩ನೆಯ ಇಸವಿ ಮಾರ್ಚಿ ೧೫ನೆಯ ತೇದಿಯ ದಿನ ಬೆಳಗ್ಗೆ ಒಂಬತ್ತೂವರೆ ಗಂಟೆಗೆ ಆಳಿದ ಮಹಾಸ್ವಾಮಿಯವರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ವೊಡೆಯರವರು ತಿಪ್ಪಗೊಂಡನಹಳ್ಳಿಗೆ ಸಪರಿವಾರರಾಗಿ ದಯಮಾಡಿಸಿ ಬೆಂಗಳೂರು ಶಾಶ್ವತವಾಗಿ ಬಾಳಿ ಬೆಳೆಯಲೆಂದು ಹಾರೈಸಿ ಆ ನಗರದ ಕಡೆಗೆ ಅರ್ಕಾವತಿಯ ಸಂತತ ಧಾರೆಯನ್ನು ತಿರುಗಿಸಿದರು. ಹೊಸ ಸರೋವರಕ್ಕೆ ತಮ್ಮ ಪೂಜ್ಯ ಪಿತೃಗಳ ಹೆಸರಿನಲ್ಲಿಯೇ ನಾಮಕರಣಮಾಡಿದರು.

ಆ ದಿನ ಮಹಾಸ್ವಾಮಿಯವರು ಅಪ್ಪಣೆ ಕೊಡಿಸಿದ ಅಮೋಘವಾದ ಭಾಷಣದಲ್ಲಿ ನೀರಿನ ಶ್ರೇಷ್ಠತೆ ಮತ್ತು ಪವಿತ್ರತೆಯ ವಿಚಾರವಾಗಿ ಈ ಉಪನಿಷದ್ವಾಕ್ಯಗಳನ್ನು ಸಭಿಕರ ನೆನಪಿಗೆ ತಂದರು.—

"ಆಪೋ ವಾ ಇದಂ ಸರ್ವಂ ವಿಶ್ವಾ ಭೂತಾನ್ಯಾಪಃ ಪ್ರಾಣಾ ವಾ ಆಪಃ ಪಶವ ಆಪೋಽನ್ನ ಮಾಪೋಽಮೃತಮಾಪಸ್ಸಂರಾಡಾಪೋ ವಿರಾಡಾಪಸ್ಸ್ವರಾಡಾಪಶ್ಛಂದಾಂಸ್ಯಾಪೋ ಜ್ಯೋತೀಂಷ್ಯಾಪೋ ಯಜೂಂಷ್ಯಾಪಸ್ಸತ್ಯಮಾಪಸ್ಸರ್ವಾ ದೇವತಾ ಆಪೋ ಭೂರ್ಭುವಸ್ಸುವರಾಪ ಓಂ"

ಅಂದಿನಿಂದ ಚಾಮರಾಜಸಾಗರವೇ ಈ ಮಹಾನಗರವನ್ನು ಕಾಪಾಡಿಕೊಂಡು ಬರುತ್ತಿದೆ.

ಬೆಂಗಳೂರು ನಗರದಲ್ಲಿಯೂ ದಂಡಿನಲ್ಲಿಯೂ ವಸತಿಯ ಪ್ರದೇಶಗಳು ವಿಸ್ತಾರವಾಗುತ್ತಾ ಇವೆ. ಜನಸಂಖ್ಯೆಯು ಬೆಳೆಯುತ್ತಾ ಇದೆ. ಈಗಾಗಲೇ ಊರಿನ ಕಸವನ್ನೆಲ್ಲಾ ಒಳಚರಂಡಿಗಳ ಮೂಲಕ ಜನಗಳ ಆರೋಗ್ಯಕ್ಕೆ ಕುಂದಕ ಬಾರದಂತೆ ನೀರಿನ ಬಲದಿಂದ ಸಾಗಿಸುವ ಪ್ರಯತ್ನ ಅಲ್ಲಲ್ಲಿ ನಡೆದಿದೆ. ನಗರದ ಆದ್ಯಂತವೂ ಈ ಅನುಕೂಲ ಇವತ್ತಲ್ಲದಿದ್ದರೆ ನಾಳೆಯಾದರೂ ಬರಲೇಬೇಕು. ಕೆಲಸಗಾರರೂ ವಿದ್ಯುಚ್ಛಕ್ತಿಯೂ ಸುಲಭವಾಗಿ ದೊರಕುತ್ತಿರುವುದರಿಂದ ವ್ಯಾಪಾರವೂ ಕೈಗಾರಿಕೆಯೂ ಹೆಚ್ಚುತ್ತಾ ಇವೆ. ವಾಯುಗುಣವು ಅತ್ಯಂತ ಹಿತವಾಗಿರುವುದರಿಂದ ಆರೋಗ್ಯ ಸಂಪಾದನೆಗಾಗಿ ನಾನಾ ದೇಶಗಳಿಂದ ಜನಗಳು ಬರುತ್ತಲೇ ಇರುತ್ತಾರೆ. ಇವೇ ಮೊದಲಾದ ಕಾರಣಗಳಿಂದ ದಿನಕ್ಕೆ ೬೦ ಲಕ್ಷ ಗ್ಯಾಲನ್ ನೀರು ಈಗಲೇ ಸಾಲದಾಗಿದೆ. ಇನ್ನು ಮುಂದೆ ೮೦ ಲಕ್ಷ ಗ್ಯಾಲನ್ ಸಹ ಸಾಲದೆನ್ನಿಸುವಷ್ಟು ಅಭಿವೃದ್ಧಿಯನ್ನು ಬೆಂಗಳೂರು ಸ್ವಲ್ಪ ಕಾಲದಲ್ಲಿಯೇ ಹೊಂದುವ ಭರವಸೆ ಇದೆ. ಆಗ ಪ್ರತಿದಿನವೂ ೧ ಕೋಟಿ ಗ್ಯಾಲನ್ ವರೆಗೂ ನೀರನ್ನು ಒದಗಿಸುವುದಕ್ಕೆ ತಕ್ಕ ಸನ್ನಾಹ ನಡೆಯಬೇಕಾಗುತ್ತದೆ. ಕಟ್ಟೆಯನ್ನು ಹತ್ತು ಅಡಿ ಎತ್ತರಿಸಿ ಸರೋವರವನ್ನೂ ಇನ್ನೂ ವಿಶಾಲವಾಗಿ ಮಾಡಬೇಕು. ಮತ್ತೆ ನಾಲ್ಕು ಶೋಧಕಯಂತ್ರಗಳನ್ನು ಜೋಡಿಸಬೇಕು. ಇನ್ನೊಂದು ಪಂಪನ್ನಿಡಬೇಕು. ತಿಪ್ಪಗೊಂಡನಹಳ್ಳಿಯಿಂದ ಬೆಂಗಳೂರಿನವರೆಗೂ ಮತ್ತೊಂದು ಕೊಳಾಯಿ ಸಾಲನ್ನು ಜೋಡಿಸಬೇಕು.

ಇಷ್ಟೇ ಆದರೆ ಸಾಲದು. ಬೆಂಗಳೂರಿನಲ್ಲಿ ಈಗ ಇರುವ ನೀರಿನ ಸರಬರಾಯಿ ಕ್ರಮವನ್ನು ತಕ್ಕಂತೆ ಬದಲಾಯಿಸಿ ಅನೇಕ ರೀತಿಯಲ್ಲಿ ಉತ್ತಮಗೊಳಿಸಬೇಕು.

ಆಗ ಈ ಹೊಸ ಸನ್ನಾಹದಿಂದ ಬೆಂಗಳೂರಿಗೆ ಯಥೇಚ್ಛವಾದ ಕುಡಿಯುವ ನೀರಿನ ಅನುಕೂಲ ಶಾಶ್ವತವಾಗಿ ದೊರಕುತ್ತದೆ; ಜನರ ಸೌಕರ್ಯಗಳೂ ಊರಿನ ಅಭಿವೃದ್ಧಿಯೂ ಇನ್ನೂ ನಾನಾವಿಧವಾಗಿ ಹೆಚ್ಚುತ್ತವೆ.

ಎಚ್. ಸಿ. ಕಪಿನೀಪತಿಭಟ್ಟ

ಅಡ್ಡಿಕೆಯ ಕಳವು

೧

ಸುಬ್ರಹ್ಮಣ್ಯಯ್ಯನವರು ನಮ್ಮ ಊರಿನಲ್ಲಿ ಹೆಸರುವಾಸಿಗಳಾದ ಜಮೀನ್ದಾರರು; "ಜನತೆಯ ಬದುಕಿನಲ್ಲಿ ಧನಕ್ಕಿಂತಲೂ ಧಾನ್ಯವೇ ಮಿಗಿಲು" ಎಂಬ ಪಂಥಕ್ಕೆ ಸೇರಿದವರು. ಆದುದರಿಂದ ಇವರು ಹಣ ಕೂಡಿಸುವ ಹವ್ಯಾಸಗಳಿಗೆ ಕೈಹಾಕದೆ ಹೊಲಗದ್ದೆಗಳನ್ನು ಕೈತುಂಬ ಮಾಡಿದ್ದರು; ದೊಡ್ಡ ರೈತರೆಂದು ಮನ್ನಣೆಯನ್ನು ಪಡೆದಿದ್ದರು. ಮನೆಯಲ್ಲಿ ದೊಡ್ಡ ರೈತರಿಗಿರಬೇಕಾದ ಸಾಧನ ಸಂಪತ್ತುಗಳು—ದನಕರುಗಳು, ಗಾಡಿ, ಕುದುರೆ, ಆಳುಕಾಳು, ಪರಿಷ್ಕಾರವಾಗಿದ್ದುವು. ಇದಕ್ಕನುಗುಣವಾಗಿ ಇವರ ಕುಟುಂಬವೂ ದೊಡ್ಡದಾಗಿತ್ತು. ಏಳುಗಂಡು, ಐದುಹೆಣ್ಣು, ಮಕ್ಕಳು. ಇವರ ಕುಟುಂಬ ಲಕ್ಷ್ಮೀಬಾಯಿ ಸಾಕ್ಷಾತ್ ಗೃಹಲಕ್ಷ್ಮಿಯೆನಿಸಿಕೊಂಡಿದ್ದರು.

ನಮ್ಮೂರಿನವರೂ ಸುತ್ತಮುತ್ತಲಿನ ಹಳ್ಳಿಯ ಜನರೂ ಸುಬ್ರಹ್ಮಣ್ಯಯ್ಯನವರನ್ನು ಸುಬ್ಬಣ್ಣನವರೆಂದೇ ಕರೆಯುತ್ತಿದ್ದರು. ಸುಬ್ಬಣ್ಣನವರು ರಸಿಕರು; ಲಲಿತ ಕವಿಗಳು. ಇಂದಿಗೂ ಅವರ ಬಯಲಾಟದ ಕತೆಗಳೂ ನಾಗರಿಕ ನಾಟಕಗಳೂ ಹರಿಕಥೆಗಳೂ ಹಳ್ಳಿಯ ಲಾವಣಿಗಳೂ ದೇವರನಾಮಗಳೂ ಹೆಂಗಸರ ಹಾಡುಗಳೂ ಜನತೆಯ ಬಾಯಲ್ಲಿ ನಲಿಯುತ್ತಿವೆ. ಸುಬ್ಬಣ್ಣನವರ ಜೀವನದ ಅಂತಸ್ತು ಬಹಳ ದೊಡ್ಡದು. ಅವರು ದೊಡ್ಡವರಲ್ಲಿ ದೊಡ್ಡಸ್ತಿಕೆಯಿಂದ, ಹುಡುಗರಲ್ಲಿ ಹುಡುಗಾಟಿಕೆಯಿಂದ ಬೆರೆತು, ಸಂಸಾರದಲ್ಲಿ ಅಂಟಿಯೂ ಅಂಟದಂತೆ ನಡೆದುಕೊಳ್ಳುತ್ತಿದ್ದರು. ಅವರ ಉದಾರತೆಯು ಎಲ್ಲರ ಮನೆಮಾತಾಗಿತ್ತು. ಮನೆಯು ಒಂದು ಅನ್ನಸತ್ರ. ಶ್ರೀರಾಮನು ಅವರ ಇಷ್ಟದೈವ. ವರ್ಷಕ್ಕೆರಡು ಬಾರಿ ರಾಮೋತ್ಸವವನ್ನು ತಪ್ಪದೆ ನಡೆಸುವರು. ಆ ಕಾಲದಲ್ಲಿ ದೇವರು ಕೊಟ್ಟಷ್ಟನ್ನೂ ಖರ್ಚು ಮಾಡುವರು. ಒಂದೊಂದು ಬಾರಿ ಧರ್ಮದ ಹುಚ್ಚಿನಲ್ಲಿ ಮಿತಿಮೀರುವುದೂ ಉಂಟು. ಇವರ ಉಪಾಧ್ಯಾಯರಾಗಿದ್ದ ಗೋಪಣ್ಣನವರು, "ಸುಬ್ಬಣ್ಣಾ, ಹಾಸಿಗೆಯಿದ್ದಷ್ಟು ಕಾಲುಚಾಚಬೇಕಪ್ಪ" ಎಂದು ಹೇಳುವರು. ಅದಕ್ಕೆ ಸುಬ್ಬಣ್ಣನವರು, "ಹಾಲಿದ್ದಾಗ ಹಬ್ಬಮಾಡೋಣ, ಮೇಷ್ಟ್ರೆ" ಎನ್ನುವರು. ಸುಬ್ಬಣ್ಣನವರ ಪ್ರತಿಭೆಗೆ ಮರುಳಾಗಿದ್ದ ಮೇಷ್ಟ್ರು "ಅದೂ ಸರಿಯಪ್ಪ" ಎನ್ನುವರು.

ಒಟ್ಟಿನಲ್ಲಿ ಸುಬ್ಬಣ್ಣನವರ ಮೇಲೆ ದೇವರ ಕೃಪೆಯು ಅನಂತವಾಗಿತ್ತು. ಹನ್ನೆರಡು ಮಕ್ಕಳ ಹಡಗಿನಂತಹ ಸಂಸಾರ. ಅದನ್ನು ಹಗುರವಾಗಿ ಸಾಗಿಸುತ್ತಿದ್ದ ಗೃಹದೇವತೆ ಲಕ್ಷ್ಮೀಬಾಯಿ. ಸುಬ್ಬಣ್ಣನವರು ದಿನವೂ ಉಷಃಕಾಲಕ್ಕೆ ಮುಂಚಿತವಾಗಿ ಎದ್ದು, ಸ್ನಾನಮಾಡಿ ದೇವರ ಮುಂದೆ ಕುಳಿತವರು ಹೊರಗೆ ಬರುವಾಗ ಒಂಬತ್ತು ಗಂಟೆಯಾಗುತ್ತಿತ್ತು. ಆ ಕಾಲದಲ್ಲಿ ಲಕ್ಷ್ಮೀಬಾಯಿಗೆ ತಮ್ಮ ಮನೆ ಕೆಲಸಗಳಿಗಿಂತಲೂ ತಮ್ಮ ಮಕ್ಕಳು ಗದ್ದಲಮಾಡದಂತೆ ನೋಡಿಕೊಳ್ಳುವುದು ಬಹು ಮುಖ್ಯವಾದುದಾಗಿತ್ತು. ಸೈರಣೆಸಮಾಧಾನಗಳಿಗೆ ನೆಲೆಯಾಗಿದ್ದ ಸುಬ್ಬಣ್ಣನವರು ತಮ್ಮ ಪೂಜೆಯ ಕಾಲದಲ್ಲಿ ಮಾತ್ರ ಗದ್ದಲವನ್ನು ಸಹಿಸುತ್ತಿರಲಿಲ್ಲ. ಇದರ ಪರಿಣಾಮವಾಗಿ ಕೆಲವುಬಾರಿ ಸುಬ್ಬಣ್ಣನವರ ಕೈಯ ದೇವರ ಪ್ರತಿಮೆಗಳು ಲಕ್ಷ್ಮೀಬಾಯಿಯ ಅಂಗಾಂಗಗಳನ್ನು ಪ್ರಹಾರಮಾಡಿದ ಪ್ರಮೇಯಗಳನ್ನು ಈಗಲೂ ಆಕೆ ಮರೆತಿಲ್ಲ. ಆಹ್ನಿಕವನ್ನು ತೀರಿಸಿಕೊಂಡು ಸುಬ್ಬಣ್ಣನವರು ದಿವಾನಖಾನೆಗೆ ಬರುವ ವೇಳೆಗೆ ಎಷ್ಟೋ ಹಳ್ಳಿಯ ಜನಗಳು ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು ಬರುವ ಪದ್ಧತಿಯಿತ್ತು. ಸುಬ್ಬಣ್ಣನವರು ಬಂದವರ ಕಷ್ಟಗಳನ್ನು ವಿಚಾರಿಸಿ, ತಮ್ಮ ಮಧುರವಾದ ಮಾತುಗಳಿಂದ, ಹಿಂದಿನವರ ಕತೆಗಳಿಂದ, ತಮ್ಮ ಸ್ವಂತ ಅನುಭವಗಳಿಂದ, ಬಂದವರ ಮನಸ್ಸುಗಳನ್ನು ಹಗುರಗೊಳಿಸಿ, ಅಳುತ್ತ ಬಂದವರನ್ನು ನಗುತ್ತ ಹೋಗುವಂತೆ ಮಾಡುವರು. ಎಷ್ಟೋಬಾರಿ ಇಂತಹ ಸನ್ನಿವೇಶಗಳಲ್ಲಿ ತಮ್ಮನ್ನೂ ಪ್ರಪಂಚವನ್ನೂ ಮರೆತುಬಿಡುತ್ತಿದ್ದರು. ಲಕ್ಷ್ಮೀಬಾಯಿ ಅಡಿಗೆ ಮಾಡಿಕೊಂಡು, ಕಾದು ಕಾದು, ಹುಡುಗರೊಂದಿಗೆ ನಿದ್ದೆಹೋಗುತ್ತಿದ್ದರು. ದೇವರ ನೈವೇದ್ಯವಿಲ್ಲದೆ ಹುಡುಗರೂ ಊಟಮಾಡುವಂತಿರಲಿಲ್ಲ. ಮಾತಿನ ಮಧ್ಯದಲ್ಲಿ ಎಬ್ಬಿಸುವ ಸಾಹಸವನ್ನಂತೂ ಲಕ್ಷ್ಮೀಬಾಯಿ ಎಂದೂ ಮಾಡಿದವರಲ್ಲ. "ಇಷ್ಟು ಹೊತ್ತು ಹುಡುಗರು ಕಾದು ನಿದ್ದೆ ಹೋದುವು" ಎಂದು ಲಕ್ಷ್ಮೀಬಾಯಿ ಮುಖ ತಗ್ಗಿಸಿಕೊಂಡು ಮೆಲ್ಲಗೆ ಹೇಳಿದರೆ, ಸುಬ್ಬಣ್ಣನವರು, "ಹುಚ್ಚಿ! ಮನೆಗೆ ಬಂದವರ ಕಷ್ಟಸುಖಗಳಲ್ಲಿ ಭಾಗಿಗಳಾಗುವುದಕ್ಕಿಂತಲೂ ಊಟ ದೊಡ್ಡದೆ?" ಎಂದು ವೇದಾಂತದ ಮಳೆಯನ್ನೇ ಸುರಿಸುವರು. ಗೃಹಿಣಿಯ ಮನಸ್ಸಿನ ಪರಿಪಾಕವೂ ಇದೇ ತೆರನದಾಗಿತ್ತು. ಆದರೆ ಸುಬ್ಬಣ್ಣನವರಿಗೆ ಮಕ್ಕಳಮೇಲಿದ್ದ ಮಮತೆಯೂ ಅಪಾರವಾದುದು. ಅವರು ತಮ್ಮ ಹನ್ನೆರಡು ಮಕ್ಕಳ ಮೇಲೆ, ಏನಿಲ್ಲೆಂದರೂ ಹನ್ನೆರಡು ನೂರಾದರೂ ಕವಿತೆಗಳನ್ನು ರಚಿಸಿರಬಹುದು. ಆದರೂ ಅವರ ಹೃದಯವು ವಿಶ್ವವ್ಯಾಪಿಯಾಗಿ, ಎಲ್ಲರ ವಿಚಾರದಲ್ಲಿಯೂ ಬೆಣ್ಣೆಯಂತೆ ಕರಗುತ್ತಿತ್ತು. ಅವರಿರುವವರೆಗೆ ನಮ್ಮೂರಿನ ವ್ಯಾಜ್ಯಗಳು ಕೋರ್ಟಿಗೆ ಸುಳಿಯುತ್ತಿರಲಿಲ್ಲ. ಊರೆಲ್ಲವೂ ಒಂದು ಸಂಸಾರದಂತಿದ್ದಿತು.

೨

ನಾರಣಪ್ಪ ಸುಬ್ಬಣ್ಣನವರ ಚಿಕ್ಕಪ್ಪನ ಮಗ. ಚಿಕ್ಕಂದಿನಿಂದಲೂ ಸುಬ್ಬಣ್ಣನವರು ಈತನನ್ನು ತಮ್ಮ ಸ್ವಂತ ತಮ್ಮನಿಗಿಂತಲೂ ಹೆಚ್ಚೆಂದು ಭಾವಿಸಿ ಪೋಷಿಸಿದರು. ಮುಂಜಿ ಮದುವೆಗಳನ್ನು ಮಾಡಿದರು. ಕೊನೆಗೆ ತಾವು ಕಷ್ಟಪಟ್ಟು ಸಂಪಾದಿಸಿದ ಆಸ್ತಿಯಲ್ಲಿ ಎಲ್ಲವನ್ನೂ ಸರಿಸಮನಾಗಿ ಹಂಚಿಕೊಟ್ಟರು. ನಾರಣಪ್ಪನು ಸ್ವಭಾವತಃ ಒಳ್ಳೆಯ ಮನುಷ್ಯನಾದರೂ ಅವನಿಗೆ ತನ್ನ ಹೆಂಡತಿಯ ಕಡೆಯವರ ಪ್ರೋತ್ಸಾಹದಿಂದ ತಾನು ಸ್ವತಂತ್ರವಾಗಿರಬೇಕೆಂಬ ಆಶೆಯು ಹುಟ್ಟಿತು. ಭಾಗವಾದಂದಿನಿಂದ ಅವನ ಜೀವನ ಕ್ರಮ ಬೇರೆಯಾಯಿತು; ಆದಾಯ ಸಾಲದು; ಸಂಸಾರದಲ್ಲಿ ಏತಸಣೆಯಿಲ್ಲ. ಸುಬ್ಬಣ್ಣನವರು ಇದನ್ನು ಕಂಡು ಮರುಗಿದರು; ತಮ್ಮನಿಗೆ ಹೇಳಿ ನೋಡಿದರು. ಏನೂ ಪ್ರಯೋಜನವಾಗಲಿಲ್ಲ. ಅಲ್ಲದೆ, ನಾರಣಪ್ಪನ ಅತ್ತೆ ಬಾಯಿಗೆ ಬೀಗವಿಲ್ಲದ ಹೆಂಗಸು. ಆದ್ದರಿಂದ ಸುಬ್ಬಣ್ಣನವರೂ ನಿರುಪಾಯರಾಗಿ ಸುಮ್ಮನಾದರು.

ಇದ್ದಕ್ಕಿದ್ದ ಹಾಗೆ ನಾರಣಪ್ಪನ ಹೆಂಡತಿ ನಾಗಮ್ಮನ ಅಡ್ಡಿಕೆಯು ಕಳುವಾಯಿತೆಂಬ ವದಂತಿ ಹುಟ್ಟಿತು. ಪೋಲೀಸಿನವರವರೆಗೂ ಸುದ್ದಿ ಹೋಯಿತು. ವಿಚಾರಣೆಯೂ ನಡೆಯಿತು. ನಾರಣಪ್ಪನ ಅತ್ತೆ ರಾಧಮ್ಮನು, "ಲಕ್ಷ್ಮೀಬಾಯಿಯೂ, ಆಕೆಯ ಹಿರೇ ಮಗಳು ಗೌರಮ್ಮನೂ ಗವಾಕ್ಷಿಯೊಳಗಿಂದ ನಮ್ಮ ಮನೆಯೊಳಕ್ಕಿಳಿದು ಈ ಕಳವು ನಡಸಿದ್ದಾರೆ" ಎಂದು ಘಂಟಾಘೋಷವಾಗಿ ಹೇಳಿಬಿಟ್ಟಳು. ನಾರಣಪ್ಪನು ಕಳುವಾಗಿರುವುದು ನಿಜವೆಂತಲೂ ಹೇಗಾಯಿತೆಂಬುದು ತನಗೆ ತಿಳಿಯದೆಂತಲೂ ಜಾರಿಕೊಂಡುಬಿಟ್ಟನು. ದಫೇದಾರ್ ರಾಜಾರಾಯರಿಗೆ ದಿಕ್ಕುತೋಚದಂತಾಯಿತು. ಯಾರೂ ನಂಬದ ಸುದ್ದಿ. ಸುಬ್ಬಣ್ಣನವರ ಮನೆಯೂ ನಾರಣಪ್ಪನ ಮನೆಯೂ ಒಂದೇ ಮನೆಯ ಎರಡು ಭಾಗಗಳಾಗಿದ್ದುವು. ಮಾಳಿಗೆಯು ಒಂದೇ. ರಾಜಾರಾಯರಿಗೆ ಫಜೀತಿಗಿಟ್ಟುಕೊಂಡಿತು. ಆಪಾದನೆಯು ಅಸತ್ಯವಾದುದೆಂತಲೂ ಅಸಂಭವವಾದುದೆಂತಲೂ ನಿರ್ಧರಿಸಿದರು. ಆದರೂ ತಮ್ಮ ಕರ್ತವ್ಯದಲ್ಲಿ ಪಕ್ಷಪಾತವನ್ನು ಮಾಡಲಾಗದು. ನ್ಯಾಯದ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಕಡೆಗೆ ಸುಬ್ಬಣ್ಣನವರ ಮನೆಯನ್ನು ಶೋಧಿಸುವುದಾಗಿ ಹೇಳಿದರು. ಸುಬ್ಬಣ್ಣನವರು ಏನು ಹೇಳಬಲ್ಲರು? "ಶೋಧನೆಯೊಂದೇ ಏಕೆ, ಸ್ವಾಮಿ! ನಮ್ಮಗಳ ಕೈಯಲ್ಲಿ ಬೆಂಕಿಯನ್ನು ಹಾಕಿಸಿ; ಹಿಡಿದುಕೊಳ್ಳುತ್ತೇವೆ" ಎಂದರು. ರಾಜಾರಾಯರು ತಮಗೆ ತಿಳಿದ ಮಟ್ಟಿಗೆ ಕಾನೂನಿನಲ್ಲಿ "ಬೆಂಕಿಯನ್ನು ಹಿಡಿಸಿ ಸತ್ಯವನ್ನು ಪರೀಕ್ಷೆ ಮಾಡುವ" ನಿಯಮವನ್ನು ಕಂಡಿರಲಿಲ್ಲ. ಆದುದರಿಂದ ಆ ಸಾಹಸಕ್ಕೆ ಕೈಹಾಕದೆ, ವಿಧಿಗನುಸಾರವಾಗಿ ಪಂಚಾಯಿತರನ್ನೂ ಆಪಾದಕರನ್ನೂ ಇಟ್ಟುಕೊಂಡು ಮನೆಯ

ನ್ನೇನೋ ಶೋಧಿಸಿದರು. ಒಡವೆಯು ಸಿಗಲಿಲ್ಲ. ನೆರೆದ ಜನರು ಆಕಸ್ಮಿಕವಾಗಿ ಸುಬ್ಬಣ್ಣನವರ ಮೇಲೆ ಬಂದ ಈ ಅಪವಾದವನ್ನು ಕಂಡು, ತಮ್ಮನ್ನು ತಾವೇ ಸಂಬದಂತಾದರು; "ಈಕೆಯ ಬಾಯಲ್ಲಿ ಹುಳುಬೀಳದೆ ಹೋದೀತೆ?" ಎಂದು ರಾಧಮ್ಮನನ್ನು ಶಪಿಸಿಕೊಳ್ಳುತ್ತಾ ಹೊರಟುಹೋದರು. ಒಡವೆಯು ಸಿಕ್ಕದುದರಿಂದ, ಪೋಲೀಸಿನವರು ಅಂದಿಗೆ ಸುಮ್ಮನಾದರು. ಸುಬ್ಬಣ್ಣನವರ ಸುಖಮಯ ಜೀವನದಲ್ಲಿ ಕಾಳಗತ್ತಲೆಯು ಕವಿಯಿತು.

೩

ಪೋಲೀಸಿನವರೇನೋ ಸುಮ್ಮನಾದರು. ಆದರೆ, ರಾಧಮ್ಮ ಸುಮ್ಮನಾಗಲಿಲ್ಲ. ಲಕ್ಷ್ಮೀಬಾಯಿ ಮತ್ತು ಗೌರಮ್ಮನೇ ಒಡವೆಯನ್ನು ಅಪಹರಿಸಿದರೆಂದು ನಿರ್ಧರಿಸಿ, ಅಂದಿನಿಂದ ಅವರನ್ನೂ ಅವರ ಮನೆಯವರನ್ನೂ ಹಿಂದಿನ ಹತ್ತು ತಲೆಗಳವರಿಂದ ಹಿಡಿದು ಮುಂದಿನ ಹತ್ತು ತಲೆಗಳವರೆಗೆ ಬೈಯಲಾರಂಭಿಸಿದಳು. ಗ್ರಾಮ್ಯಭಾಷೆಯಲ್ಲಿ ಬೈಗಳ ನಿಘಂಟಿನಲ್ಲಿರುವ ಪ್ರತಿಶಬ್ದವನ್ನೂ ಕನ್ನಡ ತೆಲುಗುಗಳಲ್ಲಿ ಪ್ರಯೋಗಿಸಿದಳು. ಮನೆಯ ಮುಂದಿನ ಜಗಲಿಯೇ ರಾಧಮ್ಮನ ಆಸನ. ಆದರ ಮುಂದೆ ಜನರು ಓಡಾಡುವ ರಸ್ತೆ. ರಾಧಮ್ಮನು ಬೆಳಗು ಬೈಗುಗಳೆನ್ನದೆ ಒಂದೇ ಸಮನೆ ಬೈದಳು. ಸುಬ್ಬಣ್ಣನವರು ತಮ್ಮನನ್ನು ಕರೆಸಿಕೊಂಡು ಹೇಳಿನೋಡಿದರು. ಇತರರಿಂದ ರಾಧಮ್ಮನಿಗೆ ಹೇಳಿಸಿದರು. ಏನೂ ಪ್ರಯೋಜನವಾಗಲಿಲ್ಲ. ಊರು ಊರಿಗೇ ತಿಳಿವಳಿಕೆ ಹೇಳುತ್ತಿದ್ದ ಸುಬ್ಬಣ್ಣನವರ ಪ್ರತಿಭೆಯು ರಾಧಮ್ಮನ ರಂಪಿನ ಮಳೆಯ ಹೊಳೆಯಲ್ಲಿ ಎಲ್ಲಿಗೋ ಕೊಚ್ಚಿಕೊಂಡು ಹೋಯಿತು. "ರಾಮ, ನೀನೇ ಸಾಕ್ಷಿ" ಎಂದುಕೊಂಡು ಸುಬ್ಬಣ್ಣನವರು ಹತಾಶರಾದರು. ಲಕ್ಷ್ಮೀಬಾಯಿಯ ಸ್ಥಿತಿಯನ್ನಂತೂ ವರ್ಣಿಸಲು ಸಾಧ್ಯವಿಲ್ಲ. ಮನೆಬಿಟ್ಟು ಹೊರಗೆ ಬರುವುದೇ ದುಸ್ತರವಾಯಿತು. ಯಾವ ಕೆಲಸಕ್ಕೆ ಹೋಗಬೇಕಾದರೂ ನಾರಣಪ್ಪನ ಮನೆಯ ಮುಂದೆಯೇ ಹಾದುಹೋಗಬೇಕು. ಹಾಗೆ ಹೋಗುವಾಗ ಕಿವಿಗಳನ್ನು ಮುಚ್ಚಿಕೊಂಡು ತಲೆಯ ಮೇಲೆ ಮುಸುಕು ಹಾಕಿಕೊಂಡು ಕಳ್ಳರಂತೆ ಓಡಾಡಬೇಕಾಯಿತು. ಮುಸುಕುಹಾಕಿಕೊಂಡು ಹೋದರೆ, ರಾಧಮ್ಮನು ಅದನ್ನೇ ಹೊಂದಿಸಿ ಬಯ್ಯುವಳು; ತಲೆ ಬಗ್ಗಿಸಿಕೊಂಡು ಹೋದರೆ ಹಾಗೂ ಬೈಯುವಳು. ಸುಮ್ಮನೆ ಹೋದರೆ "ನಾಚಿಕೆಯಿಲ್ಲವೆ, ನಿಮ್ಮ ಮುಖಗಳಿಗೆ" ಎಂದು ಕೊಂಕಿಸುವಳು. ಲಕ್ಷ್ಮೀಬಾಯಿಯ ಜೀವನವು ಭರಿಸಲಸದಳವಾಯಿತು. ಸುಬ್ಬಣ್ಣನವರಿಗೂ ಸಾಕಾಗಿ ಹೋಯಿತು. ಉಪಾಯಗಾಣದೆ, ಓಡಾಡಲು ಮನೆಯ ಇನ್ನೊಂದುಕಡೆ ಗೋಡೆ ಒಡಿಸಿಕೊಂಡು ಬಾಗಿಲು ಮಾಡಿಕೊಂಡರು. ಸಾಧ್ಯವಾದಮಟ್ಟಿಗೂ ಮನೆಯ

ಮುಂದಿನ ರಸ್ತೆಯಲ್ಲಿ ಓಡಾಡುವುದನ್ನೇ ಬಿಟ್ಟರು. ಆದರೇನು? ಹಾವನ್ನು ಹೊಡೆದೆಬ್ಬಿಸಿದಂತೆ ಆಯಿತು. ರಾಧಮ್ಮನು ತಾನೂ ಜಗಲಿಯನ್ನು ಬಿಡಾಯಿಸಿ ಅದರ ತುದಿಯಲ್ಲಿ ಕುಳಿತುಕೊಳ್ಳಲು ಮೊದಲು ಮಾಡಿದಳು.

ದಿನಗಳು ಕಳೆದುವು, ತಿಂಗಳುಗಳುರುಳಿದುವು; ಒಡವೆಯು ಪತ್ತೆಯಾಗಲಿಲ್ಲ. ರಾಧಮ್ಮನ ಬೈಗಳು ಸ್ವಾತಿಯ ಮಳೆಯಂತೆ ಒಂದೇ ಸಮನೆ ಸುರಿಯುತ್ತಿದ್ದುವು. ನೀವುಗಳು ಅನೇಕರು ಬೈದಾಡುವುದನ್ನು ನೋಡಿರಬಹುದು. ಆದರೆ ರಾಧಮ್ಮನ ಬೈಗಳೂ—ಅವುಗಳ ರೀತಿಯೂ ಬೇರೆ. ರಾಧಮ್ಮನು ಬಯ್ಯುವುದರಲ್ಲಿ ತನ್ನದೇ ಆದ ಒಂದು ಹೊಸಮಾರ್ಗವನ್ನು ಕಲ್ಪಿಸಿದಳು. ಆಕೆ ಪೂರ್ವಸುವಾಸಿನಿ; ಮನೆಯಲ್ಲಿ ಅಷ್ಟು ಕೆಲಸವಿಲ್ಲ. ಆಕೆ ಬೆಳಗಾಗುವುದರೊಳಗಾಗಿ ಎದ್ದು ಜಗಲಿಯ ಮೇಲೆ ಕುಳಿತು ಮಧ್ಯಾಹ್ನದವರೆಗೂ ಬೈಯುವಳು. ಮಧ್ಯಾಹ್ನದ ಊಟ ತೀರಿಸಿಕೊಂಡು ಸಂಜೆಯವರೆಗೂ ಬೈಯುವಳು. ಸಂಜೆಯ ಉಪಹಾರವನ್ನು ತೀರಿಸಿಕೊಂಡು ಕಣ್ಣಿಗೆ ನಿದ್ದೆ ಬರುವವರೆಗೂ ಬೈಯುವಳು. ಗಂಟಲು ಒಡೆದರೂ ಬಿಡಳು. ಊರವರೆಲ್ಲರೂ ಕೇಳಿಕೇಳಿ ಬೇಸತ್ತು ಹೋದರು. ಕಂಟ್ರಾಕ್ಟರು ಶಾಮಣ್ಣ, ಶ್ಯಾನುಭೋಗ ಶಿವಣ್ಣ, ಜೋಯಿಸ ರಾಮಾಶಾಸ್ತ್ರಿ ಎಲ್ಲರೂ, ರಾಧಮ್ಮನಿಗೆ ತಿಳಿವಳಿಕೆ ಹೇಳಲು ಬಂದು ಅವಮಾನಿತರಾದರು. ಕಡೆಗೆ ದಫೇದಾರ್ರು ರಾಜಣ್ಣನವರು ಸುಬ್ಬಣ್ಣನವರಲ್ಲಿಗೆ ಬಂದು, "ಒಂದು ಫಿರ್ಯಾದುಕೊಟ್ಟರೆ ಈ . . . ಮಗಳನ್ನು ಬಂದೋಬಸ್ತು ಮಾಡು"ವುದಾಗಿ ಹೇಳಿದರು. ಸುಬ್ಬಣ್ಣನವರು ತಮ್ಮ ಕಿವಿಗಳನ್ನು ಮುಚ್ಚಿ, "ಶಿವ ಶಿವ, ನನ್ನ ತಮ್ಮನ ಅತ್ತೆ ನನಗೂ ಅತ್ತೆಯಲ್ಲವೆ, ಸ್ವಾಮಿ? ನಾವು ಏನು ಪಾಪಗಳನ್ನು ಮಾಡಿದ್ದೆವೋ, ಆ ಮಹನೀಯಳು ಅವೆಲ್ಲವನ್ನೂ ತೊಳೀತಿದಾಳೆ. ನಡೆಯಲಿ, ಸ್ವಾಮಿ! ರಾಮ ಇದಾನೆ, ಕಾಪಾಡುತಾನೆ" ಎಂದು ಹೇಳಿದರು. ರಾಜಾರಾಯರು ಹೊರಟುಹೋದರು.

೪

ನಾರಣಪ್ಪನ ಮನೆಯಲ್ಲಿ ಒಡವೆಯು ಹೋಗಿ ಮೂರು ನಾಲ್ಕು ತಿಂಗಳು ಕಳೆದಿರಬಹುದು. ಒಂದು ದಿನ ಮಧ್ಯಾಹ್ನ ಮೂರು ಗಂಟೆಯ ಹೊತ್ತಿನಲ್ಲಿ ಅಂಬುಜಮ್ಮನ ಅಂಗಳದಲ್ಲಿ ಊರ ಹೆಂಗಸರೆಲ್ಲರೂ ಸೇರಿದ್ದರು. ದೀಪದ ಶಕುನವನ್ನು ಹೇಳುವ ಮಂತ್ರವಾದಿಯೊಬ್ಬಳು ನೆರೆಯೂರಿನಿಂದ ಸಮ್ಮೊರಿಗೆ ಬಂದಿದ್ದಳು. ಹೆಣ್ಣು ಮಕ್ಕಳ ಸಡಗರವೇ ಸಡಗರ. ರಮಣಕ್ಕ, ರಂಗಮ್ಮ, ಲಲಿತಮ್ಮ, ಲಕ್ಷ್ಮಿಕ್ಕ ಎಲ್ಲರೂ ಸೇರಿದ್ದರು. ನಮ್ಮ ರಾಧಮ್ಮನೂ ಮಗಳು ಭಾಗಮ್ಮನೂ ಅಲ್ಲಿದ್ದರೆಂದು ಹೇಳಬೇಕಾದುದಿಲ್ಲ. ಮಂತ್ರವಾದಿಯು ಒಂದು ಮಣ್ಣಿನ ಹಣತೆಯಲ್ಲಿ ದೀಪವನ್ನು

ಹಚ್ಚಿ ಅದನ್ನು ಒಂದು ಮಣೆಯ ಮೇಲಿಟ್ಟಿದ್ದಳು. ಮಣೆಯ ಸುತ್ತಲೂ ಬಣ್ಣ ಬಣ್ಣದ ರಂಗವಲ್ಲಿಯಿಂದ ನೆಲವನ್ನು ಅಲಂಕರಿಸಿದ್ದಳು. ಹಣತೆಯು ಹೂ ಗಂಧಗಳಿಂದ ಅಲಂಕೃತವಾಗಿತ್ತು. ಹಣತೆಯನ್ನು ತೂಗುಹಾಕುವ ದಾರದ ನೆಲುವೊಂದು ಹಣತೆಯ ಪಕ್ಕದಲ್ಲಿಯೇ ಪರಿಷ್ಕಾರವಾಗಿ ಪೂಜೆಗಿಡಲ್ಪಟಿದ್ದಿತು. ಮಂತ್ರವಾದಿಯು ನೆಲುವಿನಲ್ಲಿ ಹಣತೆಯನ್ನಿಟ್ಟು, ಅದನ್ನು ತನ್ನ ಕೈಯಲ್ಲಿ ಹಿಡಿದು ವರಗಳನ್ನು ಕೊಡಲು ಬಂದಿರುವ ದೇವಿಯಂತೆ ಎಲ್ಲರನ್ನೂ ನೋಡಿದಳು. ಬಂದಿದ್ದವರೆಲ್ಲರೂ ತಮ್ಮ ತಮ್ಮ ಇಷ್ಟಾರ್ಥಗಳನ್ನು ಕೇಳಿಕೊಂಡ ಮೇಲೆ ರಾಧಮ್ಮನ ಸರದಿಯೂ ಬಂದಿತು. ರಾಧಮ್ಮನು ಅಡ್ಡಿಕೆಯ ವಿಚಾರವನ್ನು ಕೇಳಿದಳು. ಮಂತ್ರವಾದಿಯು ಕೈಲಿಹಿಡಿದಿದ್ದ ನೆಲುವನ್ನೂ ಅದರೊಳಗಿನ ಹಣತೆಯನ್ನೂ ನೆಟ್ಟ ದೃಷ್ಟಿಯಿಂದ ನೋಡುತ್ತಾ, ಏನೋ ಜಪಿಸುವಂತೆ ತುಟಿಗಳನ್ನು ಅಲುಗಿಸುತ್ತಾ ಇದ್ದಳು. ಇದ್ದಕ್ಕಿದ್ದ ಹಾಗೆ ಹಣತೆಯು ಪೂರ್ವದಿಕ್ಕಿಗೆ ತಿರುಗಿತು. ಮಂತ್ರವಾದಿಯು "ದೀಪತ್ತಾಯಿ ಮೂಡಲ್ದಿಕ್ಕು ತೋಸ್ತಾ್ರಳಮ್ಮ" ಎಂದು ಹೇಳಿ ಹಣತೆಯನ್ನು ಕೆಳಗಿಟ್ಟಳು. ನಾರಣಪ್ಪನ ಮನೆಯ ಪೂರ್ವಭಾಗದ್ದೆ ಸುಬ್ಬಣ್ಣನವರ ಮನೆ. ರಾಧಮ್ಮನ್ನ ಕೇಳ ಬೇಕೆ? ಮಂತ್ರವಾದಿಗೆ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು ವಿಜಯೋತ್ಸಾಹದಿಂದ ಮನೆಗೆ ಬಂದಳು. ಹೆಂಗಸರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಸರಿದರು. ಅಂಬುಜಮ್ಮನು ಮಂತ್ರವಾದಿಯೊಂದಿಗೆ ಭಾವಗರ್ಭಿತವಾದ ನಗುವೊಂದನ್ನು ನಕ್ಕು, ಆಕೆಯನ್ನು ಬೀಳ್ಕೊಟ್ಟಳು. ಊರ ಹೆಂಗಸರೆಲ್ಲರೂ, ದೀಪದ ಶಕುನವನ್ನು ಕಣ್ಣಾರೆ ಕಂಡುದರಿಂದ, ಲಕ್ಷ್ಮೀಬಾಯಿಯು ಅಪರಾಧಿಯೆಂದೇ ನಿರ್ಧರಿಸಿದರು. ರಾಧಮ್ಮನು ತನ್ನ ದಿನ ಚರಿಯ ಬೈಗಳ ಹಾಡಿಗೆ ಶಕುನದ ಪಲ್ಲವಿಯನ್ನೂ ಸೇರಿಸಿಕೊಂಡಳು.

ಲಕ್ಷ್ಮೀಬಾಯಿಯ ಸ್ಥಿತಿಯು ಬಹು ಇಕ್ಕಟ್ಟಿಗೆ ಬಂದಿತು. ದೀಪದ ಶಕುನವನ್ನು ಕಣ್ಣಾರ ಕಂಡ ಹೆಂಗಸರು ಒಬ್ಬೊಬ್ಬರಾಗಿ ಮನೆಗೆ ಬರುವುದನ್ನು ನಿಲ್ಲಿಸಿದರು. ಲಕ್ಷ್ಮೀಬಾಯಿಯು ಓದು ಕಲಿತವಳು. ರಾಮಾಯಣ ಭಾರತ ಭಾಗವತಗಳನ್ನು ಲೀಲಾಜಾಲವಾಗಿ, ಸುಶ್ರಾವ್ಯವಾಗಿ, ಓದುತ್ತಿದ್ದಳು. ಊರ ಹೆಂಗಸರು ಮಧ್ಯಾಹ್ನದ ಹೊತ್ತಿನಲ್ಲಿ ಬಿಡುವುಮಾಡಿಕೊಂಡು ಲಕ್ಷ್ಮೀಬಾಯಿಯ ಮನೆಗೆ ಬರುವ ಪದ್ಧತಿ ಯಿತ್ತು. ಆ ಕಾಲದಲ್ಲಿ ಆಕೆಯು ಆವುದಾದರೊಂದು ಗ್ರಂಥಭಾಗವನ್ನು ಓದುವಳು. ಎಲ್ಲರೂ ಕೇಳಿ, ತಲೆದೂಗಿ ಆಕೆಯನ್ನು ಕೊಂಡಾಡಿ ತಮ್ಮ ಮನೆಗಳಿಗೆ ಹೋಗುವರು. ರಾಧಮ್ಮನ ರಂಪು ಆರಂಭವಾದಂದಿನಿಂದ ಈ ಪುರಾಣ ಪ್ರವಚನಗಳೇ ಲಕ್ಷ್ಮೀ ಬಾಯಿಯ ಜೀವಾಳವನ್ನು ಭರಿಸಲು ಸಹಾಯಕಾರಿಗಳಾಗಿದ್ದುವು. ಸುಬ್ಬಣ್ಣ ಹೇಗೂ ಗಂಡಸು. ದಿನದಲ್ಲಿ ಕೆಲವು ವೇಳೆಯನ್ನಾದರೂ ಮನೆಯ ಹೊರಗೆ ಕಳೆಯು

ತ್ತಿದ್ದರು. ಗೃಹಿಣಿಗೆ ತನ್ನ ಪುಸ್ತಕಗಳೇ ಸಹಪಾಠಿಗಳು; ಜೊತೆಗೆ ಇವನ್ನು ಕೇಳಲು ಬರುತ್ತಿದ್ದ ಸುವಾಸಿನಿಯರ ಸಹಾನುಭೂತಿಯ ನುಡಿಗಳು ಈಕೆಯ ಮನಸ್ಸನ್ನು ಹಗುರಗೊಳಿಸುತ್ತಿದ್ದುವು. ದೀಪದ ಶಕುನದಿಂದೀಚೆಗೆ ಎಲ್ಲರೂ ಮನೆಗೆ ಬರುವು ದನ್ನು ಬಿಟ್ಟರು. ಲಕ್ಷ್ಮೀಬಾಯಿಯು ನಿರಾಶ್ರಯಳಾದಳು.

ಇಂದು ಶುಕ್ರವಾರ ಸಂಜೆ; ಸುಬ್ಬಣ್ಣ ಸ್ನಾನಮಾಡಿ ಮಡಿಯುಟ್ಟು ದೇವರೆದು ರಿನಲ್ಲಿ, "ಲಕ್ಷ್ಮೀನಾರಾಯಣ ಹೃದಯ" ವನ್ನು ಪಾರಾಯಣ ಮಾಡುತ್ತಿದ್ದರು. ಹೊರಗಡೆಯಿಂದ ರಾಧಮ್ಮನ ರಗಳೆಯು ರಾಗರಾಗವಾಗಿ ಮನೆಯನ್ನು ಭೇದಿಸಿ ಕೊಂಡು ಒಳಕ್ಕೆ ಬರುತ್ತಿತ್ತು.—"ನೋಡ್ರಮ್ಮಾ, ದೀಪತ್ತಾಯಿ ಸುಳ್ಳಾದಾಳೇ? ನನ್ನ ಮನೆ ಹಾಳುಮಾಡಿದರು. ಇವರು ನೆಗದುಬಿದ್ದು ಹೋಗ, ಸಿಡಿದುಬೀಳ" ಎಂದು ಮುಂತಾಗಿ. ಇದುವರೆಗೂ ಗೃಹಿಣಿಯು ಗಂಡನೆದುರಿನಲ್ಲಿ ಅತ್ತು ಹಗರಣ ಮಾಡಿರ ಲಿಲ್ಲ. ಇಂದು ಆಕೆಯ ದುಃಖದ ಪ್ರವಾಹವು ತನ್ನ ಮೇರೆಯನ್ನು ಮೀರಿ ಆಕೆಯು ಗೋಳೋ ಎಂದು ಅತ್ತಳು. "ನನ್ನ ಒಡವೆಗಳನ್ನೆಲ್ಲಾ ಮುರಿಸಿ ಅವರಿಗೊಂದು ಅಡ್ಡಿಕೆ ಮಾಡಿಸಿಕೊಡಿ. ಇಲ್ಲದಿದ್ದರೆ ನನ್ನನ್ನೊಂದು ಭಾವಿಯಲ್ಲಿ ನೂಕಿಬಿಡಿ, ಮುತ್ತೈದೆಯಾಗಿ ಕಣ್ಣು ಮುಚ್ಚಿಕೊಳ್ಳುತ್ತೇನೆ. ನಾನಿನ್ನು ತಡೆಯಲಾರೆ" ಎಂದು ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ಸುಬ್ಬಣ್ಣನವರ ಪಾರಾಯಣವು ಅಲ್ಲಿಗೇ ನಿಂತಿತು. ಅವರ ಮನಸ್ಸು ಕುದಿಯಿತು. ಅವರ ಶಾಂತಿಗೂ ಒಂದು ಎಲ್ಲೆಯಿತ್ತು. ಪೂಜೆ ಯನ್ನು ನಿಲ್ಲಿಸಿ ಅರ್ಧಾಂಗಿಯನ್ನು ಸಂತೈಸಿದರು. ಹಾಗೆಯೇ ಆಲೋಚಿಸಿದರು— "ಈ ಕಡೆ ಕೆರೆ, ಆ ಕಡೆ ಭಾವಿ" ಎಂಬಂತಾಗಿತ್ತು. ಒಡವೆಯನ್ನೇನೋ ಮಾಡಿಸಿ ಕೊಡಬಹುದು. ಆದರೆ, ಈಗ ನಿಷ್ಕಾರಣವಾಗಿ ಒದಗಿದ ಅಪವಾದವು, ಅದರಿಂದ ಸ್ಥಿರಪಡುವುದಿಲ್ಲವೆ? ಅನ್ಯಾಯವಾದ ಈ ದುಷ್ಕೀರ್ತಿಯು ಸಾಂಕ್ರಾಮಿಕ ರೋಗದಂತೆ ಮನೆತನಕ್ಕೆ ಅಂಟಿಕೊಳ್ಳುವುದಿಲ್ಲವೆ? ರಾಮನು ಎಂದಾದರೂ ಈ ಅಪವಾದದಿಂದ ನಮ್ಮನ್ನು ಬಿಡುಗಡೆ ಮಾಡುವನು. ಇಂದಲ್ಲ ನಾಳೆ ಸತ್ಯವು ಬಯ ಲಿಗೆ ಬರುತ್ತದೆ. ಧರ್ಮಕ್ಕೆ ಜಯವಿಲ್ಲವೆ? ರಾಮನಿಲ್ಲವೆ?" ಎಂದು.

ಗಂಡಹೆಂಡಿರಿಬ್ಬರೂ ಬಹಳ ಹೊತ್ತು ಯೋಚಿಸಿದರು. ಕಡೆಗೆ ಹಳ್ಳಿಯಲ್ಲಿರುವ ತಮ್ಮ ಜಮೀನಿನಲ್ಲಿ ಒಂದು ಗುಡಿಸಲು ಕಟ್ಟಿಸಿಕೊಂಡು ಈ ಅಪವಾದವು ಹರಿಯುವ ವರೆಗೆ ಅಲ್ಲಿಯೇ ವಾಸವಾಗಿರಬೇಕೆಂದು ನಿರ್ಧರವಾಯಿತು. ಉತ್ಥಾನದ್ವಾದಶಿಗೆ ಇನ್ನು ನಾಲ್ಕು ದಿನಗಳು ಉಳಿದಿದ್ದುವು. ಅಂದಿನ ದೇವಕಾರ್ಯವನ್ನು ಪೂರೈಸಿ ಕೊಂಡು ತ್ರಯೋದಶಿಯ ದಿನವೇ ಹಳ್ಳಿಗೆ ಹೋಗುವುದಾಗಿ ಇತ್ಯರ್ಥವೂ ಆಯಿತು.

೫

ಇಂದು ಕಾರ್ತಿಕ ಶುದ್ಧ ದ್ವಾದಶಿ. ಸಮ್ಮೂರಿನಲ್ಲಿ ಈ ದಿನದ ಸಡಗರವು ಬಲು ಸೊಗಸಾದುದು. ಅದರಲ್ಲಿಯೂ ಯಾರ ಮನೆಯಲ್ಲಿ ಮಕ್ಕಳು ಹೆಚ್ಚೋ ಆ ಮನೆಯ ಸಂಭ್ರಮವನ್ನು ಹೇಳತೀರದು. ಏಕೆಂದರೆ ಬೃಂದಾವನದ ಅಲಂಕಾರದ ಹೆಚ್ಚು ಭಾಗವು ಹುಡುಗರಿಗೆ ಸೇರಿದುದು. ಸುತ್ತಮುತ್ತಲಿನ ಹೊಲಗದ್ದೆಗಳನ್ನೆಲ್ಲಾ ತಿರುಗಿ, ಬುಟ್ಟಿಗಳಲ್ಲಿ, 'ಜೋಳಿಗೆಗಳಲ್ಲಿ' ವಿಧವಿಧವಾದ ಹೂಗಳನ್ನು ತಂದು ರಾಶಿರಾಶಿಯಾಗಿ ಸುರಿಯುವುದು ಅವರ ಕೆಲಸ. ಹೀಗೆ ಸುರಿದ ಹೂಗಳನ್ನು ಮಾಲೆಗಳಾಗಿ ಕಟ್ಟುವುದು ಹುಡುಗಿಯರ ಪಾಲಿಗೆ ಬಂದದ್ದು. ಅನಂತರ ದೊಡ್ಡವರು ಅವುಗಳಿಂದ ಮಂಟಪವನ್ನು ಅಲಂಕರಿಸುತ್ತಾರೆ. ಸುಬ್ಬಣ್ಣನವರ ಮನೆಯು ನಂದಗೋಕುಲವೆಂದು ಹೆಸರಾಗಿತ್ತು. ತಮ್ಮವೇ ಹನ್ನೆರಡು ಮಕ್ಕಳು. ದೊಡ್ಡ ಮಗನಿಗೆ ಮದುವೆಯಾಗಿ ಸೊಸೆ ಮನೆಗೆ ಬಂದಿದ್ದಳು. ಆಕೆಗೂ ಎರಡು ಮಕ್ಕಳು. ಆದುದರಿಂದ ಸುಬ್ಬಣ್ಣನವರ ಮನೆಯಲ್ಲಿ ಇಂದು ಎಲ್ಲರ ಮನೆಗಳಿಗಿಂತಲೂ ದೊಡ್ಡ ಮಂಟಪವು ಕಟ್ಟಲ್ಪಟ್ಟು ಚಿತ್ರವಿಚಿತ್ರವಾಗಿ ಶೃಂಗರಿಸಲ್ಪಟ್ಟಿತ್ತು. ವಿಸ್ತಾರವಾದ ಹಿತ್ತಿಲಿನ ಮಧ್ಯಭಾಗದಲ್ಲಿ ಬೃಂದಾವನವನ್ನೊಳಗೊಂಡು ನಾಲ್ಕು ದಿಕ್ಕುಗಳಲ್ಲಿಯೂ ಮಂಟಪವು ಸಜ್ಜುಗೊಳಿಸಲ್ಪಟ್ಟಿತ್ತು. ಬಾಳೆಯ ಗಿಡಗಳಿಂದಲೂ, ಮಾವಿನ ತೋರಣದಿಂದಲೂ, ನೆಲ್ಲಿಯ ಕೊನೆಗಳಿಂದಲೂ, ಹೂಮಾಲೆಗಳಿಂದಲೂ, ಭೂಲೋಕದ ನಂದನವನದಂತೆ ಎದ್ದು ಕಾಣುತ್ತಿತ್ತು. ಸುತ್ತಲೂ ನೂರಾರು ಸಾಲುದೀಪಗಳು ಉರಿಯುತ್ತಿದ್ದುವು. ಪದ್ಧತಿಯಂತೆ ಸಮ್ಮೂರಿನ ಬ್ರಾಹ್ಮಣರೆಲ್ಲರೂ ಬಂದಿದ್ದರು. ಜೋಯಿಸ ಸಂಜುಂಡಶಾಸ್ತ್ರಿಗಳು ಮಂತ್ರಗಳನ್ನು ಹೇಳಿದರು. ಪೂಜೆಯಾಯಿತು. ತನಿವಾಲನ್ನು ಊಡಿಯಾಯಿತು. ಮಂಗಳಾರತಿಯಾಯಿತು. ಹುಡುಗರು ಜಾಗಟೆಗಳನ್ನೂ ಶಂಖಗಳನ್ನೂ ದಿಕ್ಕುಗಳೊಡೆಯುವಂತೆ ಬಾರಿಸಿದರು, ಊದಿದರು. ಬಂದವರೆಲ್ಲರಿಗೂ ಗಂಧಪುಷ್ಪಾದಿಗಳ ವಿನಿಯೋಗವಾದನಂತರ, ತಾಂಬೂಲವನ್ನೂ ಪನಿವಾರವನ್ನೂ ಹಂಚಿಯಾಯಿತು. ಸುಬ್ಬಣ್ಣನವರು ಬಂದವರೆಲ್ಲರನ್ನೂ ನಮಸ್ಕರಿಸಿ ಬೀಳ್ಕೊಟ್ಟರು. ಪೂಜೆ ಸಾಂಗವಾಯಿತು.

ಮಂಗಳಾರತಿಯ ಕಾಲಕ್ಕೆ ಎಲ್ಲರೂ ಸೇರಿ ಪ್ರತಿಯೊಂದು ಮನೆಗೂ ಹೋಗಿ ಗಂಧಪುಷ್ಪತಾಂಬೂಲಗಳನ್ನು ತೆಗೆದುಕೊಂಡು ಬರುವುದು ಸಮ್ಮೂರ ಪದ್ಧತಿ. ಅದರಂತೆ ಎಲ್ಲರ ಮನೆಗಳ ಸರದಿಯೂ ಮುಗಿದು ಸುಬ್ಬಣ್ಣನವರ ಮನೆಯ ಉತ್ಸವವೂ ಪೂರೈಸಿತ್ತು. ಇನ್ನುಳಿದುದು ನಾರಣಪ್ಪನ ಮನೆಯೊಂದೆ. ಸುಬ್ಬಣ್ಣನವರ ಮನೆಗೆ ಬಂದ ಬ್ರಾಹ್ಮಣರೆಲ್ಲರೂ ನಾರಣಪ್ಪನ ಮನೆಗೆ ಹೋದರು. ಸುಬ್ಬಣ್ಣನವರು ಮಾತ್ರ ಬೃಂದಾವನದ ಬಳಿ ಕೂತವರು ಕದಲಲಿಲ್ಲ. ಅಂದಿನ ಪರಿಸ್ಥಿತಿಯಲ್ಲಿ ನಾರಣಪ್ಪನ ಮನೆಗೆ ಅವರನ್ನು ಯಾರೂ ಕರೆಯುವ ಸಾಹಸಮಾಡಲಿಲ್ಲ.

ರಾತ್ರಿ ಹತ್ತು ಗಂಟೆಯ ಸಮಯ. ಶರಚ್ಚಂದ್ರನ ಅಮೃತಕಿರಣಗಳು ಸುತ್ತಲೂ ಶಾಂತಿಸುಧೆಯನ್ನು ಸೂಸುತ್ತಿದ್ದುವು. ಇದ್ದಕ್ಕಿದ್ದಹಾಗೆ ಸುಬ್ಬಣ್ಣನವರ ಕಣ್ಣು ಗಳಿಂದ ನೀರು ದಡದಡನೆ ಉರುಳಿತು. "ಎಲ್ಲರೂ ಬಂದರು, ನಾರಣಪ್ಪ ಬರಲಿಲ್ಲ. ಹೋದ ವರ್ಷ ಮಂಗಳಾರತಿಯಲ್ಲಿ ನಾರಣಪ್ಪನೇ ನಿಂತು ಎಲ್ಲರಿಗೂ ಗಂಧಪುಷ್ಪ ಪನಿವಾರಗಳನ್ನು ಹಂಚಿದ್ದನು. ಆದರೆ ಇಂದು! ಅಯ್ಯೋ ಪಾಪ! ಅವನೇನು ಮಾಡಿ ಯಾನು! ಮನೆಯ ಹೆಂಗಸರ ಕೈಗೊಂಬೆಯಾಗಿದ್ದಾನೆ. ಅಲ್ಲದೆ ಬರಲು ಸಾಧ್ಯವೂ ಇಲ್ಲ. ಆದರೆ ನಾನೇಕೆ ಹೋಗಬಾರದು? ಸನಗೇತರ ಭಯ! ಈ ಅಲ್ಪ ಅಡ್ಡಿಕೆಯ ವಿಷಯಕ್ಕಾಗಿ ಅಣ್ಣತಮ್ಮಂದಿರ ಸ್ನೇಹವೇ ಕತ್ತರಿಸಿ ಹೋಗಬೇಕೆ?" ಎಂದು ಮುಂತಾಗಿ ಯೋಚಿಸುತ್ತಿದ್ದರು. ಕೊನೆಗೆ ಉಟ್ಟ ಮಗುಟದ ತುದಿಯಿಂದ ಕಣ್ಣೀರ ನ್ನೊರಸಿಕೊಂಡರು. ಕೈಯಲ್ಲಿ ಪಂಚಪಾತ್ರೆ ಹಿಡಿದು ಮೇಲಕ್ಕೆದ್ದರು. ಸಮೀಪದಲ್ಲಿದ್ದ ಲಕ್ಷ್ಮೀಬಾಯಿಯು ಎಲ್ಲವನ್ನೂ ಗ್ರಹಿಸಿದಂತೆ ತೋರಿತು. ಆಕೆ ಅಡ್ಡಬಂದು ಪತಿಯ ಕಾಲು ಮೇಲೆ ಬಿದ್ದಳು. "ಬೇಡಿ, ನನ್ನಾಣೆ ಆ ಮನೆಗೆ ಹೋಗಬೇಡಿ. ಆರು ತಿಂಗ ಳಿಂದಲೂ ಆಗಿರುವ ಹಗರಣವೇ ಸಾಕು. ಬಂದವರ ಮುಂದೆ ನಿಮಗಾವ ಅವಮಾನ ವಾಗುವುದೋ ಆ ಮಹಾತಾಯಿಯಿಂದ! ದಮ್ಮಯ್ಯ, ಖಂಡಿತ ಹೋಗಬೇಡಿ" ಎಂದು ಅಂಗಲಾಚಿದಳು. ಸುಬ್ಬಣ್ಣನವರ ಮುಖ ಮುದ್ರೆಯು ಗಂಭೀರವಾಗಿತ್ತು. "ಥೆ! ಹುಚ್ಚಿ!" ಎಂದು ಪತ್ನಿಯನ್ನು ಎಬ್ಬಿಸಿ ಸಂತೈಸಿದರು. ಉಟ್ಟ ಮಗುಟ ಹೊದೆದ ಧೋತ್ರದಲ್ಲಿಯೇ ನೇರವಾಗಿ ನಾರಣಪ್ಪನ ಮನೆಗೆ ಬಂದರು. ನಾರಣಪ್ಪನ ಮನೆಯಲ್ಲಿ ಪೂಜೆ ಮುಗಿದಿತ್ತು. ಮಂಗಳಾರತಿಯ ಸಮಯ. ಸಂಜುಂಡಜೋಯಿಸರು ಮಂತ್ರವನ್ನು ಹೇಳುತ್ತಿದ್ದರು. ನಾರಣಪ್ಪ ಒಂದು ಕೈಯಲ್ಲಿ ಗಂಟೆಯನ್ನು ಬಾರಿ ಸುತ್ತಾ ಇನ್ನೊಂದು ಕೈಯಲ್ಲಿ ಆರತಿಯನ್ನು ಬೆಳಗುತ್ತಿದ್ದನು. ಹುಡುಗರು ಜಾಗಟೆ ಗಳನ್ನು ಬಾರಿಸುತ್ತಿದ್ದರು, ಶಂಖಗಳನ್ನು ಧ್ವನಿಮಾಡುತ್ತಿದ್ದರು. ಅನಿರೀಕ್ಷಿತವಾಗಿ ಅಲ್ಲಿಗೆ ಬಂದ ಸುಬ್ಬಣ್ಣನವರು ಬೃಂದಾವನಕ್ಕೆ ನಮಸ್ಕಾರಮಾಡಿ ನಿಂತುಕೊಂಡರು. ನೆರೆದಿದ್ದವರೆಲ್ಲರೂ ದೇವರನ್ನು ಬಿಟ್ಟು ಸುಬ್ಬಣ್ಣನವರನ್ನು ಎವೆಯಿಕ್ಕದೆ ನೋಡಿದರು. ಸಂಜುಂಡಜೋಯಿಸರ ಮಂತ್ರವು ಮಧ್ಯಕ್ಕೆ ನಿಂತಿತು. ನಾರಣಪ್ಪನ ಕೈಯ ಆರತಿಯ ತಟ್ಟೆಯು ಹಾಗೆಯೇ ಕೆಳಕ್ಕೆ ಬಿತ್ತು. ಶಂಖ ಜಾಗಟೆಗಳು ತಮ್ಮಷ್ಟಕ್ಕೆ ತಾವೆ ನಿಂತವು. ನಾರಣಪ್ಪನಿಗೆ ಹೇಗೆನಿಸಿತೋ! ಓಡಿಬಂದ್ದು ಅಣ್ಣನ ಕಾಲುಗಳ ಮೇಲೆ ಧೊಪ್ಪನೆ ಬಿದ್ದನು. ಸುಬ್ಬಣ್ಣನವರು, ತಮ್ಮನನ್ನು ಸಂತಯಿಸಿ ಎಬ್ಬಿಸಿದರು. ಅಣ್ಣ, ತಮ್ಮಂದಿರಿಬ್ಬರ ಕಣ್ಣುಗಳಲ್ಲಿಯೂ ನೀರು ಧಾರೆಯಾಗಿ ಸುರಿಯುತ್ತಿತ್ತು. ಸ್ವಲ್ಪ ಹೊತ್ತು ಇಬ್ಬರೂ ಮಾತನಾಡಲಾರದಾದರು. ಉಳಿದವರು ಚಿತ್ರ ಪ್ರತಿಮೆ

ಗಳಂತೆ ನೋಡುತ್ತಿದ್ದರು ಮಾತ್ರ. ರಾಧಮ್ಮನ ಬಾಯಿಂದ "ಅಯ್ಯೋ, ಭಂಡ ಮುಂ. . . . ನೆ." ಎಂಬ ಶಬ್ದಗಳು ಅಸ್ಪಷ್ಟವಾಗಿ ಕೇಳಿಬಂದುವು.

ಆ ಗಭೀರವಾದ ನಿಶ್ಶಬ್ದದ ನಡುವೆ, ನಾರಣಪ್ಪ ತಲೆಯನ್ನು ತಗ್ಗಿಸಿಕೊಂಡು ಗಂಟಲನ್ನು ಸರಿಮಾಡಿಕೊಂಡು, "ಅಣ್ಣಾ! ಈ ಪಾಪಿಗಳನ್ನು ಕ್ಷಮಿಸಲಾರೆಯಾ?" ಎಂದನು. ಪುನಃ ಎಲ್ಲವೂ ನಿಶ್ಶಬ್ದ. ಸುಬ್ಬಣ್ಣನವರೂ ಸುಮ್ಮನೆಯಿದ್ದರು. ನಾರಣಪ್ಪ ಅಲ್ಲಿದ್ದವರೆಲ್ಲರನ್ನೂ ಉದ್ದೇಶಿಸಿ, "ನಾನು ಮಹಾ ಪಾಪಿ. ನಿಷ್ಕಾರಣವಾಗಿ ಅಣ್ಣನನ್ನೂ ತಾಯಿಯಂತಿದ್ದ ಅತ್ತಿಗೆಯನ್ನೂ ನೋಯಿಸಿದ ನರಾಧಮ. ಅಡ್ಡಿಕೆಯನ್ನು ಸಾಲಕ್ಕಾಗಿ ಒತ್ತೆಹಾಕಿರುವ ಪಾಪಿಷ್ಠನು ನಾನು. ಮನೆಯವರಿಂದುಂಟಾಗಬಹುದಾದ ಕಿರುಕುಳಕ್ಕೆ ಹೆದರಿ, ಸತ್ಯವನ್ನು ಮರೆಮಾಚಿದ ಮಹಾ ದ್ರೋಹಿ ನಾನು. ನನ್ನನ್ನು ಕ್ಷಮಿಸಲಾರೆಯಾ, ಅಣ್ಣಾ!" ಎಂದು ಹೇಳುತ್ತಾ ಪುನಃ ಅಣ್ಣನ ಕಾಲುಗಳ ಮೇಲೆ ಬಿದ್ದನು. ಅಣ್ಣನವರು ತಮ್ಮನನ್ನು ಹಿಡಿದೆತ್ತಿ, "ಅಪ್ಪಾ! ಇದರಲ್ಲಿ ಯಾರ ದೋಷವೂ ಇಲ್ಲ. ಇದೆಲ್ಲವೂ ಸಂಸಾರರಂಗದಲ್ಲಿ ನಡೆದುಹೋದ ವಿಧಿವಿಲಾಸ. ಕಷ್ಟಗಳು ಯಾರನ್ನು ಬಿಟ್ಟಿವೆ? ಹೂಂ ಏಳು, ಮಂಗಳಾರತಿಮಾಡಿ ದೇವರನ್ನು ಕದಲಿಸು" ಎಂದರು. ನಾರಣಪ್ಪನು, "ಅಣ್ಣಾ, ನನಗೆ ಯಾವ ದೇವರೂ ಬೇಡ ನೀನೇ ನನ್ನ ದೇವರು" ಎಂದನು. ಮೇಷ್ಟ್ರು ಗೋಪಣ್ಣನವರು ತಮ್ಮ ಕಣ್ಣುಗಳನ್ನೊರಸಿಕೊಳ್ಳುತ್ತಾ, "ಸುಬ್ಬಣ್ಣ, ನೀನೇ ಈ ಮನೆಗೆ ಯಜಮಾನ. ನಿನ್ನ ಕೈಯಿಂದಲೇ ದೇವರಿಗೆ ಮಂಗಳಾರತಿ ನಡೆಯಲಿ" ಎಂದರು. ಸುಬ್ಬಣ್ಣನವರು ದೇವರಿಗೆ ಆರತಿಯನ್ನು ಬೆಳಗಿದರು. "ಉತ್ತಿಷ್ಠೋತ್ತಿಷ್ಠ ಗೋವಿಂದ" ಎಂದು ನಂಜುಂಡಜೋಯಿಸರು ಮಂತ್ರವನ್ನು ಹೇಳಿದರು. ದೇವರನ್ನು ಕದಲಿಸಿಯಾಯಿತು. ಬಂದವರೆಲ್ಲರಿಗೂ ಗಂಧ ಪುಷ್ಪ ತಾಂಬೂಲಗಳನ್ನು ಹಂಚಿಯಾಯಿತು. ನಾರಣಪ್ಪನ ಮನೆಯ ಹೆಸರುಬೇಳೆ ಕೋಸುಂಬರಿಯು ಅಂದು ಅತಿ ರುಚಿಯಾಗಿತ್ತು. ರಾಧಮ್ಮನು ಮಾತ್ರ ಅಲ್ಲಿರಲಿಲ್ಲ.

ತ. ಸು. ಭಾರದ್ವಾಜ.

ಕಾವ್ಯಾವಲೋಕನ

ಮಗಳಿಗೆ ತಂದೆಯ ಓಲೆಗಳು—ಮೂಲಲೇಖಕರು; ಪಂಡಿತ ಜವಾಹರಲಾಲ ನೆಹರು: ಅನುವಾದಕರು: ಶ್ರೀ ಕಪಟ್ರಾಳ್ ಕೃಷ್ಣರಾಯರು, ಗುಲ್ಬರ್ಗ; ಪ್ರಕಾಶಕರು; ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಕ್ರೌನ್ ಅ. ೧೬ + ೧೧೮. ಬೆಲೆ, ೧ ರೂ.

ಪಂಡಿತ ಜವಾಹರಲಾಲನೆಹರು ಅವರು ತಮ್ಮ ಮಗಳು ಇಂದಿರಾ ನೆಹರುವಿಗೆ ಆಕೆ ಹತ್ತು ವರ್ಷದ ಬಾಲೆಯಾಗಿದ್ದಾಗ ಬರೆದ ಲೇಖನಗಳನ್ನು ಶ್ರೀಮಾನ್ ಕಪಟ್ರಾಳ್ ಕೃಷ್ಣರಾಯರು ಕನ್ನಡಕ್ಕೆ ಭಾಷಾಂತರ ಮಾಡಿ ಸುಲಭಶೈಲಿಯಲ್ಲಿ ಕನ್ನಡ ಮಕ್ಕಳಿಗೆ ಪ್ರಪಂಚಪರಿಚಯವನ್ನು ಮಾಡಿಕೊಟ್ಟಿರುವರು. ತಿಳಿಗನ್ನಡದಲ್ಲಿ ಇಂಗ್ಲಿಷ್ ಭಾಷೆಯಲ್ಲಿನ ವ್ಯಾವಹಾರಿಕಶಬ್ದಗಳಿಗೆ ಸಮರ್ಪಕವಾದ ಸಮಪದಗಳನ್ನು ಆರಿಸಿ (ಪ್ರಾಂತಿಕ ಶಬ್ದಗಳ ಕೋಶವನ್ನು ಕೊಟ್ಟು) ಈ ಪುಸ್ತಕವನ್ನು ಬರೆದಿರುವುದರಿಂದ ಬಾಲ ಪ್ರಪಂಚದಲ್ಲಿ ಇದು ಆದರಣೆ ಹೊಂದುವುದರಲ್ಲಿ ಸಂಶಯವಿಲ್ಲ.

ಪಂಡಿತ ನೆಹರು ಅವರು ವಿಜ್ಞಾನಶಾಸ್ತ್ರಗಳಲ್ಲಿ ಮತ್ತು ಸಾಮಾಜಿಕ ಶಾಸ್ತ್ರಗಳಲ್ಲಿ ಇರುವ ಮುಖ್ಯ ಅಂಶಗಳನ್ನಾರಿಸಿಕೊಂಡು, ಎಚ್. ಜಿ. ವೆಲ್ಸ್, ಜೂಲಿಯನ್ ಹಕ್ಸ್ಲಿ ಮುಂತಾದವರ ಪ್ರಪಂಚಚರಿತ್ರೆ, ಜೀವನವಿಜ್ಞಾನ ಮುಂತಾದ ಗ್ರಂಥಗಳನ್ನಾಧಾರಮಾಡಿಕೊಂಡು ಸೃಷ್ಟಿಯ ಕ್ರಮ ಮತ್ತು ವೈಚಿತ್ರ್ಯ, ಜನಾಂಗಗಳ ಮತ್ತು ರಾಜ್ಯಪದ್ಧತಿಗಳ ಉದಯ, ಶ್ರಮವಿಭಾಗ, ವ್ಯಾಪಾರ, ಭಾಷೆಗಳ ವಿಭಜನೆ ಮತ್ತು ಬೆಳವಣಿಗೆ, ಪ್ರಾಚೀನ ಸಂಸ್ಕೃತಿಗಳಲ್ಲಿ ಈಜಿಪ್ಟ್, ಕ್ರೀಟ್, ಚೀಣ, ಹಿಂದೂ ದೇಶಗಳ ಪೂರ್ವ ಸಂಸ್ಕೃತಿಗಳು—ಈ ವಿಷಯಗಳನ್ನು ಸಂಗ್ರಹಿಸಿ ಅಲ್ಲಲ್ಲಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿರುವರು. ಆದರೆ ಅಲ್ಲಲ್ಲಿ ಇವರ ಅಭಿಪ್ರಾಯಗಳು ಆಧುನಿಕ ಪರಿಶೋಧನೆಗಳಿಗೆ ವಿರುದ್ಧವಾಗಿರುವವು. ಉದಾಹರಣೆ—ಕಾಡುಜನರು ತಿಳಿಯಲಾರದ ಪ್ರತಿಯೊಂದು ಪದಾರ್ಥದ ಭಯದಿಂದ ದೇವತಾಪೂಜೆ ಧರ್ಮಾಚರಣೆಗಳುಂಟಾದವು (ಪುಟ ೯೭). ಪೂಜಾರಿಗಳು ಹೆಚ್ಚು ಸಲ ಜನರನ್ನು ಮೋಸಗೊಳಿಸುತ್ತ ತಪ್ಪುದಾರಿಗೆಳೆಯುತ್ತಿದ್ದರು (ಪುಟ ೯೮). ಆರ್ಯರು ವಾಯವ್ಯದಿಂದ ಹಿಂದೂಸ್ಥಾನಕ್ಕೆ ಬಂದಿರಬೇಕು (ಪುಟ ೧೦೭). ಆರ್ಯರು ಅನ್ಯರೊಂದಿಗೆ ಮದುವೆಯಾಗುತ್ತಿರಲಿಲ್ಲ (ಪುಟ ೧೧೧), ಇತ್ಯಾದಿ. ಶ್ರೀಮಾನ್ ಕೃಷ್ಣರಾಯರು ಒಟ್ಟಿನಲ್ಲಿ ಈ ಉತ್ತಮವಾದ ಪುಸ್ತಕವನ್ನು ಪರಿವರ್ತನೆಮಾಡಿ ಕನ್ನಡನಾಡಿನ ಚಿಕ್ಕ ಮಕ್ಕಳಿಗೆ ಉಪಕಾರ ಮಾಡಿರುವರು. ಅಲ್ಲಲ್ಲಿ ಕೆಲವು ನಕ್ಷೆಗಳನ್ನೂ ಚಿತ್ರಗಳನ್ನೂ

ಸೇರಿಸಿದ್ದರೆ ಬಾಲಕರ ಚಿತ್ತವನ್ನು ಮತ್ತಷ್ಟು ಆಕರ್ಷಿಸುತ್ತಿದ್ದಿತೆಂದು ಸೂಚಿಸ ಬಹುದಾಗಿದೆ.

ಎಸ್. ಶ್ರೀಕಂಠಶಾಸ್ತ್ರೀ.

ಜ್ಞಾನೋಪಾಸನೆ—ಬರೆದವರು, ಪ್ರೊ. ಶ್ರೀ. ನಾ. ಬನಹಟ್ಟಿ, ಎಂ.ಎ ; ಅನುವಾದ ಕರು: "ಸ್ವಾತಂತ್ರ್ಯಪ್ರಿಯರು", ಮಿಂಚಿನಬಳ್ಳಿಯ ಪ್ರಕಟನೆ ೧೩. ಕ್ರೌನ್ ಅ. ೬+೨೩೬. ಬೆಲೆ, ಸಾದಾ ಪ್ರತಿ, ೧-೮-೦ ; ಕ್ಯಾಲಿಕೋ, ೩-೦-೦.

ನಾಗಪುರದ ವಿಶ್ವವಿದ್ಯಾಲಯದ ಶ್ರೀಮಾನ್ ಬನಹಟ್ಟಿ ಶ್ರೀನಿವಾಸರಾಯರು ಮರಾಠಿಯಲ್ಲಿ "ಜ್ಞಾನೋಪಾಸನೆ ಮತ್ತು ಭಾರತೀಯರ ಕರ್ತವ್ಯ" ಎಂಬ ಗ್ರಂಥ ವನ್ನು ಬರೆದುದಕ್ಕೆ ಈ ಪುಸ್ತಕವು ಭಾಷಾಂತರ. ಪರಿವರ್ತನೆ ಮಾಡಿದ "ಸ್ವಾತಂತ್ರ್ಯ ಪ್ರಿಯರು" ಅತಿಗಹನವಾದ ವಿಷಯಗಳನ್ನು ಸುಲಭ ಕನ್ನಡಶೈಲಿಯಲ್ಲಿ ವಿವರಿಸಿ ಈ ಕಷ್ಟಕಾರ್ಯದಲ್ಲಿ ಯಶಸ್ವಿಗಳಾದುದಕ್ಕೆ ಅವರನ್ನು ಅಭಿನಂದಿಸಬೇಕು. ಮೇಲೆ ವಿಮರ್ಶಿಸಲ್ಪಟ್ಟ ಜವಾಹರಲಾಲರ ಗ್ರಂಥವು ಬಾಲಕರಿಗೆ ಉಪಕಾರಿಯಾದರೆ ಈ ಗ್ರಂಥವು ಜ್ಞಾನೋಪಾಸನೆಯಲ್ಲಿ ಕೆಲವು ಹಂತಗಳನ್ನೇರಿರುವ ಪ್ರೌಢರಿಗೆ, ಅದರ ಲ್ಲಿಯೂ ಭಾರತೀಯರಿಗೆ, ಅತ್ಯಂತ ಉಪಯುಕ್ತವಾಗಿದೆ.

ಇದು ಪ್ರಪಂಚ ಚರಿತ್ರೆಯಲ್ಲಿ ಜ್ಞಾನೋಪಾಸನೆಯು ಹೇಗೆ ಬೆಳೆಯಿತೆಂದು ತೋರಿಸಿ ಅಂಧಶ್ರದ್ಧೆಯನ್ನು ನಿವಾರಿಸಿ ಜಾಗೃತಿಯನ್ನುಂಟುಮಾಡುವುದಕ್ಕಾಗಿ ಬರೆದ ಗ್ರಂಥ. ಇದರ ಮೊದಲು ನಾಲ್ಕು ಮೆಟ್ಟಲುಗಳಲ್ಲಿ ಚಾರಿತ್ರಕದೃಷ್ಟಿಯಿಂದ ಮಾನವನಲ್ಲಿ ಜ್ಞಾನಾಕಾಂಕ್ಷೆಯು ಹೇಗೆ ಬೆಳೆದುಬಂದಿತೆಂದು ಸ್ಥೂಲವಾಗಿ ನಿರೂಪಿ ಸಿರುವರು. ಅನಂತರ ಜ್ಞಾನಭಂಡಾರವನ್ನು ಶಾಸ್ತ್ರ, ವಿದ್ಯೆ, ಕಲೆ, ಸಾಹಿತ್ಯ ಎಂದು ನಾಲ್ಕು ವಿಭಾಗಮಾಡಿ ಜೀವವಿಜ್ಞಾನ, ಜಡವಿಜ್ಞಾನ, ಜ್ಯೋತಿಷ, ಭೂರಚನೆ ಉತ್ಪತ್ತಿಶಾಸ್ತ್ರ, ವೈದ್ಯ, ಸಾಮಾಜಿಕ, ಮಾನಸಿಕ ಮುಂತಾದ ಶಾಸ್ತ್ರಗಳು ಹೇಗೆ ಬೆಳೆಯುತ್ತ ಬಂದು ಇದುವರೆಗೂ ಎಷ್ಟು ಕ್ರಾಂತಿಯನ್ನುಂಟುಮಾಡಿವೆ ಎಂಬು ದನ್ನು ಸ್ಪಷ್ಟಗೊಳಿಸಿರುವರು. ಹನ್ನೊಂದು ಹನ್ನೆರಡನೆಯ ಮೆಟ್ಟಲುಗಳಲ್ಲಿ ಭಾರತೀ ಯರಲ್ಲಿ ಜ್ಞಾನಭಂಡಾರವು ಎಷ್ಟು ಬೆಳೆದಿದ್ದಿತೆಂದು ತೋರಿಸಿ, ಪಾಶ್ಚಾತ್ಯರ ಸರ್ವ ಜ್ಞಾನವನ್ನು ನಮ್ಮದಾಗಿ ಮಾಡಿಕೊಂಡು ಪ್ರಚಾರಮಾಡಿ ವಿಚಾರದೃಷ್ಟಿಯಿಂದ ನಮ್ಮ ದೇಶದಲ್ಲಿಯೂ ಸ್ವತಂತ್ರ ವಿಜ್ಞಾನಸಂಶೋಧನೆಗಳು ನಡೆದು ಪ್ರತ್ಯಕ್ಷಾ ಧಾರಗಳ ಮೇಲೆಯೇ ನಮ್ಮ ದೇಶದಲ್ಲಿ ಎಲ್ಲಾ ವ್ಯಕ್ತಿಗಳೂ ಜ್ಞಾನಾರ್ಜನೆ ಮಾಡ ಬೇಕೆಂದೂ ರಾಷ್ಟ್ರಪ್ರಗತಿಗೆ ಕಾರಣರಾಗಬೇಕೆಂದೂ ಉಪಸಂಹರಿಸಿರುವರು.

ಇಂತಹ ಸಂಕಲನಾತ್ಮಕವಾದ ಗ್ರಂಥವು ಮೂಢಾಭಿಮಾನ ಅಂಧಶ್ರದ್ಧೆಗಳನ್ನು ನಿವಾರಿಸುವುದಕ್ಕೆ ತಕ್ಕಮಟ್ಟಿಗೆ ಉಪಯುಕ್ತವಾದರೂ, ಒಬ್ಬರಿಗೆ ಎಲ್ಲಾ ಶಾಸ್ತ್ರಗಳಲ್ಲಿಯೂ ಸಂಪೂರ್ಣ ಪರಿಶ್ರಮ ಇರುವುದು ಕಷ್ಟವಾದುದರಿಂದ ಅಲ್ಲಲ್ಲಿ ಅನೇಕ ಚರ್ಚಾಸ್ಪದವಾದ ವಿಷಯಗಳೂ ಅಭಿಪ್ರಾಯಗಳೂ ಇರುವುದು ಸಹಜ. ಆಸ್ವಲ್ಡ್ ಸ್ಪೆಂಗ್ಲರಿನ ಅಭಿಪ್ರಾಯಗಳನ್ನು ಇವರು ಸೂಚಿಸಿ (ಪು. ೩) ಖಂಡಿಸಿರುವುದು ಸರಿಯೇ. ಆದರೆ ಇವರು ಜ್ಞಾನದ ಅಥವಾ ಸಂಸ್ಕೃತಿಯ ಮೂಲಸ್ವರೂಪಗಳನ್ನು ಕೂಲಂಕಷವಾಗಿ ಚರ್ಚಿಸಿಲ್ಲ. ಸಂಸ್ಕೃತಿಗೂ ನಾಗರಿಕತೆಗೂ ಭೇದವನ್ನು ತಿಳಿಯದೆ ಸಂಸ್ಕೃತಿಯು ಆಯಾ ರಾಷ್ಟ್ರಚರಿತ್ರೆಗಳನ್ನನುಸರಿಸಿ ವಿಶ್ವವ್ಯಾಪಕವಾದ ಜ್ಞಾನಕ್ಕಿಂತ ಭಿನ್ನವೆಂದು ಹೇಳಿರುವದು ತಪ್ಪು. ನಾಗರಿಕತೆಯು ದೇಶ ಮತ್ತು ಜನಾಂಗಗಳ ಚರಿತ್ರೆಗಳನ್ನನುಸರಿಸಿ ಒಂದು ವ್ಯಷ್ಟಿಸ್ವರೂಪವನ್ನು ಹೊಂದುವುದು. ಆದರೆ ನಿಜವಾದ ಸಂಸ್ಕೃತಿಯ ತತ್ತ್ವವು ಸಮಷ್ಟಿಸ್ವರೂಪ. ಮತ್ತು ಭಾರತೀಯರು ಜ್ಞಾನ ಅಥವಾ ವಿದ್ಯೆಯನ್ನು ಪರ ಅಪರ ಎಂದು ವಿಂಗಡಿಸಿ ಇವುಗಳಿಗೆ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಮಿಳಸಮಾಡಿರುವುದರಿಂದ ನಮ್ಮ ದೃಷ್ಟಿಯಲ್ಲಿ ಜ್ಞಾನಕ್ಕೂ ಸಂಸ್ಕೃತಿಗೂ ಭೇದವಿಲ್ಲ. ಆದ್ದರಿಂದ ಪಾಶ್ಚಾತ್ಯ ಸಂಸ್ಕೃತಿಯನ್ನನುಸರಿಸಿ "ಸ್ವದೇಶಾಭಿಮಾನ, ಶಿಸ್ತು, ಸಂಘಟನೆ" ಕಲಿಯಬೇಕೆಂದೂ, ಇವೇ ರಾಷ್ಟ್ರದ ಮಹಾ ಮಂತ್ರಗಳೆಂದೂ ಹೇಳುವುದು ಅವಿಚಾರ ರಮಣೀಯವು (ಪು. ೧೩). ಪಾಶ್ಚಾತ್ಯ ಸಂಸ್ಕೃತಿಯ ಅಧಃಪತನಕ್ಕೂ ಜ್ಞಾನದ ದುರುಪಯೋಗಕ್ಕೂ ಈಗಿನ ಮಹಾಯುದ್ಧವೇ ನಿದರ್ಶನವಾದುದರಿಂದ ಇಂತಹ ತಳಹದಿಯ ಮೇಲೆ ರಾಷ್ಟ್ರಾಭ್ಯುದಯವನ್ನು ಕಟ್ಟುವುದು ಅನರ್ಥಕಾರಿಯೇ ಆಗುವುದು. ಸ್ವದೇಶಾಭಿಮಾನ ಮುಂತಾದವು ಪ್ರಪಂಚ ವಿಪ್ಲವಕ್ಕೆ ಕಾರಣವಾಗುವುದು. ಶಿಸ್ತು ಹೆಚ್ಚಿದಷ್ಟೂ ನಿರಂಕುಶ ಪ್ರಭುತ್ವ ಹೆಚ್ಚುವುದೆಂಬುದು ಜರ್ಮನಿ ಇಟಲಿ ದೇಶಗಳ ಆಧುನಿಕ ಚರಿತ್ರೆಯಿಂದ ಸ್ಪಷ್ಟವಾಗುವುದು. ಸಂಘಟನೆಯು ಕೂಡ ವಿಷಮಫಲಪ್ರದವಾಗಬಹುದು. ಗ್ರಂಥಕರ್ತರು ಮಾನವನು ತಾನಿದುವರೆಗೂ ಆರ್ಜಿಸಿದ ಜ್ಞಾನದಿಂದ ಸುಖಿಯಾಗಿಲ್ಲವೆಂದು ಒಪ್ಪಿಕೊಂಡಿರುವರು. ಆಧ್ಯಾತ್ಮಿಕವಾಗಲಿ ಭೌತಿಕವಾಗಲಿ ಜ್ಞಾನವು ಸುಖಶಾಂತಿಗಳನ್ನು ಉಂಟುಮಾಡದಿದ್ದಲ್ಲಿ ಅಲ್ಲಿ ನಿಜವಾದ ಜ್ಞಾನ ಮತ್ತು ಸಂಸ್ಕೃತಿಯ ಲಕ್ಷಣಗಳಿಲ್ಲ. ಪುನಃ "ಜ್ಞಾನದಲ್ಲಿ" ಶಾಸ್ತ್ರ, ವಿದ್ಯೆ, ಎಂದೆರಡು ಭಾಗಮಾಡಿ ಶಾಸ್ತ್ರವು ಸಾಮಾನ್ಯ ದೃಷ್ಟಿಯನ್ನೂ ವಿದ್ಯೆಯು ಕೃತಿ (Practical) ದೃಷ್ಟಿಯನ್ನೂ ಕೊಡುವುದೆಂದು ಹೇಳಿ (ಪು. ೭೭), ಉಪಯುಕ್ತಕಲೆ, ಲಲಿತಕಲೆ ಎಂಬೆರಡನ್ನು ಸೇರಿಸಿ ಜ್ಞಾನದಲ್ಲಿ ನಾಲ್ಕು ಭಾಗಗಳನ್ನು ಮಾಡಿರುವರು (ಪು. ೭೩). ಇಷ್ಟು ಪ್ರಯಾಸಪಡದೆ ಸ್ಥೂಲವಾಗಿ

ಜ್ಞಾನಪ್ರದಾಯಕ, ಫಲಪ್ರದಾಯಕ ಎಂದು ವಿದ್ಯೆಗಳನ್ನು ಸುಲಭವಾಗಿ ವಿಭಜಿಸ ಬಹುದಾಗಿದ್ದಿತು.

ಶಾಸ್ತ್ರವು (Science) ಇಂದ್ರಿಯಜನ್ಯಜ್ಞಾನ ಪ್ರತ್ಯಕ್ಷಪ್ರಮಾಣಗಳಿಂದ ಸಿದ್ಧವಾಗುವುದೆಂದು, "ಜಗತ್ತೆಲ್ಲವು ಮಿಥ್ಯಾಯೆಂದು ಹೇಳುವ ಮಾಯಾವಾದಿಗಳಿಗೆ ಎಳ್ಳಷ್ಟೂ ಅನುವುಕೊಡಕೂಡದು" (ಪು. ೭೭) ಎಂಬುದು ಇವರ ಸಿದ್ಧಾಂತ. ಮಾಯಾವಾದದ ನಿಜತತ್ತ್ವವನ್ನರಿಯದೆ ಇಂದ್ರಿಯ ಜ್ಞಾನವಿಷಯದಲ್ಲಿ ಎಡ್ಡಿಂಗ್ ಟನ್, ಜೇಮ್ಸ್ ಜೀನ್ಸ್ ಮುಂತಾದವರ "ಮಿಸ್ಟೀರಿಯಸ್ ಯೂನಿವರ್ಸ್" ಮೊದಲಾದ ಗ್ರಂಥಗಳಲ್ಲಿ ಅತ್ಯಾಧುನಿಕ ಸಂಶೋಧನೆಗಳನ್ನು ತಿಳಿಯದೆ ಕೇವಲ ಆವೇಶದಿಂದ ಬರೆದ ಮಾತುಗಳಿವು. ಶಂಕರಾಚಾರ್ಯರಂತೆಯೇ ಇತರರೂ ಕೂಡ ಅನೇಕರು ಸರ್ವ ಇಂದ್ರಿಯಜ್ಞಾನವೂ ಸತ್ಯವೆಂದು ಒಪ್ಪಿಕೊಳ್ಳುವುದಿಲ್ಲ. ಪ್ರತ್ಯಕ್ಷ ಪ್ರಮಾಣದ ಬಲವು ಆದುಷ್ಟೇಂದ್ರಿಯಸಂಯೋಗದಿಂದೆಂದು ಎಲ್ಲಾ ದಾರ್ಶನಿಕರೂ ಹೇಳುವರು.

ಇಂದ್ರಿಯಜನ್ಯ ಅನುಭವಗಳು ಕೇವಲ ಭೌತಿಕ ಮತ್ತು ಮಾನಸಿಕ ಪ್ರಪಂಚ ಗಳಿಗನ್ವಯಿಸುವುದರಿಂದ ಇವುಗಳ ಮೇಲೆ ಕಟ್ಟಲ್ಪಟ್ಟ ಶಾಸ್ತ್ರಗಳೂ ಸಮಾಜ ಪದ್ಧತಿ ಗಳೂ ಅನ್ಯೋನ್ಯಾಶ್ರಯಿಗಳಾಗಿ (relative) ಪರಸ್ಪರ ವಿರುದ್ಧಗಳಾಗಿ ಕೊನೆಗೆ ದ್ವೈತಜ್ಞಾನಗಳಲ್ಲಿಯೇ ಪರಿಣಮಿಸುವುದರಿಂದ ಅಂತಹ ವಿಜ್ಞಾನಶಾಸ್ತ್ರಗಳು ವಿಶ್ವ ಶಾಂತಿಗಾಗಲಿ ವ್ಯಕ್ತಿಮುಕ್ತಿಗಾಗಲಿ ಆಧಾರವಾಗುವ ಸಂಭವವಿಲ್ಲ. ಈ ಶಾಸ್ತ್ರಗಳ ನಿರೀಕ್ಷಣ ಮತ್ತು ಪ್ರಯೋಗಾತ್ಮಕಗಳಾದ ತರ್ಕಪದ್ಧತಿಯು ಕೂಡ ಅರಿಸ್ಟೋಟಲ್, ಬೇಕನ್ನರ ತರ್ಕದಂತೆ ದೋಷದೂಷಿತವೆಂದು ಡಾ|| ಚೆರ್ಬಾಟ್ಸ್ಕಿ ಅವರು ತಮ್ಮ ಬೌದ್ಧತರ್ಕಗ್ರಂಥಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಹೀಗೆ ದ್ವೈತಜ್ಞಾನವು ಅವಿದ್ಯಾ ಮೂಲವಾಗಿದ್ದು ಸಮಸ್ತ ವಸ್ತುವಿನಲ್ಲಿ ಭೇದವನ್ನು ಪ್ರತಿಪಾದಿಸಿ ಏಕೀಕರಣೆಗೂ ಸಮಾಜ ಸಂಘಟನೆಗೂ ವಿರುದ್ಧವಾಗಿ ರಾಜಕೀಯ ವಿಷಯದಲ್ಲಿ ಜನಾಂಗ ಪ್ರಾಂತಿಕ ಭಾವಗಳನ್ನೂ ಮತಗಳಲ್ಲಿ ವೈಷಮ್ಯಗಳನ್ನೂ ಸಮಾಜದಲ್ಲಿ ಜಾತಿ ವರ್ಣಾಶ್ರಮ ಭೇದಗಳನ್ನೂ, ಆಮುಷ್ಮಿಕದಲ್ಲೂ ನಿತ್ಯನಾರಕಿ ನಿತ್ಯಸಂಸಾರಿ ಮುಂತಾದ ಕ್ರೂರವಾದ ವಿಭೇದಗಳನ್ನೂ, ಆರ್ಥಿಕಪ್ರಪಂಚದಲ್ಲಿ ಸ್ವಾಮಿಭೃತ್ಯಭೇದ ಇತ್ಯಾದಿ ವಿಷಬೀಜ ಗಳನ್ನೂ ನಟ್ಟು ಪ್ರಕೃತಪ್ರಪಂಚದ ಕರುಣಾಜನಕವಾದ ಸ್ಥಿತಿಗೆ ಕಾರಣವಾಗಿದೆ. ಈ ತತ್ತ್ವವನ್ನರಿಯದೆ ಈ ಗ್ರಂಥಕರ್ತರು ಶ್ರುತಿಗಳಿಗೂ ಅಪಾರ್ಥಮಾಡಲು ಹೊರಟಿರುವರು. ಬೃಹದಾರಣ್ಯಕದಲ್ಲಿನ ಯಾಜ್ಞವಲ್ಕ್ಯಮಹರ್ಷಿಯ "ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ" ಎಂಬುದಕ್ಕೆ ಆತ್ಮರಕ್ಷಣೆಯ ಪ್ರವೃತ್ತಿ

(ಅರ್ಥಾತ್ ಅನ್ನಸಂಪಾದನೆ, ಸುಖಸಂಪಾದನೆ, ದೇಹರಕ್ಷಣೆ ಪೋಷಣೆ, ಪು.೧೪೫) ಎಂದರ್ಥಮಾಡಿರುವುದು ಆಶ್ಚರ್ಯವನ್ನುಂಟುಮಾಡದೆ ಇರದು.

ಪ್ರತಿಯೊಂದು ಶಾಸ್ತ್ರದಲ್ಲಿಯೂ ಈ ಗ್ರಂಥಕರ್ತರು ಮಾಡಿರುವ ತಪ್ಪುಗಳ ಮೇಲೆ ಬರೆಯುತ್ತ ಹೋದರೆ ಈ ವಿಮರ್ಶೆಯು ಒಹಳವಾಗಿ ಬೆಳೆಯುವುದರಿಂದ ಕೆಲವನ್ನು ಮಾತ್ರ ಸೂಚಿಸುವೆವು. "ಕುಟುಂಬ ವ್ಯವಸ್ಥೆಯು ಮುಖ್ಯವಾಗಿ ರಾಜಕೀಯ ಹಾಗು ಆರ್ಥಿಕತತ್ವಗಳಿಂದ ಒಡಗೂಡಿದ ಸಂಘಟನೆಯು" (ಪು. ೨೦). 'ಈಜಿಪ್ತಿನ ಮೊದಲನೆ ಮನೆತನವು ಕ್ರಿ.ಪೂ. ೫೦೦೦ ರಲ್ಲಿ ಸ್ಥಾಪಿತವಾಯಿತು' (ಪು. ೨೭). "ಪ್ರಾಚೀನ ಭಾರತದ ಜ್ಞಾನಸುಧಾರಣೆ ಆರ್ಯೇತರರು ಮಾಡಿದರೇ ವಿನಾ ಆರ್ಯರಲ್ಲ . . . ಸಿಂಧುಸಂಸ್ಕೃತಿ ಆರ್ಯರದಂತು ಅಲ್ಲವೇ ಅಲ್ಲ" (ಪು. ೩೭). "ಶಾಂಕರ ವೇದಾಂತದಲ್ಲಿ ಮೂರು ಪ್ರಮಾಣ" (ಪು. ೯೪). "ಇತಿಹಾಸಗಳನ್ನು ಬರೆಯುವಾಗ ಪ್ರತ್ಯಕ್ಷ ಹಾಗು ಅನುಮಾನಗಳು ನಿರುಪಯೋಗಿ" (ಪು. ೯೬). "ಜಗತ್ತಿನ ಒಗಟು ಯಾರಿಗೂ ಒಡೆದಿಲ್ಲ" (ಪು. ೧೧೦). "ಕಕೇಶಿಯನ್ ಜನ ಸಮುದಾಯ ಮಾಂಗೋಲಾಯ್ಡ್ ಜನರ ಒಂದು ವಿಭಾಗ" (ಪು. ೧೯೫). "ಜ್ಞಾನಸಂವರ್ಧನದ ಮುಖ್ಯಭಾರವು ಯಾವ ಬ್ರಾಹ್ಮಣ ವರ್ಗ ಅಥವಾ ಪುರೋಹಿತ ವರ್ಗದ ಮೇಲೆ ಇರುವದೋ ಅಂಥ ಸಮಾಜವು ಅಡ್ಡಹಾದಿ ಹಿಡಿದು ಅಧೋಗತಿ ಗಿಳಿಯುತ್ತದೆ" (ಪು. ೨೨೭). ಇತ್ಯಾದಿ. ಇದಲ್ಲದೆ "ಬಾಯಝೂನ್ಸಿಯಮ" (Byzantium), (ಪು. ೫೭). ದಯಾರಾಮ ಸಾಹಾಜಿ (Dayaram Sāhni), ಎಂಪಿಡಾಕ್ಲಿಝು (Empedocles), ಸರ ಚಂದ್ರಶೇಖರ ರಮಣ (ಪು. ೬೬). ಇತ್ಯಾದಿ ವಿಚಿತ್ರ ಪದಗಳು ಕಂಡುಬರುವವು. ಗ್ರಂಥಕರ್ತರ ಸ್ವಾಭಿಪ್ರಾಯಗಳನ್ನು ಒಂದೆಡೆ ಬಿಟ್ಟು, ಇವರು ಅತ್ಯಂತ ಶ್ರಮದಿಂದ ಪಾಶ್ಚಾತ್ಯ ವಿಜ್ಞಾನ ತತ್ತ್ವಗಳನ್ನು ಸಂಗ್ರಹಿಸಿದುದಕ್ಕಾಗಿಯೂ ಕನ್ನಡದಲ್ಲಿ ಇಂತಹ ಅಪೂರ್ವವಾದ ಗ್ರಂಥವನ್ನು ಬರೆದು ಕನ್ನಡಿಗರ ಮುಂದೆ ಇಟ್ಟುದಕ್ಕಾಗಿಯೂ ಅನುವಾದಕರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುವೆವು.

ಎಸ್. ಶ್ರೀಕಂಠಶಾಸ್ತ್ರೀ.

ಸಾದರ ಸ್ವೀಕಾರ

೧. ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ (ಅಧ್ಯಾಯಾಃ ೧-೯) of Srimad Ananda Theertha, with English translation of the original text and notes from the unpublished commentary of Sri Vadirajaswami thereon—by Mr. B. Gururaja Rao, B.A., B.L., Demy 8vo; pp. vii+269. Price, Rs. 2.

೨. **Tiloya-Pannatti**—by Yativṛshabha, Part I. Editor, Dr. A. N. Upadhye, M.A., D.Litt. Publisher, Sri Jaina Siddhanta Bhavana, Arrah, 1941. Royal 8vo; pp. 2+120. Price, 12 As.

೩. ಗೀತಾಗಾಂಭೀರ್ಯ ಎಂಬ ಶ್ರೀ ಕೃಷ್ಣನ ಸಮಾಜಶಾಸ್ತ್ರ—ಬರೆದವರು: "ಶ್ರೀರಂಗ"; ಪ್ರಕಾಶಕರು: ರಂಗಮಂಗ ಪ್ರಕಾಶನ, ಧಾರವಾಡ; ಮೊದಲ ಮುದ್ರಣ, ೧೯೪೧; ಡೆ. ಅ. ೧೨+೨೪೮+೨೪; ಬೆಲೆ, ಸಾದಾ ಪ್ರತಿ ರೂ. ೩. ಕ್ಯಾಲಿಕೊ ಪ್ರತಿ ೩-೮-೦.

೪. ತಕ್ಕಡಿ (ವ್ಯಾಪಾರ-ವಿಜ್ಞಾನ)—ತೂಗಿದವರು: ಶ್ರೀ ಎಚ್. ಎಸ್. ಪಾಟೀಲ, ಎಂ.ಎ., ಬಿ.ಕಾಂ., ಬಾಂಬೆ; ಮಿಂಚಿನ ಬಳ್ಳಿಯ ನಾಲ್ಕನೆಯ ವರ್ಷದ ೩ನೆಯ ಕುಡಿ; ಕ್ರೌ. ಅ. ೧೮+೧೬೫; ಬೆಲೆ, ರೂ. ೧-೪-೦.

೫. ಮಧುವನ—ಸಂಪುಟ ೩, ಸಂಚಿ ೧-೨; ಶಿವಮೊಗ್ಗ ಗೌರ್ನಮೆಂಟು ಹೈ ಸ್ಕೂಲಿನ ತ್ರೈಮಾಸಿಕ ಪತ್ರಿಕೆ; ರಾಯಲ್, ಪುಟ ೩೦; ವಾರ್ಷಿಕ ಚಂದಾ, ವಿದ್ಯಾರ್ಥಿಗಳಿಗೆ ೮ ಆಣೆ. ಇತರರಿಗೆ ೧೨ ಆಣೆ.

೬. ಸಮಸ್ತ ಭಾರತಸಾರ—ಬರೆದವರು: ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರು, ಮಂಗಳೂರು; ಕ್ರೌ. ಅ. ೬+೨೭೫· ಬೆಲೆ, ೨ ರೂಪಾಯಿ.

೭. ಗೀತಾದರ್ಶ (೧ರಿಂದ ೬ನೆಯ ಅಧ್ಯಾಯದ ವರೆಗೆ)—ಉಡುಪಿ ಸಂಸ್ಥಾನದ ಶ್ರೀ ಶಿರೂರು ಮಠದ ಶ್ರೀ ೧೦೮ ಶ್ರೀಮಲ್ಲಕ್ಷ್ಮೀಂದ್ರತೀರ್ಥ ಶ್ರೀ ಪಾದಂಗಳವರಿಂದ ವಿರಚಿತವಾದುದು; ಪ್ರಕಾಶಕರು: ಶ್ರೀ ಎಂ. ಆರ್. ರಾವ್, ಎಂ.ಎ., ಉಡುಪಿ; ಕ್ರೌ. ಅ. ೧೦೭; ಭಕ್ತಜ್ಞಾನೋದಯವೇ ಬೆಲೆ.

೮. ಶ್ರೀರಂಗ ಜೀವನಸಾಹಸ—ಬರೆದವರು: ಶ್ರೀ ನೆರಂಗ, ರಂಗಮಂಗ ಪ್ರಕಾಶನ, ಧಾರವಾಡ; ಕ್ರೌ. ಅ. ೧೬+೨೦೦; ಬೆಲೆ, ರೂ. ೧-೪-೦.

ವಸ್ತುಕೋಶ

ಈ ಸಾರಿಯ ಕ್ರಿಸ್‌ಮಸ್ ರಜದಲ್ಲಿ ಕನ್ನಡದ ಉತ್ಸವಗಳ ಸೂರೆ! ಮೊದಲು ಲಕ್ಷ್ಮೇಶ್ವರದಲ್ಲಿ ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಆದಿ ಪಂಪಮಹಾಕವಿಯ ಆದಿಪುರಾಣದ ಸಹಸ್ರಾಬ್ದಿಕ ಮಹೋತ್ಸವ; ಅನಂತರ ಧಾರವಾಡ ನಗರದಲ್ಲಿ ಶ್ರೀಮಂತ ಬಸವಪ್ರಭು ರಾಜಾ ಲಖಮನಗೌಡ ಸರದೇಸಾಯಿ ವಂಟಮುರಿ, ಓ. ಬಿ. ಇ. ಅವರ ಆರಂಭದಿಂದ ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವ; ಮೂರನೆಯದಾಗಿ, ಹೈದರಾಬಾದಿನಲ್ಲಿ ಇಪ್ಪತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ. ಈ ಸಮ್ಮೇಳನಕ್ಕೆ ಅಧ್ಯಕ್ಷನನ್ನಾಗಿ "ಪ್ರಬುದ್ಧ ಕರ್ಣಾಟಕ"ದ ಸಂಪಾದಕನಾದ ನನ್ನನ್ನು ಆರಿಸಿ ನಿಲ್ಲಿಸಿ ನನ್ನ ಅಲ್ಪಸೇವೆಯನ್ನು ಕೈಕೊಂಡದ್ದಾಗಿ ನಾನು ಈ ಮೂಲಕ ಕನ್ನಡಿಗ ಮಹಾಜನರನ್ನು ವಂದಿಸುತ್ತೇನೆ.

ಕನ್ನಡದ ಮೂರು ಉತ್ಸವಗಳು

ಈ ಮೇಲೆಕಂಡ ಸಮಾರಂಭಗಳ ನಡೆವಳಿಕೆಗಳೂ, ಭಾಷಣಗಳೂ ಅಚ್ಚಾಗಿ ಪುಸ್ತಕ ರೂಪದಲ್ಲಿಯೂ ಪತ್ರಿಕೆಗಳಲ್ಲಿಯೂ ಬಂದಿವೆ. ಆದ್ದರಿಂದ ಅವುಗಳನ್ನು ಇಲ್ಲಿ ಕೊಡಬೇಕಾಗಿಲ್ಲ.

ನನ್ನ ಅಧ್ಯಕ್ಷಭಾಷಣದಲ್ಲಿ ನಾನು "ಇಂದಿನ ಜನಜೀವನದಲ್ಲಿ ಕನ್ನಡ"ದ ಸ್ಥಾನಸಂಬಂಧಗಳನ್ನು ಕುರಿತು ನನ್ನ ಅನುಭವಕ್ಕೆ ಬಂದ ಕೆಲವು ಅಂಶಗಳನ್ನು ಅರಿಕೆಮಾಡಿಕೊಂಡಿದ್ದೇನೆ. ಅವುಗಳಲ್ಲಿ ಭಾಷಾ ಸಮಸ್ಯೆಯು ಮುಖ್ಯವಾದದ್ದು. ವಿದ್ಯಾವಂತನಾಗಿ ತನ್ನ ನಾಡಿಗೆ ಪ್ರಯೋಜನವಾಗಬೇಕೆಂಬ ಪ್ರತಿಯೊಬ್ಬನೂ ಮೂರು ಭಾಷೆಗಳನ್ನಾದರೂ ಕಡ್ಡಾಯವಾಗಿ ಕಲಿಯಬೇಕು—೧. ಮಾತೃಭಾಷೆ, ೨. ಪ್ರಾಂತಭಾಷೆ, ಅಥವಾ (ಮಾತೃಭಾಷೆಯೂ ಪ್ರಾಂತಭಾಷೆಯೂ ಒಂದೇ ಆಗಿದ್ದರೆ) ಸಂಸ್ಕೃತ, ೩. ಇಂಗ್ಲೀಷ್. ಮಿಕ್ಕ ಭಾಷೆಗಳು, ವ್ಯವಹಾರಕ್ಕೆ ಮಾತ್ರ ಬೇಕಾಗಿದ್ದರೆ, ಅವು ಬೇಕಾಗಿದ್ದವರಿಗೆ ವ್ಯವಹಾರ ಮಾಡುತ್ತ ಬರುತ್ತವೆ; ಬರದೆ ಇದ್ದರೆ ಕಲಿತುಕೊಳ್ಳಬೇಕು. ಇಷ್ಟಕ್ಕೋಸ್ಕರ ಅವಕ್ಕೆ ಶಿಕ್ಷಣದಲ್ಲಿ ಕಡ್ಡಾಯವಾದ ಸ್ಥಾನ ಬೇಕಿಲ್ಲ; ಸಾಹಿತ್ಯ ಸಂಪತ್ತಿನಿಂದ ವ್ಯಾಸಂಗಕ್ಕೆ ಬೇಕಾಗಿದ್ದರೆ, ಅವುಗಳು ಐಚ್ಛಿಕವಾಗಿ ಶಿಕ್ಷಣಕ್ರಮದಲ್ಲಿ ಸ್ಥಾನಪಡೆಯಬೇಕು. ಇಂಗ್ಲಿಷಿಗೆ ಈಗ ಇರುವ ಸ್ಥಾನವನ್ನು ಇಳಿಸಿ, ಬೇಕಾದರೆ ಐಚ್ಛಿಕ ವಿಷಯಗಳ ಸಂಖ್ಯೆಯನ್ನೋ

ಪ್ರಮಾಣವನ್ನೋ ತಗ್ಗಿಸಿ, ಇದನ್ನು ಸಾಧಿಸಿಕೊಳ್ಳಬೇಕು; ಕನ್ನಡದ ವ್ಯಾಸಂಗ ಇನ್ನೂ ವಿಸ್ತಾರವಾಗಬೇಕು—ಎಂಬುದು ಮುಖ್ಯಸಾರಾಂಶ.

ನನ್ನ ಆ ಭಾಷಣದಲ್ಲಿ ಸಂಸ್ಕೃತ ಹಿಂದಿಗಳ ವಿಚಾರವಾಗಿ ಸಂಕುಚಿತ ಭಾವನೆಯಿದೆ ಎಂಬುದು ಕೆಲವರ ಆಕ್ಷೇಪಣೆ. ಕನ್ನಡ ನಾಡಿನಲ್ಲಿದ್ದೂ ಅರೆಗನ್ನಡಿಗರಾಗಿ ಕನ್ನಡವನ್ನು ಆಗ್ರಾ ಅಲಹಾಬಾದುಗಳಿಂದ ನೋಡುವವರಿಗೆ ಹೀಗೆನ್ನಿಸುವುದು ಸಹಜ. ಇಂಥವರಿಗೆ ಕನ್ನಡದಲ್ಲಿ ಅಭಿಮಾನವಿದ್ದರೆ, ಇತರ ಭಾಷೆಗಳಲ್ಲಿ ಅದಕ್ಕಿಂತ ಹೆಚ್ಚಿನ ಅಭಿಮಾನವಿರುತ್ತದೆ.

ಸಂಸ್ಕೃತದ ವಿಚಾರದಲ್ಲಿ ನನಗೆ ಇರುವ ಗೌರವವು ಮಿಕ್ಕ ಯಾರದಕ್ಕಿಂತ ಏನೂ ಕಡಮೆಯದಲ್ಲ; ರಾಷ್ಟ್ರಭಾಷೆಯೊಂದು ಬೇಕಾದರೆ ಅದೇ ಏಕಾಗಬಾರದೆಂದು ನಾನು ಕೇಳಿದ್ದೇನೆ. ಆದರೆ ಅದು ಸ್ವಭಾಷೆಯೇ ಅನ್ಯಭಾಷೆಯೇ? ಹೇಗೆ ಸ್ವಭಾಷೆಯಲ್ಲ, ಹೇಗೆ ಅನ್ಯಭಾಷೆಯೆಂಬುದನ್ನು ಚರ್ಚಿಸಿದ್ದೇನೆ. ಅದರ ಉಪಕಾರವನ್ನು ನೆನೆದಿದ್ದೇನೆ, ಕೋರಿದ್ದೇನೆ; ಕನಸು ಮನಸಿನಲ್ಲಿಯೂ ಅದು ಹೋದರೆ ಹೋಗಲಿ ಎಂದುಕೊಂಡಿಲ್ಲ. ನನ್ನ ಸೂಚನೆಯ ಪ್ರಕಾರ ಸಂಸ್ಕೃತವನ್ನು ಕಾಲೇಜುಗಳಲ್ಲಿ ಈಗಿಗಿಂತ ಹೆಚ್ಚು ಜನರು ಓದಬೇಕಾಗುತ್ತದೆ, ಇನ್ನೂ ಚೆನ್ನಾಗಿ ಓದಬೇಕಾಗುತ್ತದೆ. ಮೈಸೂರು ಬೆಂಗಳೂರುಗಳಲ್ಲಿ ಕನ್ನಡ ಮಾತೃಭಾಷೆಯಾಗಿ ಉಳ್ಳ ವಿದ್ಯಾರ್ಥಿಗಳೆಲ್ಲಾ ಕನ್ನಡದ ಜೊತೆಗೆ ಅದನ್ನೂ ಓದಿ ಬೆಂಬಲಪಡೆಯುವಂತಾಗುತ್ತದೆ. ಸಂಸ್ಕೃತವನ್ನು ಓದುತ್ತಿರುವವರಲ್ಲಿ ಬಹುಜನ ಕನ್ನಡವನ್ನೂ ಓದುವಂತಾಗುತ್ತದೆ. (ಮಿಕ್ಕ ಭಾಷಾ ಪ್ರಾಂತಗಳವರೂ ಇದರ ತತ್ವವನ್ನು ಒಪ್ಪಿದರೆ ಈಗಿಗಿಂತಲೂ ಸಾವಿರಾರು ಜನ ಹೆಚ್ಚಾಗಿ ಸಂಸ್ಕೃತವನ್ನು ಓದುವಂತಾದೀತು.) ಇವೆರಡರ ಸಹಾಯದಿಂದ ಇಂಡಿಯ ದೇಶದ ಯಾವ ಔತ್ತರೇಯ ಅಥವಾ ದಾಕ್ಷಿಣಾತ್ಯ ಭಾಷೆಯನ್ನಾದರೂ ಸ್ವಪ್ರಯತ್ನದಿಂದಲೇ ಕಲಿಯಬಹುದು.

ಇನ್ನು ಹಿಂದಿಯ ವಿಚಾರ; ಅದರ ಹೆದರಿಕೆ ನನಗೆ ಇದ್ದೇ ಇದೆ; ಹೆಚ್ಚಾಗುತ್ತಿದೆ; ಆದ್ದರಿಂದ ಅದನ್ನು ಮುಚ್ಚುಮರೆ ಇಲ್ಲದೆ ವ್ಯಕ್ತಪಡಿಸಿದ್ದೇನೆ. ಹಿಂದಿ ಭಾಷೆಯು ಸಾರ್ವತ್ರಿಕವಾದರೆ ಕನ್ನಡಕ್ಕೆ ಈಗ ಹೈದರಾಬಾದಿನಲ್ಲಿರುವ ಶೋಚನೀಯ ಸ್ಥಿತಿಯು ಮಿಕ್ಕೆಡೆಗಳಲ್ಲೂ ಬರುತ್ತದೆ. ಅಲ್ಲಿ ಅದರ ಗತಿಯೇನಾಗಿದೆಯೆಂಬುದನ್ನು ಈ ಸಾರಿಯ ಸಮ್ಮೇಳನದ ಸ್ವಾಗತಾಧ್ಯಕ್ಷರ ಭಾಷಣದಿಂದಲೂ, ಶ್ರೀಮಾನ್ ಕಪಟರಾಳ ಕೃಷ್ಣರಾಯರ "ನಮ್ಮ ನಾಡ ನುಡಿಯ ಇತಿಹಾಸ"ದಿಂದಲೂ ಶ್ರೀಮಾನ್ ಲಿಂಗಸುಗೂರ್ ವಿಠಲರಾವ್ ಮತ್ತು ಆರ್. ಜಿ. ಜಾಗಿರದಾರರ "ಹೈದರಾಬಾದ್ ಕರ್ನಾಟಕ" ಎಂಬ ಗ್ರಂಥದಿಂದಲೂ ತಿಳಿದುಕೊಳ್ಳಬಹುದು.

ಎ. ಆರ್. ಕೃ.

ಕನ್ನಡನಾಡಿನ ಪ್ರಮುಖ ವಾರಪತ್ರಿಕೆಯಾಗಿದ್ದ 'ವೃತ್ತಾಂತ ಪತ್ರಿಕೆ'ಯು ಇದೇ ಜನವರಿ ತಿಂಗಳಿಂದ ನಿಂತುಹೋಯಿತೆಂದು ತಿಳಿದು ವಿಷಾದಿಸುತ್ತೇವೆ.

ವೃತ್ತಾಂತ ಪತ್ರಿಕೆ

ಅದು ಸುಮಾರು ೫೫ ವರ್ಷಗಳು ಸೇವೆ ಸಲ್ಲಿಸಿ ಸರ್ಕಾರಿಯ ಅಧಿಕಾರಿಯಂತೆ ವಿಶ್ರಾಂತಿ ಪಡೆಯಿತೆನ್ನ ಬಹುದು; ಆದರೆ ಅದು ವಿಶ್ರಾಂತಿ ಪಡೆದು ಅದೃಶ್ಯವಾಯಿತು; ಕನ್ನಡ ಪತ್ರಿಕೆಗಳಿಗೆ ಇದು ಬಹು ದೀರ್ಘವಾದ ಆಯುಸ್ಸು; ಇಷ್ಟೊಂದು ದಿನ ಅದನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಬಂದ ಅದರ ಚಾಲಕರು ಧನ್ಯರು. ವೃತ್ತಾಂತ ಪತ್ರಿಕೆಯು ಹೊರಗಿನ ವರ್ತಮಾನಗಳ ಜೊತೆಗೆ ಮೈಸೂರು ಸಂಸ್ಥಾನದ ನಾನಾ ಪ್ರದೇಶಗಳಿಂದ ವರ್ತಮಾನಗಳನ್ನು ತರಿಸಿ ಸಂಗ್ರಹಿಸಿ ಪ್ರಕಟಿಸುತ್ತಿತ್ತು; ಅದರ ಚಂದಾ ಸುಲಭವಾಗಿ ಜನಸಾಮಾನ್ಯದ ಶಕ್ತಿಗೆ ಮೀರದಂತಿತ್ತು; ಎಲ್ಲಕ್ಕೂ ಮೇಲಾಗಿ ಅದು ತನ್ನ ಅಭಿಪ್ರಾಯವನ್ನು ಉದ್ವೇಗವಿಲ್ಲದೆ, ಶಾಂತವಾಗಿ, ಮಧ್ಯಸ್ಥಮಾರ್ಗವನ್ನು ಹಿಡಿದು, ಸ್ಪಷ್ಟವಾದ ತಿಳಿಯಾದ ಕನ್ನಡದಲ್ಲಿ ವ್ಯಕ್ತಗೊಳಿಸುತ್ತಿತ್ತು. ಇಂಥ ಪತ್ರಿಕೆಯು ಯುದ್ಧಕ್ಕೆ ಆಹುತಿಯಾಯಿತೆಂದು ತಿಳಿದು ಕನ್ನಡಿಗರಿಗೆ, ಅದರಲ್ಲಿಯೂ ಮೈಸೂರು ನಗರದವರಿಗೆ, ಆಗಿರುವ ಸಂತಾಪವನ್ನು ಈ ಮೂಲಕ ವ್ಯಕ್ತಪಡಿಸುತ್ತೇವೆ.

ಪ್ರಾಚ್ಯ ಲೇಖನಾವಳಿ

A.B.O.R.I.—Parts i–ii (8–10–1941).

1. 'The Kalika Purana'—By R. C. HAZRA.
2. 'Ravana': A Study in the Light of the New Psychology—By P. R. CHIDAMBARA IYER.
3. 'Some Ancient Indian Tribes'—By B. C. LAW.
   (Anupas, Kilkatas, Tukharas, Kukuras, Ugras)
4. 'Andhra Mahabharatamu'—By N. C. NARASIMHA ACHARYA.
5. 'Hāsya as a Rasa in Sanskrit Rhetoric and Literature'—By HAR DUTT SHARMA.

The Poona Orientalist.—April and July, 1941.

1. 'Similar Social and Legal Institutions in Ancient India and Ancient Mexico'—By LUDWIK STERNBACH.
2. 'Katyayana—By K. MADHAVA KRISHNA SHARMA.

Q.J.M.S.—January—April, 1941. (Sri Krishnaraja Memorial Number).

1. 'The History of Mysore'—BY S. KRISHNASWAMY IYENGAR.
2. 'The Kannada Movement'—BY B. M. SRIKANTIA.
3. 'Archæology in Mysore'—BY B. VENKOBA RAO.
4. 'Evolution of the Gandabherunda'—BY S. SRIKANTASASTRI.

[The winged sun-disc associated with the tree of life has evolved through the ages to the present form . . . This symbol has stood for peace, prosperity and plenty.]

Journal of Indian History, Vol. XX, Pt. I (Adril, 1941).

Is the Uttara Kanda of Valmiki Ramayana Un-historical?—By M. V. KIBE.

[Uttarakanda is a necessary portion of Ramayana and cannot be an interpolation. The facts contained therein are supported by archæological excavations.]

Journal of the United Provinces Historical Society.—Dec., 1940.

The Origin of Chandragupta Maurya—By H. C. SETH.

[Chandragupta was in no way connected with Murā. Chandragupta originally belonged not to Magadha but to Gandhara Region.]

New Indian Antiquary.—March, 1941.

The Epoch of the Gupta Era—by K. G. SANKAR.

[273 A.C. and not 320 A.C. was the true starting point of the Gupta Era; it fits in with astronomical data given in many Gupta inscriptions.]

New Indian Antiquary.—April, 1941.

The Hun Invasion of Hindusthan—By K. G. SANKAR.

[In Gupta year 136; defeated by Skanda Gupta. Toramana and Mihirakula were not Huns but Parthians or Kshatriyas)

I.H.Q.—June, 1941.

Buddhist Evidence for the Early Existence of Drama—By O. H. DE A. WIJESEKERA:

[Origin goes back at least by a century. Keith's theory: about 2nd century B.C.]

Calcutta Review.—October, 1940.

'History of the Bengali Novel'—By SRIKUMAR BANERJEE.

Indian Linguistics.—1940–41, Part I.

1. 'Onomatopoeia and Its Use in Middle Indo-Aryan (Jain Literature)'—By KALIPADA MITRA.
2. 'The Etymology of the Name Radha'—By SUKUMAR SEN.

(According to traditional derivation Rādhā means 'One who worships or placates'; but once it must have been a Common Noun and meant 'beloved, a desired woman'. Cf Vedic *Rādhas* (neut.) = a desired object, a gift and the masculine cognate in Avestan *raoa* = lover, a desired husband)

ಭಾರತಿ (ತೆಲುಗು)—ಡಿಸೆಂಬರ್, ೧೯೪೧.

ಆಟವಮು, ತೆಲುಗು—ವಾನಿ ಪ್ರಾಚೀನತ—ಶ್ರೀ ಕೋರಾಡ ರಾಮ ಕೃಷ್ಣಯ್ಯ.

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ

ಜಿಲೆ: ಕ್ಯಾಲಿಕೊ ರೂ. ೧—೪—೦, ಸಾದಾ ೧೨ ಆಣೆ.

ಪ್ರಧಾನಸಂಪಾದಕರು : ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

೧. ಹರಿಶ್ಚಂದ್ರಕಾವ್ಯ ಸಂಗ್ರಹ (ತೃತೀಯ ಮುದ್ರಣ)—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ಕರ್ಣಾಟಕ ಕಾದಂಬರೀ ಸಂಗ್ರಹ—ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ಪ್ರಭುಲಿಂಗಲೀಲೆಯ ಸಂಗ್ರಹ (ಸಚಿತ್ರ)—ಸಂಪಾದಕರು: ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. ಸಾಕ್ರೆಟೀಸನ ಕೊನೆಯ ದಿನಗಳು (ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫. ಶ್ರೀರಾಮಕೃಷ್ಣ ಪರಮಹಂಸ—ಲೇಖಕರು: ಕೆ. ವಿ. ಪುಟ್ಟಪ್ಪ, ಎಂ.ಎ.

೬. ರವೀಂದ್ರನಾಥ ಠಾಕೂರರು (ಸಚಿತ್ರ)—ಲೇಖಕರು: ಮಾಸ್ತಿ ವೆಂಕಟೇಶ ಐಯಂಗಾರ್, ಎಂ.ಎ.

೭. ಆರೋಗ್ಯ ಅದರ ಜ್ಞಾನ ಮತ್ತು ಸಾಧನ (ಸಚಿತ್ರ)—ಲೇಖಕರು: ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್.ಎಸ್‌ಸಿ.

೮. ಪಂಪರಾಮಾಯಣ ಸಂಗ್ರಹ—ಸಂಪಾದಕರು: ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. ಹಣ ಪ್ರಪಂಚ—ಲೇಖಕರು: ಎ. ಸೀತಾರಾಮಯ್ಯ, ಎಂ.ಎ.

೧೦. ಸಂಸ್ಕೃತ ನಾಟಕ—ಲೇಖಕರು: ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. ಜೀವವಿಜ್ಞಾನ—ಲೇಖಕರು: ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. ಹಿಂದೂದರ್ಶನಸಾರ—ಲೇಖಕರು: ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು.

೧೩. ರಾಜನೀತಿ—ಲೇಖಕರು: ಎಚ್. ಕೃಷ್ಣರಾವ್, ಎಂ.ಎ.

೧೪. ಹದಿಬದೆಯ ಧರ್ಮ—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. ಪುರಾಣನಾಮ ಚೂಡಾಮಣಿ—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ, ಬೆಲೆ, ರೂ.೩-೪-೦

೧೬. ಯಶೋಧರ ಚರಿತ್ರೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

ಕ್ಯೂರೇಟರ್, ಓರಿಯೆಂಟಲ್ ಲೈಬ್ರೆರಿ, ಮೈಸೂರು.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

ಕುಮಾರವ್ಯಾಸ ಪ್ರಶಸ್ತಿ

ಬೆಲೆ, ಕ್ಯಾಲಿಕೊ ಪ್ರತಿ ರೂ. ೨-೮-೦ ; ಸಾದಾ ಪ್ರತಿ ರೂ. ೨-೦-೦

ದೊರೆಯುವ ಸ್ಥಳ:

ಕರ್ಣಾಟಕ ಸಂಘ,
ಸೆಂಟ್ರಲ್ ಕಾಲೇಜು, ಬೆಂಗಳೂರು

ಕರ್ಣಾಟಕ ಸಂಘ,
ಶಿವಮೊಗ್ಗ

ಕಿರಿಯಕಾಣಿಕೆ (ಎರಡನೆಯ ಮುದ್ರಣ)—ಕ್ಯಾಲಿಕೊ ಪ್ರತಿ ರೂ. ೧- ೮-೦
ತಳಿರು (ಪ್ರತಿಗಳು ಮುಗಿದಿವೆ)—

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ. ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)—
ಕ್ಯಾಲಿಕೊ ಪ್ರತಿ ರೂ. ೧-೮-೦

ಸಾವಿನ ಸಮಸ್ಯೆ (ಶ್ರೀ. ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦-೧೨-೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಹೊಸ ಪ್ರಕಟನೆ

ಮೈಸೂರ ಮಲ್ಲಿಗೆ (ಸಚಿತ್ರ ಕವನ ಸಂಗ್ರಹ)—ಶ್ರೀ ಕೆ. ಎಸ್ ನರಸಿಂಹ ಸ್ವಾಮಿ ಅವರಿಂದ. ಬೆಲೆ, ಕ್ಯಾಲಿಕೊ ಪ್ರತಿ ರೂ. ೧-೪-೦ ; ಸಾದಾ ಪ್ರತಿ ರೂ. ೦-೧೨-೦

ಕಾರ್ಯದರ್ಶಿ, ಕರ್ಣಾಟಕ ಸಂಘ, ಮಹಾರಾಜರವರ ಕಾಲೇಜು,
ಮೈಸೂರು


ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

ಬೆಲೆ : ಸಾಧಾರಣ ಪ್ರತಿಗೆ ೨ ಆಣೆ; ಉತ್ತಮ ಪ್ರತಿಗೆ ೩ ಆಣೆ

೧. ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.
೧೩. ಮದುವೆಯ ಇತಿಹಾಸ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕನ್ನಡ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರಿ, ಎಂ.ಎ.
೨೪. ವಿಡಂಬನ—ಎಸ್. ವಿ ರಂಗಣ್ಣ, ಎಂ.ಎ.
೨೫. ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ಪಿ. ಪರಮೇಶ್ವರಭಟ್ಟ, ಎಂ.ಎ.

ವಾರ್ಷಿಕ ಚಂದಾ—ಸಾಧಾರಣ ಪ್ರತಿ ರೂ. ೧—೪—೦ ಉತ್ತಮ ಪ್ರತಿ ರೂ. ೨—೦—೦

ಸಂಪಾದಕ, ಪ್ರಚಾರ ಪುಸ್ತಕಮಾಲೆ, ಯೂನಿವರ್ಸಿಟಿ ಆಫೀಸು, ಮೈಸೂರು.



"ಮೈಸೂರ ಮಲ್ಲಿಗೆ"

(ಅನುಬಂಧ)



ಕೆ. ಎಸ್. ನರಸಿಂಹಸ್ವಾಮಿ

ವಿಜ್ಞಾಪನೆ

ಶ್ರೀಮಾನ್ ಕೆ. ಎಸ್. ನರಸಿಂಹಸ್ವಾಮಿಯವರು ಪ್ರಬುದ್ಧ ಕರ್ಣಾಟಕದ ಪಾಠಕರಿಗೆ ಆಗಲೇ ಪರಿಚಿತರಾಗಿದ್ದಾರೆ. ಅವರ ಕವಿತೆಗಳು ಮಲ್ಲಿಗೆಯರಳುಗಳಂತೆ ಮನೋಹರವಾಗಿರುತ್ತವೆ. ಅವರು ಬರೆದಿರುವ ಕವನಗಳಲ್ಲಿ ಕೆಲವುಮಾತ್ರ ಇದುವರೆಗೆ ಆಗಾಗ ಕನ್ನಡ ಪತ್ರಿಕೆಗಳಲ್ಲಿ ಅಚ್ಚಾಗಿವೆ. ಅವನ್ನೂ ಮಿಕ್ಕವುಗಳನ್ನೂ ಸೇರಿಸಿ ಸದ್ಯದಲ್ಲಿಯೇ ಅವರು ಪುಸ್ತಕರೂಪವಾಗಿ ಪ್ರಕಟಿಸುವವರಾಗಿದ್ದಾರೆ. ಇನ್ನೂ ಪ್ರಕಾಶಕ್ಕೆ ಬರದಿರುವ ಕೆಲವು ಕವನಗಳನ್ನು ಹೀಗೆ ಇಲ್ಲಿ ಅನುಬಂಧವಾಗಿ ಪ್ರಕಟಿಸಲು ಅನುಮತಿ ಕೊಟ್ಟದ್ದಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿದ್ದೇವೆ.

ಚಿತ್ರಕಾರರು ಬೆಂಗಳೂರಿನ ಶ್ರೀಮಾನ್ ಎಂ. ಎಸ್. ಪುರುಷೋತ್ತಮರಾಯರು. ಇಷ್ಟು ಸುಂದರವಾಗಿ ಚಿತ್ರಗಳನ್ನು ಬರೆದುಕೊಟ್ಟಿರುವುದಕ್ಕಾಗಿ ನಾವು ಅವರಿಗೆ ನಮ್ಮ ವಂದನೆಗಳನ್ನು ಸಮರ್ಪಿಸುತ್ತೇವೆ.

ಸಂಪಾದಕ.

ಗೃಹ ಲಕ್ಷ್ಮಿ

ನನ್ನವಳು ನನ್ನೆದೆಯ ಹೊನ್ನಾಡನಾಳುವಳು
ಬೆಳಗುಗೆನ್ನೆಯ ಚೆನ್ನೆ ನನ್ನ ಮಡದಿ;
ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲುವು
ಅವಳೊಮ್ಮೆ ಹೆರಳ ಕೆದರಿ
ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲಿ ಗಿರಿಯ ಮೇಲೆ
ಇಳಿದಂತೆ ಇರುಳ ಮಾಲೆ.

ಕರೆದಾಗ ತೌರುಮನೆ, ನೆನೆದಾಗ ನನ್ನ ಮನೆ—
ಹಳ್ಳಿಯೆರಡರ ಮುದ್ದುಬಳ್ಳಿಯವಳು.
ಮುಚ್ಚುಮರೆಯಿಲ್ಲದೆಯೆ ಅಚ್ಚಮಲ್ಲಿಗೆಯಂತೆ
ಅರಳುತಿಹುದವಳ ಬದುಕು.
ಬಂಗಾರದೊಡವೆಗಳ ಬಯಸಿಲ್ಲ ಮನಸಿನಲಿ
ಬಂಗಾರದಂಥ ಹುಡುಗಿ
ನನ್ನೊಡವೆ, ನನ್ನ ಬೆಡಗಿ.

ಹಸುರುಸೀರೆಯನುಟ್ಟು, ಕೆಂಪುಬಳೆಗಳ ತೊಟ್ಟು
ತುಂಬುದನಿಯಲಿ ಕರೆವಳೆನ್ನ ಚೆಲುವೆ;
ಹಣೆಯನಾಳುವುದವಳ ಕುಂಕುಮದ ನಿಡುಬಟ್ಟು
ಲಕ್ಷ್ಮಿಯವಳೆನ್ನ ಮನೆಗೆ.
ನಮಗಿದುವೆ ಸೊಗಸು ಬದುಕಿನ ಬಣ್ಣಗಳ ಸಂತೆ
ನಮಗಿಲ್ಲ ನೂರು ಚಿಂತೆ;
ನಾವು ಗಂಧರ್ವರಂತೆ.

ತೆಂಗುಗರಿಗಳ ಮೇಲೆ ತುಂಬುಚಂದಿರ ಬಂದು
ಬೆಳ್ಳಿಹಸುಗಳ ಹಾಲ ಕರೆಯುವಂದು

ಅಂಗಳದ ನಡುವೆ ಬೃಂದಾವನದ ಬಳಿ ನಿಂದು
ಹಾಡುವೆವು ಸಿರಿಯ ಕಂಡು.
ತಾರೆಗಳ ಮೀಟುವೆವು, ಚಂದಿರನ ದಾಟುವೆವು
ಒಲುಮೆಯೊಳಗೊಂದು ನಾವು :
ನಮಗಿಲ್ಲ ನೋವು, ಸಾವು.

ಹಳ್ಳಿಯ ಚೆಲುವೆಗೆ

ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ |
ಅದಕೆ ನಮ್ಮಿಬ್ಬರಿಗೆ ನಾಳೆಯೇ ಮದುವೆ ||

ಬೆಳ್ಳಬೆಳ್ಳಗೆ ತೆಳ್ಳತೆಳ್ಳಗಿಹೆ ನೀನು ;
ಬೇಟೆಗಾರನ ಬಿಲ್ಲಿನಂತಿರುವೆ ನೀನು.
ಒತ್ತಾಗಿ ಕಪ್ಪಾಗಿ ಬೆಳೆದಿರುವ ಹುಬ್ಬು
ಪಾರಿವಾಳದ ಕಣ್ಗೆ ನೆರಳನಿತ್ತಿಹುದು.
ನವಿಲೂರಿನೊಳಗೆಲ್ಲ . . . .

ಉಟ್ಟ ರೇಸಿಮೆಗಿಂತ ನಿನ್ನ ಮೈ ನುಣುಪು ;
ಬೆಟ್ಟದರಗಿಳಿಗಿಂತ ನಿನ್ನ ನುಡಿ ಇಂಪು ;
ತುಂಬುಹರೆಯದ ಹುಡುಗಿ ನೀನೊಲುಮೆಗೀಡು ;
ನಂಬಿ ನನ್ನನು ವರಿಸಿ ಸಂತಸದಿ ಬಾಳು.
ನವಿಲೂರಿನೊಳಗೆಲ್ಲ . . . .

ಹಗಲೆಲ್ಲ ದುಡಿಯುವೆನು ಕೆಸರ ಗದ್ದೆಯಲಿ ;
ಶ್ರಮವೆಲ್ಲ ಹೊನ್ನಹುದು ವರ್ಷದಂತ್ಯದಲಿ ;
ನಿನ್ನ ತಟ್ಟೆಯು ತುಂಬ ಅನ್ನ ನೊರೆಹಾಲು ;
ನನ್ನ ನುಡಿಯನು ಕೇಳು ; ನನ್ನೊಡನೆ ಬಾಳು.
ನವಿಲೂರಿನೊಳಗೆಲ್ಲ . . . .

ನಿನ್ನೊಲುಮೆ ತಾರೆಗಳ ಹರಡಿರುವ ಬಾನು ;
ಮುಂಜೆಳಗು ತೆರೆದಿಟ್ಟ ತಾವರೆಯ ಸರಸಿ.
ಪ್ರೀತಿಯೊಂದನೆ ನಿನ್ನ ಕೇಳುವುದು ನಾನು ;
ಮುಂದೆ ಹೋಗೆನ್ನದಿರು ನನ್ನ ಮನದರಸಿ.
ನವಿಲೂರಿನೊಳಗೆಲ್ಲ . . . .

ಬಾರೆ, ನನ್ನ ಶಾರದೆ!

ಮದುವೆಯಾಗಿ ತಿಂಗಳಿಲ್ಲ,
ನೋಡಿರಣ್ಣ ಹೇಗಿದೆ!—
ನಾನು ಕೂಗಿದಾಗಲೆಲ್ಲ
ಬರುವಳೆನ್ನ ಶಾರದೆ!—
ಹಿಂದೆ ಮುಂದೆ ನೋಡದೆ,
ಎದುರುಮಾತನಾಡದೆ.

ಕೋಣೆಯೊಳಗೆ ಬಳೆಯ ಸದ್ದು!—
ನಗುವರತ್ತೆ ಬಿದ್ದು, ಬಿದ್ದು!—
ಸುಮ್ಮನಿರಲು ಮಾವನವರು,
'ಒಳಗೆ ಅಕ್ಕ, ಭಾವನವರು'
ಎಂದು ತುಂಟ ಹುಡುಗನು,
ಗುಟ್ಟ ಬಯಲಿಗೆಳೆವನು!

ಒಂದು ಹೆಣ್ಣಿಗೊಂದು ಗಂಡು
ಹೇಗೊ ಸೇರಿ ಹೊಂದಿಕೊಂಡು,
ಕಾಣದೊಂದು ಕನಸ ಕಂಡು,
ಮಾತಿಗೊಲಿಯದಮೃತವುಂಡು,
ದುಃಖ ಹಗುರವೆನಿಸುತಿರೆ,
ಪ್ರೇಮವೆನಲು ಹಾಸ್ಯವೇ?

ಯಾರು ಕದ್ದು ನುಡಿದರೇನು?
ಊರೆ ಎದ್ದು ಕುಣಿದರೇನು?
ಜನರ ಬಾಯಿಗಿಲ್ಲ ಬೀಗ,—
ಹೃದಯದೊಳಗೆ ಪ್ರೇಮರಾಗ
ಇಂಥ ಕೂಗನಳಿಸಿದೆ,
ಬೆಳಗಿ, ಬದುಕ ಹರಸಿದೆ.

ನನ್ನ ಮಾತು ರಾಮಬಾಣ;
ಬಿಡುವೆನಿದೋ, ಮಹಾತ್ರಾಣ!—
ಗಂಡನೊಡನೆ ಗಂಡನೊಡವೆ
ಬಾಳ ಮೊದಲ ಮೋಹದೊಳಗೆ
ಪಗಡೆಯಾಡಬಾರದೆ,
ನಾನು ನನ್ನ ಶಾರದೆ?

ಬದುಕು ನೆಳಲ ಬಿಸಿಲ ದಾರಿ
ಮಿತ್ತು ಕಳ್ಳ ಬೆಕ್ಕಿನಂತೆ
ಹೊಂಚುತಿಹುದು. ಯಾರ ದಾರಿ-
ಗೆಲ್ಲಿ ಕೊನೆಯೊ! ಇಂದಿನಂತೆ
ನಾಳೆ ಎನ್ನಲಾಗದು,
ಇತ್ತ ಸಿರಿಯು ನಿಲ್ಲದು;
ಮತ್ತೆ ಎಲ್ಲ ದೊರಕದು;—

ಇಂದೆ ಅದಕೆ ಕರೆವುದು
ನನ್ನ ಹುಡುಗಿ ಎಸುವುದು
ಹೂವ ಮುಡಿಸಿ ನಗುವುದು
ಅಪ್ಪಿ ಮುತ್ತನಿಡುವುದು.—
ಬಾರೆ ನನ್ನ ಶಾರದೆ
ಬಾರೆ ಅತ್ತ ನೋಡದೆ!

ತಿಂಗಳಾಯಿತೆ?

ಪಯಣಿಸುವ ವೇಳೆಯಲಿ ಬಂದು ಅಡಿಗೆರಗಿ
ಮುಂದೆ ನಿಂದಳು ನನ್ನ ಕೈಹಿಡಿದ ಹುಡುಗಿ.
ಇನ್ನೆಂದು ಬರುವಿರೆಂದೆನ್ನ ಕೇಳಿದಳು :
ಇನ್ನೊಂದು ತಿಂಗಳಿಗೆ ಎಂದು ಹೇಳಿದೆನು.

ಕೆನ್ನೆ ಕೆಂಪಾಗಿರಲು ಸಂಜೆ ಮುಗಿಲಂತೆ,
ಕಣ್ಣಿರಲು ತಿಳಿಬಾನ ಕಿರುತಾರೆಯಂತೆ,
ವೇಣಿಯಿರಲು ವಸಂತ ಪುಷ್ಪವನದಂತೆ,
ಮನಸು ಬಾರದು ನನಗೆ ಅಡಿಯನಿಡೆ ಮುಂದೆ.

ಅಲ್ಲಲ್ಲಿ ನಿಂದವಳ ನೋಡುತಡಿಗಡಿಗೆ
ತೆರಳಿದೆನು ವಿರಹದಲಿ ನಿಲ್ದಾಣದೆಡೆಗೆ—
ದಾರಿಯಲೆ ಕಂಡೊಬ್ಬ ಹಣ್ಣು ಮಾರುವನು
ಹೊರಟು ಹೋದುದು ಬಂಡಿ ಎಂದು ಹೇಳಿದನು.

ಹಿಂದಿರುಗಿ ಬಂದೆನ್ನ ನೊಂದ ಮಾತಿನಲಿ,
'ತಿಂಗಳಾಯಿತೆ?' ಎಂದಳೆನ್ನ ಹೊಸಹುಡುಗಿ !

—ಗೆ

ನಿನ್ನ ಪ್ರೇಮದ ಪರಿಯ ನಾಸರಿಯೆ ಕನಕಾಂಗಿ
ನಿನ್ನೊಳಿದೆ ನನ್ನ ಮನಸು.
ಹುಣ್ಣಿಮೆಯ ರಾತ್ರಿಯಲಿ ಉಕ್ಕುವುದು ಕಡಲಾಗಿ
ನಿನ್ನೊಲುಮೆ, ನನ್ನ ಕಂಡು.
ಸಾಗರನ ಹೃದಯದಲಿ ರತ್ನಪರ್ವತ ಮಾಲೆ
ಮಿಂಚಿನಲಿ ಮಿಾವುದಂತೆ.
ತೀರದಲಿ ಬಳುಕುವಲೆ ಕಣ್ಣು ಚುಂಬಿಸಿ ಮತ್ತೆ
ಸಾಗುವುದು ಕನಸಿನಂತೆ.
ಅಲೆ ಬಂದು ಕರೆಯುವುದು ನಿನ್ನೊಲುಮೆಯರಮನೆಗೆ
ಒಳಗಡಲ ರತ್ನಪುರಿಗೆ.
ಅಲೆಯಿಡುವ ಮುತ್ತಿನಲೆ ಕಾಣುವುದು ನಿನ್ನೊಲುಮೆ-
ಯೊಳಗುಡಿಯ ಮೂರ್ತಿಮಹಿಮೆ.
ನಿನ್ನ ಪ್ರೇಮದ ಪರಿಯ ನಾಸರಿಯೆ, ಕನಕಾಂಗಿ
ತಾರೆಯಾಗದೆ ಕಾಣುವೀ ಮಿಂಚು, ನಾಳೆ, ಅರ್ಧಾಂಗಿ ?

ನಕ್ಕು ನಗಿಸು

೧

ಒಮ್ಮೆ ನಕ್ಕು ನನ್ನ ನಗಿಸು;
ಬಿಮ್ಮನುತಿಪುದೆನ್ನ ಮನಸು,
ಮುನ್ನಿಲ್ಲದ ಚಿನ್ನಗನಸು
ನಿನ್ನೆ ತಾನೆ ಕೈಗೂಡಿತು.

ತಣ್ಣನೆ ಕಡಲಂತೆ ನಗು,
ಬಣ್ಣದ ಮುಗುಳಂತೆ ನಗು;
ಹುಣ್ಣಿಮೆಯಿರುಳಂತೆ ನಗು;
ನನ್ನೊಲುಮೆಯ ಹೆಣ್ಣೆ ನಗು.

ಅತ್ತು ಸತ್ತುಹೋಹ ಬದುಕ-
ನೆತ್ತಿ ತುಂಬಿ ಜೀವಕಳೆಯ
ಮುತ್ತನಿಟ್ಟು ರೆಪ್ಪೆಯೆತ್ತಿ
ಕಣ್ಣಿನೊಳಗೆ ದೀಪಹಚ್ಚಿ,
ಎದೆಯ ಹೊರೆಯನಿಳಿಸಿ, ಮೇಲೆ
ಬರುವ ನಗುವೆ ಬದುಕ ಬೆಲೆ.
ನಕ್ಕರೆ ನಗಬಲ್ಲುದಿಳೆ.

ಕೆನ್ನೆಕೆನ್ನೆಯೊಂದು ಮಾಡಿ
ನಗುವ ನನ್ನ ನಿನ್ನ ನೋಡಿ
ಕನ್ನಡಿಯಲಿ ಒಂದು ಜೋಡಿ
ನಕ್ಕುಬಿಡಲಿ, ಒಮ್ಮೆ ನಗು.—

ನಕ್ಕುಬಿಡು. ಚಿಕ್ಕಮುತ್ತು
ಸುರಿದುಹೋಗಲಿ;
ಪಕ್ಕನೊಮ್ಮೆ ನಕ್ಕುಬಿಡು,
ಚಿಂತೆ ತೊಲಗಲಿ.

ಕಾಮದಹನ

ಮನದರಸಿ, ನೋಡಲ್ಲಿ ರತ್ನಮಂದಿರಪಾಳಿ
ಕಾಣುತಿಹುದಸ್ತಗಿರಿಯಂಚಿನಲ್ಲಿ.
ಕೇಳುವುದೆ ಆ ಕೂಗು ? ಕಾಣುವುದೆ ಆ ಜ್ವಾಲೆ ?
ಕೆಂಪಿನುರಿಯೆದ್ದಿಹುದು ಸಂಜೆಯಲ್ಲಿ.

ಪಚ್ಚೆಹಸುರಿನ ನಡುವೆ ಅಚ್ಚಗೆಂಪಿನ ಕಾಂತಿ
ತಾಂಡವವನಾಡುತಿದೆ ಕಣಿವೆಯೊಳಗೆ.
'ಎಚ್ಚರಿಕೆ' ಎಂಬ ನುಡಿ ತೇಲುತಿದೆ ಗಾಳಿಯಲಿ
ಹುಣ್ಣಿಮೆಯ ಹಾಡುಗಳ ಹೊನಲ ನಡುವೆ.

ಕಾಮಿನಿಯೆ, ಕೇಳಿಂದು ಬಯಕೆಗಳ ತೌರಿನಲಿ
ಪ್ರೇಮನಗರಿಯಲಿಂದು ಕಾಮದಹನ.
ಕತೆಯ ಕೇಳಿದರುಂಟು ಮುಕ್ತಿ ಭೂಲೋಕದಲಿ ;
ಕಾಮದಹನದ ವಿಷಯ ತುಂಬ ಗಹನ.

ನೇತ್ರಾಗ್ನಿಯಲಿ ಶಿವನು ದಹಿಸಿದನು ಕಾಮನನು,
ಮುತ್ತೈದೆಯಾಗೆಂದು ರತಿಯ ಹರಸಿ.
ಸ್ತೋತ್ರಕ್ಕೆ ಮರುಳಾಗಿ ಮೋಸಹೋದನು ಹರನು
ಕಾಮನೊಳಗರ್ಧವನು ಮಾತ್ರ ಉರಿಸಿ.

ಆ ಅರ್ಧಕಾಮನೇ ರಾಮನನು ಕೆರಳಿಸಿದ ;
ಪಾಂಡವರ ನರಳಿಸಿದ ಕಾಡುಗಳಲಿ.
ಲೋಕದಲಿ ಹೆಣ್ಣುಗಂಡೆಲ್ಲ ಕಾಮನ ಬಳಗ ;
ಅವನದೇ ಆಡಳಿತ ರಾಜ್ಯಗಳಲಿ.

ಶಿವನಾದ ಮೇಲೆ ಶ್ರೀವಿಷ್ಣು ಕೊಲ್ಲುವುದುಂಟೆ ?
ಮನ್ಮಥಗೆ ತನುವಿತ್ತ ತಂದೆಯವನು ;
ಬ್ರಹ್ಮನಿಗೆ ಸೃಷ್ಟಿಯಲಿ ಕೋಲು ಕೈಬಿಡುವುಂಟೆ ?
ಮನ್ಮಥನು ಚಿರಜೀವಿಯಾಗಿರುವನು.

ಅಷ್ಟದಿಕ್ಪಾಲರಿಗೆ ಇಷ್ಟಮಿತ್ರನು ಕಾಮ.
ಇಂದ್ರಲೋಕವೆ ಭೋಗಭೂಮಿಯಲ್ತೆ.
ಹಾರುವುದು ಮನ್ಮಥನ ಬಾವುಟವು ಚಂದಿರನ
ಅಮೃತಶಿಲೆಯರಮನೆಯ ಶಿಖರದೊಳಗೆ.

ದೇವತೆಗಳೆಲ್ಲ ಕೈಬಿಟ್ಟ ಕಾಮನ ಕೊಲೆಗೆ
ಸರಕುರಿಗಳಿಂದಲ್ಲಿ ಸೆರೆಯುತಿಹರು.
ಬೇಡವಾಗಿರುವೆಲ್ಲ ಚಿಂದಿತೊಟ್ಟಿಲಸುರಿಗೆ
ಚಾಚಿಹರು, "ಹೋ!" ಎಂದು ಕೂಗುತಿಹರು.

ಅರ್ಧಾಂಗಿ, ನೋಡಲ್ಲಿ ಕಾಮಹೋಮದ ಧೂಮ
ಕಿಡಿಯ ಸೂಸುವುದಲ್ಲಿ ಮುಗಿಲ ನಡುವೆ.
ಸ್ವರ್ಗದಾ ದಾರಿಯಲಿ ಮಿನುಗುತಿರುವುದು ಪ್ರೇಮ.
ಕಿಡಿಯಲ್ಲ, ಸುಂದರಿಯೆ, ಅದುವೆ ತಾರೆ!

ಚೆಂದುಟಿಯೆ ನಿನ್ನ ಮನೆ, ಮೆಲ್ಲುಲಿಯೆ ನಿನ್ನ ದನಿ
ಮೀನಧ್ವಜನೆ, ನಿನ್ನ ದಾಸರೆಲ್ಲ.
ಮೊದಲು ಕಾಮವೆ ಬರಲಿ; ಕೊನೆಗೆ ಪ್ರೇಮವ ತರಲಿ
ನಿನ್ನಂಥ ಅಭಿಮಾನಿ ದಾತರಿಲ್ಲ.

ಪಗಡೆಯಾಟ

ಆರು ಮೂರೊಂಬತ್ತು—
ಹೋಗಲಿದು ಮನೆಗೆ;
ಗೆಲುವೆನ್ನದೀಹೊತ್ತು;
ಸೋಲೆ ಸರಿ, ನಿಮಗೆ!

ಸುಡಿದ ಗರ ಬೀಳುವುದು—
ಅಚ್ಚರಿಯೆ ಗೆಲುವು?
ಬೇಡದಾಟವ ಮುಗಿಸು;
ಕಾದಿರುವುದೊಲವು.

ಕೆಂಪು ಗೆದ್ದರೆ ಏನು?
ಹಸುರ ಕೊಲೆ ಏಕೆ?—
ತಾರದಿರು ಕೆನ್ನೆಯಸು
ಪತ್ತಿರಕೆ ಜೋಕೆ!

ನಿಮ್ಮ ತುಟಿಗಳಲಿರಲು
ತಾಂಬೂಲ ರಾಗ,
ನನ್ನ ತುಟಿ ಕೆಂಪಾದು-
ದೇಕಿಸಿಯು, ಬೇಗ?

ಮಾವನ ಮನೆಯಲ್ಲಿ

ರಾಯರು ಬಂದರು ಮಾವನ ಮನೆಗೆ
ರಾತ್ರಿಯಾಗಿತ್ತು;
ಹುಣ್ಣಿಮೆ ಹರಸಿದ ಬಾನಿನ ನಡುವೆ
ಚಂದಿರ ಬಂದಿತ್ತು.—ತುಂಬಿದ
ಚಂದಿರ ಬಂದಿತ್ತು.

ಮಾವನ ಮನೆಯಲಿ ಮಲ್ಲಿಗೆ ಹೂಗಳ
ಪರಿಮಳ ತುಂಬಿತ್ತು.
ಬಾಗಿಲ ಬಳಿ ಕಾಲಿಗೆ ಬಿಸಿನೀರಿನ
ತಂಬಿಗೆ ಬಂದಿತ್ತು—ಒಳಗಡೆ
ದೀಪದ ಬೆಳಕಿತ್ತು.

ಘಮಘಮಿಸುವ ಮೃಷ್ಟಾನ್ನದ ಭೋಜನ
ರಾಯರ ಕಾದಿತ್ತು.
ಬೆಳ್ಳಿಯ ಬಟ್ಟಲ ಗಸಗಸೆ ಪಾಯಸ
ರಾಯರ ಕರೆದಿತ್ತು—ಭೂಮಿಗೆ
ಸ್ವರ್ಗವೆ ಇಳಿದಿತ್ತು.

ಚಪ್ಪರಗಾಲಿನ ಮಂಚದ ಮೇಗಡೆ
ಮೆತ್ತನೆ ಹಾಸಿತ್ತು.
ಅಪ್ಪಟ ರೇಸಿಮೆ ದಿಂಬಿನ ಅಂಚಿಗೆ
ಚಿತ್ರದ ಹೂವಿತ್ತು.—ಪದುಮಳು
ಹಾಕಿದ ಹೂವಿತ್ತು.

ಚಿಗುರೆಲೆ ಬಣ್ಣದ ಅಡಕೆಯ ತಂದಳು
ನಾದಿನಿ ನಗುನಗುತ;

ಬಿಸಿಬಿಸಿ ಹಾಲಿನ ಒಟ್ಟಲ ತಂದರು
ಅಕ್ಕರೆಯಲಿ ಮಾವ—ಮಡದಿಯ
ಸದ್ದೇ ಇರಲಿಲ್ಲ.

ಮಡದಿಯ ತಂಗಿಯ ಕರೆದಿಂತೆಂದರು :
'ಅಕ್ಕನ ಕರೆಯಮ್ಮ'.
ಮೆಲುದನಿಯಲಿ ನಾದಿನಿ ಇಂತೆಂದಳು :
'ಪದುಮಳು ಒಳಗಿಲ್ಲ'—ನಕ್ಕಳು.
ರಾಯರು ನಗಲಿಲ್ಲ.

ಏರುತ ಇಳಿಯುತ ಬಂದರು ರಾಯರು
ದೂರದ ಊರಿಂದ.
ಕಣ್ಣಾಸು ಕಡಿದರು ನಿದ್ದೆಯು ಬಾರದು
ಪದುಮಳು ಒಳಗಿಲ್ಲ.—ಪದುಮಳ
ಬಳೆಗಳ ದನಿಯಿಲ್ಲ.

ಬೆಳಗಾಯಿತು ; 'ಸರಿ, ಹೊರಡುವೆ'ನೆಂದರು
ರಾಯರು ಮುಳಿಸಿನಲಿ.
ಒಳಮನೆಯಲಿ 'ನೀರಾಯಿತು !' ಎಂದಳು
ನಾದಿನಿ ರಾಗದಲಿ. 'ಯಾರಿಗೆ ?'
ಎನ್ನಲು ಹರುಷದಲಿ,
ಪದುಮಳು ಬಂದಳು ಹೂವಸು ಮುಡಿಯುತ
ರಾಯರ ಕೋಣೆಯಲಿ.

ಒಬ್ಬಳೇ ಮಗಳು!

ಒಬ್ಬಳೇ ಮಗಳೆಂದು ನೀವೇಕೆ ಕೊರಗುವಿರಿ ?
ಒಬ್ಬಳೇ ಮಡದಿಯೆನಗೆ !—
ಹಬ್ಬದೂಟದ ನಡುವೆ ಕಣ್ಣೀರ ಸುರಿಸದಿರಿ ;
ಸುಮ್ಮನಿರಿ, ಮಾವನವರೇ.

ಮಡದಿಯೊಬ್ಬಳೆ ನನಗೆ ; ಮೂಡುತಿಹುದೆನ್ನೊಲುಮೆ.
ಒಬ್ಬಳನೆ ಕರೆವಿರೇಕೆ ?
ಮುಡಿದ ಹೂವನು ಮುಟ್ಟಿ, "ಕಳುಹುವಿರ ಒಬ್ಬಳನೆ ?"
ಎಂದೇಕೊ ನಗುವಳಾಕೆ !

ಬೆಳೆದ ಹೆಣ್ಣಿನ ಸೆರೆಯು ಬಿಡಿಸಿದಿರಿ ಸುಖವಾಗಿ ;
ಸಿಕ್ಕಿದೆನು ಅಗ್ಗದಳಿಯ.
ವರುಷವಾಯಿತು ನಿಮ್ಮ ಮಗಳೆನ್ನ ರತಿಯಾಗಿ ;
ಬೆಳಕಾಗಿ ಪ್ರೇಮನಗರ.

ಹುಟ್ಟಿದುದು ಬೆಟ್ಟದಲಿ ಹರಿಯುವುದು ಬಯಲಿನಲಿ
ತುಂಬುಹೊಳೆ ನಾಡ ನಗಿಸಿ.
ಕೊಟ್ಟುಗೆದ್ದಿರಿ ನೀವು ; ಇನ್ನೆಲ್ಲ ನನಗಿರಲಿ.
ತುಂಬುಹೂ ನಿಮ್ಮ ಹುಡುಗಿ.

ಒಬ್ಬರೆದುರಿಗೆ ನಿಂತು ತಲೆಯೆತ್ತಿ ನೋಡುವಳೆ,
ನುಡಿಯುವಳೆ ನಿಮ್ಮ ಮಗಳು !
ಹಬ್ಬದಲಿ 'ತೌರೂರ ಕನಸಾಯಿತೆ'ನ್ನುವಳೆ !—
ಮುಚ್ಚುಮೊಗ್ಗವಳ ಮನಸು.

ಹೆಣ್ಣುಮಕ್ಕಳಿಗೆಲ್ಲ ತೌರೂರು ಬಲುದೂರ
ತೌರೆನಗೆ ನನ್ನ ಗೌರಿ.
ತನ್ನ ಪ್ರೇಮದ ನಡುವೆ ನನ್ನ ದೇವರ ತರುವ
ತೇರವಳು ನನ್ನ ಗೌರಿ.



“ ಹುಟ್ಟಿದುದು ಬೆಟ್ಟದಲಿ ಹರಿಯುವುದು ಬಯಲಿನಲಿ ತುಂಬುಹೊಳೆ ನಾಡ ನಗಿಸಿ.”

ಹೋಗಿಬರುವುದಕೆಲ್ಲ ತೌರುಮನೆ ಬಲುಸೊಗಸು,
ಆರದಿರಲದರ ಬೆಳಕು.
ಹಾಗೆಂದು ಹಗಲೆಲ್ಲ ಹಿಂಡಿದರೆ ಕಳುಹೆಂದು
ನಿಮ್ಮೂರ ದಾರಿ ಬಳಸು.

ಅತ್ತ ನೀವೆಳೆಯುವಿರಿ; ಇತ್ತ ನಾನೆಳೆಯುವೆನು,
ನಲುಗುವಳು ನಡುವೆ ಹುಡುಗಿ.
ಒಬ್ಬಳೇ ಸೊಸೆಯೆಂದು,—ಸೊಸೆಯಲ್ಲ—ಮಗಳೆಂದು
ದುಡಿಯುತಿಹಳೆನ್ನ ತಾಯಿ.

ಒಬ್ಬಳೇ ಮಗಳೆಂದು ನೀವೇಕೆ ಕುದಿಯುವಿರಿ?
ಒಬ್ಬಳೇ ಮಗಳು ಸಾಕು.
ಒಬ್ಬಳೇ ಮಡದಿಯಿಹಳೆನಗಚ್ಚು ಮೆಚ್ಚಾಗಿ;
ಏನಿಲ್ಲ, ಏನು ಬೇಕು!

ಇಬ್ಬರೂ ಬನ್ನಿರೆಂದೆಂದು ಕರೆದಿರಿ ನೀವು?
ಒಬ್ಬಳೇ ಸಾಕೆ ನಿಮಗೆ?
ಅಳಿಯನಿಂದಲೆ ಮಗಳು ಎಂದೆಲ್ಲ ಹೇಳುವರು.—
ಅಳಿಯನೇ ಬೇಡ ನಿಮಗೆ!

ಬಿಸಿಲ ಕೋಲು

ಬಾಗಿಲನು ತೆರೆದು ಬಂದರೆ ಅವರು, ಮೀನಾಕ್ಷಿ ?
ಬಂದವರು ಮಾವನವರೇ ?
ಬೆನ್ನು ಹೆಂಚನು ಬಗಿದು ಬಿಸಿಲಕೋಲಂತಿಳಿದು
ಬಂದವರು ಮಾವನವರೇ ?

'ತಾತ ಬಂದರು' ಎಂಬ ಹೊಸ ಮಾತನಾಡುವಳು,
ಮೀನಾಕ್ಷಿ, ನಿನ್ನ ಮಗಳು.
ನಾಗಮಣಿ, ಕಣ್ಣಮಣಿ, ನದಿಯ ಉಪನದಿಯವಳು
ತಾಯ ಕಡೆ ನನ್ನ ಮಗಳು.

ತಂದೆ ಬಂದಿಹರೆಂದು ಬಿಸಿಯಡಿಗೆ ಕಾದಿಹುದು ;
ಬೆಳ್ಳಿಯೆಲೆ, ಬಣ್ಣದಡಕೆ.
ಇನ್ನೇನು ಬಾಗಿಲಿಗೆ ರಥ ಬಂದು ನಿಲ್ಲುವುದು.
ಸಲ್ಲುವುದು ತೌರ ಬಯಕೆ.

ಬರೆದಿಹರು ; ಬಂದಿಹರು ; ಬಿಟ್ಟೆಲ್ಲಿ ಹೋಗುವರು ?
ಕಂದನಿಗೆ ಹೂವ ಮುಡಿಸು.
'ಹೋಗಿ ಬರುವೆನು' ಎಂದು ಅಡಿಗೆರಗಿ ಕೊಲ್ಲದಿರು ;
ಹೋಗೆನ್ನದೆನ್ನ ಮನಸು.

ಕೂಡಿದರೆ ನೊರೆಹಾಲು ; ಅಗಲಿದರೆ ಕೆನೆಮೊಸರು—
ಒಲುಮೆಯೊಳಗೆಲ್ಲ ಸೊಗಸು.
ನೋಡಿ ನಗುವುದಕಿಂತ, ನೆನೆಯುವುದೆ ಬಲುಸೊಗಸು ;
ಒಲುಮೆಯದು ಹೊನ್ನ ಬೆಳಸು.

ಹೋಗಿಬಾ ಬಂಗಾರ, ಸಾಕಿನಿತೆ ಶೃಂಗಾರ,
ಹೋಗಿಬಾ ಅವರ ಮನೆಗೆ.
ಹೋಗಿ ಬಾ ಕರೆದಾಗ ; ಬೇಗ ಬಾ ನೆನೆದಾಗ
ನಿಲ್ಲದೆಯೆ ನಿನ್ನ ಮನೆಗೆ.

ಅಕ್ಕರೆಯ ದನಿಯಾಕೆ

ಹೊಸಿಲ ಬಳಿ ಬಂದೊಡನೆ ಬಾಗಿಲನು ತೆರೆವಾಕೆ,
 'ಹೆಸರೇನು ?' ಎನುವಾಕೆ ಮನೆಯೊಳಿಲ್ಲ.
ಬಿಸಿಲೊಳಗೆ, ನೆಳಲೊಳಗೆ ಪಕ್ಕದಲಿ ನಗುವಾಕೆ,
 ಹಸುರು ಕುಪ್ಪುಸದಾಕೆ ಮನೆಯೊಳಿಲ್ಲ.

ಅಕ್ಕರೆಯ ದನಿಯಾಕೆ ಸಕ್ಕರೆಯ ನುಡಿಯಾಕೆ
 ಸಿಕ್ಕಿದರೆ ಬಿಡದಾಕೆ ಮನೆಯೊಳಿಲ್ಲ.
ಚಿಕ್ಕಮನೆಯೊಳಗೆನ್ನ ಪಕ್ಕದಲಿ ನಗುವಾಕೆ
 ಉಕ್ಕುವೊಲ್ಮೆಯ ಮಡದಿ ಮನೆಯೊಳಿಲ್ಲ.
'ರಾಯರೇ' ಎಂದೆನ್ನ ಪ್ರೀತಿಯಲಿ ಕರೆವಾಕೆ,
 ರಾತ್ರಿಯಲಿ ವೀಣೆಯನು ನುಡಿಸುವಾಕೆ,
ರಾಗದಲಿ ಚಂದಿರನ ತಾರೆಗಳ ತರುವಾಕೆ,
 ರಾಸಿಹೂಗಳ ಹೆಣೆದು ಮುಡಿಯುವಾಕೆ,

ಎಂದು ಬರುವಳೊ, ಕಾಣೆ, ನನ್ನೆದೆಯನಾಳುವಾಕೆ,
ಅಂದು ಹಸೆಮಣೆಯ ಮೇಲೆನ್ನೊಡನೆ ಬೆಳಗಿದಾಕೆ,
ನಡಗರದಿ ನನ್ನೊಡನೆ ಒಂದಾಗಿ ಸಾಗುವಾಕೆ,
ನಡುಗಡಲ ತೆರೆಗಳಲಿ ನರ್ತಿಸುವ ರತ್ನನೌಕೆ!

ಹೂವಾಡಿಗಿತ್ತಿ

‘ ಹೂವು ಬೇಕೇ ’ ಎಂದು ಮುಂಬಾಗಿಲಿಗೆ ಬಂದು
ಕೇಳಿದಳು ನಗುನಗುತ ಹೂವಿನವಳು.
ಬುಟ್ಟಿಯಲಿ ನೂರಾರು ಮಲ್ಲಿಗೆಯ ದಂಡೆಗಳು
ನಗುವ ಚೆಲ್ಲಿದುವೆನ್ನ ಮುಖವ ಕಂಡು.


ಅಲ್ಲಲ್ಲಿ ಮಲ್ಲಿಗೆಯ ನಡುನಡುವೆ ಸಂಪಗೆಯ
ಪಚ್ಚೆತೆನೆ ಪಾದರಿಯ ಅಚ್ಚಗಂಪು.
‘ ತಾಯಿಗಿದ ತಂದಿಹೆನು ತುಂಬುಹೂವಿನ ಸರವ
ತೋರಿ ಬನ್ನಿರಿ ಒಳಗೆ ’ ಎಂದಳವಳು.

ಹೂವೆಲ್ಲ ನೋಡಿದುವು ಹಂಬಲಿನ ಕಣ್ದೆರೆದು
ಮನದೊಳಗೆ ಕೂಡಿದುದು ಬೇವು-ಬೆಲ್ಲ ;
ಮಾಲೆಯಲಿ ನಾನೊಂದು ಹೂವಾಗಿ ನೋಡಿದೆನು
ಮನೆಯೊಳಗೆ ಹೂಮುಡಿವ ಮಡದಿಯಿಲ್ಲ !

ಬುಟ್ಟಿಯಲಿ ಹೂವಿತ್ತು ; ತೊಟ್ಟಿಲಲಿ ಮಗುವಿತ್ತು
ಬೆಟ್ಟಸೀಮೆಯ ಸುಖದ ತೌರಿನಲ್ಲಿ.
ಗುಟ್ಟನರಿತೆನು ಎಂಬ ಭಾವದೆಳೆನಗುವಿತ್ತು
ದಿಟ್ಟಹುಡುಗಿಯ ತುಂಟ ಕಣ್ಣಿನಲ್ಲಿ.

ಬಲುದೂರ ತೌರಿನಲಿ ನನ್ನ ಪ್ರೇಮದ ಗಂಗೆ
ತೂಗಿದಳು ಕಂದನನು ಲಾಲಿಯೆಂದು.
ಹೂಗನಸ ತಿಳಿದೆದ್ದು ಹೇಳಿದೆನು, ಎಲೆ ಹೆಣ್ಣೆ,
ಪೂಜೆಯಾದುದು, ಹೂವು ಬೇಡವೆಂದು.

ಹೂಮಾಲೆಗಳ ರತ್ನದುಯ್ಯಾಲೆಯೊಳಗಿರಿಸಿ
ಮೆರಸಿದಳು ಮನದೊಲವ ಹೂವಿನವಳು ;
ಹೂಬಲೆಯ ನಡುವೆ ನಾನಿರಲೊಂದು ಮೀನಾಗಿ
ದೂರದಲಿ ಕೂಗಿದಳು, ‘ ಹೂವು ಹೂವೆ ’ಂದು.



" ಬೃಂದಾವನದ ಹಣೆಗೆ ಕುಂಕುಮುವನಿಡುವಾಗ ಕಾಣುವುವು
ಶ್ರೀತುಲಸಿ ಕೃಷ್ಣತುಲಸಿ."

ಹೆಂಡತಿಯ ಕಾಗದ

ತೌರ ಸುಖದೊಳಗೆನ್ನ ಮರೆತಿಹಳು ಎನ್ನದಿರಿ
ನಿಮ್ಮ ಪ್ರೇಮವ ನೀವೆ ಒರೆಯನಿಟ್ಟು.
ನಿಮ್ಮ ನೆನಸೇ ನನ್ನ ಹಿಂಡುವುದು ಹಗಲಿನಲಿ
ಇರುಳಿನಲಿ ಕಾಣುವುದು ನಿಮ್ಮ ಕನಸು.

ಬೃಂದಾವನದ ಹಣೆಗೆ ಕುಂಕುಮನಿಡುವಾಗ
ಕಾಣುವುವು ಶ್ರೀತುಲಸಿ ಕೃಷ್ಣತುಲಸಿ;
ನೀಲಾಂಬರದ ನಡುವೆ ಚಂದಿರನು ಬಂದಾಗ
ರೋಹಿಣಿಯು ಬೆಳಗುವಳು ಸನ್ನಿಧಿಯಲಿ.

ತಾಯಡಿಗೆ ರುಚಿಯೆಂದು ನಾನಿಲ್ಲಿ ಕುಳಿತಿಲ್ಲ;
ಇನ್ನು ತಂಗಿಯ ಮದುವೆ ತಿಂಗಳಿಹುದು.
ತೌರ ಪಂಜರದೊಳಗೆ ಸೆರೆಯಾದ ಗಿಣಿಯಲ್ಲ.—
ಐದು ತಿಂಗಳ ಕಂದ ನಗುತಲಿಹುದು.

ಕಣ್ಣೆದುರಿಗಿರುವಾಗ ನಿಮ್ಮ ಮನವುಕ್ಕುವುದು
ಕ್ಷೀರಸಾಗರದಂತೆ ಶಾಂತಿಯೊಳಗೆ.
ಕಣ್ಣ ಮರೆಯಾದಾಗ ಹೂವಲ್ಲ ಹಾವೆಂದು
ಬಿರುನುಡಿಯನಾಡುವುದು ನಿಮಗೆ ತರವೆ?

ಚಿತ್ರದುರ್ಗದ ರೈಲು ನಿತ್ಯವೂ ಓಡೋಡಿ
ಮೈಸೂರ ಸೇರುವುದ ನಾನು ಬಲ್ಲೆ.
ನಾಳೆ ಮಂಗಳವಾರ; ಮಾರನೆಯ ದಿನ ನವಮಿ;—
ಆಮೇಲೆ ನಿಲ್ಲುವೆನೆ ನಾನು ಇಲ್ಲೆ?

ಸೋಬಲಕ್ಕಿಯನಿಟ್ಟು ಹೂಮುಡಿಸಿ ಕಳುಹುವರು;
ಕಂದನಿಗೆ ಹೊಸ ಜರಿಯ ಲಂಗವುಡಿಸಿ.
ತಂದೆಯುವರೇ ಬಂದು ತಪ್ಪಾಯಿತೆನ್ನುವರು.—
ಹೆಣ್ಣ ಹೆತ್ತವರನ್ನು ದೂರಬೇಡಿ.

ಮರೆತಿಹಳು ಎನ್ನದಿರಿ. ಕಣ್ಮರೆಯ ತೋಟದಲಿ
ಅಚ್ಚಮಲ್ಲಿಗೆಯರಳು ಬಿರಿಯುತಿಹುದು.
ಬಂದು ಬಿಡುವೆನು ಬೇಗ. ಮುನಿಯದಿರಿ ಕೊರಗದಿರಿ.
ಚುಚ್ಚದಿರಿ ಮೊನೆಯಾದ ಮಾತನೆಸೆದು.

ತಂಗಿಯ ಮಾತು

ಚಂದ್ರಿಕೆಯಲೆಸ್ನ ಮಗು ಮಿಂದು ಬಂದಿಹುದಣ್ಣ
ಎಂದಳಾಸಂದದಲಿ ನನ್ನ ತಂಗಿ.
ಮಲ್ಲಿಗೆಯ ಬಳ್ಳಿಯಲಿ ಮಲ್ಲಿಗೆಯ ಹೂಬಿಡುವು-
ದೇನಃ ಸೋಜಿಗವಲ್ಲ ಎಂದೆ ನಾನು.

ಬಣ್ಣದಲಿ ನನ್ನಂತೆ; ಮುಖವೆಲ್ಲ ಅವರಂತೆ
ಎಂದಳುತ್ಸಾಹದಲಿ ನನ್ನ ತಂಗಿ.
ಹೊರಗಿದ್ದ ಭಾವನವರಿದ ಕೇಳಿ, 'ಇದರ ಮುಖ
ಯಾರಂತೆ? ಮತ್ತೊಮ್ಮೆ!' ಎಂದರಾಗ.

ರಾಮಬಂಟ

ಕಿಟಕಿಯೊಳಗೆ ನಿಂದು ನಕ್ಕು,
ಕರೆಯುತಿಹನು ರಾಮಬಂಟ;
ಮನೆಯೊಳೆಲ್ಲ ಹರಿದು, ಹೊಕ್ಕು
ಹುರಿಯುತಿಹನು ರಾಮಬಂಟ.

ಜಾಣನವನು; ಬೆಳ್ಳಿಕುಳ್ಳ;
ಬಾಯಲೆರಡೆ ಪುಟ್ಟ ಹಲ್ಲು!
ಚೂರು ಮಾತು; ಮುದ್ದು ಕಳ್ಳ
ಅಲೆಯುತಿಹನು ಇಲ್ಲು, ಅಲ್ಲು!

ನನ್ನ ಕಂದರವನಿಗಾಸೆ;
ಕೇಕೆ ಹಾಕಿ ನಗುವನವನು;
ನಮ್ಮ ದೊಡ್ಡ ಬೀದಿಯೊಳಗೆ
ರತ್ನದಂಥ ಕಂದನವನು.

ಪುಟ್ಟ ಅಂಗಿಯೊಂದ ತೊಟ್ಟು,
ಹಣೆಗೆ ಕಪ್ಪು ಬಟ್ಟನಿಟ್ಟು,
ಹೊಳೆವ ದೊಡ್ಡ ಕಣ್ಣ ಬಿಟ್ಟು,
ಪುಟ್ಟ ಪುಟ್ಟ ಹೆಜ್ಜೆಯಿಟ್ಟು,

ಬೀದಿಯೊಳಗೆ ಬೆಳ್ಳಿ ಕಂದ
ಚಂದ್ರನಂತೆ ಬರುವನು;
'ಮಾವ' ಎಂದು ಪ್ರೀತಿಯಿಂದ
ಬೆರಳ ತೋರಿ ಕರೆವನು.

ಓಡಿಬಂದ ಮಗುವನೆತ್ತಿ
'ನನ್ನ ಕಂದ' ಎನುವೆನು;
ತೊಳೆದ ಕಣ್ಗೆ ಮುತ್ತನೊತ್ತಿ
'ಜಾಣ' ಎಂದು ಕರೆವೆನು.

ಹಾಲಿಸಂತೆ ಅವನ ಮನಸು;
ದುಂಡುಮುತ್ತಿಸಂತೆ ನುಡಿ;
ಅವನ ಕೇಕೆ ನನ್ನ ಕನಸು,
ದೇವರವನು, ನಾನು ಗುಡಿ.

ಎರಡು ಮನೆಗೆ ಅವನು ಕಂದ;
ಸೊಗಸುಗಾರ ಕಣ್ಣಿಗಂದ;
ಅವನ ತುಂಬಿದೊಲುಮೆಯಿಂದ
ನನ್ನ ಬದುಕಿನೆಲ್ಲ ಚೆಂದ.

ಕತ್ತಲಲ್ಲಿ ಪುಟ್ಟ ಸೊಡಲು
ಮನೆಯ ಬೆಳಕುಮಾಡಿದೆ;
ಪಿತ್ತಲಲ್ಲಿ ಮೊಲ್ಲೆಯರಳು
ಸುಖದ ಕಂಪ ಹರಡಿದೆ.

ರಾಮುಬಂಟ ಬಹಳ ತುಂಟ;
ಮಕ್ಕಳೆಲ್ಲ ಹಾಗೆಯೇ!—
ಅವನು ನನ್ನ ಪುಟ್ಟ ನಂಟ;
ಮಕ್ಕಳೆಲ್ಲ ದೇವರೆ!—

ಮನ್ನಿಸಿರುವೆನು, ಬಾರ!

ಚಂದ್ರಿಕೆಯ ಸೋಂಕಿನಾನಂದದಲಿ ಮೈಮರೆತು
ತಂಬೆಲರ ಜಡೆಗೆ ಹೂಗನಸ ಮುಡಿದು,
ಚೆಲುವನಾಂತಿಳೆಯುರಸಿ ಮೌನದಲಿ ಮಲಗಿರಲು
ಹಗಲಿನಾಯಾಸವನು ಕಳೆಯಲೆಂದು;

ಗಂಭೀರ ರಜನಿಯಲಿ ನಿದ್ದೆಯಲಿ ಮುಳುಗಿರುವ
ನನ್ನ ಮನದೊಳಗಿಳಿದು ಮಿಂಚನೆಸೆದು,
ಯಾವುದೋ ಮಾಯೆಯಲಿ, ನನ್ನೆದೆಗೆ ನಾಟಿರುವ
ನಿನ್ನ ಬಾಣವ ನೀನೆ ಹಿರಿದು, ಕರೆದು;

ಏಳದಿಪ್ಪೆ,—ನವಿಗನಸ ತಿಳಿಗೊಳನ ತಾವರೆಯ
ದಳದಲುದಕವ ತಂದು ಕಣ್ಣಲೆರೆದು,
'ಪಾಪಿಗಳ, ಪಾಪಿಯನು ಮನ್ನಿಸಿರಿ' ಎಂದಳುತ
ಅಡಿಗಡಿಗೆ ಹಿಂದಾದ ಕತೆಯ ನೆನೆದು;

ತಂಬೆಲರು ಬೀಸುತಿರೆ ಮೊಗ್ಗುಮೊಗ್ಗನು ಮುಟ್ಟಿ
ಮುತ್ತನಿಡುವಂದದಲಿ ಮುತ್ತನಿಟ್ಟು,
ಎಳೆಬಳ್ಳಿ ಬಾಳೆಯನು ಬಿಗಿದಪ್ಪುವಂದದಲಿ
ನೀನೆನ್ನ ಬಿಗಿದಪ್ಪಿ, ಹಿಗ್ಗಿ ಸುರಿದು,

ಇಂದೇನು ಮನಸಿನಲಿ ಎಡೆಯಿಲ್ಲದವಳೇಕೆ
ಕನಸಿನಲಿ ಬಂದಿರುವೆ ಸರವ ಪಿಡಿದು?
'ಅಂತರಂಗವನರಿತು ನಡೆಯುವೆನು' ಎಂದೇಕೆ
ನಿಂದಿರುವೆ ಕಂಬನಿಯಲಡಿಯ ತೊಳೆದು?

ಕರಗುವುದು ಗಿರಿಯ ಹಿಮ, ಬಿಗಿದ ಮೊಗ್ಗುಗಳೆಲ್ಲ
ಬಿರಿಯುವುವು ಬಸಬಸದಿ, ಬೆಳಕು ಬರಲು;
ಗಳಿಗೆಯೊಳಗುರಿಯುವುದು ಕಿಡಿಯುದಿಸೆ ಕಾಡೆಲ್ಲ;
ಕರಗುವುದು ಮನುಜನೆದೆಯೊಲುಮೆಗೆನಲು.

ಕರಗಿರುವುದೆನ್ನೆದೆಯು ; ಮನ್ನಿಸಿರುವೆನು ಬಾರ !
ಮುಗಿದುದಿಬ್ಬರ ನರಕವಾಸವಿಂದು !
ಹತ್ತಿರಕೆ ನೀ ಬಾರ, ಮುತ್ತನೊತ್ತುವೆ ಬಾರ,
ಮನ್ನಿಸಿರುವೆನು ಬಾರ, ನಿನ್ನನಿಂದು !

ಕೆರೆಯ ದಾರಿಯಲಿ

ಕೆರೆಯ ದಾರಿಯಲಿ ನೀರ ತರುತಿರಲು
ಹೆಸರ ಕೇಳಿದನು ಗೊಲ್ಲನು;
ಹಸುರು ಜೇಲಿಯಲಿ ಎಸೆದು ಚಾಟಿಯನು
'ಒಸಗೆಯಾಯಿತೆ?' ಎಂದನು.

"ಕೇಳು ಚೆನ್ನಿಗನೆ, ನೂರು ಬೆಳ್ಳಿಯನು
ಚೆಲ್ಲಿ ಕೇಳಿದನು ಮುದುಕನು;
ಮಾರಿಕೊಂಡಿತು,—ಕೇರಿಕೊಂಡಿತು—
ನನ್ನ ಬಳಗವೇ ಸನ್ನನು.

ತಾಯಿಯಿಲ್ಲವು; ತಂದೆ ಮುದುಕನಿಗೆ
ಕೊಂದು ಕೊಟ್ಟನೀ ಮಗಳನು.
ಅಣ್ಣತಮ್ಮದಿರ ಸುದ್ದಿಯೇತಕೆ?
ತಂಗಿ ಜವನೂರ ತಿಂಗಳು!

ನಾನು ಮೆಚ್ಚಿದಾ ಚೆಲುವ ನಿಂಗನನು
ಬೇರೆ ಹೆಣ್ಣು ಕೈಹಿಡಿದಳು.
ಒಲುಮೆಯಳಿಯಿತು,—ಹರುಷವಿಳಿಯಿತು—
ಸಾವು ಸಾಗಿಸದು" ಎಂದೆನು.

'ನಿನ್ನ ನೋಟವೇ ಚೆಂದ, ದಾರಿಗಳೆ,
ನಿನ್ನ ನುಡಿಗಳೋ ಕಿಡಿಗಳು;
ಮನಸೊ ಮಲ್ಲಿಗೆಯ ಮುಗುಳು: ಆದರೇ-
ನೆಲ್ಲ ದೇವರಿಗೆ ಮೀಸಲು.

ನೀರ ತರುತಿರುವ ನಿನ್ನ ನೋಡಿದೆನು,
ಚೆಲುವು ಕಣ್ಮೀನ ಹಿಡಿಯಿತು;
ಇಂಥ ಚೆಲುವೆಗಿನ್ನೆಂಥ ಚೆನ್ನಿಗನು
ಜೋಡಿಯೆಂದೇನೊ ನುಡಿಯಿತು.

ಆದಕೆ ಕೇಳಿದೆನು; ಮುದುಕ ಗಂಡನೆ?
ಸಾಕು, ನಿಲ್ಲಿಸಾ ಕತೆಯನು
ನಿನಗೆ ನೆಮ್ಮದಿಯು ಇಲ್ಲವಾಯಿತೆ!
ತೆರಳು, ತೆರಳುವೆನು' ಎಂದನು.

ಸೀತೆಯ ಪುಣ್ಯ

ರಾವಣನ ಕೊಂದು, ಸೀತೆಯ ತಂದು, ನಗುನಗುತ ತಾಯಿಗೆರಗಿದ ರಾಮಚಂದ್ರ.
ಕೋದಂಡದಂತೆ ಬಾಗಿದನು; ಕೈಮುಗಿದಾಗ, ಉಂಗುರದ ಮಾಣಿಕ್ಯ ಕಿರಣ
ಮೂಡಿ, ಮುಳುಗಿತು ಲೋಕಮಾತೆ ಸೀತಾಮಣಿಯ ಮಾಂಗಲ್ಯ ಮಾಲೆಯೊಳಗೆ.
ಕೌಸಲ್ಯೆ ಹರಸಿದಳು ತನ್ನ ಕರುಳಿನ ಮುಗುಳ, ನೀರಿಳಿಯೆ ಕಣ್ಣಿನೊಳಗೆ:—
'ಕಾಡ ಮರೆಯಿರಿ ಇನ್ನು. ರಾಜ್ಯವಾಳಿರಿ ನನ್ನ ಮುದಿಗಣ್ಣು ತುಂಬಿ, ಬನ್ನಿ'.
ಮೂಲೋಕದೊಡೆಯ ಶ್ರೀರಾಮಚಂದ್ರನ ವರಿಸಿ, ಕಾಡಿನಲಿ ಕೂಡಿ ತಿರುಗಿ,
ಭೂಲೋಕದೊಳಗೆಲ್ಲ ದುಃಖಗಳನನುಭವಿಸಿ, ಎರಡಲ್ಲ ಒಂದು ಎನಿಸಿ
ರಣಭೂಮಿಯಲಿ ರಕ್ತನದಿಯೊಳಗೆ ನಡೆತಂದು, ರುದ್ರನಿಗೆ ಹಬ್ಬವುಣಿಸಿ,
ಪತಿಭಕ್ತಿಯಿಂದಗ್ನಿಕುಂಡದಲಿ ನೆರೆ ಮಿಂದು ಬಂದವಳ ಸೊಸೆಯ ಹರಸಿ,
ಕೌಸಲ್ಯೆ ಕಣ್ತುಂಬ ನೋಡಿದಳು. ಬಿಸಿಯುಸಿರು ಬೀಸಿತ್ತು ಜಾನಕಿಯ ಮುಖದ ಮೇಲೆ—
ಅಂದು ಗಂಗಾನದಿಯ ನೀರ ಮುತ್ತುಗಳೆಲ್ಲ ಕೆನ್ನೆಯನು ಸೋಂಕಿದಂತಾದುದಾಗ.—
ತೌರೂರು, ತಾಯ್ತಂದೆ, ತಾಯಡಿಗೆ ತನಗಿಲ್ಲ; ದೊರೆಮಗಳು, ದೊರೆಯ ಮಡದಿ.
ಅತ್ತೆಮಾವಂದಿರನು ಸುತ್ತಿ ಸೇವಿಸಲಿಲ್ಲ, ತುದಿಗಾಲನೊತ್ತಲಿಲ್ಲ.
ಕೈಹಿಡಿದ ಗಂಡನಿಗೆ ವನವಾಸಭೋಗ, ತಾನುಟ್ಟಿಹುದು ನಾರ ಸೀರೆ.
ಜನಮಂದಿಗೆಲ್ಲ ಭೂಲೋಕ ಸ್ವರ್ಗದ ಬೀದಿ; ಕಾಡೊಂದೆ ತನಗೆ ನಾಡು.
ರಾಮಚಂದ್ರನ ಹೃದಯನಂದನದ ಚಂದ್ರಿಕೆಯ ಮಲ್ಲಿಗೆಯ ಮಾಲೆ ಸೀತೆ.
ರಾಘವನ ಜಾನಕಿಯ ಪ್ರೇಮಲತೆ ಮೈತುಂಬಿ ಹೂಬಿಟ್ಟಿದೆಲ್ಲಿ? ವನದಲ್ಲಿ.
ಕಾಡಿನಲಿ ಮೂಡಿದಾ ಪ್ರೇಮ ಫಲಿಸುವುದೇನು ಸಾಕೇತ ರತ್ನಪುರಿಯಲ್ಲಿ?
ವನವಾಸದನುಭವದ ಸುಖವ ಕಂಡಳು ಸೀತೆ, ರಾಘವನ ನೆಳಲ ಹಿಡಿದು;
ಹುಟ್ಟಿದರು ಲವಕುಶರು ಅದುವೆ ಕಾರಣ ಭವ್ಯ ವಾಲ್ಮೀಕಿಯಾಶ್ರಮದಲಿ.

ಪ್ರೇಮಾಗಮನ

ಬದುಕ ಬಳ್ಳಿಯು ದಿವ್ಯಲೀಲೆಯ ಹಿಮಂತದಲಿ
ಹೂವ ಹೆತ್ತುವಳಲ್ಲ ತಾನು ಎಂದು,
ಬೇಸರದ ಹಸುರುಟ್ಟು ಕೊರಗುತಿರೆ, ಹೂಬಸದಿ
ಸೂರು ಬಣ್ಣದ ಚಿಟ್ಟೆ ಮೇಲೆ ಬಂದು,

ಎಲೆಗೊಂದು ಹೂವಾಗಿ ಕುಳಿತು, ಬಲುಸೊಗಸಾಗಿ
ಬಡತನದ ಭಂಗವನು ತೊಡೆದುವಂದು.
ಯಾವ ಲೋಕದ ಕನಸೊ ಒಲುಮೆಯಡಿಯಾಳಾಗಿ
ಗಂಭೀರ ಮೌನದಲಿ ಮೆರೆಯಿತಂದು !

ನನ್ನ ಕವಿತೆ

ಗಂಗೆಯಲಿ ಜೊಂಡು ಕಮಲವ ಕಂಡು ರೋಷದಲಿ
    ನಿರ್ಗಂಧ ಕುಸುಮವೆಂದರೆ ತುಂಬುತಾವರೆಗೆ
ಕುಂದು ಬಂದಿತೆ? ಪಾಪಿ ನಾಲಗೆಯ ದೋಷದಲಿ
    ವಾಣಿಯೊಪ್ಪಿದ ಕವಿತೆ ತನಗೇಕೊ ಒಪ್ಪದೆನೆ
ಬರೆದ ಕೈಗಾವ ಗಾಯುವೊ ?—ನಾನು ಕಾಣೆ ಕವಿ !
    ನನಗೊಂದು ಧೈರ್ಯ !—ಮುಂದೆನ್ನ ವಿಾರಿಸುವವನು,
ಶ್ರೀ ಭವಿಷ್ಯದ ಮಹಾನಾಟಕವ ಬರೆವವನು
    ನನ್ನಲ್ಪಕೃತಿಯನೋದುವನೊಮ್ಮೆ ; ಮಧ್ಯದಲಿ
ನನ್ನೊಂದು ನುಡಿಗೆ ತಲೆತೂಗುವನು ಹರ್ಷದಲಿ.—
ಅದುವೆ ಕಲೆ, ಅದುವೆ ಕಾವ್ಯದ, ಬರೆದ ಕವಿಯ ಬೆಲೆ.
ನಾನಳಿಯುವೆನು ; ನನ್ನ ಗೀತೆಯುಳಿಯುವುದೊಂದೆ.
ನನಗಿಲ್ಲ ಕೀರ್ತಿಕಾಮದ ಸೊಂಕು ; ಬಲುಹಿಂದೆ
ನಾನುಳಿಯುವೆನು ಗೊಲ್ಲ ; ಗೋವು ಕರುಗಳ ಮುಂದೆ
ಕಣಿವೆಯನು ದಾಟುವುದು ಹೇಮಧೂಲಿಯ ಮುಂದೆ.

PRINTED IN INDIA AT THE WESLEY PRESS AND PUBLISHING HOUSE, MYSORE CITY

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ವಿನಾಯಕನ ಹಬ್ಬ, ದೀಪಾವಳಿಯ ಹಬ್ಬ, ಸಂಕ್ರಾಂತಿಯ ಹಬ್ಬ, ಕಾಮನ ಹಬ್ಬ—ಈ ಹಬ್ಬಗಳ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ):

ಚಂದಾದಾರರಿಗೆ	ರೂ.	೨	೦	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೩	೦	೦
ವಿದ್ಯಾರ್ಥಿಗಳಿಗೆ ಮಾತ್ರ	ರೂ.	೧	೮	೦

ಚಂದಾಹಣವನ್ನು ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. (ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರವರಿಗಾಗಲಿ ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು.) ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಧ್ಯಕ್ಷರಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು.

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರನ್ನು ಒದಗಿಸಿಕೊಡುವ ಪುಸ್ತಕ ವ್ಯಾಪಾರಿಗಳಿಗೂ ವೃತ್ತಪತ್ರಿಕೆಗಳ ಮಾರಾಟಗಾರರಿಗೂ ಶೇಕಡ ೧೨½ ಯಂತೆ ಕಮಿಷನ್ ಕೊಡಲಾಗುವುದು. ಪಾಠಶಾಲಾ ಸಂಸ್ಥೆಗಳಿಗೆ ಪ್ರಚಾರ ಶಾಖೆಯ ಕಾರ್ಯದರ್ಶಿಗಳೇ ನೇರವಾಗಿ ಗಮನಕೊಡುವುದರಿಂದ ಈ ವಿಚಾರದಲ್ಲಿ ಪುಸ್ತಕ ವ್ಯಾಪಾರಿಗಳು ಶ್ರಮ ವಹಿಸಬೇಕಾಗಿಲ್ಲ.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನೂ ವಿಮರ್ಶೆಗಾಗಿ ಗ್ರಂಥಗಳನ್ನೂ ವಿನಿಮಯಕ್ಕಾಗಿ ಪತ್ರಿಕೆಗಳನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.—

ಸಂಪಾದಕ,
'ಪ್ರಬುದ್ಧ ಕರ್ಣಾಟಕ',
ಮಹಾರಾಜರವರ ಕಾಲೇಜು, ಮೈಸೂರು.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟನೆಗಳು

ಇಂಗ್ಲಿಷ್ ಗೀತಗಳು—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ. ಬೆಂಡು ಕಾಗದದ ಪ್ರತಿ, ಬೆಲೆ ರೂ. ೧-೮-೦.

ಉಮರನ ಒಸಗೆ—ಡಿ. ವಿ. ಗುಂಡಪ್ಪನವರಿಂದ. ಬೆಲೆ ರೂ. ೧-೦-೦.

ಮುದ್ದಣ—ನಂದಳಿಕೆ ಲಕ್ಷ್ಮೀನಾರಣಪ್ಪನವರ ಜೀವನಚರಿತ್ರೆ ಮತ್ತು ಗ್ರಂಥಗಳ ವಿಮರ್ಶೆ. (ಪ್ರತಿಗಳು ಮುಗಿದುಹೋಗಿವೆ) ಬೆಲೆ ರೂ. ೨-೦-೦.

ಗದಾಯುದ್ಧ ನಾಟಕಂ (ದ್ವಿತೀಯ ಮುದ್ರಣ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ ಸಂಪಾದಿತವಾದದ್ದು. ಬೆಲೆ ೦-೮-೦.

ಭಕ್ತಿಭಾಂಡಾರಿ ಬಸವಣ್ಣನವರು (ದ್ವಿತೀಯ ಮುದ್ರಣ)—ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ಅವರಿಂದ. ಬೆಲೆ ರೂ. ೧-೦-೦.

ತಾವರೆ—ಎಂ. ವೆಂಕಟೇಶ ಐಯಂಗಾರ್, ಎಂ.ಎ. ಅವರಿಂದ ರಚಿತವಾದ ಪದ್ಯಕಾವ್ಯ (ಸಚಿತ್ರ). ಬೆಲೆ ೦-೧೨-೦.

ಸೋಕ್ರಟೀಸನ ಮರಣ—ಎಸ್. ಜಿ. ಶಾಸ್ತ್ರಿ, ಬಿ.ಎ., ಎಂ.ಎಸ್‌ಸಿ. ಅವರಿಂದ. ಡಿ. ವಿ. ಗುಂಡಪ್ಪನವರ ಅವತರಣಿಕೆಯೊಡನೆ. ಬೆಲೆ ರೂ. ೧-೦-೦.

ಚೀನಾದೇಶದ ಬೌದ್ಧ ಯಾತ್ರಿಕರು—ಜಿ. ಪಿ. ರಾಜರತ್ನಂ, ಎಂ.ಎ. ಅವರಿಂದ. ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್. ಅವರ ಮುನ್ನುಡಿಯೊಡನೆ. ರೂ. ೧.

ಭಾಸನ ಏಕಾಂಕ ನಾಟಕಗಳು—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಸಾದಾ ಪ್ರತಿ, ಬೆಲೆ ರೂ. ೧-೦-೦ ; ಕ್ಯಾಲಿಕೋ ಪ್ರತಿ, ಬೆಲೆ ರೂ. ೧-೮-೦.

ಷೇಕ್ಸ್‌ಪಿಯರ್ ನಾಟಕ ಕಥೆಗಳು (ನಾಲ್ಕು)—ಲಕ್ಷ್ಮೀನರಸಿಂಹಶಾಸ್ತ್ರಿಗಳಿಂದ. ಎಸ್. ವಿ. ರಂಗಣ್ಣ, ಎಂ.ಎ. ಅವರ ಅವತರಣಿಕೆಯೊಡನೆ. ಬೆಲೆ ೦-೧೨-೦.

ಮಲೆನಾಡಿನ ಚಿತ್ರಗಳು (ಸಚಿತ್ರ)—ಕೆ. ವಿ. ಪುಟ್ಟಪ್ಪ, ಎಂ.ಎ. ಅವರಿಂದ. ಬೆಲೆ ರೂ. ೧-೦-೦.

ಭಾಸಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರಿಂದ. ಬೆಲೆ ರೂ. ೧-೪-೦.

ವಿಗಡ ವಿಕ್ರಮರಾಯ—ಸಂಸ ವಿರಚಿತ (ಎ. ಡಿ. ಎ. ಅವರಿಂದ ಪ್ರಕಾಶಿತವಾದ ದ್ವಿತೀಯ ಮುದ್ರಣ). ಬೆಲೆ ೦-೧೨-೦.

ಮೈಸೂರು ದೇಶದ ವಾಸ್ತುಶಿಲ್ಪ (ಸಚಿತ್ರ), ಭಾಗ ೧—ಬಿ. ವೆಂಕೋಬರಾವ್, ಬಿ.ಎ. ಅವರಿಂದ. ಬೆಲೆ ರೂ. ೫-೦-೦.

ಭಾಸಕವಿಯ ಚಾರುದತ್ತ—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಬೆಲೆ ೦-೮-೦.

ಕುಮಾರವ್ಯಾಸ ಪ್ರಶಸ್ತಿ—(ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಾಶಿತವಾದದ್ದು) ಕ್ಯಾಲಿಕೊ ಪ್ರತಿ ರೂ. ೨-೮- ; ಸಾದಾ ರೂ. ೨.

PRINTED IN INDIA AT THE WESLEY PRESS AND PUBLISHING HOUSE, MYSORE CITY